ವಿಶ್ವವಾಣಿ
ವಿಶ್ವಾಸವೇ ವಿಶ್ವ

**ಸಾಹಸಸಿಂಹನ ನೆನಪು**

ನಟ, ದಿವಂಗತ ವಿಷ್ಣುವರ್ಧನ್ ಅವರ 75ನೇ ವರ್ಷದ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ಉದ್ಬೂರ್ ಗೇಟ್ ಬಳಿ ಇರುವ ವಿಷ್ಣುವರ್ಧನ್ ಸ್ಮಾರಕಕ್ಕೆ ಭಾರತಿ ವಿಷ್ಣುವರ್ಧನ್, ಅನಿರುದ್ಧ, ಕೀರ್ತಿ ವಿಷ್ಣುವರ್ಧನ್ ಹಾಗೂ ಕುಟುಂಬಸ್ಥರು ಅಭಿಮಾನಿಗಳ ಸಮ್ಮುಖ ಪುಷ್ಪನಮನ ಸಲ್ಲಿಸಿದರು.

**ಸೊಂಪಾದ ಪುಟಗಳು**

ಅಭಿಪ್ರಾಯ ಬಯಸುವ ನಮಗೆ ಟೀಕೆ ಏಕೆ ಸಹ್ಯವಾಗುವುದಿಲ್ಲ?
ಶಿಶಿರಕಾಲ
ಶಿಶಿರ್ ಹೆಗಡೆ 6



ಅರಾಜಕತೆಯ ಕಿಚ್ಚನ್ನು ಭಾರತಕ್ಕೂ ಹಬ್ಬಿಸಲು ಸಂಚು
ಪ್ರಕಾಶಪಥ
ಪ್ರಕಾಶ್ ಶೇಷರಾಘವಾಚಾರ್ 7

**ದಾರಿದೀಪೋಕ್ತಿ**

ನಮ್ಮ ಮಕ್ಕಳ ಮೇಲೆ ಹಣವನ್ನು ಖರ್ಚು ಮಾಡುವುದಕ್ಕಿಂತ, ನಮ್ಮ ಸಮಯವನ್ನು ಅವರ ಮೇಲೆ ಖರ್ಚು ಮಾಡುವುದು ಒಳ್ಳೆಯದು. ಅವರಿಗೆ ನಾವು ಜತೆಗಿರುವುದಕ್ಕಿಂತ ಹೆಚ್ಚಿನ ಸಂತೋಷ ಬೇರೆ ಯಾವುದರಿಂದಲೂ ಸಿಗುವುದಿಲ್ಲ.

**ವಕ್ರತುಂಡೋಕ್ತಿ**

ಕೆಲವರು ಶೋಕಗೀತೆ ಹಾಡಿದರೆ ಅಳು ಬರುತ್ತದೆ, ಉಳಿದ ಹಾಡುಗಳನ್ನು ಹಾಡಿದರೂ.

## ಆಯೋಗದ ವಿರುದ್ಧ ಅರ್ಜಿ

**ಬೆಂಗಳೂರು:** ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾಯಿದೆ 1995ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಹಿರಿಯ ವಕೀಲ ಕೆ.ಎನ್.ಸುಬ್ಬಾರೆಡ್ಡಿ ಮತ್ತಿತರರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

### ಜಾತಿಗಣತಿಗೆ ಹಿರಿಯ ಸಚಿವರಿಂದಲೇ ಆಕ್ಷೇಪ

# ಜಾತಿಗಣತಿ ಜಟಾಪಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ತೀವ್ರ ವಿವಾದವನ್ನು ಸೃಷ್ಟಿಸಿರುವ ಜಾತಿ ಗಣತಿ ಮುಂದುವರಿಯುವ ಬಗ್ಗೆ ಅನುಮಾನಗಳು ಶುರುವಾಗಿದೆ. ಸಿದ್ದರಾಮಯ್ಯ ಆಪ್ತ ವಲಯದಲ್ಲಿರುವ ಕೆಲ ಸಚಿವರೇ ಈ ಸಮೀಕ್ಷೆಗೆ ವಿರೋಧ ವ್ಯಕ್ತಪಡಿಸಿರುವುದು ರಾಜ್ಯ ಸರಕಾರಕ್ಕೆ ನುಂಗಲಾರದ ತುತ್ತಾಗಿದೆ ಎನ್ನಲಾಗಿದೆ.

ಜಾತಿ ಗಣತಿಯ ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತವೆಂದು ಸೇರಿಸಲು ಅವಕಾಶ ನೀಡಿದ್ದು, ಕ್ರೈಸ್ತ ಧರ್ಮದಲ್ಲಿ ಕೆಲವೊಂದಷ್ಟು ಹೊಸ ಉಪಜಾತಿಗಳನ್ನು ನಮೂದಿಸಿದ್ದು ಸಾರ್ವಜನಿಕ ವಲಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಸಚಿವ ಎಂ.ಬಿ. ಪಾಟೀಲ್ ಸೇರಿದಂತೆ ಹಲವು ಸಚಿವರು ಆಯೋಗದ ಈ ನಡೆಗೆ ತೀವ್ರ ಅಕ್ಷೇಪ ವ್ಯಕ್ತಪಡಿಸಿದ್ದಾರೆ. ಇದರ ಬೆನ್ನಲ್ಲೇ, ಸಮೀಕ್ಷೆಯನ್ನು ನಿಗದಿತ ದಿನದಲ್ಲಿಯೇ ನಡೆಸ ಬೇಕೇ? ತಾತ್ಕಾಲಿಕವಾಗಿ ರದ್ದುಗೊಳಿಸಬೇಕೇ ಅಥವಾ ಆಯೋಗ ಸಿದ್ಧಪಡಿಸಿರುವ ಜಾತಿ ಪಟ್ಟಿಯಲ್ಲಿ ಪರಿಷ್ಕರಣೆ ಮಾಡಬೇಕೆ ಎನ್ನುವ ಗೊಂದಲಕ್ಕೆ ಸರಕಾರ ಬಿದ್ದಿದೆ ಎನ್ನಲಾಗಿದೆ.ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿಯೇ ಹಲವು ಸಚಿವರು ಏರುಧ್ವನಿಯಲ್ಲಿ ಮಾತನಾಡಿರುವುದು ತೀವ್ರ ವಿವಾದಕ್ಕೆ ಕಾರಣವಾಗಿದೆ. → 4

### ಆಯ್ಕೆಗಳೇನು?

- ಜಾತಿ ಗಣತಿಯನ್ನು ತಾತ್ಕಾಲಿಕವಾಗಿ ಮುಂದೂಡುವುದು
- ಕೆಲ ಸಮಯ ಮುಂದೂಡಿ, ಮಾರ್ಗಸೂಚಿ ಸಿದ್ಧಪಡಿಸುವುದು
- ಧರ್ಮದ ಕಾಲಂನಲ್ಲಿ 'ಇತರೆ' ಎನ್ನುವುದಕ್ಕೆ ಮಾತ್ರ ಅವಕಾಶ ನೀಡುವ ಮೂಲಕ ವೀರಶೈವ ಲಿಂಗಾಯತ ಬರೆಯದಂತೆ ನೋಡಿಕೊಳ್ಳುವುದು
- ಹೊಸದಾಗಿ ಸೇರ್ಪಡೆಯಾದ 331 ಜಾತಿಗಳನ್ನು ಕೈಬಿಡುವುದು

### ಸಚಿವರ ತುರ್ತು ಸಭೆ

ಜಾತಿ ಗಣತಿ ಸಮೀಕ್ಷೆ ಗೊಂದಲ ಹಿನ್ನೆಲೆ ವಿಧಾನಸೌಧದಲ್ಲಿ ಸಚಿವ ಎಚ್.ಕೆ ಪಾಟೀಲ್ ನೇತೃತ್ವದಲ್ಲಿ ಸಚಿವರು ತುರ್ತು ಸಭೆ ನಡೆಸಿದ್ದಾರೆ. ಸಭೆಯಲ್ಲಿ ಸಚಿವ ಮಹದೇವಪ್ಪ, ಕೆ.ಎಚ್.ಮುನಿಯಪ್ಪ, ಭೈರತಿ ಸುರೇಶ್, ಎಂ.ಬಿ ಪಾಟೀಲ್, ಈಶ್ವರ್ ಖಂಡ್ರೆ ಸೇರಿದಂತೆ ಕೆಲ ಸಚಿವರು ಭಾಗವಹಿಸಿ ಸಮೀಕ್ಷೆಯ ಸಾಧಕ ಬಾಧಕ, ಹೆಚ್ಚುವರಿ ಜಾತಿ ಸೇರ್ಪಡೆ ಸೇರಿದಂತೆ ಗೊಂದಲದ ಬಗ್ಗೆ ಚರ್ಚಿಸಿದ್ದಾರೆ. ಸಭೆಯಲ್ಲಿ ಚರ್ಚಿಸಿದ ಬಳಿಕ ಸಿಎಂ ಸಿದ್ದರಾಮಯ್ಯಗೆ ವರದಿ ನೀಡಿ ಮುಂದಿನ ತೀರ್ಮಾನ ಕೈಗೊಳ್ಳಲು ನಿರ್ಧರಿಸಿದ್ದಾರೆ.

ನಮ್ಮ ಪಕ್ಷ, ನಮ್ಮ ಸರಕಾರವು ಯಾವುದೇ ಸಮಾಜವನ್ನು ವಿಭಜಿಸಲು ಇಚ್ಛಿಸುವುದಿಲ್ಲ. ಸಾರ್ವಜನಿಕರು ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಅವಕಾಶ ಕಲ್ಪಿಸಿದ್ದೇವೆ. ಅನೇಕ ಸಮುದಾಯದವರು ಬಂದು ನಮಗೆ ಪ್ರತ್ಯೇಕ ಗುರುತು ಬೇಕು ಎಂದು ಕೇಳಿದ್ದಾರೆ. ಈ ಬಗ್ಗೆ ಕೆಲವರು ಆಕ್ಷೇಪ ಸಲ್ಲಿಸಿದ್ದು, ಎಲ್ಲರ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ. ರಾಜಕೀಯವಾಗಿ ಮಾತನಾಡುವವರ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ಯಾರೂ ಗಾಬರಿಪಡುವ ಅಗತ್ಯವಿಲ್ಲ.

**-ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

### ಆಳಂದದಲ್ಲೂ ವೋಟ್‌ಚೋರಿ: ರಾಹುಲ್
### 6,018 ಮತದಾರರ ಹೆಸರು ಡಿಲೀಟ್

# ಇ.ಸಿಗೆ ರಾಗಾ ಗುನ್ನ

**ಮತ ಕಳ್ಳತನ**

**ದೆಹಲಿ:** ಕರ್ನಾಟಕದ ಮಹದೇವಪುರ ಕ್ಷೇತ್ರದಲ್ಲಿ ಮತಕಳ್ಳತನದ ಆರೋಪ ಮಾಡಿದ್ದ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಇದೀಗ ಕಲಬುರಗಿಯ ಆಳಂದ ಕ್ಷೇತ್ರದಲ್ಲೂ 6018 ಮತಗಳನ್ನು ಸ್ವಯಂ ಚಾಲಿತ ವಿಧಾನದ ಮೂಲಕ ಅಳಿಸಿ ಹಾಕುವ ಯತ್ನ ನಡೆದಿತ್ತು ಎಂದು ಆರೋಪಿಸಿದ್ದಾರೆ.

ರಾಷ್ಟ್ರ ರಾಜಧಾನಿಯ ಎಐಸಿಸಿ ಕಚೇರಿಯಲ್ಲಿ ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ರಾಹುಲ್, ಮತಕಳವಿನ ಮೂಲಕ ಭಾರತದ ಪ್ರಜಾಪ್ರಭುತ್ವವನ್ನು ನಾಶ ಮಾಡುತ್ತಿರುವ ಜನರನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಕ್ಷಿಸುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು. ಪತ್ರಿಕಾಗೋಷ್ಠಿ ವೇಳೆ ಹಾಜರಿದ್ದ ಆಳಂದ ಶಾಸಕ ಬಿ.ಆರ್. ಪಾಟೀಲ್ ಮತ್ತು ಕ್ಷೇತ್ರದ ಇಬ್ಬರು ಮತದಾರರು ರಾಹುಲ್ ಅವರ 'ವೋಟ್‌ಚೋರಿ' ಆರೋಪವನ್ನು ದೃಢೀಕರಿಸಿದರು. → 4



ಯಾವುದೇ ವ್ಯಕ್ತಿ ಆನ್‌ಲೈನ್‌ನಲ್ಲಿ ಯಾವುದೇ ಮತದಾರರ ಹೆಸರನ್ನು ಅಳಿಸಿ ಹಾಕಲು ಸಾಧ್ಯವೇ ಇಲ್ಲ. ರಾಹುಲ್ ಅವರ ಆರೋಪ ನಿರಾಧಾರ

**-ಜ್ಞಾನೇಶ್ ಕುಮಾರ್**, ಮುಖ್ಯ ಚುನಾವಣಾ ಆಯುಕ್ತ

### ಮತದಾರರ ಆಟೋ ಡಿಲೀಟ್ ಸಾಫ್ಟ್‌ವೇರ್?

ಸೀರಿಯಲ್ ನಂಬರ್‌ಗಳನ್ನು ಗಮನಿಸಿದರೆ ಬೂತ್‌ನ ಮೊದಲ ಮತದಾರರ ಹೆಸರನ್ನು ಬಳಸಿಕೊಂಡು ಬೇರೆಯವರ ಹೆಸರುಗಳನ್ನು ಅಳಿಸುತ್ತಿದೆ. ಇದಕ್ಕಾಗಿ ಯಾರೋ ಒಬ್ಬರು ಸ್ವಯಂಚಾಲಿತ ಪ್ರೋಗ್ರಾಂ ರಚಿಸಿದ್ದಾರೆ, ಇದರಿಂದ ಮತಗಟ್ಟೆಯಲ್ಲಿ ಮೊದಲ ಮತದಾರನೇ ಅರ್ಜಿದಾರನಾಗಿರುವಂತೆ ಮಾಡಲಾಗಿದೆ. ಆ ವ್ಯಕ್ತಿ ಹೆಸರಿನಲ್ಲಿ ರಾಜ್ಯದ ಹೊರಗಿನಿಂದ ಮೊಬೈಲ್ ಫೋನ್‌ಗಳನ್ನು ತೆಗೆದುಕೊಂಡು, ಅವುಗಳನ್ನು ಬಳಸಿ ಮತದಾರರ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಇದು ಕೇಂದ್ರೀಕೃತ ರೀತಿಯಲ್ಲಿ ಮತ್ತು ದೊಡ್ಡ ಪ್ರಮಾಣದಲ್ಲಿ ನಡೆದಿದೆ ಎಂದು ನಮಗೆ ಖಾತ್ರಿಯಿದೆ. ಇದನ್ನು ಕೆಳಮಟ್ಟದ ಕಾರ್ಯಕರ್ತರಿಂದ ಮಾಡಲಾಗಿಲ್ಲ; ಇದು ಸರಳವಾದ, ಆದರೆ ದೊಡ್ಡ ಮಟ್ಟದಲ್ಲಿ ಯೋಜಿತವಾಗಿ ನಡೆದ ಕಾರ್ಯವಾಗಿದೆ ಎಂದು ರಾಹುಲ್ ಆರೋಪಿಸಿದರು.

## ಸುಪ್ರೀಂ ಮುಂದೆ ದಸರೆ

**ಬೆಂಗಳೂರು:** ಮೈಸೂರು ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದ ವಿಚಾರ ಈಗ ಸುಪ್ರೀಂ ಕೋರ್ಟ್ ಅಂಗಳಕ್ಕೆ ತಲುಪಿದೆ. ಹೈಕೋರ್ಟ್ ಆದೇಶ ಪ್ರಶ್ನಿಸಿ ಎಚ್.ಎಸ್.ಗೌರವ್ ಎಂಬವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ. ತುರ್ತು ವಿಚಾರಣೆ ಮಾಡಬೇಕೆಂಬ ಮನವಿಯನ್ನು ನ್ಯಾ. ಬಿ.ಆರ್.ಗವಾಯಿ ಅವರ ಪೀಠ ಅಂಗೀಕರಿಸಿದ್ದು, ಶುಕ್ರವಾರ ವಿಚಾರಣೆ ನಡೆಯಲಿದೆ.

## ಮತ್ತೆ 4 ಬುರುಡೆ ಪತ್ತೆ

**ಧರ್ಮಸ್ಥಳ:** ಸೌಜನ್ಯಾ ಮಾವ ವಿಠ್ಠಲ್ ಗೌಡ ಅವರ ಹೇಳಿಕೆಯ ಹಿನ್ನೆಲೆಯಲ್ಲಿ ಬಂಗ್ಲೆಗುಡ್ಡೆ ಕಾಡಿನಲ್ಲಿ ಎಸ್ಐಟಿ ಶೋಧ ಕಾರ್ಯ ಮುಂದುವರಿಸಿದೆ. ಗುರುವಾರ ಮತ್ತೆ ನಾಲ್ಕು ತಲೆ ಬುರುಡೆಗಳು ಪತ್ತೆಯಾಗಿವೆ. ಅಸ್ಥಿಪಂಜರದ ಜತೆಗೆ ಒಂದು ಐ.ಡಿ ಕಾರ್ಡ್ ಸಿಕ್ಕಿದ್ದು, ಇದು 2017ರಲ್ಲಿ ನಾಪತ್ತೆಯಾಗಿದ್ದ ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಗೋಣಿಕೊಪ್ಪದ ಯು.ಬಿ. ಅಯ್ಯಪ್ಪ (70) ಅವರದ್ದು ಎಂದು ಗೊತ್ತಾಗಿದೆ.

## ಎಲಿವೇಟೆಡ್ ಕಾರಿಡಾರ್

**ಬೆಂಗಳೂರು:** ಸುರಂಗ ರಸ್ತೆ ಯೋಜನೆ ಟೆಂಡರ್ ಪ್ರಕ್ರಿಯೆ ಮಧ್ಯೆ 110 ಕಿ.ಮೀ. ಎತ್ತರದ ಎಲಿವೇಟೆಡ್ ರಸ್ತೆ ಕಾರಿಡಾರ್‌ಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ತಾಂತ್ರಿಕ ಸಲಹಾ ಸಮಿತಿಯು ಅನುಮೋದಿಸಿದೆ. ಬೆಂಗಳೂರಿನಾದ್ಯಂತ ಸಂಪರ್ಕ ಕಲ್ಪಿಸುವ ಈ ರಸ್ತೆ ಕಾರಿಡಾರ್ ಭೂಸ್ವಾಧೀನಕ್ಕೆ 3,000 ಕೋಟಿ ರು. ಸೇರಿದಂತೆ ರೂ 18,000 ಕೋಟಿ ವೆಚ್ಚ ಅಂದಾಜಿಸಲಾಗಿದೆ.

## ಪಾಕ್-ಸೌದಿ ಒಪ್ಪಂದ

**ರಿಯಾದ್:** ಸೌದಿ ಅರೇಬಿಯಾ ಮತ್ತು ಪಾಕಿಸ್ತಾನ ಪರಸ್ಪರ ರಕ್ಷಣೆಗೆ ಸಂಬಂಧಿಸಿದ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿವೆ. ಎರಡೂ ದೇಶಗಳಲ್ಲಿ ಯಾರ ಮೇಲೆ ಯುದ್ಧ ನಡೆದರೂ ಎರಡೂ ದೇಶಗಳ ವಿರುದ್ಧದ ಆಕ್ರಮಣ ಎಂದೇ ಪರಿಗಣಿಸುವುದು ಈ ಒಪ್ಪಂದದ ಪ್ರಮುಖ ಅಂಶವಾಗಿದೆ. ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಸೌದಿ ಅರೇಬಿಯ ಭೇಟಿಯಲ್ಲಿ ಸೌದಿ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಜತೆ ಈ ಮಹತ್ವದ ಒಪ್ಪಂದ ಮಾಡಿಕೊಂಡಿದ್ದಾರೆ.

## ವಿಜಯಪುರಕ್ಕೆ ಬಂಪರ್

**ಬೆಂಗಳೂರು:** ವಿಜಯಪುರ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣದ ಅಭಿವೃದ್ಧಿ ಕಾರ್ಯಗಳಿಗಾಗಿ 618.75 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ರಾಜ್ಯ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ. ಸಂಪುಟ ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಸಚಿವ ಎಚ್. ಪಾಟೀಲ್, ಎಟಿಆರ್ ವಿಮಾನಗಳ ಬದಲಿಗೆ ದೊಡ್ಡ ವಿಮಾನಗಳ ಲ್ಯಾಂಡಿಂಗ್‌ಗೆ ಅನುಕೂಲವಾಗುವಂತೆ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಹೇಳಿದರು.

## ಸಮಾಚಾರ ಸಣ್ಣದಲ್ಲ

### ಅಲಯನ್ಸ್ ವಿವಿಯಿಂದ ರಾಷ್ಟ್ರೀಯ ಕಾರ್ಯಾಗಾರ

**ಬೆಂಗಳೂರು:** ಅಲಯನ್ಸ್ ವಿವಿ ಮತ್ತು ಐಐಎಸ್‌ಸಿ ಬೆಂಗಳೂರು ಹಾಗೂ ದಿ ಕಂಬಶನ್ ಇನ್‌ಸ್ಟಿಟ್ಯೂಟ್ ಇಂಡಿಯನ್ ಸೆಕ್ಷನ್‌ನಿಂದ ಹೈಡ್ರೋಜನ್ ಇಂಧನ ತಂತ್ರಜ್ಞಾನ ಮತ್ತು ಭವಿಷ್ಯದ ಪ್ರವೃತ್ತಿಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಸೆ.19 ಮತ್ತು 20ರಂದು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಈ ಕಾರ್ಯಾಗಾರದಲ್ಲಿ ಇಸ್ರೋ ಅಧ್ಯಕ್ಷ ಡಾ.ವಿ ನಾರಾಯಣನ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ಸಿಎಸ್‌ಐಆರ್ ಮಹಾನಿರ್ದೇಶಕಿ ಎನ್ ಕಲೈಸೆಲ್ವಿ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಿಐಐಎಸ್‌ನ ಅಧ್ಯಕ್ಷ ಡಾ. ವಿಜಯ್ ಕುಮಾರ್ ಸಾರಸ್ವತ್ ಭಾರತದ ಹೈಡ್ರೋಜನ್ ನೀತಿ ಮತ್ತು ಭವಿಷ್ಯದ ಪ್ರವೃತ್ತಿಗಳು ಕುರಿತು ಭಾಷಣ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ಅಪ್ಪನ ಫ್ಲ್ಯಾಟ್ ವಿಚಾರಕ್ಕೆ ಅಕ್ಕ-ತಮ್ಮನ ಕಿರಿಕ್

**ಬೆಂಗಳೂರು:** ಅಕ್ಕ-ತಮ್ಮನ ಜಗಳದಿಂದಾಗಿ ಬಿಗ್‌ಬಾಸ್ ಖ್ಯಾತಿಯ ರಂಜಿತ್ ಕುಟುಂಬ ಪೊಲೀಸ್ ಠಾಣೆ ಮೆಟ್ಟಿಲೇರಿದೆ. ತಂದೆಯವರ ಫ್ಲಾಟ್ ನಲ್ಲಿ ಇಬ್ಬರಿಗೂ ಪಾಲು ಬೇಕು ಎಂದು ಪರಸ್ಪರ ದೂರು ನೀಡಿದ್ದಾರೆ. ರಂಜಿತ್ ಹಾಗೂ ಅವರ ಅಕ್ಕ ಅಮೃತ ಹಳ್ಳಿ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿದ್ದಾರೆ. ನಂತರ ಪೊಲೀಸರು ಎನ್‌ಸಿಆರ್ ದಾಖಲು ಮಾಡಿ ಕಳುಹಿಸಿದ್ದಾರೆಡಿ. ಫ್ಲಾಟ್ ವಿಚಾರವಾಗಿರುವುದರಿಂದ ಕೋರ್ಟ್ ಮೂಲಕ ಬಗೆಹರಿಸಿಕೊಳ್ಳುವಂತೆ ಸೂಚನೆ ನೀಡಿದ್ದಾರೆ. ಈ ಹಿಂದೆ ಇಡೀ ಕುಟುಂಬ ಅದೇ ಫ್ಲಾಟ್‌ನಲ್ಲಿ ವಾಸವಿತ್ತು. ಇತ್ತೀಚೆಗೆ ಅಕ್ಕ ಬೇರೆ ಹೋಗಿದ್ದಾರೆ. ಈ ಮನೆಯಲ್ಲಿ ತನಗೂ ಪಾಲಿದೆ ಎಂದು ಇಬ್ಬರು ವಾದ ಮಾಡಿಕೊಂಡು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ. ಇಬ್ಬರಿಗೂ ಬುದ್ಧಿ ಹೇಳಿ ಕೋರ್ಟ್ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಪೊಲೀಸರು ಸೂಚಿಸಿದ್ದಾರೆ.



ರಸ್ತೆ ಗುಂಡಿಗಳಲ್ಲಿ ಮಳೆ ನೀರು ತುಂಬಿ ಸವಾರರ ಪರದಾಟ | ಸಿಗ್ನಲ್‌ಗಳಲ್ಲಿ ಟ್ರಾಫಿಕ್ ಜಾಮ್

# ಭಾರೀ ಮಳೆ: ಸಂಚಾರ ಅಸ್ತವ್ಯಸ್ತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಕೆಲ ದಿನಗಳಿಂದ ರಾಜ್ಯದ ಹಲವು ಭಾಗಗಳಲ್ಲಿ ಭಾರೀ ಮಳೆಯಾಗುತ್ತಿದ್ದು, ಇನ್ನೂ ಕೆಲ ದಿನಗಳ ಕಾಲ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜಧಾನಿ ಬೆಂಗಳೂರಿನಲ್ಲೂ ಕೆಲ ದಿನಗಳಿಂದ ಮಳೆಯಾಗುತ್ತಿದ್ದು, ಸಂಜೆ ಆರಂಭವಾಗುವ ಮಳೆಯು ಮಧ್ಯರಾತ್ರಿ ಕಳೆಯುವವರೆಗೂ ಸುರಿಯುತ್ತಿದೆ. ಗುರುವಾರವೂ ನಗರದಲ್ಲಿ ಮಳೆಯ ಅಬ್ಬರ ಮುಂದುವರಿದಿದ್ದು, ಸಂಜೆಯಾಗುತ್ತಿದ್ದಂತೆಯೇ ಮಳೆಯು ಸುರಿಯಲು ಆರಂಭಿಸಿದ್ದು, ನಗರಾದ್ಯಂತ ಸುರಿದ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದೆ. ಬೆಳಗ್ಗೆ ಬಿಸಿಲಿನ ವಾತಾವಣವಿದ್ದು ಸಂಜೆಯಾಗುತ್ತಿದ್ದಂತೆ ಮಳೆ ಆರಂಭವಾಯಿತು. ಸಂಜೆ 5 ಗಂಟೆ ವೇಳೆಗೆ ಸುರಿಯಲು ಆರಂಭಿಸಿದ ಮಳೆ ಸುಮಾರು ಒಂದು ಗಂಟೆಗೂ ಅಧಿಕ ಕಾಲ ಸುರಿದ ಮಳೆಗೆ ಜನ ಸಂಚಾರಕ್ಕೆ ಅಡಚಣೆಯುಂಟಾಯಿತು. ರಸ್ತೆಗಳಲ್ಲಿ ಬಿದ್ದ ಗುಂಡಿಗಳ ತುಂಬ ನೀರು ತುಂಬಿದ್ದು, ವಾಹನ ಸವಾರರು ಪರದಾಡಿದರು. ಹಲವು ಸಂಚಾರ ಸಿಗ್ನಲ್‌ಗಳಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ನಗರದ ಹೆಬ್ಬಾಳ, ನಾಗವಾರ, ಯಲಹಂಕ, ಕೋರಮಂಗಲ, ಹೊರಮಾವು, ಡೈರಿ ವೃತ್ತ, ಚಾಮರಾಜನಗರ, ಶಿವಾನಂದ ವೃತ್ತ, ವಿದ್ಯಾರಣ್ಯಪುರ, ಕೆಂಗೇರಿ, ಆರ್‌ಆರ್ ನಗರ, ಹಂಪಿನಗರ, ಕೆ.ಆರ್.ಸರ್ಕಲ್, ಸೌತ್‌ಎಂಡ್, ಸಿಲ್ಕ್‌ಬೋರ್ಡ್, ಮೆಜೆಸ್ಟಿಕ್ ಸುತ್ತಮುತ್ತ, ಚಿಕ್ಕಪೇಟೆ, ಶೇಷಾದ್ರಿಪುರ, ಪದ್ಮನಾಭ ನಗರ ಸೇರಿದಂತೆ ಹಲವು ಭಾಗಗಳಲ್ಲಿ ಬಾರಿ ಮಳೆಯಾಗಿದ್ದು, ರಸ್ತೆಯ ಮೇಲೆ,ಅಂಡರ್ ಪಾಸ್‌ಗಳಲ್ಲಿ ನೀರು ನಿಂತು ಸಂಚಾರ ದಟ್ಟಣೆ ಉಂಟಾಗಿ ವಾಹನ ಸವಾರರು ಕಿರಿ ಕಿರಿ ಅನುಭವಿಸುವಂತಾಯಿತು. ಗುಂಡಿಯಲ್ಲಿ ನೀರು ತುಂಬಿದ ಹಿನ್ನೆಲೆಯಲ್ಲಿ ದ್ವಿಚಕ್ರ ವಾಹನ ಸವಾರರು ಸಂಚರಿಸುವುದೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತ್ತು. ಮಳೆಯಿಂದ ಕೆಲವು ಕಡೆ ಸಣ್ಣಪುಟ್ಟ ಮರದ ಕೊಂಬೆಗಳು ಉರುಳಿ ಬಿದ್ದಿವೆ. ಮೇಲ್ಸೇತುವೆ ನಿರ್ಮಾಣ ಸ್ಥಳ, ಮೆಟ್ರೋ ಕಾಮಗಾರಿ ಸ್ಥಳಗಳ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನಿಂತಿದೆ. ಕೆಲವು ರಸ್ತೆಗಳು ಜಲಾವೃತಗೊಂಡಿತ್ತು.

ಬೆಂಗಳೂರಿನಲ್ಲಿ ಗುರುವಾರ ಸುರಿದ ಧಾರಾಕಾರ ಮಳೆಗೆ ವಿಧಾನಸೌಧ, ಅಂಬೇಡ್ಕರ್ ವೀಧಿ ಮುಂಭಾಗ ಟ್ರಾಫಿಕ್ ಜಾಮ್ ಆಗಿತ್ತು. ಫೋಟೋ: ಸುಧಾಕರ್ ದೇವರಾಜ್

### ಅತಿ ಹೆಚ್ಚು ಮಳೆಯಾದ ಪ್ರದೇಶಗಳು

ಅರಕೆರೆ 33 ಮಿ.ಮೀ, ಬೊಮ್ಮನಹಳ್ಳಿ 30 ಮಿ.ಮೀ, ಬಿಳೆಕಹಳ್ಳಿ 27 ಮಿ.ಮೀ, ನಾಗ್ಪುರ 25 ಮಿ.ಮೀ, ಆರ್.ಆರ್.ನಗರ 23 ಮಿ.ಮೀ, ಎಚ್‌ಎಸ್‌ಆರ್ ಲೇಔಟ್ 22 ಮಿ.ಮೀ, ಕೋರಮಂಗಲ 22 ಮಿ.ಮೀ, ವನ್ನಾರ್ ಪೇಟೆ, ನಾಯಂಡಹಳ್ಳಿ ತಲಾ 21 ಮಿ.ಮೀ, ದೊರೆಸಾನಿಪಾಳ್ಯ 20 ಮಿ.ಮೀ, ಬಿಟಿಎಂ ಲೇಔಟ್ 20 ಮಿ.ಮೀ, ಬೆಳ್ಳಂದೂರು 16 ಮಿ.ಮೀ, ಹಂಪಿನಗರ 16 ಮಿ.ಮೀ, ಬೊಮ್ಮನಹಳ್ಳಿ, ವಿದ್ಯಾಪೀಠ ತಲಾ 15 ಮಿ.ಮೀ, ಸಿಂಗಸಂದ್ರ, ಬಸವೇಶ್ವರ ನಗರ ಮತ್ತು ಚಾಮರಾಜಪೇಟೆ ತಲಾ 12 ಮಿ.ಮೀ, ನಾಯಂಡಹಳ್ಳಿ 15.50 ಮಿ.ಮೀ., ಸಂಪಂಗಿರಾಮನಗರ 11.50 ಮಿ.ಮೀ. ಉಳಿದಂತೆ ತುಂತುರು ಮಳೆ ಆಗಿದೆ. ಮುಂದಿನ ಮೂರು ದಿನ ನಗರದಲ್ಲಿ ಇದೇ ರೀತಿ ಆಗಾಗ ಬಿಸಿಲು ಹಾಗೂ ಮಬ್ಬು ವಾತಾವರಣ ಕಂಡು ಬರಲಿದೆ. ಆಗಾಗ ಸಾಮಾನ್ಯದಿಂದ ಸಾಧಾರಣವಾಗಿ ಮಳೆ ಬರುವ ನಿರೀಕ್ಷೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

# ಬೇಸಿಗೆಯಲ್ಲಿ ನೀರಿನ ಕೊರತೆ ಆಗಲ್ಲ : ಕೆಎಸ್‌ಎನ್‌ಡಿಎಂಸಿ

**ಬೆಂಗಳೂರು:** ರಾಜ್ಯದಲ್ಲಿ ಈ ಬಾರಿ ಈಶಾನ್ಯ ಮಾನ್ಸೂನ್ ಮಾರುತವು ಸಾಮಾನ್ಯವಾಗಿರಲಿದ್ದರೂ ಬೇಸಿಗೆಯಲ್ಲಿ ನೀರಿನ ಕೊರತೆ ಕಂಡು ಬರುವುದಿಲ್ಲ ಎಂದು ತಜ್ಞರು ಮಾಹಿತಿ ನೀಡಿದ್ದಾರೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರದ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಜೂನ್‌ನಿಂದ ಸಾಮಾನ್ಯ ಮಳೆಯಾಗಿದ್ದು, ದಕ್ಷಿಣ ಒಳಾಂಗಣ ಪ್ರದೇಶಗಳಲ್ಲಿ ಸಾಮಾನ್ಯ 299 ಮಿಮೀ ಮಳೆ ಸುರಿಯಬೇಕಾಗಿದ್ದರೂ ಕೂಡಾ 292 ಮಿಮೀ ಮಳೆಯಾಗಿದ್ದು, ಉತ್ತರ-ಒಳಾಂಗಣ ಪ್ರದೇಶದಲ್ಲಿ ಸಾಮಾನ್ಯ 404 ಮಿಮೀ ಮಳೆಯ ಬದಲು 467 ಮಿಮೀ ಮಳೆಯಾಗಿದೆ. ಮಲೆನಾಡು ಪ್ರದೇಶದಲ್ಲಿ ಸಾಮಾನ್ಯ 1,474 ಮಿಮೀ ಮಳೆಗೆ ಬದಲಾಗಿ 1,370 ಮಿಮೀ ಮಳೆಯಾಗಿದೆ. ಈ ಅವಧಿಯಲ್ಲಿ ಕರಾವಳಿ ಪ್ರದೇಶದಲ್ಲಿ 3,027 ಮಿಮೀ ಮಳೆಗೆ ಬದಲಾಗಿ 2,983 ಮಿಮೀ ಮಳೆಯಾಗಿದೆ. ಒಟ್ಟಾರೆಯಾಗಿ, ರಾಜ್ಯವು ಸಾಮಾನ್ಯ ಮಳೆಯನ್ನು ಕಂಡಿದೆ ಎಂದು ಮಾಹಿತಿ ನೀಡಿದೆ.

ಕೆಎಸ್‌ಎನ್‌ಡಿಎಂಸಿಯ ಮಾಜಿ ನಿರ್ದೇಶಕ ಶ್ರೀನಿವಾಸ್ ರೆಡ್ಡಿ ಮಾಹಿತಿ ನೀಡಿ, ರಾಜ್ಯದಲ್ಲಿ ಮಾರ್ಚ್‌ನಿಂದ ಜೂನ್ ವರೆಗೆ ಸಾಮಾನ್ಯ ಪೂರ್ವ ಮಾನ್ಸೂನ್ ಮಳೆಗಿಂತ ಶೇ.200ರಷ್ಟು ಅಧಿಕ ಮಳೆಯಾಗಿದ್ದು, ಇದು ಜಲಾನಯನ ಪ್ರದೇಶಗಳಲ್ಲಿ ಮಣ್ಣಿನ ಶುದ್ಧತ್ವ ಮತ್ತು ಒಳಹರಿವು ಸುಧಾರಿಸಿದ್ದಲ್ಲದೆ, ನೈಋತ್ಯ ಮಾನ್ಸೂನ್‌ನ ಮೇಲೆ ಕಡಿಮೆ ಒತ್ತಡವನ್ನುಂಟು ಮಾಡಿದೆ. ಈಶಾನ್ಯ ಮಾನ್ಸೂನ್ ಅಣೆಕಟ್ಟುಗಳನ್ನು ತುಂಬಲು ಸಹಾಯ ಮಾಡಿದರೆ, ರೈತರಿಗೆ ಸಾಕಷ್ಟು ನೀರು ಸಿಗುತ್ತದೆ. ಬೇಸಿಗೆಯ ಬೆಳೆಗಳನ್ನು ತೆಗೆದುಕೊಳ್ಳಬಹುದು. ಕಳೆದ ಈಶಾನ್ಯ ಮಾನ್ಸೂನ್‌ನಲ್ಲಿ ರಾಜ್ಯವು ಕೊರತೆಯ ಮಳೆಯನ್ನು ಪಡೆದಿದೆ ಎಂದು ಹೇಳಿದರು.

ಆರ್.ಆರ್.ನಗರ ಪೊಲೀಸರಿಂದ ಯೋಗ ಗುರು ಸೆರೆ

# ಬಾಲಕಿಗೆ ಲೈಂಗಿಕ ದೌರ್ಜನ್ಯ ಆರೋಪ

**ಬೆಂಗಳೂರು:** ಯೋಗ ಕಲಿಯಲು ಬರುತ್ತಿದ್ದ ಅಪ್ರಾಪ್ತೆಗೆ ಪುಸಲಾಯಿಸಿ ಅಂತಾರಾಷ್ಟ್ರೀಯ ಮಟ್ಟದ ಯೋಗಪಟುವನ್ನಾಗಿ ಮಾಡುವುದಾಗಿ ಆಮಿಷವೊಡ್ಡಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿದ ಆರೋಪದಡಿ ಯೋಗಗುರುವೊಬ್ಬರನ್ನು ರಾಜರಾಜೇಶ್ವರಿ ನಗರ ಪೊಲೀಸರು ಬಂಧಿಸಿದ್ದಾರೆ.

ನಿರಂಜನಾಮೂರ್ತಿ ಬಂಧಿತ ಯೋಗ ಗುರು. ಬಾಲಕಿಯ ಕುಟುಂಬಸ್ಥರು ನೀಡಿದ ದೂರು ಆಧರಿಸಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಲಾಗಿದೆ. ಆರ್. ಆರ್. ನಗರದ ಸನ್ ಶೈನ್ ಇನ್ಸಿಟ್ಯೂಟ್ ಹೆಸರಲ್ಲಿ 2019ರಿಂದ ಆರೋಪಿ ಯೋಗ ತರಗತಿ ನಡೆಸುತ್ತಿದ್ದರು. ಬಾಲಕಿಯು 2021ರಿಂದ ಯೋಗ ತರಗತಿಗೆ ಸೇರಿದ್ದಳು. ತಮ್ಮ ಯೋಗಗುರುಗಳೊಂದಿಗೆ ಥಾಯ್ಲೆಂಡ್‌ನಲ್ಲಿ ನಡೆದಿದ್ದ ಯೋಗ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ಈ ವೇಳೆ ಆರೋಪಿ ಲೈಂಗಿಕ ದೌರ್ಜನ್ಯ ವೆಸಗಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

2024ರಲ್ಲಿ ಮತ್ತೆ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಲು ಬಾಲಕಿಯು ಆರೋಪಿ ಒಡೆತನದ ಯೋಗ ಕೇಂದ್ರಕ್ಕೆ ಮತ್ತೆ ಸೇರಿಕೊಂಡಿದ್ದಳು. ರಾಷ್ಟ್ರಮಟ್ಟದ ಯೋಗ ಸ್ಪರ್ಧೆಯಲ್ಲಿ ಮೆಡಲ್ ಕೊಡಿಸುತ್ತೇನೆ. ಇದರಿಂದ ಉತ್ತಮ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ಇನ್ಸಿಟ್ಯೂಟ್‌ನಲ್ಲಿ ಕಳೆದ ಆಗಸ್ಟ್‌ನಲ್ಲಿ ಬಾಲಕಿಯೊಂದಿಗೆ ದೈಹಿಕ ಸಂಪರ್ಕ ಮಾಡಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಆರೋಪಿಯನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೊಳಪಡಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

BEFORE THE HON'BLE REAL ESTATE REGULATORY AUTHORITY BANGALORE KARNATAKA
CMP No.00805/2025
BETWEEN : ASWANI VAMANI ALLOTTEES ASSOCIATION Rep.by its President
COMPLAINANT
1.Mr.Kodanda Reddy R S/o Ramaiah Reddy, 346/3c,8th Block Koramangala Near Bethany High School, Bangalore 560095.
AND M/s ASWANI PROPERTIES INDIA PVT.LTD & Ors.: RESPONDENTS
SUMMONS TO THE RESPONDENTS No.1,2,3&4
To, 1.M/s ASWANI PROPERTIES INDIA PVT.LTD. Rep.by its Managing Director, No 50/7, 3rd Floor, 39th Cross, 16th Main Jayanagar 4th T Block, Bangalore 560041. RESPONDENT No.1
2.Mr.Chinnaswamy Reddy @ Anand Reddy, Aged about Major, S/o H C Reddy, Flat No.502, 42, 4th Main Road, K.M.Layout, Balaji Nagar, S.G.Palya, Bangalore 560029. RESPONDENT No.2
3.Mr.Venkata Ramana Asula, Aged about Major, S/o Vankataiah Asuala, Flat No.502, 42, 4th Main Road, K.M.Layout, Balaji Nagar, S.G.Palya, Bangalore 560029. RESPONDENT No.3
4.Mr.R Nareshbabu, Aged about Major, S/o Ramareddy, No.160, Adigondanahalli, Anekal, Muthanallur, Bangalore 560099. RESPONDENT No.4
Whereas the above-named Complainant Association are allottees of the Project initiated by Aswani Properties India Pvt.Ltd. ("Developer/Builder')in the Schedule Property mentioned below. Since the Developer/Builder has failed to complete the Project within the stipulated period and has aborted the Project without completion the
allottees have incorporated the Complainant Association and has instituted the above complaint for takeover of the Project"Aswani Vamani" bearing RERA Registration No. PRM/KA/RERA/1251/308/PR/180227/002801.The Project for completion of the incomplete Project. You are hereby summoned to appear before this Authority on 6/10/2025 at 11.30 a.m. in person or through advocate/pleader to answer the question to the same. Failing which the Complaint will be heard and determined ex-parte and ex-parte orders will be passed based on the existing documents on record.
SCHEDULE
SCHEDULE PROPERTY
Item No.1 All that piece and parcel of residential converted land bearing Sy.No.173/1, and earlier thereto Sy.No.173, measuring about 2 Acres of Madivalla Village, kasaba Hobli, Anekal taluk, having Electronic Khatha in Form 11(B) issued by Marasuru Village Panchayat dated 20/04/2017 allotting property No.150200101800621759, Village Panchayat No.5795/173/3 and bounded on the:
East by : Land bearing Sy.No.173/1,
West by : Land bearing Sy.No.174,
North by : Land bearing Sy.No.172,
South by : Road.
Item No.2 All that piece and parcel of residential converted land bearing Sy.No.172/1 measuring about 2 Acres 37 Guntas out of 3 Acres 4 Guntas and remaining 7 Guntas open land(Buffer) of Madivalla Village, kasaba Hobli, Anekal, having Electronic Khatha in Form 11(B) issued by Marasuru Village Panchayat datewed 20/04/2017 allotting property No.150200101800621758, Village Panchayat No.5795/172/1 and bounded on the:
East by : Land bearing Sy.No.172/2A(Old Sy.No.172/2),
West by : Land bearing Sy.No.175 & 305,
North by : Land bearing Sy.No.171,
South by : Land bearing Sy.no.173/1(Old Sy.no.173) presently Sy.No.173/3.
Given under my hand and seal of the court,this 9th day of September 2025.
By Order Of the Court
Sd/- Secretary Karnataka Real Estate Regulatory Authority Estate
Advocate for Complainant
Senthil Kumar DU
Adivaktha Legal Inc.
Advocates & Legal Consultants
No.4/1,2nd Floor,Above Gullu's Chats, Serpentine Road, Kumara Park West, Bangalore 560020. Mob:9886111488

ಯಶವಂತಪುರ ರೈಲು ನಿಲ್ದಾಣದಲ್ಲಿ ಶೋಧ | ದೆಹಲಿಯಿಂದ ಪೂರೈಕೆ

# ಕೋಟಿ ರು. ಮೌಲ್ಯದ ತಂಬಾಕು ಪದಾರ್ಥ ಜಪ್ತಿ

**ಬೆಂಗಳೂರು:** ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 1 ಕೋಟಿ ರು. ಮೌಲ್ಯದ ಪಾನ್ ಮಸಾಲಾ ಮತ್ತು ತಂಬಾಕು ಪದಾರ್ಥಗಳನ್ನು ದಕ್ಷಿಣ ವಲಯದ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ದೊರೆತ ಖಚಿತ ಮಾಹಿತಿ ಮೇರೆಗೆ ನಗರದ ಯಶವಂತಪುರ ರೈಲು ನಿಲ್ದಾಣದಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದು, ಈ ವೇಳೆ ಸೂಕ್ತ ದಾಖಲೆಗಳು ಹಾಗೂ ಬಿಲ್ಲುಗಳಿಲ್ಲದೆ ತಂಬಾಕು ಪದಾರ್ಥಗಳ ಸಾಗಾಟ ಮಾಡುತ್ತಿರುವುದು ಕಂಡು ಬಂದಿದೆ. ಕಮಲಾ ಪಸಂದ್ ಪಾನ್ ಮಸಾಲಾ, ಹನ್ಸ್ ಚಾಪ್, ಚೈನಿ ಫಿಲ್ಟರ್ ತಂಬಾಕು ಮತ್ತು ಶಿಖರ್ ಪಾನ್ ಮಸಾಲಾ ಎಂಬ ಪ್ರತಿಷ್ಠಿತ ಬ್ರ್ಯಾಂಡ್‌ಗಳ ಪಾನ್ ಮಸಾಲಾ ಹಾಗೂ ತಂಬಾಕು ಪದಾರ್ಥಗಳನ್ನು ದೆಹಲಿಯಿಂದ ಬೆಂಗಳೂರಿಗೆ ರೈಲು ಮಾರ್ಗದ ಮೂಲಕ ಸಾಗಿಸಲಾಗುತ್ತಿತ್ತು. ಅವುಗಳನ್ನು ದಾಖಲೆಗಳಿಲ್ಲದೆ ನಿಲ್ದಾಣದ ಆವರಣದಲ್ಲಿರುವ ಕೆಲ ಸರಕು ವಾಹನಗಳು ಮತ್ತು ನಿಲ್ದಾಣದ ಫ್ಲ್ಯಾಟ್‌ಫಾರ್ಮ್‌ನಲ್ಲಿರುವ ಚೀಲಗಳಲ್ಲಿ ಸಂಗ್ರಹಿಸಿಟ್ಟಿರುವುದು ಪತ್ತೆಯಾಗಿದೆ ಎಂದು ಜಾರಿ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ಕಮಲಾ ಪಸಂದ್ ಪಾನ್ ಮಸಾಲಾ, ಹನ್ಸ್ ಚಾಪ್, ಚೈನಿ ಫಿಲ್ಟರ್ ತಂಬಾಕು ಮತ್ತು ಶಿಖರ್ ಪಾನ್ ಮಸಾಲಾ ಎಂಬ ಪ್ರತಿಷ್ಠಿತ ಬ್ರ್ಯಾಂಡ್‌ಗಳ ಪಾನ್ ಮಸಾಲಾ ಜಪ್ತಿ

### 850ಕ್ಕೂ ಹೆಚ್ಚು ಚೀಲಗಳಲ್ಲಿ ಪಾನ್ ಮಸಾಲ

ಈ ಚೀಲಗಳ ಪರಿಶೀಲಿಸಿ ಸುಮಾರು 1 ಕೋಟಿ ರು. ಮೌಲ್ಯದ 850ಕ್ಕೂ ಅಧಿಕ ಚೀಲಗಳ ಪಾನ್ ಮಸಾಲಾ ಮತ್ತು ತಂಬಾಕು ಪದಾರ್ಥಗಳನ್ನು ವಶಕ್ಕೆ ಪಡೆಯಲಾಗಿದೆ. ಪ್ರಾಥಮಿಕವಾಗಿ ಈ ವಸ್ತುಗಳ ಸಾಗಾಟಗಾರರು ಜಿಎಸ್‌ಟಿ ನಿಯಮಾವಳಿ ಅನ್ವಯ ಖರೀದಿ ಮಾಡದೆ ಅಕ್ರಮವಾಗಿ ಸಾಗಾಟ ಮಾಡಿರುವುದು ಗೊತ್ತಾಗಿದೆ. ಇದರಿಂದ ಸರಕಾರದ ಬೊಕ್ಕಸಕ್ಕೆ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ನಷ್ಟವಾಗಿರುವುದು ಕಂಡು ಬಂದಿದೆ. ಸೂಕ್ತ ದಾಖಲೆಗಳಿಲ್ಲದೆ ಹಾಗೂ ತೆರಿಗೆ ಬಿಲ್ಲುಗಳಿಲ್ಲದೆ ಸರಕುಗಳನ್ನು ಸಾಗಿಸುವ ಇಂತಹ ಅನಧಿಕೃತ ಚಟುವಟಿಕೆಗಳ ವಿರುದ್ಧ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿರುತ್ತಾರೆ. ಜತೆಗೆ ಜಿಎಸ್‌ಟಿ ಕಾಯಿದೆಯ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಇಲಾಖೆ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ವಾಣಿಜ್ಯ ತೆರಿಗೆಗಳ ಇಲಾಖೆಯ (ಜಾರಿ ವಿಭಾಗ) ಅಪರ ಆಯುಕ್ತ ಕನಿಷ್ಕ ಅವರು ತಿಳಿಸಿದ್ದಾರೆ.

ಯೋಜನೆಯ ರೂಪುರೇಷೆ ಸಿದ್ಧ | ಅಭಿಮಾನ ಕ್ಷೇತ್ರದ ನೀಲಿ ನಕ್ಷೆ ಬಿಡುಗಡೆ

# ನಿರ್ಮಾಣವಾಗಲಿದೆ ಅದ್ಧೂರಿ ವಿಷ್ಣು ಸ್ಮಾರಕ

**ಬೆಂಗಳೂರು:** ಅಭಿಮಾನ್ ಸ್ಟುಡಿಯೊ ದಲ್ಲಿದ್ದ ಸಾಹಸ ಸಿಂಹ ವಿಷ್ಣುವರ್ಧನ್ ಅವರ ಪುಣ್ಯಭೂಮಿಯನ್ನು ತೆರವು ಮಾಡಿದ್ದರಿಂದ ಅಭಿಮಾನಿಗಳು ಆಕ್ರೋಶಗೊಂಡಿ ದ್ದಾರೆ. ಪುಣ್ಯಭೂಮಿ ಉಳಿಸಿಕೊಳ್ಳಲು ಹೋರಾಟ ನಡೆಸಿದ್ದಾರೆ. ಈಗ ವಿಷ್ಣುವರ್ಧನ್ ಅಭಿಮಾನಿಗಳು ಸೇರಿ ಡಾ. ವಿಷ್ಣುವರ್ಧನ್ ಅಭಿಮಾನ ಕ್ಷೇತ್ರ ನಿರ್ಮಾಣಕ್ಕೆ ಸಿದ್ಧವಾಗಿದ್ದು, ಯೋಜನೆಯ ರೂಪುರೇಷೆಗಳು ಸಿದ್ಧವಾಗಿವೆ. ಅಭಿಮಾನ ಕ್ಷೇತ್ರದ ನೀಲಿ ನಕ್ಷೆ ಕೂಡ ಬಿಡುಗಡೆಯಾಗಿದೆ.

ಡಾ.ವಿಷ್ಣುವರ್ಧನ್ ಅವರ ಪುಣ್ಯಭೂಮಿ ಹೋರಾಟ ಇಂದಿನದಲ್ಲ. ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಮಾಡದ ಹೋರಾಟಗಳಿಲ್ಲ, ಮಾಡದ ಪ್ರಯತ್ನಗಳಿಲ್ಲ, ನಡೆಯದ ಸಂಧಾನ ಸಭೆಗಳಿಲ್ಲ. ಆದರೂ ಅದು ಬಗೆಹರಿಯುವ ಲಕ್ಷಣಗಳು ಕಾಣುತ್ತಿಲ್ಲ. ಈ ವರ್ಷದ ಎಪ್ಪತ್ತೈದನೇ ಅಮೃತ ಮಹೋತ್ಸವದ ಸಂದರ್ಭದಲ್ಲೂ ಡಾ.ವಿಷ್ಣು ವರ್ಧನ್ ಅವರ ಜನ್ಮದಿನ ಆಚರಣೆಗೆ ಒಂದು ಸೂಕ್ತ ಸ್ಥಳ ಇಲ್ಲದೆ ಹೋದದ್ದು ಅಭಿಮಾನಿಗಳಿಗೆ ಬೇಸರ ತರಿಸಿದೆ. ಅದಕ್ಕಾಗಿ ಡಾ. ವಿಷ್ಣುವರ್ಧನ್ ಅವರ ಅಭಿಮಾನಿಗಳು ತನ್ನ ಮೆಚ್ಚಿನ ನಟನಿಗಾಗಿ ಡಾ.ವಿಷ್ಣುವರ್ಧನ್ ಅಭಿಮಾನ ಕ್ಷೇತ್ರ ಕಟ್ಟಲು ಮುಂದಾಗಿದ್ದಾರೆ. ಕಲಾವಿದರೊಬ್ಬರ ಹೆಸರಿನಲ್ಲಿ ಅವರ ಅಭಿಮಾನಿಗಳು ನಿರ್ಮಿಸುತ್ತಿರುವ ದೇಶದ ಮೊಟ್ಟ ಮೊದಲ ಅಭಿಮಾನ ಕ್ಷೇತ್ರವಿದು. ಈ ಅಭಿಮಾನ ಕ್ಷೇತ್ರಕ್ಕೆ ಕಿಚ್ಚ ಸುದೀಪ್ ಅವರು, ಅಶೋಕ್ ಖೇಣಿ ಅವರು ಕೈ ಜೋಡಿಸಿದ್ದಾರೆ.



### ಸೂರ್ಯನ ಕಿರಣ ಬೀಳುವಂತೆ ವಿನ್ಯಾಸ

ಜ್ಞಾನ, ಧ್ಯಾನ ಮತ್ತು ದರ್ಶನ ಎಂಬ ಅಡಿಬರಹ ಗಮನಸೆಳೆಯುತ್ತದೆ. ಇಲ್ಲಿ ಡಾ.ವಿಷ್ಣುವರ್ಧನ್ ಅವರ ಇಪ್ಪತ್ತೈದು ಅಡಿಯ ಪ್ರತಿಮೆಯ ಜತೆಗೆ ಧ್ಯಾನ ಮಂದಿರವಿರಲಿದೆ. ಜತೆಗೆ ಒಂದು ದೊಡ್ಡ ಪುಸ್ತಕ ಭಂಡಾರ ಇರಲಿದೆ. ಈ ಧ್ಯಾನ ಮಂದಿರದ ವಿಶೇಷತೆ ಏನೆಂದರೆ ಮಧ್ಯಾಹ್ನ ಎರಡು ಗಂಟೆಗೆ ಸಮಯಕ್ಕೆ ಸೂರ್ಯನ ಕಿರಣಗಳು ಡಾ.ವಿಷ್ಣುವರ್ಧನ್ ಅವರ ಅಮೃತ ಶಿಲೆಯ ಮೇಲೆ ಮೂಡುವಂತೆ ಇದನ್ನು ವಿನ್ಯಾಸ ಮಾಡಲಾಗಿದೆ. ಜತೆಗೆ ಅವರ ಫೋಟೋ ಗ್ಯಾಲರಿ ಕೂಡ ವಿಶೇಷವಾಗಿ ವಿನ್ಯಾಸಗೊಂಡಿದೆ. ಪ್ರತಿದಿನ ಸಂಜೆ ಆರು ಗಂಟೆ ಮೂವತ್ತು ನಿಮಿಷಕ್ಕೆ ಲೇಸರ್ ಶೋ ನಡೆಯುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ವಿಷ್ಣು ಸೇನಾ ಸಮಿತಿಯ ವೀರಕಪುತ್ರ ಶ್ರೀನಿವಾಸ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಜನ್ಮದಿನದ ಹಿನ್ನೆಲೆಯಲ್ಲಿ ಬಿಜೆಪಿ ದೇಶಾದ್ಯಂತ 'ಸೇವಾ ಪಾಕ್ಷಿಕ' ಆಚರಿಸುತ್ತಿದ್ದರೆ, ಯುವ ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರೀಯ ನಿರುದ್ಯೋಗ ದಿನ ಆಚರಿಸುವ ಮೂಲಕ ಕೇಂದ್ರ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಕಚೇರಿ ಮುಂದೆ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ನೇತೃತ್ವದಲ್ಲಿ 'ಪಕೋಡಾ' ತಯಾರಿಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಿತು.

# ಇಬ್ಬರು ಅಧಿಕಾರಿಗಳ ಡಿಜಿಪಿ ಬಡ್ತಿಗೆ ತಡೆ

**ಬೆಂಗಳೂರು:** ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅವರಿಗೆ ಸರಕಾರ ಬಡ್ತಿ ನೀಡದೇ ಕಿರಿಯ ಅಧಿಕಾರಿಗಳಾಗಿದ್ದ ಉಮೇಶ್ ಕುಮಾರ್ ಹಾಗೂ ಅರುಣ್ ಚಕ್ರವರ್ತಿ ಅವರನ್ನು ಡಿಜಿಪಿಯಾಗಿ ಬಡ್ತಿ ನೀಡಿ ಸರಕಾರ ಹೊರಡಿಸಿದ್ದ ಆದೇಶಕ್ಕೆ ಕೆಎಟಿ (ಕೇಂದ್ರ ಆಡಳಿತಾತ್ಮಕ ನ್ಯಾಯ ಮಂಡಳಿ) ತಡೆ ನೀಡಿದೆ.

ಡಿಜಿಪಿ ಹುದ್ದೆಯ ಆಕಾಂಕ್ಷಿಯಾಗಿದ್ದ ಅಲೋಕ್ ಕುಮಾರ್, ತನಗೆ ಸೇವಾ ಹಿರಿತನವಿದ್ದರೂ ಸರಕಾರ ತನ್ನನ್ನು ಪರಿಗಣಿಸದೇ ತನಗಿಂತ ಕಿರಿಯರಾದ ಉಮೇಶ್ ಕುಮಾರ್ ಹಾಗೂ ಅರುಣ್ ಚಕ್ರವರ್ತಿ ಅವರಿಗೆ ನೀಡಿದ್ದ ಬಡ್ತಿಯನ್ನು ಪ್ರಶ್ನಿಸಿ ಕೆಎಟಿ ಮೊರೆ ಹೋಗಿದ್ದರು. ಅಲೋಕ್ ಕುಮಾರ್ ಅವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿರುವ ಹಿನ್ನೆಲೆಯಲ್ಲಿ ಇದನ್ನು ಮುಂದಿಟ್ಟು ರಾಜ್ಯ ಸರಕಾರ ಅವರಿಗೆ ಮುಂಬಡ್ತಿ ನೀಡಿರಲಿಲ್ಲ. ಅಲೋಕ್ ಕುಮಾರ್ ಉಪೇಕ್ಷಿಸಿ ಡಿಜಿಪಿಯಾಗಿ ಉಮೇಶ್ ಕುಮಾರ್ ಹಾಗೂ ಅರುಣ್ ಚಕ್ರವರ್ತಿಯವರಿಗೆ ಸರಕಾರ ಬಡ್ತಿ ನೀಡಿತ್ತು.

ಇದನ್ನು ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಪ್ರಶ್ನಿಸಿ ಸಿಎಟಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಕೆಎಟಿಯ ಇಬ್ಬರು ನ್ಯಾಯಮೂರ್ತಿಗಳು ಅಲೋಕ್ ಕುಮಾರ್ ಅರ್ಜಿ ಬಗ್ಗೆ ವಿಭಿನ್ನ ರೀತಿಯ ತೀರ್ಪು ನೀಡಿದ್ದಾರೆ. ಕೆಎಟಿಯ ಮೂರನೇ ನ್ಯಾಯಮೂರ್ತಿ ಇಲಾಖೆ ವಿಚಾರಣೆ ಬಗ್ಗೆ ತೀರ್ಮಾನಿಸಬೇಕಿದೆ. ಈ ನಡುವೆ ಸಿಎಟಿ ಡಿಜಿಪಿಯಾಗಿ ನೇಮಕಗೊಂಡಿದ್ದ ಉಮೇಶ್ ಕುಮಾರ್ ಹಾಗೂ ಅರುಣ್ ಚಕ್ರವರ್ತಿ ಅವರ ಬಡ್ತಿಗೆ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಅರ್ಜಿ

# ಬಾನು ದಸರಾ ಉದ್ಘಾಟನೆ ವಿಚಾರ ಸುಪ್ರೀಂ ಅಂಗಳಕ್ಕೆ

**ನವದೆಹಲಿ/ಬೆಂಗಳೂರು:** ಮೈಸೂರು ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದ ವಿಚಾರ ಈಗ ಸುಪ್ರೀಂ ಕೋರ್ಟ್ ಅಂಗಳಕ್ಕೆ ತಲುಪಿದೆ. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಎಚ್.ಎಸ್. ಗೌರವ್ ಎಂಬವರು ಸುಪ್ರೀಂನಲ್ಲಿ ಪ್ರಶ್ನಿಸಿದ್ದಾರೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ ಇವರು ಇದೆ 22 ರಂದು ದಸರಾ ಉದ್ಘಾಟನೆ ನಡೆಯಲಿದೆ. ಹೀಗಾಗಿ ತುರ್ತು ಅರ್ಜಿ ವಿಚಾರಣೆ ಮಾಡಬೇಕೆಂದು ಸಿಜೆಐ ಗವಾಯಿ ಮುಂದೆ ಮನವಿ ಮಾಡಿದ್ದಾರೆ. ಅರ್ಜಿಯನ್ನು ಪುರಸ್ಕರಿಸಿದ ಕೋರ್ಟ್ ಶುಕ್ರವಾರ ನಡೆಸುವುದಾಗಿ ಹೇಳಿದೆ.

**ಕರ್ನಾಟಕ ಹೈಕೋರ್ಟ್‌ನಲ್ಲಿ ಏನಾಗಿತ್ತು? :** ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಮೂವರು ಸಲ್ಲಿಸಿದ್ದ ಅರ್ಜಿಗಳನ್ನು ಸೆ.15 ರಂದು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ ಜೋಶಿ ನೇತೃತ್ವದ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತ್ತು. ರಾಜ್ಯ ಸರಕಾರ ಆಯೋಜಿಸುವ ಕಾರ್ಯಕ್ರಮದಲ್ಲಿ ಭಿನ್ನ ಧರ್ಮದ ವ್ಯಕ್ತಿ ಭಾಗಿಯಾಗುವುದು, ಅರ್ಜಿದಾರರ ಯಾವುದೇ ಕಾನೂನು ಅಥವಾ ಸಾಂವಿಧಾನಿಕ ಹಕ್ಕನ್ನು ಹೇಗೆ ಉಲ್ಲಂಘಿಸುತ್ತದೆ? ಭಾರತದ ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮೌಲ್ಯಗಳಿಗೆ ವಿರುದ್ಧ ಹೇಗೆ ಎಂಬುದನ್ನು ಸಾಬೀತುಪಡಿಸುವಲ್ಲಿ ಅರ್ಜಿದಾರರು ವಿಫಲವಾಗಿದ್ದಾರೆ ಎಂದು ಅಭಿಪ್ರಾಯಪಟ್ಟು ಅರ್ಜಿಗಳನ್ನು ವಜಾಗೊಳಿಸಿತ್ತು. ಬಾನು ಮುಷ್ತಾಕ್ ಆಯ್ಕೆ ಪ್ರಶ್ನಿಸಲು ನಿಮಗೆ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಹಕ್ಕು ಏನಿದೆ ಹೇಳಿ? ಶಿಷ್ಟಾಚಾರ ಪಾಲಿಸುವುದು ಬಾನು ಮುಷ್ತಾಕ್ ಅವರಿಗೆ ಸೇರಿದ ವಿಚಾರ. ವಿಜಯದಶಮಿ ಎಂದರೇನು? ಕೆಟ್ಟದರ ವಿರುದ್ಧ ಒಳ್ಳೆಯದರ ವಿಜಯ ಅಲ್ವಾ? ಈ ಹಬ್ಬವನ್ನು ದೇಶಾದ್ಯಂತ ಆಚರಿಸಲಾಗುತ್ತದೆ. ಈ ವೇಳೆ ವಾದಕ್ಕೆ ಮುಂದಾದ ಪ್ರತಾಪ್ ಸಿಂಹ ವಕೀಲ ಸುದರ್ಶನ್ ಮುಂದಾದಾಗ ನೀವು ಹೀಗೇ ವಾದಿಸಿದರೆ ಆದೇಶ ಆಗಿದೆ. ದಂಡ ವಿಧಿಸಬೇಕಾ ಎಂದು ಕಟುವಾಗಿ ಪ್ರಶ್ನಿಸಿ ಈ ನ್ಯಾಯಾಲಯದಲ್ಲಿ ನೀವು ಹೀಗೆಲ್ಲಾ ಮಾಡಲಾಗದು ಎಂದು ಹೇಳಿತು.

ಹಿಂದೂ ಎಂದು ಬರೆಸಲು ತೀರ್ಮಾನ : ವಚನಾನಂದ ಶ್ರೀ

# ಲಿಂಗಾಯತರು ಹಿಂದೂಗಳೆಂದು ಬರೆಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಿನಕ್ಕೊಂದು ವಿವಾದದ ಸ್ವರೂಪ ಪಡೆಯುತ್ತಿರುವ ಜಾತಿ ಗಣತಿಯಲ್ಲಿ ಲಿಂಗಾಯತರು ಧರ್ಮದ ಕಾಲಂನಲ್ಲಿ 'ಹಿಂದೂ' ಎಂದೇ ನಮೂದಿಸಬೇಕು ಎಂದು ಸಮುದಾಯ ಮತ್ತೊಂದು ಬಣ ಕರೆ ನೀಡಿರುವುದು ಇದೀಗ ಸಮುದಾಯದಲ್ಲಿರುವ ಬಿರುಕು ಬಹಿರಂಗವಾಗಿದೆ.

ಹರಿಹರ ವೀರಶೈವ ಪಂಮಚಸಾಲಿ ಲಿಂಗಾಯತ ಜಗದ್ಗುರು ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಪಂಚಮಸಾಲಿ ಲಿಂಗಾಯತ ಮಠಗಳ ಸ್ವಾಮೀಜಿ ಹಾಗೂ ನಾಯಕರ ಸಭೆಯಲ್ಲಿ, ಜಾತಿ ಸಮೀಕ್ಷೆಯಲ್ಲಿ ಸಮುದಾಯದ ಧರ್ಮವನ್ನು ವೀರಶೈವ ಲಿಂಗಾಯತ ಎಂದು ಉಲ್ಲೇಖಿಸದೇ, ಹಿಂದೂ ಎಂದು ಉಲ್ಲೇಖಿಸುವ ನಿರ್ಧಾರಕ್ಕೆ ಬರಲಾಗಿದೆ. ಆದರೆ ಈ ತೀರ್ಮಾನ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಿರ್ಧಾರಕ್ಕೆ ವಿರುದ್ಧವಾಗಿದೆ. ಸಭೆಯಲ್ಲಿ ಕೆಲವರ ಅಸಮ್ಮತಿಯ ನಡುವೆಯೂ ಈ ನಿರ್ಣಯ ಕೈಗೊಳ್ಳಲಾಗಿದೆ. ಇದಕ್ಕೂ ಮುನ್ನ ಮಹಾಸಭಾವು, ಸಮೀಕ್ಷೆಯ ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತರು 'ಹಿಂದು' ಎಂದು ಬರೆಸದಂತೆ ಸಮುದಾಯದ ಜನತೆಗೆ ಕರೆ ನೀಡಿತ್ತು.

ಈ ಬಗ್ಗೆ ಮಾತನಾಡಿದ ವಚನಾನಂದ ಸ್ವಾಮೀಜಿ, ಲಿಂಗಾಯತರು ಹಿಂದೂಗಳು ಮತ್ತು ಹಿಂದೂಗಳು ಎಂದು ಘೋಷಿಸಿಕೊಂಡಿರುವುದರಿಂದಲೇ ಇಂದು ನಾವು ಹಲವು ಸರಕಾರಿ ಸೌಲಭ್ಯಗಳನ್ನು ಅನುಭವಿಸುತ್ತಿದ್ದೇವೆ. ಆದ್ದರಿಂದ, ನಮ್ಮ ಎಲ್ಲಾ ಸಮುದಾಯದ ಸದಸ್ಯರು ತಮ್ಮ ಧರ್ಮವನ್ನು ಹಿಂದು ಎಂದು ಮತ್ತು ಜಾತಿಯನ್ನು ಪಂಚಮಸಾಲಿ ಲಿಂಗಾಯತ ಎಂದು ನಮೂದಿಸಬೇಕೆಂದು ನಾನು ಮನವಿ ಮಾಡುತ್ತೇನೆ ಎಂದು ತಿಳಿಸಿದರು.

> ಹಿಂದುಗಳ ಸಂಖ್ಯೆಯನ್ನು ಕಡಿಮೆ ಮಾಡುವ ಇಂತಹ ಕರೆಗಳ ಹಿಂದೆ ಪಿತೂರಿ ಇದೆ. ನಾವು ಅದನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ. ಲಿಂಗಾಯತ ಎಂಬ ಯಾವುದೇ ಧರ್ಮವಿಲ್ಲ. ಲಿಂಗಾಯತವನ್ನು ಪ್ರತ್ಯೇಕ ಧರ್ಮವೆಂದು ಗುರುತಿಸುವ ಬೇಡಿಕೆಯನ್ನು ಈಗಾಗಲೇ ತಿರಸ್ಕರಿಸಲಾಗಿದೆ. ಹೀಗಿರುವಾಗ, ಲಿಂಗಾಯತವನ್ನು ನಮ್ಮ ಧರ್ಮವೆಂದು ಉಲ್ಲೇಖಿಸುವುದರಲ್ಲಿ ಅರ್ಥವಿಲ್ಲ.
>
> – ಶ್ರೀ ವಚನಾನಂದ ಸ್ವಾಮೀಜಿ, ಪೀಠಾಧ್ಯಕ್ಷ, ಹರಿಹರ ವೀರಶೈವ ಪಂಮಚಸಾಲಿ ಲಿಂಗಾಯತ ಜಗದ್ಗುರು ಪೀಠ

ಸಮುದಾಯದ ಮತ್ತೊಬ್ಬ ಪ್ರಮುಖರಾದ ಕೂಡಲ ಸಂಗಮ ಮಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಕೊನೆಯ ಕ್ಷಣದವರೆಗೆ ಹಾಜರಾಗುವುದಾಗಿ ಸಂಘಟಕರು ಹೇಳಿಕೊಂಡರೂ ಸಹ ಅವರು ಸಭೆಯಿಂದ ದೂರವುಳಿದರು. ಸಭೆಗೆ ಗೈರುಹಾಜರಾದ ಅವರು, ವಚನಾನಂದ ಸ್ವಾಮೀಜಿಯವರ ಮಾತಿಗೆ ವಿರುದ್ಧವಾಗಿ ಹೇಳಿಕೆ ನೀಡಿದ್ದಾರೆ. ಲಿಂಗಾಯತರು ತಮ್ಮ ಧರ್ಮವನ್ನು ಹಿಂದೂಗಳೆಂದು ಉಲ್ಲೇಖಿಸದೆ, ಪಂಚಮಸಾಲಿ ಲಿಂಗಾಯತ ಎಂದು ನಮೂದಿಸಬೇಕು ಎಂದು ಅವರು ಕರೆ ಕೊಟ್ಟಿದ್ದಾರೆ. ಅಲ್ಲದೆ, ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕೂಡ ಲಿಂಗಾಯತವು ಸ್ವತಃ ಒಂದು ಪ್ರತ್ಯೇಕ ಧರ್ಮ ಮತ್ತು ಲಿಂಗಾಯತರು ಹಿಂದು ಧರ್ಮದ ಭಾಗವಲ್ಲ ಎಂದು ಹೇಳಿದ್ದಾರೆ.

## ಸಮಾಚಾರ ಸಣ್ಣದಲ್ಲ

### ನಾಳೆ ವಿದ್ಯುತ್ ವ್ಯತ್ಯಯ

**ಬೆಂಗಳೂರು:** ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾಮಗಾರಿ ಹಿನ್ನೆಲೆ ಸೆ.20ರ ಬೆಳಗ್ಗೆ 10 ರಿಂದ 2 ಗಂಟೆಯವರೆಗೆ ವಿವಿಧ ಕಡೆಗಳಲ್ಲಿ ವಿದ್ಯುತ್ ವ್ಯತಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ. 66/11 ಕೆವಿ ಸೌದೇಲಾ ವಿವಿ ಕೇಂದ್ರ, ವಿಶ್ವ ಪ್ರಿಯ ಲೇಔಟ್,

ಬೇಗೂರು ಕೊಪ್ಪ ರೋಡ್, ದೇವರ ಚಿಕ್ಕನಹಳ್ಳಿ, ಅಕ್ಷಯ ನಗರ, ತೇಜಸ್ವಿನಿ ಹಿರಾನಂದಿನ ಅಪಾರ್ಟ್‌ಮೆಂಟ್ ಪ್ರದೇಶಗಳು ಮತ್ತು ಸುತ್ತಮುತ್ತಲಿನ 66/11ಕೆವಿ ಎಲೆಕ್ಟ್ರಾನ್ ಸಿಟಿ ವಿವಿ ಕೇಂದ್ರ ಹುಳಿಮಂಗಲ ವಿವಿ ಕೇಂದ್ರ, ಎಲೆಕ್ಟ್ರಾನ್ ಸಿಟಿ ಫೇಸ್-1, ನಾಲಾದ್ರಿ ರೋಡ್. ಹಬ್ಬಗೋಡಿ, ವೀರಸಂದ್ರ, ಗೊಲ್ಲಹಳ್ಳಿ, ಇ.ಎಚ್.ಟಿ. ಇನ್ಫೋಸಿಸ್ ಮತ್ತು ಹುಳಿಮಂಗಲ ವಿ.ವಿ.ಕೇಂದ್ರದಿಂದ ಹೊರಹೋಗುವ ಫೀಡರ್‌ಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳು. 66/11ಕೆವಿಡಿಎಲ್ ಎಫ್ ಡಿ.ಎಲ್.ಎಫ್ ಅಪಾರ್ಟ್‌ಮೆಂಟ್, ಎಲೇನಹಳ್ಳಿ, ಬೇಗೂರು ಹೋಬಳಿ ಸುತ್ತಮುತ್ತಲಿನ ಪ್ರದೇಶ, 66/11ಕೆವಿ ದೇವರಬೀಸನಹಳ್ಳಿ ಬೆಳ್ಳಂದೂರು. ಆರ.ಎಂ.ಝಡ್. ದೇವರಬಿಸನ ಹಳ್ಳಿ, ಕರಿಯಮ್ಮನಪಾಳ್ಯ ಆಕ್ಮೆ ಪ್ರಾಜೆಕ್ಟ್, ಅನುಪಮ, ಟೋಟಲ್ ಮಾಲ್, ಶೋಭಾ ಐರೀಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

### ಬಹಿರಂಗ ಹರಾಜು

**ಬೆಂಗಳೂರು:** ಬೆಂಗಳೂರಿನ ಸರಕಾರಿ ಮಹಿಳಾ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿನ ಸ್ಪೋಟ್ಸ್ ವಿದ್ಯಾರ್ಥಿನಿಲಯದ ಸಾಮಗ್ರಿಗಳು, ಗ್ರಂಥಾಲಯದ ಪುಸ್ತಕಗಳು ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ , ಸಿವಿಲ್ ಅನುಪಯುಕ್ತ ಉಪಕರಣಗಳನ್ನು ಬಹಿರಂಗ ಹರಾಜು ಮಾಡಲು ಇಲಾಖೆ ಅನುಮತಿ ನೀಡಿದೆ. ಅನುಪಯುಕ್ತ ವಸ್ತುಗಳನ್ನು ಯಾವ ಸ್ಥಿತಿಯಲ್ಲಿವೇ ಅದೇ ಸ್ಥಿತಿಯಲ್ಲಿ ಅ.9 ರ ಬೆಳಗ್ಗೆ 11 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ. ಈ ಬಹಿರಂಗ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಅ.9 ರಂದು ಬೆಳಗ್ಗೆ 10 ಗಂಟೆಯೊಳಗೆ 12,500 ರು. ಮುಂಗಡ ಠೇವಣಿ ಹಣವನ್ನು ಸಂಸ್ಥೆಯ ನಗದು ವಿಭಾಗದಲ್ಲಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸುವುದು ಹಾಗೂ ನಿಯಮಾನುಸಾರ ಹರಾಜು ಪ್ರಕ್ರಿಯೆ ಮುಗಿದ ಬಳಿಕ ಬಿಡ್ ಸಿಗದೆ ಇದ್ದಂತಹ ಬಿಡ್ದುದಾರರಿಗೆ ಅವರು ಪಾವತಿಸಿರುವ ಮುಂಗಡ ಹಣ ಠೇವಣಿ ಹಣವನ್ನು ಹಿಂತಿರುಗಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

### ನರ್ತನ ಯೋಗ ಕೃತಿ ಬಿಡುಗಡೆ ಕಾರ್ಯಕ್ರಮ

**ಬೆಂಗಳೂರು:** ಜಯನಗರದ ಜೆಎಸ್‌ಎಸ್ ಆಡಿಟೋರಿಯಂನಲ್ಲಿ ಕಲಾ ಸಂಕುಲನ ಭಾರತೀಯ ಕಲೆಗಳ ಕೇಂದ್ರದ ವತಿಯಿಂದ ಸೆ.20ರ ಸಂಜೆ 6 ಗಂಟೆಗೆ ಡಾ. ಪೂರ್ಣಾ ಸುರೇಶ್‌ರ ನರ್ತನ ಯೋಗ ಸಂಶೋಧನಾ ಕೃತಿ ಲೋಕಾರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಮೈಸೂರಿನ ಕುಲಪತಿ ಡಾ.ನಾಗೇಶ್ ವಿ ಬೆಟ್ಟಕೋಟೆ, ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದ ಕುಲಪತಿ ಡಾ.ಕೆ. ಸುಬ್ರಹ್ಮಣ್ಯಂ ಆಗಮಿಸಲಿದ್ದು, ನಾಟ್ಯರಾಣಿ ಶಾಂತಲಾ ಪ್ರಶಸ್ತಿ ಪುರಸ್ಕೃತೆ ಕಲಾಮಂಡಲಂ ಉಷಾ ದಾತಾರ್ ಉಪಸ್ಥಿತರಿರಲಿದ್ದಾರೆ. ಬೆಂಗಳೂರು ವಿವಿ ಪ್ರದರ್ಶನ ಕಲಾ ವಿಭಾಗದ ಮುಖ್ಯಸ್ಥ ಹಾಗೂ ನಿವೃತ್ತ ಪ್ರಾಧ್ಯಾಪಕ ಡಾ. ಸರ್ವೋತ್ತಮ ಕಾಮತ್‌ರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

### ರಂಗ ಜಂಗಮ ಬಿ.ವಿ. ಕಾರಂತ ಜನ್ಮದಿನ ಇಂದು

**ಬೆಂಗಳೂರು:** ನಗರದ ಉದಯಭಾನು ಕಲಾಸಂಘದ ವಜ್ರಮಹೋತ್ಸವ ಹಿನ್ನೆಲೆ ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಬಿಬಿಎಂಪಿ ವತಿಯಿಂದ ಸೆ.19ರಂದು ಸಂಜೆ 6 ಗಂಟೆಗೆ ಉದಯಭಾನು ಅಂಗಳದಲ್ಲಿ ರಂಗಜಂಗಮ ಬಿ ವಿ ಕಾರಂತ ಜನ್ಮದಿನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ರಂಗಕರ್ಮಿಗಳಾದ ಕೃಷ್ಣಪ್ರಸಾದ್ ಮಾಯಸಂದ್ರ, ಸಾಗರ್ ನೀನಾಸಂ, ಸಂಘದ ಸಂಸ್ಥಾಪಕ ಎಲ್. ವೆಂಕಟಪ್ಪ, ಸಂಘದ ಅಧ್ಯಕ್ಷ ಶ್ರೀರಾಮೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ನಗರ ವಿವಿ ಪ್ರವೇಶಾತಿ ದಿನಾಂಕ ವಿಸ್ತರಣೆ

**ಬೆಂಗಳೂರು:** ಬೆಂಗಳೂರು ನಗರ ವಿವಿಯ ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಆವರಣದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ದಿನಾಂಕವನ್ನು ಸೆ.30ರವರೆಗೆ ವಿಸ್ತರಿಸಿದೆ. ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಾಧ್ಯವಾಗದಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪ್ರವೇಶ ಪಡೆಯಲು ಕೊನೆಯ ದಿನಾಂಕವನ್ನು ವಿಸ್ತರಿಸಿದ್ದು, ಆಸಕ್ತ ಅರ್ಹ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ವಿದ್ಯಾರ್ಹತೆಯ ದಾಖಲೆ ಹಾಗೂ ಅವುಗಳ ಒಂದು ಪತ್ರಿಯೊಂದಿಗೆ ಸಂಬಂಧಿಸಿದ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸಲು ಹಾಗೂ ಸ್ಥಳದಲ್ಲಿಯೇ ತಕ್ಷಣ ಪ್ರವೇಶ ಪ್ರಕ್ರಿಯೆಗಳನ್ನು ಪೂರೈಸಿ, ಶುಲ್ಕ ಸಂದಾಯ ಮಾಡಿ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ.ಐಐ

ವಿರಾಮ
ಪ್ರತಿ ಭಾನುವಾರ

# ಪ್ರವಾಸೋದ್ಯಮ ಉತ್ತೇಜಿಸಲು ನೀತಿ ಜಾರಿ

## ರಾಜ್ಯದಲ್ಲಿ 1.5 ಲಕ್ಷ ಉದ್ಯೋಗ ಸೃಷ್ಟಿ | 8,000 ಕೋಟಿ ಹೂಡಿಕೆ ಆಕರ್ಷಿಸುವ ಗುರಿ: ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ರಾಜ್ಯ ಸರಕಾರ ನೂತನ ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸಿದ್ದು, ಇದರಿಂದ ಸುಮಾರು ಒಂದುವರೆ ಲಕ್ಷ ಉದ್ಯೋಗ ಸೃಷ್ಟಿಯಾಗುವ ಜತೆಜತೆಗೆ 8 ಸಾವಿರ ಕೋಟಿ ರು. ಹೂಡಿಕೆಯಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ್ದ 55ನೇ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಸರಕಾರ ಕಳೆದ ಫೆಬ್ರವರಿಯಲ್ಲಿ 2024-29 ಪ್ರವಾಸೋದ್ಯಮ ನೀತಿಯನ್ನು ಜಾರಿಗೊಳಿಸಿದೆ. ಈ ನೀತಿಯೂ ಕರ್ನಾಟಕವನ್ನು ದೇಶದ ನಂಬರ್ 1 ಪ್ರವಾಸೋದ್ಯಮಿ ಸ್ನೇಹಿ ರಾಜ್ಯವನ್ನಾಗಿಸುವಲ್ಲಿ ಪ್ರಮುಖ ಪಾತ್ರವಹಿಸಲಿದೆ. ಈ ನೀತಿಯಲ್ಲಿ ಪ್ರಮುಖವಾಗಿ ಎಲ್ಲರನ್ನೂ ಒಳಗೊಂಡ, ತಂತ್ರಜ್ಞಾನ ನೈಪುಣ್ಯ ಹೊಂದಿರುವ ಪರಿಸರವನ್ನು ನಿರ್ಮಿಸುವುದಾಗಿದೆ. ಈ ನೀತಿಯಿಂದ 2029ರ ಹೊತ್ತಿಗೆ ರಾಜ್ಯದಲ್ಲಿ 1.5 ಲಕ್ಷ ಹೊಸ ಉದ್ಯೋಗ 8,000 ಕೋಟಿ ಹೂಡಿಕೆಯನ್ನು ಆಕರ್ಷಿಸುವ ಗುರಿಯನ್ನು ಹೊಂದಿದ್ದೇವೆ ಎಂದರು.

ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಾಲ್ಕು ವಿಷಯಗಳ ಮೇಲೆ ಹೆಚ್ಚಿನ ಗಮನಹರಿಸಬೇಕಿದೆ. ಮೊದಲನೆಯದಾಗಿ ಪ್ರವಾಸಿಗರಿಗೆ ಅನುಕೂಲವಾಗುವ ರೀತಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು. ನಮ್ಮ ಯುವಕರಿಗೆ ಜಾಗತಿಕ ಮಟ್ಟದ ಸೇವೆ ಒದಗಿಸುವ ರೀತಿ ಕೌಶಲ ತರಬೇತಿ ಒದಗಿಸುವುದು, ಪರಿಸರಕ್ಕೆ ಹಾನಿಯಿಲ್ಲದೆ ಬೆಳವಣಿಗೆ ಸಾಧಿಸುವುದು ಹಾಗೂ ಇಡೀ ಜಗತ್ತಿನ ಮುಂದೆ ಕರ್ನಾಟಕದ ಭವ್ಯ ಇತಿಹಾಸವನ್ನು ಹೇಳುವುದಾಗಿದೆ ಎಂದರು.

> ಕರ್ನಾಟಕದಲ್ಲಿ ಪುರಾತನ ಇತಿಹಾಸವಿರುವ ಹಂಪಿಯಿಂದ ಹಿಡಿದು, ಆಧುನಿಕ ತಂತ್ರಜ್ಞಾನದ ಸಂಶೋಧನೆಯಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರಿದೆ. ಕರ್ನಾಟಕದ ರಾಜಧಾನಿ ಬೆಂಗಳೂರು ಎಂಐಸಿಇಗಳ ಗ್ಲೋಬಲ್ ಹಬ್ ಆಗಿದ್ದು, ಶೇ.15ರಷ್ಟು ಕಾರ್ಯಕ್ರಮಗಳು ಬೆಂಗಳೂರಿನಲ್ಲಿ ನಡೆಯುತ್ತವೆ.
>
> - ಸಿದ್ದರಾಮಯ್ಯ ಮುಖ್ಯಮಂತ್ರಿ

ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ್ದ 55ನೇ ವಾರ್ಷಿಕ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವ ಎಚ್.ಕೆ. ಪಾಟೀಲ್ , ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಶ್ರೀನಿವಾಸ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಎಫ್‌ಎಚ್‌ಆರ್‌ಎಐ ಅಧ್ಯಕ್ಷ ಕೆ.ಶಾಮರಾಜು ಸೇರಿ ಮತ್ತಿತರರು ಇದ್ದರು.

2024ರ ಹೊತ್ತಿಗೆ ಕರ್ನಾಟಕ ಸುಮಾರು 30.46 ಕೋಟಿ ಸ್ವದೇಶಿ ಪ್ರಯಾಣಿಕರನ್ನು ಸೆಳೆದಿದೆ. ಇದರಿಂದ ಸುಮಾರು 12 ಲಕ್ಷ ನೇರ ಹಾಗೂ ಪರೋಕ್ಷ ಉದ್ಯೋಗವನ್ನು ಸೃಷ್ಟಿಸಲಾಗಿದೆ. ಸುಮಾರು 25ಸಾವಿರ ಕೋಟಿ ರು.ಗೂ ಹೆಚ್ಚಿನ ಆದಾಯವನ್ನು ಪ್ರವಾಸೋದ್ಯಮ ಕ್ಷೇತ್ರದಿಂದಲೇ ಕರ್ನಾಟಕಕ್ಕೆ ಹರಿದು ಬರುತ್ತಿದೆ. ಇತ್ತೀಚಿನ ದಿನದಲ್ಲಿ ಅಂತಾರಾಷ್ಟ್ರೀಯ ಪ್ರವಾಸಿಗರನ್ನು ಸೆಳೆಯುವುದರಲ್ಲಿಯೂ ಕರ್ನಾಟಕ ಮುಂಚೂಣಿಯಲ್ಲಿದೆ. ಕಳೆದ ವರ್ಷ ಕರ್ನಾಟಕದಲ್ಲಿ 500ಕ್ಕೂ ಹೆಚ್ಚು ಹೋಂ ಸ್ಟೇಗಳಿಗೆ ಅನುಮತಿ ನೀಡಲಾಗಿದೆ ಎಂದು ವಿವರಿಸಿದರು.

ಸಾಂಸ್ಕೃತಿಕ ರಾಜಧಾನಿ ಮತ್ತು ತಂತ್ರಜ್ಞಾನದ ಕೇಂದ್ರ ಎರಡರ ಗುರುತನ್ನೂ ಹೊಂದಿರುವ ಬೆಂಗಳೂರಿನ ಅನನ್ಯತೆಯ ಬಗ್ಗೆ ಗುಣಗಾನ ಮಾಡಿದರು. ಸುಸ್ಥಿರ ಪ್ರವಾಸೋದ್ಯಮ ಮೂಲಸೌಕರ್ಯ, ಪ್ರಾದೇಶಿಕ ಸರ್ಕ್ಯೂಟ್‌ಗಳ ಅಭಿವೃದ್ಧಿ, ಮತ್ತು ದೊಡ್ಡ ಪ್ರಮಾಣದ ಹೂಡಿಕೆಗಳನ್ನು ಆಕರ್ಷಿಸುವ ನಿಟ್ಟಿನಲ್ಲಿ ತಮ್ಮ ಸರಕಾರದ ಬದ್ಧತೆಯನ್ನು ಪುನರುಚ್ಚರಿಸಿದರು. ಕರ್ನಾಟಕವು ದೇಶದ ಪ್ರವಾಸೋದ್ಯಮ ಬೆಳವಣಿಗೆಗೆ ಪ್ರಮುಖ ಕೊಡುಗೆದಾರನಾಗಿ ರೂಪುಗೊಳ್ಳಲಿದೆ ಎಂದು ಅವರು ಹೇಳಿದರು.

> ಕರ್ನಾಟಕದಲ್ಲಿ ಆತಿಥ್ಯ ಉದ್ಯಮ ಮಾತ್ರವಲ್ಲದೇ, ಆರೋಗ್ಯ ಕ್ಷೇತ್ರವೂ ಉತ್ತಮವಾಗಿದೆ. ಕರ್ನಾಟಕವು ವಿವಿಧ ಸಂಸ್ಕೃತಿಗಳಿಗೆ ಹೆಸರುವಾಸಿಯಾಗಿದೆ. ದಸರಾ ಉತ್ಸವವನ್ನು ಸಹ ಆಧುನಿಕ ಸ್ವರೂಪದಲ್ಲಿ ಬದಲಾಯಿಸುತ್ತಿದ್ದೇವೆ. ಮೈಸೂರು ಪ್ರದೇಶವು ತೀವ್ರವಾಗಿ ಬೆಳೆಯುತ್ತಿದೆ. ಗೋವಾ ಮತ್ತು ಕೇರಳ ಯಾವ ರೀತಿ ಪ್ರವಾಸಿಗರನ್ನು ಸೆಳೆಯುತ್ತಿದೆಯೋ ಅದೇ ರೀತಿ ನಾವು ಕೆಲಸ ಮಾಡುತ್ತಿದ್ದೇವೆ.
>
> - ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ, ಸಚಿವ ಎಚ್.ಕೆ. ಪಾಟೀಲ್, ಎಂಬಿ ಪಾಟೀಲ್, ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀನಿವಾಸ್, ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್, ಎಫ್‌ಎಚ್ ಆರ್‌ಎಐ ಅಧ್ಯಕ್ಷ ಕೆ.ಶಾಮರಾಜು ಸೇರಿ ಗಣ್ಯರು ಭಾಗವಹಿಸಿದ್ದರು.

ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಹಿರಿಯ ನಾಗರಿಕ ವೇದಿಕೆ ಹಮ್ಮಿಕೊಂಡಿದ್ದ ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಸಂಘದ ಅಭಿವೃದ್ಧಿಗಾಗಿ 10 ಲಕ್ಷ ರುಪಾಯಿ ದೇಣಿಗೆಯನ್ನು ವಿಜಯನಗರ ಶಾಸಕ ಎಂ.ಕೃಷ್ಣಪ್ಪ ನೀಡಿದರು. ಈ ಸಂದರ್ಭದಲ್ಲಿ ಗೋವಿಂದರಾಜ ನಗರದ ಶಾಸಕ ಪ್ರಿಯ ಕೃಷ್ಣ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಬೆಂಗಳೂರು ನಗರದ ವಿದ್ಯಾರಣ್ಯನಗರದಲ್ಲಿರುವ ಪ್ರಮೀಳಾ ಬಾಯಿ ಮಾನೆ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಹಾಗೂ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ 27 ವರ್ಷಗಳನ್ನು ಪೂರೈಸಿ, ಲಕ್ಷಾಂತರ ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿಸಿರುವ ಶಾಲೆ ಬೋಸ್ಟನ್ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯ ವ್ಯವಸ್ಥಾಪಕ ನಿರ್ದೇಶಕ ದರ್ಶನ್ ಕೃಷ್ಣ ಅವರನ್ನು ವಿವೇಕ ಚೇತನ ಚಾರಿಟಬಲ್ ಟ್ರಸ್ಟ್ ಹಾಗೂ ರಾಘವೇಂದ್ರ ಪ್ರಕಾಶನ ಸಂಸ್ಥೆ ಗುರುಶ್ರೀ ಪ್ರಶಸ್ತಿ ನೀಡಿ ಸನ್ಮಾನಿಸಿತು.

# 110 ಕಿಮೀ ಎಲಿವೇಟೆಡ್ ಕಾರಿಡಾರ್

## ಟೆಂಡರ್ ಪ್ರಕ್ರಿಯೆ ಚಾಲ್ತಿ | 18,000 ಕೋಟಿ ರು. ವೆಚ್ಚ ಅಂದಾಜು

**ಬೆಂಗಳೂರು:** ಸುರಂಗ ರಸ್ತೆ ಯೋಜನೆಯು ಟೆಂಡರ್ ಪ್ರಕ್ರಿಯೆಯಲ್ಲಿದ್ದರೂ ಸಹ, 110 ಕಿ.ಮೀ. ಎತ್ತರದ ಕಾರಿಡಾರ್‌ಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ಅನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ತಾಂತ್ರಿಕ ಸಲಹಾ ಸಮಿತಿಯು ಅನುಮೋದಿಸಿದೆ.

ಬೆಂಗಳೂರಿನಾದ್ಯಂತ ಚಲಿಸುವ ಈ ಕಾರಿಡಾರ್ ನಿಂದ ಭೂಸ್ವಾಧೀನಕ್ಕಾಗಿ ರೂ 3,000 ಕೋಟಿ ಸೇರಿದಂತೆ ರೂ 18,000 ಕೋಟಿ ವೆಚ್ಚದಲ್ಲಿ ಯೋಜಿಸಲಾಗಿದೆ. ಡಿಪಿಆರ್ ಅನ್ನು ಸೆಪ್ಟೆಂಬರ್ 25 ರೊಳಗೆ



ಅನುಮೋದನೆಗಾಗಿ ರಾಜ್ಯ ಸರಕಾರಕ್ಕೆ ಕಳುಹಿಸುವ ನಿರೀಕ್ಷೆಯಿದೆ. ಒಂದು ಬಾರಿ ಅನುಮೋದನೆ ದೊರೆತರೆ ಆ ಬಳಿಕ 25 ತಿಂಗಳಲ್ಲಿ ಯೋಜನೆ ಯನ್ನು ಪೂರ್ಣಗೊಳಿಸುವ ನಿರೀಕ್ಷೆಯಿದೆ.

**ಎಲ್ಲೆಲ್ಲಿ ಹಾದುಹೋಗಲಿದೆ ರಸ್ತೆ?**

ಕಾರಿಡಾರನ್ನು ನಿರ್ಮಿಸಲು ಉತ್ತಮ ಪ್ರದರ್ಶನವಿರುವ ಫೈಬರ್ ರಿ ಇನ್ಫೋರ್ಸ್ಡ್ ಕಾಂಕ್ರೀಟ್ ತಂತ್ರಜ್ಞಾನವನ್ನು ಬಳಸಲು ನಿರ್ಧರಿಸಿದ್ದು, ಇದೇ ತಂತ್ರಜ್ಞಾನ ಹೊಂದಿರುವ ನಾಗ್ಪುರಕ್ಕೆ ಬೆಂಗಳೂರು ಸ್ಮಾರ್ಟ್ ಇನ್ಫ್ರಾ ಸ್ಟ್ರಕ್ಚರ್ ಲಿಮಿಟೆಡ್ ಭೇಟಿ ನೀಡಿ ಅಧ್ಯಯನ ನಡೆಸಿದೆ. ಉತ್ತಮ ಗುಣಮಟ್ಟ ಮತ್ತು ಶಕ್ತಿಯುತ ಕಾರಿಡಾರ್ ನಿರ್ಮಾಣ ಬಿ-ಸ್ಮೈಲ್‌ನ ಮುಖ್ಯ ಉದ್ದೇಶವಾಗಿದೆ. ಹೀಗಾಗಿ ಗುಣಮಟ್ಟದ ಸರಕುಗಳನ್ನು ಪೂರ್ವಭಾವಿ ಯಾಗಿ ಕಾರ್ಖಾನೆಗಳಲ್ಲಿ ತಯಾರಿಸಲಾಗುತ್ತದೆ.

ಈ ಬೃಹದಾಕಾರದ ಕಾರಿಡಾರ್‌ಗಳು ಪರ್ಯಾಯ ರಸ್ತೆಗಳಾಗಿದ್ದು, ಈಗಿರುವ ರಸ್ತೆಗಳಿಗೆ ಪೂರಕವಾಗಿರುವುದಿಲ್ಲ. ಟೆಂಡರ್ ಪಡೆದುಕೊಂಡವರಿಗೆ ರಾಜ್ಯ ಸರಕಾರವು ಅಗತ್ಯಬಿದ್ದರೆ ಕೆಲವು ಕಾರ್ಯಸಾಧ್ಯತಾ ನಿಧಿಗಳನ್ನು ಪೂರೈಸಬಹುದು. ಎಲಿವೇಟೆಡ್ ಕಾರಿಡಾರ್‌ಗಳು ಬೆಂಗಳೂರಿನ ಹೊರ ವಲಯಗಳನ್ನೂ ಸಂಪರ್ಕಿಸಲಿವೆ. ಪ್ರಯಾಣಿಕರು ಯಾವಾಗಲಾದರೂ ಪರಸ್ಪರ ಮಾರ್ಗ ಬದಲಾಯಿಸಿಕೊಳ್ಳಬಹುದು ಮತ್ತು ವೇಗವಾಗಿ ತಲುಪಬಹುದು. ಕಾರಿಡಾರ್‌ನ ಪೂರ್ವ ಭಾಗದಿಂದ ವಿಮಾನ ನಿಲ್ದಾಣಕ್ಕೂ ಸಂಪರ್ಕ ಕಲ್ಪಿಸಲಾಗುತ್ತದೆ.

ಸರಕಾರವು ಈಗಾಗಲೇ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿದೆ. ಡಿಪಿಆರ್‌ಗೆ ಅನುಮೋದನೆ ನೀಡಿದ ನಂತರ, ಡಿಸೆಂಬರ್ ವೇಳೆಗೆ ಕೆಲಸ ಪ್ರಾರಂಭವಾಗುತ್ತದೆ. ಕಾರಿಡಾರ್‌ನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ನಿರ್ಮಿಸಲಾಗುತ್ತದೆ ಮತ್ತು ಟೋಲ್ ವಿಧಿಸಲಾಗುತ್ತದೆ. ಆದರೂ ಬಿ-ಸ್ಮೈಲ್ ಟೋಲ್‌ನ್ನು ನಿರ್ಧರಿಸುವುದಿಲ್ಲ ಎಂದು ಬಿ-ಸ್ಮೈಲ್‌ನ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

### 1 ವರ್ಷ ನಗರದ ಸಂಚಾರ ಅಧ್ಯಯನ

ನಗರದ ಸಂಚಾರವನ್ನು ಒಂದು ವರ್ಷದವರೆಗೆ ಅಧ್ಯಯನ ಮಾಡಿದ ನಂತರ ನಾವು ಡಿಪಿಆರ್ ಸಿದ್ಧಪಡಿಸಿದ್ದೇವೆ. ಡಿಪಿಆರ್‌ಗಳನ್ನು ಸಿದ್ಧಪಡಿಸುವಾಗ ನಮಗೆ ಅನೇಕ ವಿಚಾರಗಳು ಬಂದವು ಮತ್ತು ಆ ಎಲ್ಲಾ ವಿಚಾರಗಳನ್ನು ಸೇರಿಸಲಾಗಿದೆ. ಕಾರಿಡಾರ್ ನಿರ್ಮಿಸಲು ಅಲ್ಟ್ರಾ-ಹೈ-ಪರ್ಫಾರ್ಮೆನ್ಸ್ ಫೈಬರ್-ರೀ ಇನ್ಫೋರ್ಸ್ಡ್ ಕಾಂಕ್ರೀಟ್ ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಬಿ-ಸ್ಮೈಲ್ ತಂಡವು ನಾಗ್ಪುರಕ್ಕೆ ಭೇಟಿ ನೀಡಿದ್ದು, ಅಲ್ಲಿ ಅಂತಹ ತಂತ್ರಜ್ಞಾನವನ್ನು ಬಳಸಲಾಗಿದೆ. ಕಾರಿಡಾರ್‌ಗಾಗಿ ಎಲ್ಲಾ ಘಟಕಗಳನ್ನು ಪೂರ್ವಭಾವಿಯಾಗಿ ಕಾರ್ಖಾನೆಯಿಂದ ತಯಾರಿಸಲಾಗುವುದು ಎಂದು ಬಿ-ಸ್ಮೈಲ್‌ನ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ಹೇಳಿದರು.

# ಜೆಪಿನಗರದಲ್ಲಿ ಬಿಡಿಎ 65 ಕೋಟಿ ರು. ಆಸ್ತಿ ವಶ

**ಬೆಂಗಳೂರು:** ಬಿಡಿಎಯು ಜೆಪಿ ನಗರದ 9ನೇ ಫೇಸ್ ನಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರೆಸಿದ್ದು, 65 ಕೋಟಿ ರು. ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲೂಕು, ಬೇಗೂರು ಹೋಬಳಿ, ಆಲಹಳ್ಳಿ ಗ್ರಾಮದ 2.5 ಎಕರೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣಗಳನ್ನು ತೆರವುಗೊಳಿಸಿ, ಸುಮಾರು 65 ಕೋಟಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿದೆ. ಈ ಕಾರ್ಯಾಚರಣೆಯನ್ನು ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ ಹಾಗೂ ನಾಡಪ್ರಭು ಕೆಂಪೇಗೌಡ ಬಡಾವಣೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಹಾಗೂ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನಡೆಯಿತು.

# ಭ್ರೂಣದ ಆರೋಗ್ಯ ವೃದ್ಧಿಗೆ ಎಫ್‌ಎಂಸಿ

## ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ | ರಾಜ್ಯದಲ್ಲೆ ಮೊದಲ ಬಾರಿಗೆ ಭ್ರೂಣಾವಸ್ಥೆಯಲ್ಲಿ ಮಗುವಿನ ನ್ಯೂನತೆ ಪತ್ತೆ ಘಟಕ ಪ್ರಾರಂಭ | ಉಚಿತವಾಗಿ ಫೀಟಲ್ ಮೆಡಿಸಿನ್ ಚಿಕಿತ್ಸೆ

**ಬೆಂಗಳೂರು:** ಗರ್ಭಾವಸ್ಥೆ ಅಥವಾ ಭ್ರೂಣಾವಸ್ಥೆಯಲ್ಲಿ ಮಗುವಿನ ನ್ಯೂನತೆ ಪತ್ತೆ ಹಚ್ಚಲು ಬಳಸುವ ಫೀಟಲ್ ಮೆಡಿಸಿನ್ ವಿಭಾಗವನ್ನು (ಎಫ್‌ಎಂಸಿ) ರಾಜ್ಯದಲ್ಲೆ ಮೊದಲ ಬಾರಿಗೆ ಸರಕಾರಿ ಸ್ವಾಮ್ಯದ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಪ್ರಾರಂಭವಾಗಿದೆ.

ಈಗಾಗಲೇ ನಾಲ್ವರಿಗೆ ಫೀಟಲ್ ಮೆಡಿಷನ್ ವಿಭಾಗದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗಿದ್ದು, ಹೆಸರು ನೋಂದಾಯಿಸುತ್ತಿದ್ದಾರೆ. ತಾಯಿಯ ಗರ್ಭದಲ್ಲಿ ಬೆಳೆಯುವ ಶಿಶುಗಳಲ್ಲಿ ಕಂಡು ಬರುವ ಅನುವಂಶೀಯ ಕಾಯಿಲೆ, ಅಂಗ ವೈಕಲ್ಯತೆ, ಹೃದಯ ಸಂಬಂಧಿ ಕಾಯಿಲೆಯಂತಹ ನ್ಯೂನತೆಗಳನ್ನು ಭ್ರೂಣಾವಸ್ಥೆಯಲ್ಲೆ ಪತ್ತೆಹಚ್ಚಿ ಚಿಕಿತ್ಸೆ ನೀಡುವ ಪ್ರಕ್ರಿಯೆಗೆ ಫೀಟಲ್ ಚಿಕಿತ್ಸೆ ಎನ್ನಲಾಗುತ್ತದೆ. ಆದರೆ, ಈ ಚಿಕಿತ್ಸೆ ರಾಜ್ಯದ ಕೆಲವೇ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿದೆ.

ಲಕ್ಷಾಂತರ ಬಡ ಮಹಿಳೆಯರು ಭ್ರೂಣವಸ್ಥೆಯಲ್ಲಿ ಶಿಶುವಿನಲ್ಲಿ ನ್ಯೂನತೆಗಳಿದ್ದರೂ ಆರ್ಥಿಕ ಮುಗ್ಗಟ್ಟಿನಿಂದ ಸೂಕ್ತ ಚಿಕಿತ್ಸೆ ಪಡೆಯುತ್ತಿರಲಿಲ್ಲ. ಪರಿಣಾಮ ಇಂತಹ ಮಗು ನ್ಯೂನತೆಗೆ ಒಳಪಡಬೇಕಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಸರಕಾರವು ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಇದೇ ಮೊದಲ ಬಾರಿಗೆ ಉಚಿತವಾಗಿ ಫೀಟಲ್ ಮೆಡಿಸಿನ್ ಚಿಕಿತ್ಸೆ ಒದಗಿಸಲಾಗುತ್ತಿದೆ. ಈ ವಿಭಾಗ ಕಾರ್ಯಾರಂಭವಾಗಿದ್ದು, ಲಕ್ಷಾಂತರ ಬಡ ಗರ್ಭಿಣಿಯರು ಇಲ್ಲಿ ಉಚಿತವಾಗಿ ಫೀಟಲ್ ಮೆಡಿಸಿನ್ ಪಡೆದು ಆರೋಗ್ಯಕರ ಮಗುವಿಗೆ ಜನ್ಮ ನೀಡಬಹುದು.

**ಒಂದೂವರೆ ಕೋಟಿ ರು. ಅನುದಾನ:** ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಫೀಟಲ್ ಮೆಡಿಸಿನ್ ಅಳವಡಿಸಿಕೊಳ್ಳಲು ಕೆಪಿಟಿಸಿಎಲ್ ಸಿಎಸ್‌ಆರ್ ಫಂಡ್‌ನಿಂದ ಒಂದೂವರೆ ಕೋಟಿ ರು. ಅನುದಾನ ದೊರೆತಿದೆ. ಅಲ್ಟ್ರಾಸೌಂಡ್, ಸಿಟಿ ಸ್ಕ್ಯಾನಿಂಗ್, ಎಂಆರ್‌ಐ, ಭ್ರೂಣ ಪರೀಕ್ಷಿಸಲು ಆಧುನಿಕ ಉಪಕರಣ ಸೇರಿ ಹಲವು ವೈದ್ಯಕೀಯ ಉಪಕರಣ ಖರೀದಿಸಲಾಗಿದೆ. ಈ ಚಿಕಿತ್ಸೆಗೆ ಅಗತ್ಯವಾಗಿ ಬೇಕಾಗಿರುವ ರೇಡಿಯಾಲಜಿಸ್ಟ್, ಫೀಟಲ್ ಚಿಕಿತ್ಸೆಯ ತರಬೇತಿ ಹೊಂದಿರುವ ತಜ್ಞರು, ಭ್ರೂಣವಸ್ಥೆಯಲ್ಲಿ ಶಿಶುವಿನ ಕಾಯಿಲೆಗಳ ಬಗ್ಗೆ ಪರಿಶೀಲಿಸುವ ಮಕ್ಕಳ ತಜ್ಞ ವೈದ್ಯರು, ಸ್ತ್ರೀ ರೋಗ ತಜ್ಞರನ್ನು ಒಳಗೊಂಡಿದೆ.

> ಗರ್ಭಾವಸ್ಥೆಯ ಮೊದಲ ಮೂರು ತಿಂಗಳ ಒಳಗೆ ಭ್ರೂಣದ ಅಸಹಜತೆ, ಅಂಗ ನ್ಯೂನ್ಯತೆ, ರಚನಾತ್ಮಕ ಹಾಗೂ ಅನುವಂಶಿಕ ಸಮಸ್ಯೆಗಳು ಸೇರಿ ಒಟ್ಟಾರೆ ಆರೋಗ್ಯ ನಿರ್ಣಯಿಸಲಾಗುತ್ತದೆ. ಅಗತ್ಯ ಇದ್ದಲ್ಲಿ ಭ್ರೂಣಾವಸ್ಥೆಯಲ್ಲಿಯೇ ಚಿಕಿತ್ಸೆ ನೀಡಿ, ಸಮಸ್ಯೆ ಪರಿಹರಿಸಲಾಗುವುದು. ವಿವಿಧ ಸರಕಾರಿ ಆರೋಗ್ಯವಿಮೆಯಡಿ ಬಿಪಿಎಲ್ ಕುಟುಂಬದವರಿಗೆ ಉಚಿತ ವೈದ್ಯಕೀಯ ಸೇವೆ ಸಿಗಲಿದೆ.
>
> -ಡಾ.ಕೆ.ಎಸ್.ಸಂಜಯ್
> ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

### ಪಾಲಕರ ಜತೆ ಸಮಾಲೋಚನೆ

ಫೀಟಲ್ ಮೆಡಿಸಿನ್ ವ್ಯವಸ್ಥೆಯಲ್ಲಿ ಪಾಲಕರಿಗೆ ಆಪ್ತ ಸಮಾಲೋಚಿಸಿ ಶಿಶುಗಿರುವ ಸಮಸ್ಯೆ ವಿವರಿಸಲಾಗುತ್ತದೆ. ಪಾಲಕರ ನಿರ್ಧಾರದ ಮೇಲೆ ವೈದ್ಯರು ಮುಂದಿನ ಕ್ರ ಕೈಗೊಳ್ಳುತ್ತಾರೆ. ಯಾವುದೇ ಅನುಮಾನಗಳಿದ್ದರೆ ಸ್ಕ್ರೀನಿಂಗ್, ಅಲ್ಟ್ರಾ ಸ್ಕ್ಯಾನಿಂಗ್ ಮೂಲಕ ಭ್ರೂಣದ ನ್ಯೂನತೆ ಪತ್ತೆ ಹಚ್ಚಬಹುದು. ಫೀಟಲ್ ಮೆಡಿಸಿನ್ ಚಿಕಿತ್ಸೆಯಲ್ಲಿ ಫೀಟಲ್ ಬ್ಲಿಡ್ ಪರೀಕ್ಷೆ, ಅಮ್ಯೂನ್ಯೂಟಿಕ್ ಫ್ರಿಡ್ ಸ್ಯಾಂಪಲ್, ಕೊರಿಯಾನಿಕ್ ವಿಲ್ಲೈ ಬಯಾಪ್ಸಿ ಸೇರಿದಂತೆ ವಿವಿಧ ಪರೀಕ್ಷೆ ನಡೆಸಲಾಗುತ್ತದೆ ಎಂದು ತಜ್ಞ ವೈದ್ಯರು ಮಾಹಿತಿ ನೀಡಿದ್ದಾರೆ. ವಂಶವಾಹಿ ಸಂಬಂಧಿ ಸಮಸ್ಯೆಯಿಂದ ಸಿಕಲ್-ಸೆಲ್, ಅನೀಮಿಯಾ, ಥಲಸ್ಸೇಮಿಯಾ ಸೇರಿ ವಿವಿಧ ಸರಳ ಕಾಯಿಲೆಗಳಿಂದ ಬಾಧಿತರಾಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಈ ಕಾಯಿಲೆಗಳ ಚಿಕಿತ್ಸಾ ವೆಚ್ಚ ದುಬಾರಿಯಾಗಿರುವುದರಿಂದ ಜೀವನಪೂರ್ತಿ ಸಮಸ್ಯೆ ಎದುರಿಸಬೇಕಾಗುತ್ತದೆ. ಆದ್ದರಿಂದ ಜನನ ಪೂರ್ವವೇ ಈ ಸಮಸ್ಯೆ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲು ಸಂಸ್ಥೆ ಕ್ರಮವಹಿಸಿದೆ.

### ಆರೋಗ್ಯಯುತ ಮಗುವಿಗೆ ಸಹಕಾರಿ

ರಾಜ್ಯದಲ್ಲಿ ಶೇ.4 ರಷ್ಟು ಶಿಶುಗಳು ಜನ್ಮಜಾತ ವಿಕಲತೆ ಹೊಂದಿರುತ್ತದೆ. ಪ್ರತಿ ವರ್ಷ 4 ರಿದ 5 ಸಾವಿರ ಶಿಶುಗಳಲ್ಲಿ ಈ ಸಮಸ್ಯೆ ಕಂಡು ಬರುತ್ತಿವೆ. ಈ ಪೈಕಿ ದೇಹ ರಚನೆ ಹಾಗೂ ಅನುವಂಶೀಯತೆ ವೈಕಲ್ಯತೆ ಹೆಚ್ಚಾಗಿರುತ್ತದೆ. ಭ್ರೂಣದಲ್ಲಿ ಸರಿಪಡಿಸಲಾಗದ ಗಂಭೀರ ಸ್ವರೂಪದ ಸಮಸ್ಯೆ ಕಂಡು ಬಂದಲ್ಲಿ ಜನಿಸಿದ ಒಂದು ವರ್ಷದೊಳಗೆ ಮಗು ಮರಣ ಹೊಂದುವ ಸಾಧ್ಯತೆಗಳು ಹೆಚ್ಚಿದ್ದ ತಾಯಿಯ ಆರೋಗ್ಯಕ್ಕೆ ತೊಂದರೆ ಯಾಗುವ ಮುನ್ನವೇ ಕಾನೂನು ಅನ್ವಯ ಗರ್ಭಪಾತಕ್ಕೆ ಕೇಂದ್ರ ನೆರವಾಗಲಿದೆ. ಈ ಮೂಲಕ ನ್ಯೂನತೆಯುಳ್ಳ ಶಿಶುಗಳ ಜನನ ಹೆರಿಗೆ ಸಂದರ್ಭದಲ್ಲಿ ಹಾಗೂ ನಂತರ ಒಂದು ವರ್ಷದ ಅವಧಿಯಲ್ಲಿ ಶಿಶು ಮರಣದಂತಹ ಸಮಸ್ಯೆಗಳನ್ನು ತಡೆಯಲು ಕೇಂದ್ರ ಸಹಕಾರಿಯಾಗಲಿದೆ. ಅಂಗ ನ್ಯೂನತೆ, ಬುದ್ಧಿ ಮಾಂದ್ಯತೆ, ದೃಷ್ಟಿ ಮತ್ತು ಶ್ರವಣ ದೋಷ, ಮಿದುಳಿನ ಸಮಸ್ಯೆ, ರಕ್ತ ಕಣಗಳ ಸಮಸ್ಯೆ, ಶ್ವಾಸಕೋಶದ ಸಮಸ್ಯೆ ಸೇರಿ ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುವ ವಿವಿಧ ಸಮಸ್ಯೆಗಳನ್ನು ತಡೆಯಲಾಗುತ್ತದೆ.

# ನಿರ್ಲಕ್ಷ್ಯ ತೋರುವ ನೌಕರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ

**ಬೆಂಗಳೂರು:** ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹಣೆಯ ಕಾರ್ಯದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳು/ ನೌಕರರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವುದಾಗಿ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಎಚ್ಚರಿಕೆ ನೀಡಿದರು.

> ಯಲಹಂಕ ಮಿನಿ ವಿಧಾನಸೌಧದಲ್ಲಿ ಸಭೆ ಪೊಮ್ಮಲ ಸುನೀಲ್ ಕುಮಾರ್ ಸೂಚನೆ

ಯಲಹಂಕ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ಕಂದಾಯ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಮಾತನಾಡಿ, ಕಂದಾಯ ಸಂಗ್ರಹಣೆ ಯಲ್ಲಿ ಒಂದು ವಾರದೊಳಗಾಗಿ ತಮ್ಮ ಕಾರ್ಯವೈಖರಿಯನ್ನು ಸುಧಾರಿಸಿಕೊಳ್ಳದೇ ನಿರ್ಲಕ್ಷ್ಯ ತೋರಿದಲ್ಲಿ, ಅಂತಹ ಅಧಿಕಾರಿಗಳು ಮತ್ತು ನೌಕರರುಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 4,87,292 ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಒಳಪಟ್ಟಿದ್ದು, 1,242 ಕೋಟಿ ರು. ಆಸ್ತಿ ತೆರಿಗೆ ಸಂಗ್ರಹಿಸುವ ಗುರಿಯಿದ್ದು, ಈವರೆಗೆ 542.32 ಕೋಟಿ ರು. ತೆರಿಗೆ ಸಂಗ್ರಹಿಸಲಾಗಿದೆ. ಬಾಕಿ 700 ಕೋಟಿ ರು. ತೆರಿಗೆ ಸಂಗ್ರಹಿಬೇಕಾಗಿದ್ದು, ಕಂದಾಯ ವಸೂಲಿಗಾರರು / ಕಂದಾಯ ಪರಿವೀಕ್ಷಕರವಾರು / ಸಹ ಕಂದಾಯ ಅಧಿಕಾರಿಗಳವಾರು/ಕಂದಾಯ ಅಧಿಕಾರಿಗಳವಾರು ಕಾರ್ಯವೈಖರಿಯನ್ನು ಪ್ರತ್ಯೇಕವಾಗಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಹೆಚ್ಚು ಬಾಕಿ ಉಳಿಸಿಕೊಂಡಿರುವ ಎಲ್ಲಾ ಸುಸ್ತಿದಾರರಿಂದ ಕೂಡಲೇ ಆಸ್ತಿ ತೆರಿಗೆ ಸಂಗ್ರಹಿಸಬೇಕು. ಜತೆಗೆ ಆಸ್ತಿ ತೆರಿಗೆಯಿಂದ ಹೊರಗುಳಿದ ಆಸ್ತಿಗಳನ್ನು ಪೂರ್ಣ ಪ್ರಮಾಣದಲ್ಲಿ ಗುರುತಿಸಿ, ಆಸ್ತಿ ತೆರಿಗೆ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳಬೇಕು. ಜನಪರ ಕಾಳಜಿಯಿಂದ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕು. ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತರು ನೀಡಿರುವ ಗುರಿಯನ್ನು ತಲುಪುವಲ್ಲಿ ಎಲ್ಲಾ ಅಧಿಕಾರಿಗಳು ಪ್ರಾಮಾಣಿಕವಾಗಿ ಮತ್ತು ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

### ಬೀದಿ ನಾಯಿಗಳ ಸಂತಾನಹರಣಕ್ಕೆ ಕ್ರಮ ವಹಿಸಿ

ಬೀದಿ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸಾ ಕೇಂದ್ರದ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ ಬಳಿಕ ಆಕ್ರಮಣಕಾರಿ ಬೀದಿ ನಾಯಿಗಳ ವೀಕ್ಷಣೆ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ, ನಗರ ಪಾಲಿಕೆ ವ್ಯಾಪ್ತಿಯ ಬೀದಿ ಬದಿಯಲ್ಲಿರುವ ಅಕ್ರಮಣಕಾರಿ ನಾಯಿಗಳನ್ನು ಗುರುತಿಸಿ, ಎಬಿಸಿ ಕೇಂದ್ರಕ್ಕೆ ಕರೆತಂದು ಸೂಕ್ತ ಚಿಕಿತ್ಸೆ ನೀಡಿ, ನಾಯಿಗಳು ಸಾರ್ವಜನಿಕರಿಗೆ ತೊಂದರೆ ನೀಡದಂತೆ ಮುಂಜಾಗ್ರತಾ ಕ್ರಮಗಳನ್ನು ವಹಿಸಲು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಸೂಚಿಸಿದರು.

ಕರ್ನಾಟಕ ಸರ್ಕಾರ GOVERNMENT OF KARNATAKA
**ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.**
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
e-mail-ids:directorbmcrcbellary@gmail.com, website : https://vims.karnataka.gov.in
ಸಂ:ಬಿಎಂಸಿಆರ್‌ಸಿ/ಟೆಂಡರ್/ಸಾಮಾನ್ಯ–1/05/2025–26/Call-2
ದಿನಾಂಕ:16.09.2025
**ಮರು ಇ–ಟೆಂಡರ್ ಅಧಿಸೂಚನೆ**
ಬಿಎಂಸಿಆರ್‌ಸಿ ಬಳ್ಳಾರಿಯ ಸಮೂಹ ಕಾಲೇಜು ಮತ್ತು ಆಸ್ಪತ್ರೆಗಳಿಗೆ ಗಾರ್ಡನ್ ನಿರ್ವಹಣೆ ಮಾಡಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ದ್ವಿ–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್ ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರ್‌ನ್ನು **ದಿನಾಂಕ: 16.09.2025** ರಿಂದ **ದಿನಾಂಕ:30.09.2025ರ ಸಂಜೆ 5.00** ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ **ರೂ.68.58** ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ **www.bmcrc.karnataka.gov.in** ನಲ್ಲಿ ಪಡೆಯಬಹುದಾಗಿದೆ.
**ಸಹಿ/– ಡೀನ್ ಹಾಗು ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.**
ಡಿಐಪಿಆರ್/ಬಳ್ಳಾರಿ/459/ಕೆಎಸ್‌ಎಂಸಿಎ/2025–26

# ಜ್ಞಾನೇಶ್ ನೇರ ಭಾಗಿ ಆರೋಪ

ಚುನಾವಣಾ ಆಯೋಗದ ವಿರುದ್ಧ ವಾಗ್ದಾಳಿ ನಡೆಸಿದ ರಾಹುಲ್ ಗಾಂಧಿ, ಕರ್ನಾಟಕದ ತನಿಖಾ ಸಂಸ್ಥೆಗಳು ಪದೇ ಪದೇ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಳ್ಳಲು ಮತ್ತು ನಿರ್ಣಾಯಕ ಡೇಟಾವನ್ನು ಒದಗಿಸಲು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನಿರಾಕರಿಸಿದ್ದಾರೆ, ಅವರು ಮತ ಅಳಿಸುವಿಕೆಯಲ್ಲಿ ನೇರ ಭಾಗಿಯಾಗಿದ್ದಾರೆ ಎಂದು ರಾಹುಲ್ ದೂರಿದರು. ಕರ್ನಾಟಕದ ಸಿಐಡಿ ತಂಡ 18 ತಿಂಗಳಲ್ಲಿ ಚುನಾವಣಾ ಆಯೋಗಕ್ಕೆ 18 ಪತ್ರಗಳನ್ನು ಕಳುಹಿಸಿದೆ. ಆಯೋಗದ ಬಳಿ ಮತದಾರರ ಹೆಸರು ತೆಗೆದುಹಾಕಲು ಕೋರಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಡೆಸ್ಟಿನೇಶನ್ ಐಪಿ, ಅರ್ಜಿಗಳನ್ನು ಸಲ್ಲಿಸಿದ ಸಾಧನದ ಡೆಸ್ಟಿನೇಶನ್ ಪೋರ್ಟ್ ಮತ್ತು ಒಟಿಪಿ ಟ್ರೇಲ್‌ಗಳನ್ನು ಕೇಳಲಾಗಿದೆ. ಒಟಿಪಿ ಪಡೆಯದೆ ಡಿಲೀಟ್ ಮಾಡಲು ಸಾಧ್ಯವಿಲ್ಲ. ಆದರೆ ಈ ಪ್ರಶ್ನೆಗಳಿಗೆ ಆಯೋಗ ಮೌನ ವಹಿಸಿದೆ ಎಂದು ರಾಹುಲ್ ದೂರಿದರು.

# ಇ.ಸಿಗೆ ರಾಹುಲ್ ಗಾಂಧಿ ಗುನ್ನ

← ಮೊದಲಪುಟದಿಂದ
ಭಾರತದ ಮುಖ್ಯ ಚುನಾವಣಾ ಆಯುಕ್ತರು ಭಾರತೀಯ ಪ್ರಜಾಪ್ರಭುತ್ವವನ್ನು ನಾಶಪಡಿಸುತ್ತಿರುವ ಜನರನ್ನು ರಕ್ಷಿಸುತ್ತಿದ್ದಾರೆ ಎಂಬುದಕ್ಕೆ ಕಪ್ಪು ಮತ್ತು ಬಿಳುಪಿನ ಸಾಕ್ಷಿಯನ್ನು ಯುವಜನತೆ ಮತ್ತು ಜನರಿಗೆ ತೋರಿಸುತ್ತಿದ್ದೇವೆ. ಮತಗಳನ್ನು ಸೇರಿಸುವ, ಅಳಿಸುವ ವಿಧಾನಗಳನ್ನು ಹೇಗೆ ಮಾಡಲಾಗುತ್ತದೆ ಎಂಬುದನ್ನು ತೋರಿಸುತ್ತೇನೆ ಎಂದ ರಾಹುಲ್, ಪಿಪಿಟಿ ಪ್ರಾತ್ಯಕ್ಷಿಕೆ ಮೂಲಕ ಸುದೀರ್ಘ ವಿವರಣೆ ನೀಡಿದರು. ಇದು ಹೈಡ್ರೋಜನ್ ಬಾಂಬ್ ಅಲ್ಲ, ಹೈಡ್ರೋಜನ್ ಬಾಂಬ್ ಮುಂದೆ ಬರಲಿದೆ ಎನ್ನುವ ಮೂಲಕ ವೋಟ್ ಚೋರಿ ಪ್ರಕರಣದ ಕುತೂಹಲವನ್ನು ಉಳಿಸಿಕೊಂಡಿರುವ, ಕಾಂಗ್ರೆಸ್ ನಾಯಕ, ಕೆಲವು ಗುಂಪಿನ ಜನರು ವ್ಯವಸ್ಥಿತವಾಗಿ ಅಲ್ಪಸಂಖ್ಯಾತ ಗುಂಪಿನ ಮತ, ಅದರಲ್ಲೂ ಕಾಂಗ್ರೆಸ್‌ಗೆ ಮತ ಹಾಕುವವರನ್ನು ತೆಗೆದು ಹಾಕುತ್ತಿದ್ದಾರೆ ಎಂದು ದೂರಿದರು. ಚುನಾವಣಾ ಆಯೋಗವು ಇದೆಲ್ಲಾ ಆಧಾರ ರಹಿತ ಆರೋಪ ಎಂದು ತಿರುಗೇಟು ನೀಡಿದೆ.

ಒಂದರ ನಂತರ ಒಂದರಂತೆ ನಡೆಯುವ ಚುನಾವಣೆಗಳಲ್ಲಿ, ಯಾರೋ ಕೆಲವು ಗುಂಪುಗಳು ವ್ಯವಸ್ಥಿತವಾಗಿ ಭಾರತದಾದ್ಯಂತ ಮತದಾರರನ್ನು ಪಟ್ಟಿಯಿಂದ ಅಳಿಸುವ ಗುರಿ ಹೊಂದಿದೆ. ವಿವಿಧ ಸಮುದಾಯಗಳು, ಮುಖ್ಯವಾಗಿ ವಿಪಕ್ಷಕ್ಕೆ ಮತ ಹಾಕುವವರು, ದಲಿತರು, ಒಬಿಸಿಗಳು, ಆದಿವಾಸಿಗಳು, ಅಲ್ಪಸಂಖ್ಯಾತರ ಮತಗಳನ್ನು ಗುರಿಯಾಗಿಸಲಾಗಿದೆ. ಈ ಬಗ್ಗೆ ಈಗಾಗಲೇ ಹಲವು ಬಾರಿ ಕೇಳಿದ್ದೇವೆ. ಇದೀಗ ಅದನ್ನು ಶೇ 100ರಷ್ಟು ಸಾಕ್ಷಿಯೊಂದಿಗೆ ಪತ್ತೆ ಮಾಡಿದ್ದೇವೆ. ಈ ವೇದಿಕೆ ಮೇಲೆ 100ರಷ್ಟು ಪುರಾವೆ ಇಲ್ಲದೆ ನಾನು ಏನನ್ನು ಹೇಳುವುದಿಲ್ಲ. ನಾನು ದೇಶವನ್ನು, ಸಂವಿಧಾನವನ್ನು ಮತ್ತು ಪ್ರಜಾ ಪ್ರಭುತ್ವವನ್ನು ಪ್ರೀತಿಸುವವರಲ್ಲಿ ಒಬ್ಬ. ನಾನು ಈ ಪ್ರಕ್ರಿಯೆಯನ್ನು ರಕ್ಷಿಸುತ್ತಿದ್ದೇನೆ ಎಂದು ರಾಹುಲ್ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು.

**ಶಾಸಕ ಬಿ.ಆರ್ ಪಾಟೀಲ್ ಸಾಥ್:** ಆಳಂದ ಶಾಸಕ ಬಿ.ಆರ್ ಪಾಟೀಲ್ ಮತ್ತು ಮತಗಳ್ಳತನ ವಂಚನೆಗೆ ಒಳಗಾದ ಇಬ್ಬರು ವ್ಯಕ್ತಿಗಳನ್ನು ರಾಹುಲ್ ಗಾಂಧಿ ವೇದಿಕೆಗೆ ಕರೆತಂದರು. ಈ ಪೈಕಿ ಸೂರ್ಯಕಾಂತ್ ಎಂಬವರು ಮಾತನಾಡಿ ''ನಾನು ಆಳಂದದ ಸರಸಂಬಾ ಗ್ರಾಮದ ನಿವಾಸಿ. ನನ್ನ ಹೆಸರಿನಲ್ಲಿ12 ಜನರ ಹೆಸರನ್ನು ಅಳಿಸಿ ಹಾಕಲು ಅರ್ಜಿ ಸಲ್ಲಿಸಲಾಗಿತ್ತು. ನನಗೆ ಈ ವಿಷಯ ಗೊತ್ತಿರಲಿಲ್ಲ ಎಂದರು. ಪಕ್ಕದಲ್ಲಿದ್ದ ಮಹಿಳೆಯನ್ನು ತೋರಿಸಿ, ''ಇವರು ನನ್ನ ಹೆಸರನ್ನು ಏಕೆ ಡಿಲೀಟ್ ಮಾಡಿಸಿದಿರಿ'' ಎಂದು ಕೇಳಿದಾಗ ನನಗೆ ವಿಷಯ ಗೊತ್ತಾಯಿತು. ನಾನು ಶಾಸಕ ಬಿ.ಆರ್ ಪಾಟೀಲ್‌ಗೆ ಮಾಹಿತಿ ನೀಡಿದೆ. ಆ ಬಳಿಕ ತಹಶೀಲ್ದಾರ್‌ಗೆ ದೂರು ನೀಡಿದೆವು. ನಂತರ ಜಿಲ್ಲಾಧಿಕಾರಿ ಪೊಲೀಸ್ ದೂರು ದಾಖಲಿಸಿದರು'' ಎಂದು ವಿವರಿಸಿದರು.



## ರಾಹುಲ್ ಹೇಳಿದ್ದೇನು ?

ಕಾಂಗ್ರೆಸ್ ಭದ್ರಕೋಟೆಯಾದ ಆಳಂದ ಕ್ಷೇತ್ರದಲ್ಲಿ, ಮತದಾರರಿಗೆ ಅರಿವಿಲ್ಲದೆಯೇ 6000ಕ್ಕೂ ಹೆಚ್ಚು ಮತಗಳನ್ನು ಅಳಿಸಿ ಹಾಕುವ ಪ್ರಯತ್ನ ಮಾಡಲಾಗಿತ್ತು. ಯಾರೋ 6,018 ಮತದಾರರ ಹೆಸರುಗಳನ್ನು ಅಳಿಸುವಾಗ ಸಿಕ್ಕಿ ಬಿದ್ದಿದ್ದರು. ಅಲ್ಲಿ ಒಟ್ಟು ಎಷ್ಟು ಮತದಾರರ ಹೆಸರುಗಳನ್ನು ಅಳಿಸಲಾಗಿದೆ ಎಂದು ನಮಗೆ ತಿಳಿದಿಲ್ಲ. ಆದರೆ, 6018 ಮತದಾರರ ಹೆಸರುಗಳನ್ನು ಅಳಿಸಲು ಪ್ರಯತ್ನಿಸಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಕ್ಷೇತ್ರದಲ್ಲಿ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಯೊಬ್ಬರ ಚಿಕ್ಕಪ್ಪನ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸುವ ಪ್ರಯತ್ನ ಮಾಡಲಾಗಿತ್ತು. ಈ ಬಗ್ಗೆ ಪರಿಶೀಲನೆ ನಡೆಸಿದಾಗ ನೆರಮನೆಯ ವ್ಯಕ್ತಿಯೇ ಹೆಸರು ಅಳಿಸಲು ಅರ್ಜಿ ಹಾಕಿರುವುದು ಗೊತ್ತಾಗಿದೆ. ಈ ಬಗ್ಗೆ ಅವರನ್ನು ವಿಚಾರಿಸಿದಾಗ ಈ ವಿಷಯವೇ ಗೊತ್ತಿಲ್ಲ ಎಂದಿದ್ದರು. ಇವರಿಬ್ಬರಿಗೂ ತಿಳಿಯದೇ ಬಾಹ್ಯ ಶಕ್ತಿ ಇಡೀ ಪ್ರಕ್ರಿಯೆಯನ್ನು ಹೈಜಾಕ್ ಮಾಡಿ ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹಾಕಿದೆ. ಅರ್ಜಿ ಸಲ್ಲಿಕೆಯಲ್ಲಿರುವ ಹೆಸರಿನವರು ಈ ಅರ್ಜಿಯನ್ನು ಸಲ್ಲಿಸಿಲ್ಲ. ಸಾಫ್ಟ್‌ವೇರ್ ಬಳಕೆ ಮಾಡಿ ಬೇರೆಯವರು ಅರ್ಜಿ ಸಲ್ಲಿಸಿದ್ದು, ಕರ್ನಾಟಕದ ಹೊರಗಿನ ವಿವಿಧ ರಾಜ್ಯಗಳ ಮೊಬೈಲ್ ಸಂಖ್ಯೆಗಳನ್ನು ಬಳಕೆ ಮಾಡಿ ಮತದಾರರ ಹೆಸರು ಅಳಿಸಲಾಗಿದೆ. ಕಾಂಗ್ರೆಸ್ ಮತದಾರರನ್ನು ಗುರಿಯಾಗಿಸಿಕೊಂಡು ಈ ಕಾರ್ಯ ಮಾಡಲಾಗಿದೆ.

ಆಳಂದ ಮತ ಕ್ಷೇತ್ರದಲ್ಲಿ 2023ರ ಚುನಾವಣೆಗೂ ಮುನ್ನ 7,250 ಮತದಾರರ ಹೆಸರು ಏಕಾಏಕಿ ಮತದಾರರಿಗೆ ಗೊತ್ತಿಲ್ಲದೆ ಡಿಲೀಟ್ ಆಗುತ್ತಿತ್ತು. ಈ ಬಗ್ಗೆ ಶಾಸಕ ಬಿ.ಆರ್.ಪಾಟೀಲ್ ಮತ್ತು ನಾನು ಚುನಾ ವಣಾ ಆಯೋಗಕ್ಕೆ ದೂರು ನೀಡಿದ್ದೆವು. ಇದರ ಆಧಾರದ ಮೇಲೆ ಕಲಬುರಗಿಯಲ್ಲಿ ಎಫ್ ಐಆರ್ ದಾಖಲಿಸಲಾಗಿತ್ತು. ಪರಿಶೀಲನೆ ಮಾಡಿದಾಗ 6018 ಮತದಾರರಲ್ಲಿ ಯಾರ್‍ಯಾರು ಅರ್ಜಿ ಹಾಕಿದ್ದರೋ ಅವರಲ್ಲಿ 28 ಜನಕ್ಕೆ ಮಾತ್ರ ಮಾಹಿತಿ ಇತ್ತು. ಉಳಿದ ಅರ್ಜಿದಾರರಿಗೆ ಯಾವುದೇ ಮಾಹಿತಿಯೇ ಇರಲಿಲ್ಲ

**ಪ್ರಿಯಾಂಕ್ ಖರ್ಗೆ,**
**ಗ್ರಾಮೀಣಾಭಿವೃದ್ಧಿ ಸಚಿವ**

# ಜಾತಿಗಣತಿ ಜಟಾಪಟಿ

← ಮೊದಲಪುಟದಿಂದ
ಇದೇ ವಿಷಯಕ್ಕೆ ಸಿದ್ದರಾಮಯ್ಯ ಅವರು ಬೇಸರ ಹೊರಹಾಕಿದ್ದಾರೆ. ಈ ಘಟನೆಯ ಬೆನ್ನಲ್ಲೇ, ಸಚಿವ ಸಂಪುಟ ಸಭೆ ಬಳಿಕ ಎಚ್.ಕೆ. ಪಾಟೀಲ್ ನೇತೃತ್ವದಲ್ಲಿ ತುರ್ತು ಸಭೆಯನ್ನು ನಡೆಸಲಾಗಿದೆ. ಆದರೆ, ಯಾವುದೇ ಸ್ಪಷ್ಟ ತೀರ್ಮಾನಕ್ಕೆ ಬರಲು ಸಾಧ್ಯವಾಗದಿರುವುದರಿಂದ ಸಿಎಂ ಹಾಗೂ ಡಿಸಿಎಂ ನೇತೃತ್ವದಲ್ಲಿ ಗೃಹ ಕಚೇರಿ ಕೃಷ್ಣದಲ್ಲಿ ತುರ್ತು ಸಭೆ ನಡೆಸಿದ್ದಾರೆ. ಸಭೆಯಲ್ಲಿ ಲಿಂಗಾಯತ ಹಾಗೂ ಒಕ್ಕಲಿಗ ಸಚಿವರು ಆಯೋಗದ ಈ ಮಾನದಂಡದಲ್ಲಿ ಜಾತಿ ಗಣತಿಯನ್ನು ಮಾಡಿದರೆ, ಸರಕಾರಕ್ಕೆ ತೀವ್ರ ಹೊಡೆತ ಬೀಳಲಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಇನ್ನು ಮೂರೇ ದಿನದಲ್ಲಿ ಜಾತಿ ಗಣತಿ ಆರಂಭವಾಗಬೇಕಿರುವುದರಿಂದ, ಈ ಹಂತದಲ್ಲಿ ರದ್ದುಗೊಳಿಸಿದರೆ ರಾಜಕೀಯವಾಗಿ ಆಗಬಹುದಾದ ಪರಿಣಾಮದ ಬಗ್ಗೆಯೂ ಚರ್ಚೆಗಳು ನಡೆದಿವೆ ಎನ್ನಲಾಗಿದೆ. ಪ್ರಮುಖವಾಗಿ ಹೊಸದಾಗಿ 331 ಜಾತಿಗಳ ಸೇರ್ಪಡೆಗೆ ಆಕ್ಷೇಪ ವ್ಯಕ್ತಪಡಿಸಿರುವ ಕೆಲ ಸಚಿವರು, ಹೊಸ ಜಾತಿಗಳ ಸೇರ್ಪಡೆಯಿಂದ ಗೊಂದಲ ಸೃಷ್ಟಿಯಾಗಿದೆ. ಈ ಗೊಂದಲ ಸರಿಪಡಿಸದ ಹೊರತು ಜಾತಿ ಗಣತಿ ಬೇಡ. ಒಂದು ವೇಳೆ ಗೊಂದಲದ ನಡುವೆ ಜಾತಿಗಣತಿ ಮುಂದುವರಿಸಿದರೆ ತೊಂದರೆ ಬರಬಹುದು. ಈ ಗೊಂದಲಗಳ ಮಧ್ಯೆ ಸಮೀಕ್ಷೆ ಮುಂದೂಡಿಕೆ ಮಾಡಿದರೆ ಹೇಗೆ ಎಂಬ ಬಗ್ಗೆಯೂ ಚರ್ಚೆ ನಡೆದಿದೆ. 321 ಜಾತಿಗಳು ಹೆಚ್ಚುವರಿಯಾಗಿ ಸೇರ್ಪಡೆ ಆಗಿವೆ. ಇದನ್ನು ಪರಿಗಣಿಸುವುದು ಹೇಗೆ?. ಇದನ್ನೇ ಮುಂದಿಟ್ಟು ಸಮೀಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲ ಸಮೀಕ್ಷೆಯನ್ನೇ ಮುಂದೂಡಿಕೆ ಮಾಡಿ ಎಂದು ಕೆಲ ಸಚಿವರು ಆಗ್ರಹಿಸಿದ್ದಾರೆ. ಈ ವೇಳೆ ಮೂವರು ಸಚಿವರು ಸಿಎಂ ನಿಲುವಿಗೆ ಒಲವು ವ್ಯಕ್ತಪಡಿಸಿದ್ದು, ಉಳಿದ ಕೆಲ ಸಚಿವರು ಸಚಿವರು ವಿರೋಧ ವ್ಯಕ್ತಪಡಿಸಿದ್ದಾರೆ.

**ನಾನೇ ಟಾರ್ಗೆಟ್ ಎಂದ ಸಿಎಂ:** ಈ ವೇಳೆ ನನ್ನನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿ, ನನಗೆ ಜಾತಿವಾದಿ ಅಂತ ಪಟ್ಟ ಕಟ್ಟುತ್ತಿದ್ದಾರೆ. ಎಲ್ಲಾ ಜಾತಿಯಲ್ಲೂ ಬಡವರಿದ್ದಾರೆ. ಅದನ್ನು ಸರಿಪಡಿಸಲು ಸಮೀಕ್ಷೆ ಮಾಡುತ್ತಿರುವುದು. ಆದರೆ, ಇದು ಕೇವಲ ಜಾತಿ ಸಮೀಕ್ಷೆ ಎಂದು ಬಿಂಬಿಸುತ್ತಿದ್ದಾರೆ. ಬಡವರ ಪರ ಸಮೀಕ್ಷೆ ಆಗಲಿ ಎಂಬುದು ನಮ್ಮ ಉದ್ದೇಶ ಎಂದು ಸಂಪುಟ ಸಭೆಯಲ್ಲಿ ಅಸಮಾಧಾನ ಹೊರಹಾಕಿದ್ದಾರೆ. ಅಲ್ಲದೆ, ತಮ್ಮ ವಿರುದ್ಧ ಅನಗತ್ಯ ಆರೋಪ ಮಾಡಲಾಗುತ್ತಿದೆ. ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಪರ ಎಂದು ಹೇಳುತ್ತಾರೆ. ಈ ಮೂಲಕ ಮೇಲ್ವರ್ಗದ ವಿರೋಧಿ ಎಂಬಂತೆ ಬಿಂಬಿಸಲಾಗುತ್ತಿದೆ. ಹೀಗಿರುವಾಗ ಸಮೀಕ್ಷೆ ಆರ್ಥಿಕ ಪರಿಸ್ಥಿತಿ ಅರಿಯಲು ಎಂದು ಹೇಗೆ ಜನರಿಗೆ ಮನವರಿಕೆ ಮಾಡುತ್ತೀರಿ ಎಂದಿದ್ದಾರೆ. ಈ ವೇಳೆ ಸಚಿವ ಎಂ.ಬಿ.ಪಾಟೀಲ್, ಜಾತಿ ಗಣತಿ ಕಾಲಂಗಳಲ್ಲಿ ಸಂಪೂರ್ಣವಾಗಿ ಗೊಂದಲ ಮಾಡಿದ್ದಾರೆ. ಇದರಿಂದ ದೊಡ್ಡ ಸಮಸ್ಯೆಯಾಗಲಿದೆ. ಸದ್ಯಕ್ಕೆ ಈ ಗೊಂದಲ ಪರಿಹರಿಸಿ ಎಂದು ಮನವಿ ಮಾಡಿದರು.

**ಜಾತಿ ಗಣತಿ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ:** ಜಾತಿ ಜನಗಣತಿ ರದ್ದುಪಡಿಸುವಂತೆ ಕೋರಿ ಹೈಕೋರ್ಟ್‌ನಲ್ಲಿ ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದ್ದು, ವಕೀಲ ಕೆ.ಎನ್.ಸುಬ್ಬಾರೆಡ್ಡಿ ಮತ್ತಿತರರಿಂದ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಸರಕಾರ, ಜಾತಿ ಮತ್ತು ಉಪಜಾತಿಗಳ ನಡುವೆ ಎತ್ತಿ ಕಟ್ಟುತ್ತಿದೆ. 15 ದಿನಗಳಲ್ಲಿ ಸರಕಾರ ತರಾತುರಿಯಲ್ಲಿ ಜಾತಿಗಣತಿ ನಡೆಸುತ್ತಿದೆ. ಸರಕಾರ 1500 ಉಪಜಾತಿಗಳಿಗೂ ಪ್ರತ್ಯೇಕ ಅಸ್ತಿತ್ವ ನೀಡುತ್ತಿದೆ. ಜಾತಿ ಗಣತಿ ನಡೆಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ಹೀಗಾಗಿ ರಾಜ್ಯ ಸರ್ಕಾರದ ನಿರ್ಧಾರ ರದ್ದುಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಲಾಗಿದೆ.

**ಜಿಲ್ಲಾ ಪಂಚಾಯತ್ ಕೋಲಾರ**
**ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ**
ಕಾರ್ಯಪಾಲಕ ಅಭಿಯಂತರರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ–563101. ದೂರವಾಣಿ ಸಂಖ್ಯೆ: 08152–222570, ಇ–ಮೇಲ್ ವಿಳಾಸ: eepredkolar1@gmail.com
**ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸರಬರಾಜು ಟೆಂಡರ್ ಪ್ರಕಟಣೆ ಸಂಖ್ಯೆ: SG02/25-26**
**ದಿನಾಂಕ: 06.09.2025**
**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KG-1 & 2ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.**
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆ.ಪಿ.ಪಿ.ಪಿ ದ್ವಿ–ಲಕೋಟೆ ಪದ್ಧತಿಯಲ್ಲಿ **(Two Cover System)** ಸೂಕ್ತ ದರ್ಜೆಯಲ್ಲಿ, ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಸರಬರಾಜುದಾರರಿಂದ ಕೋಲಾರ ಜಿಲ್ಲೆ ಕೋಲಾರ ಮತ್ತು ಮಾಲೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ **16 ಸಂಖ್ಯೆ ರೂ 05.00 ಲಕ್ಷಗಳಿಂದ 32.20 ಲಕ್ಷಗಳವರೆಗೆ** ನಿರ್ಮಾಣ ಕಾಮಗಾರಿಗೆ ಸಾಮಾಗ್ರಿ ಪೂರೈಕೆ ಮಾಡಲು ಸರಬರಾಜು ಟೆಂಡರುಗಳನ್ನು ಆಹ್ವಾನಿಸುತ್ತಿದ್ದು, ಇ.ಎಂ.ಡಿ. ಮತ್ತು ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ ಮುಂತಾದ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **https://kppp.karnataka.gov.in** ಮುಖಾಂತರ ಪಡೆದು ಟೆಂಡರಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಕೆ.ಪಿ.ಪಿ.ಪೋರ್ಟಾಲ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಆರೋಹಿಸಿ ಸಲ್ಲಿಸಲು **ಕೊನೆಯ ದಿನಾಂಕ: 20.09.2025ರ ಸಂಜೆ 4.00 ಗಂಟೆವರೆಗೆ (2)** ಟೆಂಡರಗಳನ್ನು ಕೆ.ಪಿ.ಪಿ.ಪೋರ್ಟಾಲ್‌ನಲ್ಲಿ ತೆರೆಯುವ **ದಿನಾಂಕ: 22.09.2025 ರಂದು ಸಂಜೆ 04.30 ಗಂಟೆಗೆಂದು ನಿಗದಿ ಪಡಿಸಲಾಗಿದೆ.** ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಸಹಾಯವಾಣಿ ದೂರವಾಣಿ ಸಂಖ್ಯೆ: +91–8046010000, +91–8068948777 ಅನ್ನು ಸಂಪರ್ಕಿಸಲು ಕೋರಲಾಗಿದೆ.
**ಸಹಿ/– ಕಾರ್ಯಪಾಲಕ ಅಭಿಯಂತರರು**
**ಪಂ.ರಾ.ಇಂ. ವಿಭಾಗ, ಕೋಲಾರ**
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:283/ಕೆಎಸ್‌ಎಂಸಿಎ/2025–26

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ**
**ಕಾರ್ಯಪಾಲಕ ಅಭಿಯಂತರವರ ಕಛೇರಿ ಬೆಳಗಾವಿ ವಿಭಾಗ, ಬೆಳಗಾವಿ.**
ಪ್ಲಾಟ ನಂ. ಸಿ–1, ಹೌಸಿಂಗ್ ಬೋರ್ಡ ಕಾಲನಿ, ಟೀಚರ್ಸ್ ಕಾಲನಿ ಎದುರಿಗೆ, (ಓಂಕಾರ ನಗರ) ಹಿಂಡಲಗಾ, ಬೆಳಗಾವಿ. ದೂರವಾಣಿ, ಫ್ಯಾಕ್ಸ್ ನಂ: (0831)2442294 ಇ–ಮೇಲ್: ksdb.bgmdiv@gmail.com
ಸಂ.ಕಕೊಅಮ/ಕಾಪಾಅ/ಬೆವಿ/ತಾಂ.ಶಾ/ಕ್ರಿ.ಯೋ/ಟೆಂ.ಪ್ರ/2025–26/487 ದಿನಾಂಕ: 18–09–2025
**ಕೆಪಿಪಿಪಿ ಪೋರ್ಟಲ್ – ಅಲ್ಪಾವಧಿ ಟೆಂಡರ್ ಪ್ರಕಟಣೆ KW – 2 & KW - 3**
ಮಾನ್ಯ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ ಇವರು ಬೆಳಗಾವಿ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಬರುವ 2025–26ನೇ ಸಾಲಿನ ಕೊಳಚೆ ಸುಧಾರಣೆ ಕ್ರಿಯಾ ಯೋಜನೆಯಡಿ ಬೈಲಹೊಂಗಲ, ಸವದತ್ತಿ, ರಾಯಬಾಗ, ಸಿಂದಗಿ, ಇಂಡಿ, ಇಲಕಲ್ಲ ನಗರ/ ಪಟ್ಟಣಗಳ ವ್ಯಾಪ್ತಿಯಲ್ಲಿ ಮಂಜೂರಾದ ಮೂಲಭೂತ ಸೌಕರ್ಯ ಕಾಮಗಾರಿ ಸಲುವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಕರೆದಿರುವ ಒಟ್ಟು 07 ಸಂಖ್ಯೆ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ ವಿಚಾರಣೆಗಳಿಗಾಗಿ https://kppp.karnataka.gov.in ವೆಬ್‌ಸೈಟ್ ನೋಡಬಹುದು ಹಾಗೂ ಟೆಂಡರಗಳನ್ನು ದಿನಾಂಕ: 18.09.2025 ರಿಂದ ಡೌನಲೋಡ್ ಮಾಡಿಕೊಂಡು ಸಲ್ಲಿಸಲು ಕೊನೆಯ ದಿನಾಂಕ: 25.09.2025 ಸಾಯಂಕಾಲ 4.00 ಗಂಟೆಯವರೆಗೆ, ಸ್ವೀಕೃತ ಟೆಂಡರ್ / ತಾಂತ್ರಿಕ ಲಕೋಟೆಗಳನ್ನು ದಿನಾಂಕ: 26.09.2025 ರಂದು ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು. ಹಾಗೂ ಆರ್ಥಿಕ ಲಕೋಟೆ ತೆರೆಯುವ ದಿನಾಂಕವನ್ನು ಅರ್ಹ ಬಿಡ್‌ದಾರರಿಗೆ ನಂತರ ತಿಳಿಸಲಾಗುವುದು.
ಕಾಮಗಾರಿಗಳ ಗರಿಷ್ಠ ಟೆಂಡರ ಮೊತ್ತ ರೂ. 74.30 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ. 20.50 ಲಕ್ಷಗಳು ಇ.ಎಮ್.ಡಿ, ಗುತ್ತಿಗೆದಾರರ ಅರ್ಹತೆ/ಟೆಂಡರಿನ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ https://kppp. karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದಿನದಂದು ಕಛೇರಿಯ ವೇಳೆಯಲ್ಲಿ ಪಡೆಯಬಹುದು.
**ಸಹಿ/–ಕಾರ್ಯಪಾಲಕ ಅಭಿಯಂತರರು**
**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ**
**ಬೆಳಗಾವಿ ವಿಭಾಗ, ಬೆಳಗಾವಿ.**
DIPR/BGM/RO-NO-1048/KSMCA/2025-26

**ಎಕ್ಸಿಸ್ ಬ್ಯಾಂಕ್** ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009
**ತಗಾದೆ ಸೂಚನೆ**
ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

| ಕ್ರ. ಸಂ | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ | ನೋಟೀಸ್ ದಿನಾಂಕ | ಬರಬೇಕಾದ ಬಾಕಿ (ರೂ.ಗಳಲ್ಲಿ) |
|---|---|---|---|---|
| 1 | (1) ಶ್ರೀ ಬಸವರಾಜ ಶಿವಯ್ಯ ಏಣಗಿಮಠ ಬಿನ್ ಶ್ರೀ ಶಿವಯ್ಯ ಏಣಗಿಮಠ, #883, ರಾಣಿ ಚನ್ನಮ ನಗರ, ವಸಂತ ವಿಹಾರ್ ಕಾಲೋನಿ ಬೆಳಗಾವಿ–590006. ಮತ್ತೊಂದು ವಿಳಾಸ: ಪ್ಲಾಟ್ ನಂ.883, ಆರ್‌ಎಸ್. ನಂ.710, ಸ್ಕೀಮ್ ನಂ.6, 2ನೇ ಹಂತ, ರಾಣಿ ಚನ್ನಮ್ಮ ನಗರ, ಅಂಗೋಲ್ ಬೆಳಗಾವಿ – 590006. (2) ಶ್ರೀ ಶಿವಯ್ಯ ರಾಚಯ್ಯ ಏಣಗಿಮಠ ಬಿನ್ ಶ್ರೀ ರಾಚಯ್ಯ ಏಣಗಿಮಠ # 883, ವಸಂತ ವಿಹಾರ ಕಾಲೋನಿ ಹತ್ತಿರ, 2ನೇ ಹಂತ, ರಾಣಿ ಚನ್ನಮ್ಮ ನಗರ, ಬೆಳಗಾವಿ–590006. ಮತ್ತೊಂದು ವಿಳಾಸ: ಪ್ಲಾಟ್ ಸಂಖ್ಯೆ 883, ಆರ್‌ಎಸ್ ನಂ.710, ಸ್ಕೀಮ್ ನಂ.6, 2ನೇ ಹಂತ ರಾಣಿ ಚನ್ನಮ್ಮ ನಗರ, ಅಂಗೋಲ್ ಬೆಳಗಾವಿ – 590006. | ಶ್ರೀ ತುಕರಾಮ್ ಲಕ್ಷ್ಮಪ್ಪ ದಾಸರ ಅವರಿಗೆ ಸೇರಿದ ಆಸ್ತಿಯ ವಿವರ: ಪ್ಲಾಟ್ ನಂ.ಎ226, ಸೆಕ್ಟರ್ ನಂ.28, ಅಮರಿ ಮಸೀದಿ ಹತ್ತಿರ, ನವನಗರ, ಬಾಗಲಕೋಟೆ–587101, ಒಟ್ಟು ಸೂಪರ್ ಬಿಲ್ಟ್‌ಅಪ್ ಪ್ರದೇಶದ ವಿಸ್ತೀರ್ಣ 936.13 ಚದರ ಅಡಿ. ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.ಎ–225, ಪಶ್ಚಿಮಕ್ಕೆ: ಪ್ಲಾಟ್ ನಂ.ಎ–227, ಉತ್ತರಕ್ಕೆ: ಪ್ಲಾಟ್ ನಂ.ಎ–223, ದಕ್ಷಿಣಕ್ಕೆ: ರಸ್ತೆ. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ. | 19.08.2025 ಎನ್‌ಪಿಎ ದಿನಾಂಕ : 08.08.2025 | ASSET POWER BRE Loan No. LPR013809222919 Amount: Rs. 14,93,058/- O/s Amount Rs. 14,04,014/- as on 14.08.2025 ------------------- ASSET POWER BRE Loan No. LTR013810114784 Amount: Rs.15,00,000/- O/s Amount Rs.14,63,990/- as on 14.08.2025 ಒಟ್ಟು ಬಾಕಿ ಮೊತ್ತ ರೂ. 28,68,004/– ಜೊತೆಗೆ ದಿನಾಂಕ: 14.08.2025 ರಂದು ಇದ್ದಂತೆ |
| 2 | (1) ಶ್ರೀ ನಂದಿ ಕುಮಾರ್ ಬಿನ್ ಶ್ರೀ ಹಾವಣ್ಣ, 7/60, ಚಿಂಚೋಳಿ ತಾಲ್ಲೂಕು, ನಿಡಗುಂದ ಗುಲ್ಬರ್ಗಾ–585320. ಮತ್ತೊಂದು ವಿಳಾಸ: Raw House ಪ್ಲಾಟ್ ನಂ.31, ಮನೆ ನಂ.10–548–137ಕೆ/43, ಸಾಧತ್ ನಗರ ಜಿ ರಸ್ತೆಯ ಸರ್ವೆ ನಂ.625/1ಎ3, ಸೇಡಂ ಜಿಲ್ಲೆ, ಕಲಬುರಗಿ, ಗುಲ್ಬರ್ಗಾ–585222. (2) ಶ್ರೀಮತಿ ಈಶ್ವರಿ ಕೋಂ ಶ್ರೀ ನಂದಿ ಕುಮಾರ್, ನಂ.3/62, ವಿಟಿಸಿ ನಿಡಗುಂದ ಪೋಸ್ಟ್, ಚಿಂಚೋಳಿ ಜಿಲ್ಲೆ, ಕಲಬುರಗಿ, ಹನುಮಾನ್ ದೇವಸ್ಥಾನದ ಹತ್ತಿರ, ಗುಲ್ಬರ್ಗಾ–585320. ಮತ್ತೊಂದು ವಿಳಾಸ: Raw House ಪ್ಲಾಟ್ ನಂ.31, ಮನೆ ನಂ.10–548–137ಕೆ/43, ಸಾಧತ್ ನಗರ ಜಿ ರಸ್ತೆಯ ಸರ್ವೆ ನಂ.625/1ಎ3, ಸೇಡಂ ಜಿಲ್ಲೆ, ಕಲಬುರಗಿ,ಗುಲ್ಬರ್ಗಾ–585222. | ಶ್ರೀ ನಂದಿ ಕುಮಾರ್ ಅವರಿಗೆ ಸೇರಿದ ಆಸ್ತಿಯ ವಿವರ ಮನೆಯ ಸಿಎಂಸಿ ನಂ.10–548–137K/43, ನಿರ್ಮಿತ ಪ್ಲಾಟ್ ನಂ.31, ವಿಸ್ತೀರ್ಣ 108 ಚದರ ಮೀಟರ್, ಪ್ಲಿಂತ್ ಪ್ರದೇಶ 92.903 ಚದರ ಮೀಟರ್, ಸರ್ವೆ ನಂ.625/A3, ಸಾಧತ್ ನಗರ ಜಿಕೆ ರಸ್ತೆ ಸೇಡಂ ತಾಲ್ಲೂಕು, ಸೇಡಂ ಜಿಲ್ಲೆ, ಕಲಬುರಗಿಯಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.30, ಪಶ್ಚಿಮಕ್ಕೆ: 9 ಮೀಟರ್ ಅಗಲದ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.22, ದಕ್ಷಿಣಕ್ಕೆ: 9 ಮೀಟರ್ ಅಗಲದ ರಸ್ತೆ. ಯಾವುದೇ ಮಾಹಿತಿಗಾಗಿ ಶ್ರೀ ಸಂಜತ್ ಪ್ರಸಾದ್, 916566630 ರವರನ್ನು ಸಂಪರ್ಕಿಸಿ. | 19.08.2025 ಎನ್‌ಪಿಎ ದಿನಾಂಕ: 03.08.2025 | ASSET POWER BRE Loan No. LTR034212033970 Amount: Rs. 20,00,000/- O/s Amount Rs. 20,21,248/- as on 14.08.2025 ------------------- POWER HOME VANILLA BRE Loan No. PHR034209654847 Amount: Rs.31,75,479/- O/s Amount Rs.31,59,679/- as on 14.08.2025 ಒಟ್ಟು ಬಾಕಿ ಮೊತ್ತ ರೂ. 51,80,927/– ಜೊತೆಗೆ ದಿನಾಂಕ: 14.08.2025 ರಂದು ಇದ್ದಂತೆ |
| 3. | (1) ಶ್ರೀ ಮೊಹಮ್ಮದ್ ಇಕ್ಬಾಲ್ ಅರ್ಷದ್ ಶರೀಫ್ ಬಿನ್ ಮೊಹಮ್ಮದ್ ಇಕ್ಬಾಲ್, (2) ಶ್ರೀಮತಿ ಸೈಯದಾ ಹಾಜಿರಾ ಖಾತೂನ್ ಬಿನ್ ಶ್ರೀ ಮೊಹಮ್ಮದ್ ಇಕ್ಬಾಲ್ ಅರ್ಷದ್ ಶರೀಫ್, ಇವರಿಬ್ಬರ ವಿಳಾಸ: ನಂ.1161/15–2, 5ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, ಎಲ್ಎನ್ ಕಾಲೋನಿ ಯಶವಂತಪುರ, ಬೆಂಗಳೂರು–560022. ಮತ್ತೊಂದು ವಿಳಾಸ: ನಂ.7, ವೆಸ್ಟ್ ಆಫ್ ಕಾರ್ಡ್ ರಸ್ತೆ, 1ನೇ ಹಂತ, 1ನೇ ಪೇಸ್, ವಾರ್ಡ್ ನಂ.15, ಹೊಸ ವಾರ್ಡ್ ನಂ.99, ಮಂಜುನಾಥ್ ನಗರ, ಬೆಂಗಳೂರು–560010. | ಶ್ರೀ ಮೊಹಮ್ಮದ್ ಇಕ್ಬಾಲ್ ಅರ್ಷದ್ ಶರೀಫ್ ಅವರಿಗೆ ಸೇರಿದ ಆಸ್ತಿಯ ವಿವರ (Schedule as per Gift deed dated 12.8.2021) : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.7, ಮುನಿಸಿಪಲ್ ನಂ.7, ಪಿಐಡಿ ನಂ.15–44–7, ಈ ಆಸ್ತಿಯು ವೆಸ್ಟ್ ಆಫ್ ಕಾರ್ಡ್ ರಸ್ತೆ, 1ನೇ ಹಂತ, 1ನೇ ಪೇಸ್, ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.15, ಹೊಸ ವಾರ್ಡ್ ನಂ.99, ಬೆಂಗಳೂರಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: (9.0+21.0)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 45 ಅಡಿ, ಒಟ್ಟು ವಿಸ್ತೀರ್ಣ 675 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.06, ಪಶ್ಚಿಮಕ್ಕೆ: ನಿವೇಶನ ನಂ.08, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.18 ಮತ್ತು 19. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ. | 19.08.2025 ಎನ್‌ಪಿಎ ದಿನಾಂಕ: 08.08.2025 | ASSET POWER BRE Loan A/c No. LPR051407975926 Amount : Rs. 77,00,000/- ಒಟ್ಟು ಬಾಕಿ ಮೊತ್ತ ರೂ.76,96,388/– ಜೊತೆಗೆ ದಿನಾಂಕ: 14.08.2025 ರಂದು ಇದ್ದಂತೆ. |
| 4. | (1) ಶ್ರೀ ಮೂರ್ತಿ ಕುಮಾರ್ ಬಿನ್ ಶ್ರೀ ಮರಿಗೌಡ ಕಾಳೆ, (2) ಶ್ರೀಮತಿ ರಮ್ಯಾ ಶ್ರೀ ಪಿ.ಎಸ್. ಕೋಂ ಶ್ರೀ ಮೂರ್ತಿ ಕುಮಾರ್, ಇವರಿಬ್ಬರ ವಿಳಾಸ: ನಂ.141, 3ನೇ ಕ್ರಾಸ್, 2ನೇ ಹಂತ, ಹರ್ಬಲ್ KAIDB ಲೇಔಟ್, ವೈಷ್ಣವಿ ಪಿ.ಜಿ ಹತ್ತಿರ, ಮೈಸೂರು–570016. ಮತ್ತೊಂದು ವಿಳಾಸ: ಬ್ಯಾಡರಬಿಲಗುಳಿ, ಚಿಕ್ಕನೇರಳ ಪೋಸ್ಟ್, ಹಾರನಹಳ್ಳಿ ಹೋಬಳಿ, ಪಿರಿಯಾಪಟ್ಟಣ ಹತ್ತಿರ, ಮೈಸೂರು–571107. ಮತ್ತೊಂದು ವಿಳಾಸ: ಆಸ್ತಿ ಅಸೆಸ್‌ಮೆಂಟ್ ನಂ.1322/11, ನಂ.1322, ಹಳೆಯ ಅಸೆಸ್‌ಮೆಂಟ್ ನಂ.2817, ನಂ.2096 ದಕ್ಷಿಣ ಭಾಗ, ಅಂಚೆ ಕಚೇರಿ ರಸ್ತೆ, ಪಿರಿಯಾಪಟ್ಟಣ ಪಟ್ಟಣ, ಮೈಸೂರು–571107. | ಶ್ರೀ ಮೂರ್ತಿ ಕುಮಾರ್ & ಶ್ರೀಮತಿ ರಮ್ಯ ಶ್ರೀ ಪಿ.ಎಸ್ ಅವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪಿರಿಯಾಪಟ್ಟಣ ಪುರಸಭಾ ಖಾತಾ ಅಸೆಸ್‌ಮೆಂಟ್ ನಂ.1322/11, ಪಿಐಡಿ ನಂ.8–106–308, ಈ ಆಸ್ತಿಯು ಪೋಸ್ಟ್ ಆಫೀಸ್ ರಸ್ತೆ, ದಕ್ಷಿಣ ಭಾಗ, ಪಿರಿಯಾಪಟ್ಟಣ ಟೌನ್, ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ 105.677 ಚದರ ಮೀಟರ್‌ಗಳು, ಚಕ್ಕುಬಂದಿ: ಪೂರ್ವಕ್ಕೆ: ಶಿವಲಿಂಗೇಗೌಡರವರ ನಿವೇಶನ, ಪಶ್ಚಿಮಕ್ಕೆ: ಬಿ.ಎಸ್. ರಾಮಚಂದ್ರರವರ ಮನೆ, ಉತ್ತರಕ್ಕೆ: 16 ಅಡಿ ರಸ್ತೆ, ದಕ್ಷಿಣಕ್ಕೆ: ಸಣ್ಣಯ್ಯರವರ ರವರ ಮನೆಯ ರಸ್ತೆ. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ. | 19.08.2025 ಎನ್‌ಪಿಎ ದಿನಾಂಕ: 08.08.2025 | POWER HOME VANILLA BRE Loan A/c No. PHR015105479920 Amount : Rs. 18,89,526/- ಒಟ್ಟು ಬಾಕಿ ಮೊತ್ತ ರೂ. 18,56,547/– ಜೊತೆಗೆ ದಿನಾಂಕ: 14.08.2025 ರಂದು ಇದ್ದಂತೆ |
| 5. | (1) ಶ್ರೀ ಅಸ್ಗರ್ ಖಾನ್ ಬಿನ್ ಶ್ರೀ ಘೌರಿ ಖಾನ್, (2) ಶ್ರೀಮತಿ ನಸ್ರೀಮ್ ಕೋಂ ಶ್ರೀ ಅಸ್ಗರ್ ಖಾನ್, ಇವರಿಬ್ಬರ ವಿಳಾಸ: ಪಾಯಿನಿಯರ್ ವುಡ್ ಅಪಾರ್ಟ್‌ಮೆಂಟ್‌ನ ಹಿಂಭಾಗ, ನಂ.27/420/5, 4ನೇ ಮೇನ್, royal shttar ಎಕ್ಸ್‌ಟೆನ್ಷನ್, ದೇವರ ಚಿಕ್ಕನಹಳ್ಳಿ, ಬೆಂಗಳೂರು–560076. ಮತ್ತೊಂದು ವಿಳಾಸ: ನಿವೇಶನ ನಂ.33, 10ನೇ ಕ್ರಾಸ್, ಶಿವಾಜಿ ರಸ್ತೆ, ಎನ್.ಆರ್. ಮೊಹಲ್ಲಾ, ಮೈಸೂರು–570001. ಮತ್ತೊಂದು ವಿಳಾಸ: ಶ್ರೀಮತಿ ನಸ್ರೀಮ್ ಕೋಂ ಶ್ರೀ ಅಸ್ಗರ್ ಖಾನ್, ನಂ.2, 4ನೇ ಮುಖ್ಯ ರಸ್ತೆ, ವಿರಾಟ ನಗರ, ಬೆಂಗಳೂರು ದಕ್ಷಿಣ–560060. | ಶ್ರೀ ಅಸ್ಗರ್ ಖಾನ್ ಅವರಿಗೆ ಸೇರಿದ ಆಸ್ತಿಯ ವಿವರ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.54–1–573–424, ಮನೆಯ ನಂ.3, ಅಸೆಸ್‌ಮೆಂಟ್ ನಂ.33, ಈ ಆಸ್ತಿಯು ವಾರ್ಡ್ ನಂ.54, 10ನೇ ಕ್ರಾಸ್, ಶಿವಾಜಿ ರಸ್ತೆ, ಎನ್.ಆರ್.ಮೊಹಲ್ಲಾ, ಮೈಸೂರಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 17.64 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.49 ಮೀಟರ್‌ಗಳು, ಒಟ್ಟು ವಿಸ್ತೀರ್ಣ 220.42 ಚದರ ಮೀಟರ್‌ಗಳು, ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.04, ಪಶ್ಚಿಮಕ್ಕೆ: 6 ಮೀಟರ್‌ಗಳ ರಸ್ತೆ, ಉತ್ತರಕ್ಕೆ: ಆಸ್ತಿ ನಂ.32, ದಕ್ಷಿಣಕ್ಕೆ: ಆಸ್ತಿ ನಂ.34. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ. | 19.08.2025 ಎನ್‌ಪಿಎ ದಿನಾಂಕ: 08.08.2025 | POWER HOME VANILLA BRE Loan A/c No. PHR168809173738 Amount : Rs. 1,83,05,500/- ಒಟ್ಟು ಬಾಕಿ ಮೊತ್ತ ರೂ.1,76,57,951/– ಜೊತೆಗೆ ದಿನಾಂಕ: 14.08.2025 ರಂದು ಇದ್ದಂತೆ. |
| 6. | (1) ಶ್ರೀ ಸಮೀಪ್ ನಂಬಿಯಾರ್ ಬಿನ್ ಶ್ರೀ ಮಾದವನ್ ನಂಬಿಯಾರ್, (2) ಶ್ರೀಮತಿ ಸೌಮ್ಯ ಕೋಂ ಶ್ರೀ ಸಮೀಪ್ ನಂಬಿಯಾರ್, ಇವರಿಬ್ಬರ ವಿಳಾಸ: ನಾಗಪ್ಪಲ್ಲಿ ನಾಡಪುರಂ ರಸ್ತೆ, ಮಡಪ್ಪಲ್ಲಿ ಕಾಲೇಜು ಪೋಸ್ಟ್ ವಟಕಲಾ, ಕೋಜಿಕೋಡಿ ಜಿಲ್ಲೆ, ಕ್ಯಾಲಿಕಟ್, ಕೇರಳ–673102. ಮತ್ತೊಂದು ವಿಳಾಸ: ಫ್ಲಾಟ್ ನಂ. 202, 2ನೇ ಮಹಡಿ, ಉತ್ತರ ಬ್ಲಾಕ್, ಸೂರ್ಯ ಎನ್‌ಕ್ಲೇವ್, ಸರ್ವೆ ನಂ.80/1, ಹಲ್ದೇನಹಳ್ಳಿ ಗ್ರಾಮ, ಆನೇಕಲ್ ತಾಲ್ಲೂಕು, ಬೆಂಗಳೂರು 500099. | ಷೆಡ್ಯೂಲ್ "ಎ" ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ "ಸೂರ್ಯ ಎನ್‌ಕ್ಲೇವ್" ಎಂದು ಕರೆಯಲ್ಪಡುವ ವಾಸಯೋಗ್ಯ ಕಾಂಪ್ಲೆಕ್ಸ್‌ನ ಬ್ಲಾಕ್–ಎರಲ್ಲಿ 68 ವಾಸಯೋಗ್ಯ ಅಪಾರ್ಟ್‌ಮೆಂಟ್‌ಗಳನ್ನು ಒಳಗೊಂಡಿದ್ದು, ಭೂಮಿಯ ವಿಸ್ತೀರ್ಣ 80/1, ಈ ಆಸ್ತಿಯು ಹಲ್ದೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದ್ದು, ದಿನಾಂಕ 18/10/2004ರಂದು ಜಿಲ್ಲಾಧಿಕಾರಿ, ಬೆಂಗಳೂರು ಅವರು ಅಂಗೀಕರಿಸಿರುವ ಆದೇಶ ನಂ.BDS:A.L.N. (A)SR:204/2004-05 ರ ಪ್ರಕಾರ ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ. ಭೂಮಿಯ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 156 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 164 ಅಡಿ, ಒಟ್ಟು ವಿಸ್ತೀರ್ಣ 25,584 ಚದರ ಅಡಿ, ಜೊತೆಗೆ ಎಲ್ಲಾ ಹಕ್ಕುಗಳನ್ನೊಳಗೊಂಡಿರುವ ಸಂಪರ್ಕ ರಸ್ತೆಗಳು, ಗಾರ್ಡನ್ ಪ್ರದೇಶ, ಸಾಮಾನ್ಯ ಪ್ರದೇಶಗಳನ್ನೊಳಗೊಂಡಿದೆ, ಎಲ್ಲಾ ಭೂಮಿಯ ವಿಸ್ತೀರ್ಣ 3,811.5 ಚದರ ಅಡಿ, ಪ್ರದೇಶದ ಒಟ್ಟು ವಿಸ್ತೀರ್ಣ 29,400 ಚದರ ಅಡಿ ಅಥವಾ 27 ಗುಂಟೆಗಳಿಗೆ ಸಮಾನ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಲೇಔಟ್, ಪಶ್ಚಿಮಕ್ಕೆ: ಶ್ರೀ ನಾರಾಯಣಪ್ಪರವರ ಲೇಔಟ್, ಉತ್ತರಕ್ಕೆ: ಶ್ರೀ ರಾಮ್‌ದಾಸ್‌ರವರ ಆಸ್ತಿ ಮತ್ತು ದಕ್ಷಿಣಕ್ಕೆ: ಬ್ಲಾಕ್–ಬಿ ಗೆ ಸೇರಿದ ಭೂಮಿಯ ಬಾಕಿ, ಮೊದಲ ಪಾರ್ಟಿ / ಮಾಲೀಕರು ಹೊಂದಿದ್ದಾರೆ. ಷೆಡ್ಯೂಲ್ "ಬಿ" ಆಸ್ತಿ : 524 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ "ಎ" ಆಸ್ತಿಯಲ್ಲಿ ಒಳಗೊಂಡಿದೆ. ಷೆಡ್ಯೂಲ್ "ಸಿ" ಆಸ್ತಿ : ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.202, ಎರಡನೇ ಮಹಡಿ, ಉತ್ತರ ಬ್ಲಾಕ್‌ನಲ್ಲಿ ಒಳಗೊಂಡಿದ್ದು ಜೊತೆಗೆ 1050 ಚದರ ಅಡಿ ಸೂಪರ್ ಬಿಲ್ಟ್‌ಅಪ್ ಪ್ರದೇಶ, "SURYA ENCLAVE" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡವನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದೆ ಮತ್ತು 524 ಚದರ ಅಡಿ ಅವಿಭಾಜಿತ ಭಾಗ ಹಕ್ಕು ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ಒಳಗೊಂಡಿದೆ, ಒಂದು ಲೀವಿಂಗ್ ರೂಮ್, ಒಂದು ಡೈನಿಂಗ್ ಹಾಲ್, ಮೂರು ಮಲಗುವ ಕೋಣೆಗಳು, ತೆರೆದ ಅಡುಗೆಮನೆ ಮತ್ತು ಬಾತ್‌ರೂಮ್, ಜೊತೆಗೆ ಆರ್.ಸಿ.ಸಿ. ರೂಫ್, ವೆಟ್ರಿಫೈಡ್ ಟೈಲ್ಸ್ ಫ್ಲೋರಿಂಗ್, ಜೊತೆಗೆ ಎಲ್ಲಾ ನಾಗರೀಕ ಸೌಲಭ್ಯಗಳು, ತಳಮಹಡಿಯಲ್ಲಿ ಒಂದು ಕಾರು ನಿಲ್ಲಿಸುವ ಸ್ಥಳ ಮತ್ತು ಇತರ ಸೌಲಭ್ಯಗಳನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ಒಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಪ್ಯಾಸೇಜ್, ಲಿಫ್ಟ್ & ಫ್ಲಾಟ್ ನಂ.207, ಪಶ್ಚಿಮಕ್ಕೆ: ಅದೇ ಆಸ್ತಿಯ ಸೆಟ್‌ಬ್ಯಾಕ್, ಉತ್ತರಕ್ಕೆ: ಫ್ಲಾಟ್ ನಂ.201, ದಕ್ಷಿಣಕ್ಕೆ: ಫ್ಲಾಟ್ ನಂ.203. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ. | 19.08.2025 ಎನ್‌ಪಿಎ ದಿನಾಂಕ: 03.08.2025 | POWER HOME Loan A/c No. PHR0009 00931698 Amount : Rs. 15,51,333/- ಒಟ್ಟು ಬಾಕಿ ಮೊತ್ತ ರೂ. 3,67,088/– ಜೊತೆಗೆ ದಿನಾಂಕ: 14.08.2025ರಂದು ಇದ್ದಂತೆ. |
| 7. | (1) ಶ್ರೀ ಬಾಲಸುಬ್ರಮಣಿಯನ್. ಪಿ ಬಿನ್ ಶ್ರೀ ರಾಗಪ್ಪ ಪಳನಿಯಪ್ಪನ್, (2) ಶ್ರೀಮತಿ ಬಬಿತಾ ಚಂದ್ರಬೋಸ್ ಕೋಂ ಶ್ರೀ ಬಾಲಸುಬ್ರಮಣಿಯನ್. ಪಿ, ಇವರಿಬ್ಬರ ವಿಳಾಸ: ಆಲ್ವಿಂಗ್ ವಿವಾ ಫ್ಲಾಟ್ ನಂ.ಸಿ, ಬ್ಲಾಕ್ 207 ಸೀಗಹಳ್ಳಿ ಎದುರು ಆರ್ಕಿಡ್ ಎನ್‌ಕ್ಲೇವ್, ಬೆಂಗಳೂರು–560067. ಶೆಲ್ ಪೆಟ್ರೋಲ್ ಪಂಪ್ ಹತ್ತಿರ. ಮತ್ತೊಂದು ವಿಳಾಸ: ಕಮಲಭವನ ಕಟ್ಟು ರಸ್ತೆ ಟಸಿ 17/1629, ಕೇಆರ್‌ಎ–23, ಪೂಜಾಪುರ ಪೋಸ್ಟ್, ಪೂಜಾಪುರ, ತಿರುವನಂತಪುರ, ಕೇರಳ – 695012. ಮತ್ತೊಂದು ವಿಳಾಸ: ಫ್ಲಾಟ್ ಖರೀದಿ ವಿಲ್ಲಾ ನಂ.96, ಪೆನಿನ್ಸುಲಾ ಪ್ರಕೃತಿ, ಸರ್ವೆ ನಂ.139, 188, 189 ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು 560066. | ಶ್ರೀ ಬಾಲಸುಬ್ರಮಣಿಯನ್ .ಪಿ ಅವರಿಗೆ ಸೇರಿದ ಆಸ್ತಿಯ ವಿವರ ಷೆಡ್ಯೂಲ್ ಎ ಆಸ್ತಿ : ಐಟಂ ನಂ.1: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಭೂಮಿಯ ಸರ್ವೆ ನಂ.202/1 (ಹಳೆ ಸರ್ವೆ ನಂ.202) ವಿಸ್ತೀರ್ಣ 30 ಗುಂಟೆಗಳು, 1 ಎಕರೆಯಲ್ಲಿ 30 ಗುಂಟೆಗಳು, & 202/2 (ಹಳೆ ಸರ್ವೆ ನಂ.202) ವಿಸ್ತೀರ್ಣ 1 ಎಕರೆಯಲ್ಲಿ 1 ಎಕರೆ 30 ಗುಂಟೆಗಳು, ದಿನಾಂಕ 03.01.2012 ರಂದು ಜಿಲ್ಲಾಧಿಕಾರಿ, ಬೆಂಗಳೂರು ಅವರು ಅಂಗೀಕರಿಸಿರುವ ಆದೇಶ ನಂ.ALN (A)(5) SR/207/11-12 & ದಿನಾಂಕ 26.07.2012ರಂದು ಅಂಗೀಕರಿಸಿರುವ ಆದೇಶ ನಂ.ALN (A)(S)SR/135/12-13 ರ ಪ್ರಕಾರ ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ, ಒಟ್ಟು ವಿಸ್ತೀರ್ಣ 1 ಎಕರೆ 30 ಗುಂಟೆಗಳು, ಈ ಆಸ್ತಿಯು ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ಮತ್ತು ಬೆಂಗಳೂರು ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಭೂಮಿ ಸರ್ವೆ ನಂ.203, ಪಶ್ಚಿಮಕ್ಕೆ: ಭೂಮಿ ಸರ್ವೆ ನಂ.200, ಉತ್ತರಕ್ಕೆ: ಭೂಮಿ ಸರ್ವೆ ನಂ.199 & 219, ದಕ್ಷಿಣಕ್ಕೆ: ಭೂಮಿ ಸರ್ವೆ ನಂ.201 & ಸರ್ವೆ ನಂ.204. ಐಟಂ ನಂ.2: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪರಿವರ್ತಿತ ಭೂಮಿಯ ಸರ್ವೆ ನಂ.203, ವಿಸ್ತೀರ್ಣ 0–5 ಗುಂಟೆಗಳು, ಸರ್ವೆ ನಂ.204, ವಿಸ್ತೀರ್ಣ 1 ಎಕರೆ 23 ಗುಂಟೆಗಳು, ಸರ್ವೆ ನಂ.206 ವಿಸ್ತೀರ್ಣ 0–13 ಗುಂಟೆಗಳು, ಒಟ್ಟು ವಿಸ್ತೀರ್ಣ 2 ಎಕರೆ 1 ಗುಂಟೆಗಳು, ದಿನಾಂಕ 03.8.2011ರಂದು ಅಂಗೀಕರಿಸಿರುವ ಆದೇಶ ನಂ.ALN (A)(S)SR/60/11-12 & ದಿನಾಂಕ 12/08/2011ರಂದು ಅಂಗೀಕರಿಸಿರುವ ಆದೇಶ ನಂ.ALN (A) (S)SR/73/11-12 & ದಿನಾಂಕ 3/08/2011ರಂದು ಅಂಗೀಕರಿಸಿರುವ Vide Official Memorandum No.ALN(A) (S)SR/58/11-12 ರ ಪ್ರಕಾರ ಜಿಲ್ಲಾಧಿಕಾರಿ ಬೆಂಗಳೂರು ಅವರು ಇದನ್ನು ಕೃಷಿಯಿಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ, ಈ ಆಸ್ತಿಯು ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು ಮತ್ತು ಬೆಂಗಳೂರು ಜಿಲ್ಲೆಯಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.211/1, 207/1, 207/2 & 207/5, ಪಶ್ಚಿಮಕ್ಕೆ: ಸರ್ವೆ ನಂ.202, 201 & 205, ಉತ್ತರಕ್ಕೆ: ಸರ್ವೆ ನಂ.202, 199 & 211/1, ದಕ್ಷಿಣಕ್ಕೆ: ಭೂಮಿ ಸರ್ವೆ ನಂ.185. ಷೆಡ್ಯೂಲ್ ಬಿ ಆಸ್ತಿ: ವಿಲ್ಲಾ ನಂ.96 (ತೊಂಭತ್ತಾರು), ಪ್ರಸ್ತುತ ಇ–ಖಾತಾ ನಂ.1432/1448/1484/96, ಪಿಐಡಿ ನಂ:150200102300122986, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 39.23 ಚದರ ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 51 ಚದರ ಅಡಿ, ಒಟ್ಟು ವಿಸ್ತೀರ್ಣ 2000 ಚದರ ಅಡಿ ಭೂಮಿಯ ಪ್ರದೇಶ/ನಿವೇಶನದ ಪ್ರದೇಶ, ಮತ್ತು 2060.02 ಚದರ ಅಡಿ, ಇಟ್ಟಿಗೆ ಮತ್ತು ಸಿಮೆಂಟ್‌ಗಳಿಂದ ನಿರ್ಮಿಸಲಾದ ಗೋಡೆಗಳು, ಜೊತೆಗೆ ಆರ್‌ಸಿಸಿ ರೂಫಿಂಗ್ ಮತ್ತು ವೆಟ್ರಿಫೈಡ್ ಫ್ಲೋರಿಂಗ್ ಮತ್ತು ವಿದ್ಯುತ್, ನೀರು ಮತ್ತು ಸ್ಯಾನಿಟರಿ ಕನೆಕ್ಷನ್, ಸಾಲ್ ಮರದ ಬಾಗಿಲುಗಳು ಮತ್ತು ಅಲುಮಿನಿಯಂ ಕಿಟಕಿಗಳು (ಷೆಡ್ಯೂಲ್ "ಎ" ಆಸ್ತಿಯಲ್ಲಿ ನಿರ್ಮಿಸಲಾಗಿದೆ ಮತ್ತು ದಿನಾಂಕ 11/10/2013ರಂದು ಆನೇಕಲ್ ಯೋಜನಾ ಪ್ರಾಧಿಕಾರವು ಆದೇಶ ನಂ.APA/LAO/72/2012-13 ನ್ನು ಅನುಮೋದಿಸಿದ್ದಾರೆ), ಈ ಆಸ್ತಿಯು ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಮತ್ತು ಬೆಂಗಳೂರು ಜಿಲ್ಲೆಯಲ್ಲಿದೆ. "PENINSULA PRAKRUTHI" ಎಂದು ಕರೆಯಲ್ಪಡುವ ವಾಸಯೋಗ್ಯ ಕಟ್ಟಡವನ್ನು ನಿರ್ಮಿಸಲಾಗಿದೆ ಜೊತೆಗೆ ಎಲ್ಲಾ ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ.211/1, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.97. ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, 8880041234 ರವರನ್ನು ಸಂಪರ್ಕಿಸಿ. | 19.08.2025 ಎನ್‌ಪಿಎ ದಿನಾಂಕ: 08.08.2025 | POWER HOME VANILLA BRE Loan A/c No. PHR0009 02137980 Amount : Rs. 66,78,568/- ಒಟ್ಟು ಬಾಕಿ ಮೊತ್ತ ರೂ. 66,91,240/– ದಿನಾಂಕ : 14.08.2025 ರಂದು ಇದ್ದಂತೆ |

**ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.**
ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯ ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.
ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.
**ದಿನಾಂಕ : 18.09.2025**
**ಸ್ಥಳ : ಬೆಂಗಳೂರು**
**ಸಹಿ/– ಅಧಿಕೃತ ಅಧಿಕಾರಿ**
**ಎಕ್ಸಿಸ್ ಬ್ಯಾಂಕ್ ಲಿಮಿಟೆಡ್**

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ**
**ಅಲ್ಪಾವಧಿ ಟೆಂಡರ್ ಪ್ರಕಟಣೆ**
**ಟೆಂಡರ್ ಪ್ರಕಟಣೆ ಸಂಖ್ಯೆ: 13/2025-26/1773-77 ದಿನಾಂಕ: 16-09-2025**
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ರನ್ವಯ ಏಕಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಮಡಿಕೇರಿ ಉಪ–ವಿಭಾಗದ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 3054–ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಅಡಿಯ ಒಟ್ಟು –1 ಕಾಮಗಾರಿಗೆ (ಇಂಡೆಂಟ್ ಸಂಖ್ಯೆ: 27631) ಹಾಗೂ ಲೆಕ್ಕಶೀರ್ಷಿಕೆ: 3054–ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ ಅಡಿಯ ಒಟ್ಟು –11 ಕಾಮಗಾರಿಗಳಿಗೆ ( ಇಂಡೆಟ್ ಸಂಖ್ಯೆ : 27509, 27594, 27581, 27556, 27595, 27557, 27525, 27575, 27508, 27573, 27626) ಒಟ್ಟಾರೆ –12 ಕಾಮಗಾರಿಗಳನ್ನು ಇ–ಸಂಗ್ರಹಣಾ ವೇದಿಕೆ ಮೂಲಕ 1ನೇ ಕರೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್ಗಿಟ್ಟ ಮೊತ್ತ ರೂ. 10.13 ಲಕ್ಷ ಮತ್ತು ಗರಿಷ್ಟ ರೂ. 16.92 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23–09–2025 ಸಂಜೆ 5.00 ಗಂಟೆಯಾಗಿರುತ್ತದೆ.
ಟೆಂಡರ್ ಸಂಪೂರ್ಣ ವಿವರಗಳನ್ನು ಇ–ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಸಹಿ/
**ಕಾರ್ಯಪಾಲಕ ಇಂಜಿನಿಯರ್**
ಲೋಕೋಪಯೋಗಿ ಇಲಾಖೆ ಕೊಡಗು ವಿಭಾಗ
ಮಡಿಕೇರಿ

ಕರ್ನಾಟಕ ಸರ್ಕಾರ
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
**ಪರಿಮಾಣುಕ್ರಿಮಿ ಪರಿಶೋಧನಾ ಪ್ರಯೋಗ ಶಾಲೆ,**
ಬಿಹೆಚ್ ರಸ್ತೆ, ಸ್ಕೌಟ್ ಭವನದ ಎದುರು, ಶಿವಮೊಗ್ಗ
ದೂರವಾಣಿ: 08182–222050 ಇ–ಮೇಲ್: ddvdlsmg@gmail.com
ಸಂಖ್ಯೆ: ವಿಡಿಎಲ್/ಎನ್‌ಹೆಚ್‌ಎಂ/ಟೆಂಡರ್/3/25–26 ದಿನಾಂಕ: 17.09.2025
**ಕೆಎಫ್‌ಡಿ ಆರ್‌ಟಿ–ಪಿಸಿಆರ್ ರೀಜೆಂಟ್ಸ್ ಪೂರೈಕೆಗಾಗಿ ಇ–ಟೆಂಡರ್**
ಟೆಂಡರ್ ಉಲ್ಲೇಖ ಸಂಖ್ಯೆ: ಡಿಹೆಚ್‌ಎಫ್‌ಡಬ್ಲ್ಯೂಎಸ್/2025–26/ಐಎನ್‌ಡಿ1815
ದಿನಾಂಕ: 17.09.2025
ಸಂಪೂರ್ಣ ವಿವರಗಳೊಂದಿಗೆ ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 17.10.2025, ಸಂಜೆ 4.30 ಗಂಟೆವರೆಗೆ.
**ಸಹಿ/–ಸದಸ್ಯ ಕಾರ್ಯದರ್ಶಿಗಳು ಹಾಗೂ ಉಪ ಮುಖ್ಯವೈದ್ಯಾಧಿಕಾರಿಗಳು,**
**ಪರಿಮಾಣು ಕ್ರಿಮಿ ಪರಿಶೋಧನ ಪ್ರಯೋಗ ಶಾಲೆ, ಶಿವಮೊಗ್ಗ**
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/25–26/80/09/946

## ಸಮಾಚಾರ ಸಣ್ಣದಲ್ಲ

### ಚಿಕ್ಕೋಡಿ: ಯುವಕನ ಕೊಚ್ಚಿ ಬರ್ಬರ ಹತ್ಯೆ

**ಚಿಕ್ಕೋಡಿ:** ಬಸ್ ಇಳಿಯುತ್ತಿದ್ದಂತೆ ಯುವಕನ ಮೇಲೆ ದುಷ್ಕರ್ಮಿಗಳು ಮಚ್ಚಿನಿಂದ ದಾಳಿ ನಡೆಸಿ ಕೊಚ್ಚಿ ಕೊಲೆಗೈದ ಪ್ರಕರಣ ಹುಕ್ಕೇರಿ ಶಹಾಬಂದರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಹಾಂತೇಶ್ ಬುಕನಟ್ಟಿ (24) ಕೊಲೆಯಾದ ಯುವಕ ಎಂದು ತಿಳಿದು ಬಂದಿದೆ. ಯುವಕ ಕೆಲಸ ಮುಗಿಸಿ ಊರಿಗೆ ವಾಪಸ್ ಆಗಿದ್ದ. ಈ ವೇಳೆ ಬಸ್ ಇಳಿಯುತ್ತಿದ್ದಂತೆ ಹಿಂದಿನಿಂದ ಬಂದು ಮಚ್ಚಿನಿಂದ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಕೊಲೆಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಸ್ಥಳಕ್ಕೆ ಯಮಕನಮರಡಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

### ಮನೆ ಬೀಗ ಮುರಿದು ಚಿನ್ನಾಭರಣ ಕಳವು

**ಬೀದರ್:** ಮನೆಯ ಬೀಗ ಮುರಿದು 10 ಲಕ್ಷ ರು.ಗೂ ಅಧಿಕ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿರುವ ಘಟನೆ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದ ಬಾಲಾಜಿ ನಗರದಲ್ಲಿ ನಡೆದಿದೆ. ಜಾಲೇಂದರ್ ಭೀಮಣ್ಣ ಮತ್ರೆ ಎಂಬುವವರ ಮನೆಯಲ್ಲಿ ಕಳ್ಳತನವಾಗಿದೆ. ಮನೆಯಲ್ಲಿ ಯಾರೂ ಇಲ್ಲದ ಸಮಯವನ್ನು ನೋಡಿಕೊಂಡು ಕಳ್ಳರು ಕೈಚಳಕ ತೋರಿಸಿದ್ದಾರೆ. 10 ಲಕ್ಷಕ್ಕೂ ಅಧಿಕ ಮೌಲ್ಯದ ಚಿನ್ನಾಭರಣ ಹಾಗೂ 250 ಗ್ರಾಂ ಬೆಳ್ಳಿ ಆಭರಣಗಳು ಕದ್ದು ಪರಾರಿಯಾಗಿದ್ದಾರೆ. ಮಾಲೀಕರು ಮನೆಗೆ ಮರಳಿದಾಗ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ಕೂಡಲೇ ಭಾಲ್ಕಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸದ್ಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ಶ್ವಾನದಳದಿಂದ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಕಳ್ಳರ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

### ಕೆಆರ್‌ಎಸ್ ಹಿನ್ನೀರಿಗೆ ಪ್ರವಾಸಿಗರಿಗೆ ನಿರ್ಬಂಧ

**ಮೈಸೂರು:** ಮೈಸೂರು ತಾಲೂಕಿನ ಇಲವಾಲ ಠಾಣಾ ಸರಹದ್ದಿನ ಕಾವೇರಿ ಹಿನ್ನೀರು ಪ್ರದೇಶಕ್ಕೆ 6 ತಿಂಗಳ ವರೆಗೆ ಸ್ಥಳೀಯರು ಹಾಗೂ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿ ಮೈಸೂರು ಜಿಲ್ಲಾಧಿಕಾರಿ

ಲಕ್ಷ್ಮೀಕಾಂತ ರೆಡ್ಡಿ ಆದೇಶ ಹೊರಡಿಸಿದ್ದಾರೆ. ಕೃಷ್ಣರಾಜಸಾಗರ ಅಣೆಕಟ್ಟೆ ತುಂಬಿರುವ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನ ಇಲವಾಲ ಠಾಣಾ ಸರಹದ್ದಿನ ಕಾವೇರಿ ಹಿನ್ನೀರು ಪ್ರದೇಶಕ್ಕೆ ಒಳಪಡುವ ಗ್ರಾಮಗಳಾದ ಮೀನಾಕ್ಷಿಪುರ, ಆನಂದೂರು, ಹಳೇ ಉಂಡವಾಡಿ, ಯಡಹಳ್ಳಿ ಸಾಗರಕಟ್ಟೆ, ರಾಮೇನಹಳ್ಳಿ ಮಲ್ಲೇಗೌಡನ ಕೊಪ್ಪಲು, ಚೋಳೇನಹಳ್ಳಿ, ಯಾಚೇಗೌಡನ ಹಳ್ಳಿ ಎಸ್.ಹೆಮ್ಮನಹಳ್ಳಿ ಹೊಸಕೋಟೆ, ಕಲ್ಲೂರು ನಾಗನಹಳ್ಳಿ ಗ್ರಾಮಗಳಿಗೆ ಹೊಂದಿಕೊಂಡಂತೆ ಇರುವ ಹಿನ್ನೀರಿನ ಪ್ರದೇಶಕ್ಕೆ ಸಾರ್ವಜನಿಕರ ಹಾಗೂ ಪ್ರವಾಸಿಗರ ಹಿತದೃಷ್ಟಿಯಿಂದ ಪ್ರವೇಶ ವನ್ನು ನಿರ್ಬಂಧಿಸಿದ್ದು, ಮುಂದಿನ 6 ತಿಂಗಳವರೆಗೆ ಈ ಆದೇಶ ಜಾರಿಯಲ್ಲಿರಲಿದೆ. ಆದೇಶ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಫನ್‌ತರಂಗ
- ರಘುಪತಿ ಶೃಂಗೇರಿ -

ದೋಷಗಳ ಹಿನ್ನಲೆಯಲ್ಲಿ 2 ಲಕ್ಷ ಹೊಸ ಜಾತಿಗಣತಿ 'ಕೈಪಿಡಿ'ಯನ್ನು ತಿಪ್ಪೆಗೆಸೆದ ಹಿಂದುಳಿದ ಆಯೋಗ




ವಿಶ್ವವಾಣಿ ಕ್ಲಬ್ ಹೌಸ್
19.09.2025
ಶುಕ್ರವಾರದ ಅತಿಥಿ
ಶ್ರೀ ನಂದೀಶ್ ಪಿ.ಕೆ
ವಿಷಯ
ಶ್ರೀ ರಾಮಾಯಣ ದರ್ಶನಂ ಸಮೀಕ್ಷೆ

vishwavani.news

# ಬಂಗ್ಲೆ ಗುಡ್ಡದಲ್ಲಿ ಮತ್ತಷ್ಟು ಮೂಳೆ ಪತ್ತೆ

## ನಿರಂತರವಾಗಿ ಎಸ್‌ಐಟಿ ಉತ್ಖನನ | ಸಿಕ್ಕಿರುವ ಮಾನವ ಅವಶೇಷಗಳು ಎಫ್‌ಎಸ್‌ಎಲ್‌ಗೆ ರವಾನೆ

**ಮಂಗಳೂರು:** ಧರ್ಮಸ್ಥಳ ಪರಿಸರದಲ್ಲಿ ನೂರಾರು ಅನಾಮಿಕ ಶವಗಳ ಹೂತಿಟ್ಟ ಆರೋಪದ ಪ್ರಕರಣ ಸಂಬಂಧ ಎಸ್‌ಐಟಿ ಶೋಧ ಚುರುಕುಗೊಳಿಸಿದೆ. ಧರ್ಮಸ್ಥಳದ ಬಂಗ್ಲೆ ಗುಡ್ಡ ಕಾಡಿನಲ್ಲಿ ಗುರುವಾರವೂ ಎಸ್‌ಐಟಿ ತಂಡ ಉತ್ಖನನ ನಡೆಸಿತು. ಎಸ್‌ಐಟಿ ತಂಡಕ್ಕೆ ಗುರುವಾರವೂ ಮಾನವ ಅಸ್ಥಿಪಂಜರದ ಅವಶೇಷಗಳು ಪತ್ತೆ ಆಗಿವೆ.

ಗುರುವಾರ ಸಿಕ್ಕಿರುವ ಅಸ್ಥಿಪಂಜರಗಳ ಪೈಕಿ 2017ರಲ್ಲಿ ಕೊಡಗಿನಿಂದ ನಾಪತ್ತೆಯಾದ ಅಯ್ಯಪ್ಪ ಎಂಬ ಎಂಬುವರ ಅಸ್ಥಿಪಂಜರವೂ ಇದೆ ಎನ್ನಲಾಗಿದೆ. ಅವರ ಐಡಿ ಕಾರ್ಡ್ ಕೂಡ ಅಸ್ಥಿ ಪಂಜರದ ಬಳಿ ಲಭ್ಯವಾಗಿದೆ. ಧರ್ಮಸ್ಥಳಕ್ಕೆ ಬಂದು ಅಯ್ಯಪ್ಪ ಬಂಗ್ಲೆ ಗುಡ್ಡ ಕಾಡಿನಲ್ಲಿ ಆತ್ಮಹತ್ಯೆ ಮಾಡಿಕೊಂಡರಬಹುದು ಎನ್ನಲಾಗಿದೆ. ಅಯ್ಯಪ್ಪ ನಾಪತ್ತೆಯಾಗಿರುವ ಕುರಿತು 2017ರಲ್ಲಿ ಮಗ ಜೀವನ್ ಗೋಣಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

**ಮೂಳೆಗಳ ಅವಶೇಷ ಪತ್ತೆ:** ಗುರುವಾರವೂ ಬಂಗ್ಲೆಗುಡ್ಡ ಕಾಡಿನಲ್ಲಿ ಶೋಧ ಕಾರ್ಯ ನಡೆಯಿತು. ಮತ್ತೆರಡು ಜಾಗಗಳಲ್ಲಿ ಮಾನವ ಮೂಳೆಗಳ ಅವಶೇಷಗಳು ಪತ್ತೆಯಾಗಿವೆ. ಬುರುಡೆ ಸೇರಿದಂತೆ ಹಲವು ಮೂಳೆಗಳನ್ನು ಫಾರೆನ್ಸಿಕ್ ತಜ್ಞರು ಪರಿಶೀಲನೆ ನಡೆಸಿದ್ದಾರೆ. ಸೋಕೋ ತಂಡ ಮಣ್ಣು ಹಾಗೂ ಮೂಳೆಗಳ ಮಾದರಿಗಳನ್ನು ಸಂಗ್ರಹಿಸಿದ್ದು, ಅವುಗಳನ್ನು ಫಾರೆನ್ಸಿಕ್ ಸೈನ್ಸ್ ಲ್ಯಾಬ್‌ಗೆ ಕಳುಹಿಸಲಾಗಿದೆ. ಭೂಮಿಯ ಮೇಲೆ ಚದುರಿಕೊಂಡ ಸ್ಥಿತಿಯಲ್ಲಿ ಅವಶೇಷಗಳು ಪತ್ತೆಯಾಗಿದ್ದು, ಅವುಗಳ ಮಹಜರು ಪ್ರಕ್ರಿಯೆಯನ್ನೂ ನಡೆಸಲಾಗಿದೆ

**ಅಸಹಜ ಸಾವುಗಳ ಕುರಿತು ದೂರು:** ಈ ನಡುವೆ ಸಿಪಿಐಎಂ ಮುಖಂಡ ಬಿ.ಎಂ.ಭಟ್ ಅವರು ಧರ್ಮಸ್ಥಳ ಠಾಣೆ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಲ್ಲಿ ನಡೆದ ಅಸಹಜ ಸಾವುಗಳ ಕುರಿತು ತನಿಖೆ ನಡೆಸಬೇಕೆಂದು ಎಸ್‌ಐಟಿಗೆ ದೂರು ನೀಡಿದ್ದಾರೆ.

**ವಸಂತಿ ಸಹೋದರ ವಿಜಯ್‌ನ ವಿಚಾರಣೆ:** ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಅನನ್ಯಾ ಭಟ್ ಎಂಬಾಕೆ ಬೆಳ್ತಂಗಡಿಗೆ ಬಂದು ನಾಪತ್ತೆಯಾಗಿರುವ ವಿಚಾರಕ್ಕೆ ಸಂಬಂಧಿಸಿ ಸುಜಾತಾ ಭಟ್ ನೀಡಿದ ಸುಳ್ಳು ದೂರಿನ ವಿಚಾರವಾಗಿ ವಸಂತಿ ಎಂ.ಪಿ. ಅವರ ಸಹೋದರ ಕೊಡಗು ಮೂಲದ ವಿಜಯ್ ಗುರುವಾರ ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಹಾಜರಾಗಿದ್ದಾರೆ. ಸುಜಾತಾ ಭಟ್ ಅವರು ತನ್ನ ಮಗಳು ಅನನ್ಯಾ ಭಟ್ ಧರ್ಮಸ್ಥಳಕ್ಕೆ ಸ್ನೇಹಿತೆಯರ ಜತೆ ಬಂದು ಕಾಣೆಯಾಗಿದ್ದಳೆಂದು ಆರೋಪಿಸಿದ ಹಿನ್ನೆಲೆ ವಿಚಾರಣೆಗೆಂದು ಎಸ್‌ಐಟಿ ಕಚೇರಿಯಿಂದ ವಿಜಯ್ ಅವರಿಗೆ ನೋಟಿಸ್ ನೀಡಲಾಗಿತ್ತು. ವಿಚಾರಣೆ ಎದುರಿಸಿರುವ ವಿಜಯ್ ಎಸ್‌ಐಟಿ ಮುಂದೆ ಹಲವು ಮಹತ್ವದ ವಿಚಾರಗಳನ್ನು ಹೇಳಿದ್ದಾರೆ ಎನ್ನಲಾಗಿದೆ.

### ಆರೋಪಿ ಚಿನ್ನಯ್ಯನಿಗೆ ನ್ಯಾಯಾಂಗ ಬಂಧನ

ಧರ್ಮಸ್ಥಳ ನೂರಾರು ಶವ ಹೂತ ಪ್ರಕರಣ ಸಂಬಂಧ ಆರೋಪಿ ಚಿನ್ನಯ್ಯನನ್ನು ಪೊಲೀಸರು ಗುರುವಾರ ಬೆಳ್ತಂಗಡಿಗೆ ಕರೆದು ಕೊಂಡು ಬಂದು ಕೋರ್ಟಿಗೆ ಹಾಜರುಪಡಿಸಿ, ಮತ್ತೆ ನ್ಯಾಯಾಂಗ ಬಂಧನಕ್ಕೆ ಪಡೆದುಕೊಂಡರು. ಶಿವಮೊಗ್ಗ ಜೈಲಿನಲ್ಲಿ ಬಂಧನ ದಲ್ಲಿದ್ದ ಚಿನ್ನಯ್ಯನನ್ನು ನ್ಯಾಯಾಂಗ ಬಂಧನ ಅವಧಿ ಮುಗಿದ ಹಿನ್ನೆಲೆ ಬೆಳ್ತಂಗಡಿ ತಾಲೂಕು ನ್ಯಾಯಾಲಯದ ಹೆಚ್ಚುವರಿ ವ್ಯವಹಾರಿಕ ಮತ್ತು ಪ್ರಥಮ ದರ್ಜೆ ನ್ಯಾಯಾಧೀಶ ವಿಜಯೇಂದ್ರ ಅವರ ಮುಂದೆ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ಕೋರ್ಟ್ ಮತ್ತೆ ನ್ಯಾಯಾಂಗ ಬಂಧನಕ್ಕೆ ಚಿನ್ನಯ್ಯನ ಒಪ್ಪಿಸಿತು.

### ವಿಠಲ್ ಗೌಡ ವಿರುದ್ಧ ಎಸ್‌ಐಟಿಗೆ ದೂರು

ಸೌಜನ್ಯಳ ಮಾವ ವಿಠಲ ಗೌಡ ತಲೆ ಬುರುಡೆ ತಂದ ಹಿನ್ನೆಲೆಯಲ್ಲಿ ಮಹಜರು ನಡೆಸಿದ್ದರಿಂದ ಬಂಗ್ಲೆಗುಡ್ಡ ಅರಣ್ಯದಲ್ಲಿ ಈ ಅಸ್ಥಿಪಂಜರಗಳೂ ಸಿಕ್ಕಿದೆ. ಈ ನಡುವೆ ವಿಠಲ ಗೌಡ ವಿರುದ್ಧ ಎಸ್‌ಐಟಿಯಲ್ಲಿ ಗುರುವಾರ ದೂರೊಂದು ದಾಖಲಾಗಿದೆ. ವಿಠಲಗೌಡ ಮಹಜರು ನಡೆಸಿದ ಬಳಿಕ ಎಸ್‌ಐಟಿ ತನಿಖೆ ಬಗ್ಗೆ ವಿಡಿಯೊ ಮಾಡಿ ಹೇಳಿಕೆ ನೀಡಿ ತನಿಖೆಯ ಹಾದಿತಪ್ಪಿಸಲು ಹಾಗೂ ಸಾಕ್ಷ್ಯ ನಾಶ ಮಾಡಲು ಸಾರ್ವಜನಿಕವಾಗಿ ಹೇಳಿಕೆ ನೀಡಲಾಗಿದೆ ಎಂದು ಆರೋಪಿಸಿ ದೂರು ನೀಡಲಾಗಿದೆ.

# ಹುಬ್ಬಳ್ಳಿಯಲ್ಲಿ ಇಂದು ವೀರಶೈವ ಲಿಂಗಾಯತ ಏಕತಾ ಸಮಾವೇಶ

## 1 ಸಾವಿರ ಮಠಾಧೀಶರು, 1 ಲಕ್ಷ ಜನ ಸೇರುವ ನಿರೀಕ್ಷೆ: ದಿಂಗಾಲೇಶ್ವರ ಶ್ರೀ

**ಹುಬ್ಬಳ್ಳಿ:** ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಹಿನ್ನೆಲೆಯಲ್ಲಿ ವೀರಶೈವ ಲಿಂಗಾಯತ ಹಾಗೂ ಲಿಂಗಾಯತ ಧರ್ಮದ ಪ್ರತಿಪಾದಕರಲ್ಲಿ ಮೂರ್ನಾಲ್ಕು ಕವಲುಗಳಾಗಿವೆ. ಒಬ್ಬೊಬ್ಬರು ಒಂದೊಂದು ವಾದ ಮಂಡಿಸುತ್ತಿರುವುದರಿಂದ ಸಮೀಕ್ಷೆಯ ಜಾತಿ, ಧರ್ಮದ ಕಾಲಂನಲ್ಲಿ

ಏನು ನಮೂದಿಸಬೇಕು ಎಂಬ ಬಗ್ಗೆ ವೀರಶೈವ, ಲಿಂಗಾಯತ ಹಾಗೂ ಉಪ ಪಂಗಡಗಳಲ್ಲಿ ಗೊಂದಲ ಸೃಷ್ಟಿಯಾಗಿದೆ.

ಈ ಬಗ್ಗೆ ಚರ್ಚೆ ನಡೆಸಿ ಒಮ್ಮತದ ನಿರ್ಧಾರ ಪ್ರಕಟಿಸಲು ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಸೆ.19 ರಂದು ವೀರಶೈವ ಲಿಂಗಾಯತ ಏಕತಾ ಸಮಾವೇಶವನ್ನು ಆಯೋಜನೆ ಮಾಡಲಾಗಿದೆ ಎಂದು ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಏಕತಾ ಸಮಾವೇಶದಲ್ಲಿ 1 ಸಾವಿರ ಸ್ವಾಮೀಜಿಗಳು ಭಾಗಿಯಾಗಲಿದ್ದಾರೆ. ಮೂರು ಸಾವಿರ ಮಠದಿಂದ 2 ಗಂಟೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. 200ಕ್ಕೂ ಅಧಿಕ ರಾಜಕೀಯ ನಾಯಕರು ಭಾಗಿಯಾಗಲಿದ್ದಾರೆ. ಹುಬ್ಬಳ್ಳಿ-ಧಾರವಾಡ ಇತಿಹಾಸದಲ್ಲಿ ಮೊದಲೇ ಬಹುದೊಡ್ಡ ವೇದಿಕೆಯಾಗಿದೆ. 50 ಸಾವಿರ ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. 1 ಲಕ್ಷ ಜನರಿಗೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಮಾಜವನ್ನು ಒಂದು ಮಾಡುವುದು ಸಮಾವೇಶದ ಮೂಲ ಗುರಿ. ವೀರಶೈವ ಬೇರೆಯಲ್ಲ, ಲಿಂಗಾಯತ ಬೇರೆಯಲ್ಲ. ವೀರಶೈವ ಲಿಂಗಾಯತ ಒಂದು ವಿಶ್ವವೇ ಬಂಧು ಎಂಬ ಘೋಷ ವಾಕ್ಯ ಹೊಂದಿದ್ದೇವೆ. ಪ್ರತ್ಯೇಕ ಲಿಂಗಾಯತ ಧರ್ಮ ಹೋರಾಟ ಮಾಡುವವರಲ್ಲಿ ವಿನಂತಿಸುವದೇನೆಂದರೆ ನಾವು ಮೊದಲು ಒಂದಾಗೋಣ, ಭಿನ್ನಾಭಿಪ್ರಾಯ ಬದಿಗಿಟ್ಟು ಸಮಾಜವನ್ನು ಒಂದು ಮಾಡೋಣ ಎಂದರು.

### ವಿಷ್ಣುವರ್ಧನ್ ಅಭಿಮಾನಿಗಳಿಗೆ ಹಿರಿಯ ನಟಿ ಭಾರತಿ ಮನವಿ

# ಕುಟುಂಬದ ಬಗ್ಗೆ ಅಪಪ್ರಚಾರ ನಂಬಬೇಡಿ

**ಮೈಸೂರು:** ನಮ್ಮ ಕುಟುಂಬದ ಬಗ್ಗೆ ಯಾರಾದರೂ, ಏನಾದರೂ ಇಲ್ಲದಿರುವುದನ್ನು ಹೇಳಿದರೆ ನಂಬಬೇಡಿ. ಏನಾದರೂ ಮಾತನಾಡಿದರೆ ನಮ್ಮ ಮನಸ್ಸಿಗೆ ಕಷ್ಟ ಆಗುತ್ತದೆ ಎಂದು ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ತಿಳಿಸಿದರು.

ನಟ ವಿಷ್ಣುವರ್ಧನ್ ಜನ್ಮದಿನದ ಹಿನ್ನೆಲೆ ಮೈಸೂರಿನಲ್ಲಿ ವಿಷ್ಣು ಸ್ಮಾರಕಕ್ಕೆ ಪುಷ್ಪಾರ್ಚನೆ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು. ನಮ್ಮ ಕುಟುಂಬದ ಮೇಲೆ ಯಾರು ಏನೇ ಮಾತನಾಡಿದರೂ ಅವರ ಬಗ್ಗೆ ತಲೆಕಡಿಸಿಕೊಳ್ಳಬೇಡಿ. ಯಾರೋ ಏನೋ ಹೇಳಿದರು ಅಂತಾ ತಪ್ಪಾಗಿ ತಿಳಿದುಕೊಳ್ಳಬೇಡಿ. ನಮ್ಮ ಮನೆಗೆ ಬಂದು ಏನೇ ಇದ್ದರೂ ಮಾತನಾಡಿ ಸರಿಪಡಿಸಿಕೊಳ್ಳಿ. ನಿಮ್ಮ ಸಂತೋಷದಿಂದ ನನಗೆ ಬಹಳಷ್ಟು ಖುಷಿಯಾಗಿದೆ. ವಿಷ್ಣುವರ್ಧನ್ ಇಲ್ಲೇ ನಮ್ಮೆಲ್ಲರ ಜತೆಯಲ್ಲೇ ಇದ್ದಾರೆ. ಎಲ್ಲರೂ ಒಳ್ಳೆಯ ಕೆಲಸಗಳನ್ನು ಮಾಡಿ. ನಮ್ಮ ಯಜಮಾನರ ಮೊಮ್ಮಗ ಜೇಷ್ಟವರ್ಧನ್ ಬಂದಿದ್ದಾನೆ. ಅವನಿಗೆ ನಿಮ್ಮ ಪ್ರೀತಿ ಇರಲಿ. ಸರಕಾರ ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ಕೊಟ್ಟಿದೆ. ಆದ್ದರಿಂದ ಸರಕಾರಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದರು.

ನಟ ಅನಿರುದ್ಧ್ ಮಾತನಾಡಿ, ಅಭಿಮಾನ್ ಸ್ಟುಡಿಯೊದಲ್ಲಿ 10 ಗುಂಟೆ ಜಾಗಕ್ಕೆ ಸಿಎಂ ಬಳಿ ಮನವಿ ಮಾಡಿದ್ದೇವೆ. ಅಲ್ಲಿದ್ದ ಮಂಟಪವನ್ನು ಭಾರತಿಯವರೇ ನಿರ್ಮಾಣ ಮಾಡಿದ್ದರು. ಮೈಸೂರಿನಲ್ಲಿ ಉತ್ತಮವಾದ ಸ್ಮಾರಕ ನಿರ್ಮಾಣವಾಗಿದೆ.



ನಟ ವಿಷ್ಣುವರ್ಧನ್ ಜನ್ಮದಿನದ ಅಂಗವಾಗಿ ಮೈಸೂರಿಗೆ ಭೇಟಿ ನೀಡಿದ ನಟಿ ಭಾರತಿ, ಅನಿರುದ್ಧ್ ಅವರು, ವಿಷ್ಣುವರ್ಧನ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.

ಇತ್ತೀಚೆಗೆ ಮಂಟಪ ತೆರವು ಮಾಡಲಾಗಿದೆ. ಬಾಲಣ್ಣ ಕುಟುಂಬಕ್ಕೂ ಮನವಿ ಮಾಡಿದ್ದೇವೆ. ಸರಕಾರ ಜಾಗವನ್ನು ವಶಪಡಿಸಿಕೊಂಡಿದೆ. ಹೀಗಾಗಿ ಸರಕಾರಕ್ಕೂ ಮನವಿ ಮಾಡಿದ್ದೇವೆ. 10 ಗುಂಟೆ ಜಾಗ ಕೊಟ್ಟರೆ ನಾವೇ ಸ್ಮಾರಕ ನಿರ್ಮಾಣ ಮಾಡುತ್ತೇವೆ ಎಂದು ತಿಳಿಸಿದರು.

> ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣ ವಿಚಾರದಲ್ಲಿ ಸರಕಾರಕ್ಕೆ ಮನವಿ ಮಾಡಿದ್ದೇವೆ. ಈ ಸಂಬಂಧ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಅಭಿಮಾನಿಗಳು ನಮ್ಮ ಜತೆಯಲ್ಲಿ ಇರಬೇಕು.
>
> -ಅನಿರುದ್ಧ್ ನಟ

# ಸಚಿವ ತಿಮ್ಮಾಪುರ ವಿರುದ್ಧ ವಿದ್ಯಾರ್ಥಿನಿ ಬೇಸರ

## ಹೆಚ್ಚಿನ ಅಂಕ ಪಡೆದರೂ ಹಾಸ್ಟೆಲ್ ಪ್ರವೇಶ ಸಿಕ್ಕಿಲ್ಲ | ಸನ್ಮಾನ ತಿರಸ್ಕರಿಸಿದ ವಿದ್ಯಾರ್ಥಿನಿ

**ಬಾಗಲಕೋಟೆ:** ಉತ್ತಮ ಫಲಿತಾಂಶ ಪಡೆದಿದ್ದರೂ ಹಾಸ್ಟೆಲ್‌ಗೆ ಆಯ್ಕೆಯಾಗದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿ ಸನ್ಮಾನ ತಿರಸ್ಕರಿಸಿ ಜಿಲ್ಲಾ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ಬೇಸರ ವ್ಯಕ್ತ ಪಡಿಸಿರುವ ಘಟನೆ ಸಚಿವರ ಸ್ವ-ಕ್ಷೇತ್ರವಾದ ಮುಧೋಳ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ ನಡೆದಿದೆ.

ಹೆಬ್ಬಾಳ ಪಿಕೆಪಿಎಸ್‌ನ ಆಡಳಿತ ಮಂಡಳಿಯಿಂದ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಪೆಟ್ಲೂರ ಗ್ರಾಮದ ಐಶ್ವರ್ಯ ಪಾಯಗೊಂಡ ಬೇಸರ ವ್ಯಕ್ತಪಡಿಸಿದ್ದಾರೆ. ನನಗೆ ಎಸ್ಸೆಸ್ಸೆಲ್ಸಿಯಲ್ಲಿ ಶೇ.88 ರಷ್ಟು ಅಂಕ ಬಂದಿದೆ. ಸಚಿವ ತಿಮ್ಮಾಪುರ ಅವರ ಕಡೆಯಿಂದ ಹೇಳಿಸಿದಾಗ ಮಾತ್ರ ಬಿಸಿಎಂ ಹಾಸ್ಟೆಲ್‌ಗೆ ಸೀಟ್ ನೀಡಲಾಗುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ ಹೀಗಾದರೇ ನಮ್ಮಂತಹ ಬಡ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ ಎಂದು ಆಕ್ರೋಶ ವ್ಯಕ್ತ ಪಡಿಸಿದ್ದಾಳೆ.

ತಿಮ್ಮಾಪುರ ಸಾಹೇಬರ್ ಕಚೇರಿಗೆ ಹೋದರೆ ನಮ್ಮನ್ನು ಮಾತನಾಡಿಸಲೇ ಇಲ್ಲ. ಶೇ.50ರಿಂದ ಶೇ.55 ಅಂಕ ಪಡೆದವರೂ ಹಾಸ್ಟೆಲ್‌ಗೆ ಆಯ್ಕೆಯಾಗಿದ್ದಾರೆ. ಆದರೆ ನಾವು ಶೇ.90ರಿಂದ ಶೇ.95ರಷ್ಟು ಮಾಡಿದರೂ ಬಸ್‌ನಲ್ಲಿ ತಿರುಗಾಡುತ್ತಿದ್ದೇವೆ. ಇಂತಹ ಕೆಟ್ಟ ರಾಜಕೀಯ ವ್ಯವಸ್ಥೆಯಲ್ಲಿ ಸಿಕ್ಕ ನಮ್ಮಂತ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿದೆ. ನಮ್ಮಗಳ ಕನಸು ಕನಸಾಗಿಯೇ ಉಳಿಯುತ್ತಿದೆ, ನಮಗೆ ಸನ್ಮಾನ ಬೇಡ, ನಮಗೆ ಬೇಕಾದ ಸವಲತ್ತು ಕೊಡಿ ಸಾಕು. ನಾನು ಈ ಸನ್ಮಾನ ತಿರಸ್ಕರಿಸುತ್ತೇನೆ ಎಂದು ಹೇಳಿದ್ದಾಳೆ. ಈ ವಿಡಿಯೊ ಸಾಮಾಜಕ ಜಾಲತಾಣದಲ್ಲಿ ವೈರಲ್ ಆಗಿದ್ದು, ವಿಡಿಯೊವನ್ನು ನೋಡಿದ ಅನೇಕರು ಬಾಲಕಿಯಳ ಅಸಾಯಕತೆ ನೋಡಿ ಬೇಸರ ವ್ಯಕ್ತ ಪಡಿಸುತ್ತಿದ್ದಾರೆ.

ಮುಧೋಳ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ ಪಿಕೆಪಿಎಸ್ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ಐಶ್ವರ್ಯ ಪಾಯಗೊಂಡ ಮಾತನಾಡಿದರು.

### 'ಸಚಿವರ ಶಿಫಾರಸು ಇದ್ದರೆ ಹಾಸ್ಟೆಲ್'

ಉತ್ತಮ ಅಂಕ ಬಂದರೂ ನನಗೆ ಬಿಸಿಎಂ ಹಾಸ್ಟೆಲ್ ಸಿಕ್ಕಿಲ್ಲ. ಅಧಿಕಾರಿಗಳು ರಾಜಕೀಯ ನಾಯಕರ ಕೈಗೊಂಬೆಯಂತೆ ಕೆಲಸ ಮಾಡುತ್ತಿದ್ದಾರೆ. ಹಾಸ್ಟೆಲ್ ವಿಚಾರವಾಗಿ ಅಧಿಕಾರಿಗಳನ್ನು ಕೇಳಿದರೆ ಉತ್ತಮ ಅಂಕ ಪಡೆದರೇ ಆಗುವುದಿಲ್ಲ. ತಿಮ್ಮಾಪುರ ಸಾಹೇಬ್ರು ಹೇಳಿದರೆ ಮಾತ್ರ ಆಯ್ಕೆ ಮಾಡುತ್ತೇವೆ ಎಂದು ಹೇಳಿದ್ದಾರೆ ಎಂದು ಅಧಿಕಾರಿಗಳ ವಿರುದ್ಧ ಐಶ್ವರ್ಯಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಡಿಸಿಗೂ ಬಿಟ್ಟಿಲ್ಲ ಬೀದಿನಾಯಿಗಳ ಕಾಟ

## ಏಡ್ಸ್ ಬಂದ್ರೂ 10-15 ವರ್ಷ ಬದುಕಬಹುದು | ನಾಯಿ ಕಡಿತ ಅದಕ್ಕಿಂತಲೂ ಗಂಭೀರ

**ದಾವಣಗೆರೆ:** ನಗರದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಳವಾಗಿದ್ದು, ಜನರು ರಸ್ತೆಯಲ್ಲಿ ಓಡಾಡುವುದಕ್ಕೂ ಭಯ ಪಡುವಂತಾಗಿದೆ. ಇನ್ನೂ ದಾವಣಗೆರೆ ಜಿಲ್ಲಾಧಿಕಾರಿಗಳನ್ನೇ ಬಿಡದೇ ಬೀದಿ ನಾಯಿಗಳು

ಅಟ್ಟಾಡಿಸಿಕೊಂಡು ಬಂದಿದ್ದು, ಅವುಗಳನ್ನು ಕಲ್ಲು ಹೊಡೆದು ಓಡಿಸಿದ್ದೇನೆ ಎಂದು ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಜಿ.ಎಂ ಗಂಗಾಧರಸ್ವಾಮಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ. ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಈ ವೇಳೆ, ಜಿಲ್ಲೆಯಲ್ಲಿ ವರ್ಷಕ್ಕೆ 5 ರಿಂದ 6 ಸಾವಿರ ಜನರು ಬೀದಿ ನಾಯಿಗಳ ದಾಳಿಗೆ ತುತ್ತಾಗುತ್ತಿದ್ದಾರೆ. ನನಗೂ ಅದರ ಅನುಭವ ಆಗಿದೆ. ಬೆಳಗ್ಗೆ ಜಾಗಿಂಗ್ ಹೋಗುತ್ತಿದ್ದಾಗ ಐದಾರು ನಾಯಿಗಳು ನನ್ನನ್ನು ಅಟ್ಟಾಡಿಸಿಕೊಂಡು ಬಂದಿದ್ದವು. ಅವುಗಳನ್ನು ನಾನು ಕಲ್ಲು ತೆಗೆದುಕೊಂಡು ಓಡಿಸಿದ್ದೆ ಎಂದು ಹೇಳಿದ್ದಾರೆ.

### ಎನ್‌ಜಿಒ ಜತೆ ಮಾತುಕತೆ

ಈಗಾಗಲೇ ಬೀದಿ ನಾಯಿಗಳ ಹಾವಳಿಯನ್ನು ತಪ್ಪಿಸಲು ಸಭೆ ಕರೆಯಲಾಗಿದೆ. ನಗರ ಹಾಗೂ ತಾಲೂಕು ಮಟ್ಟದಲ್ಲಿ ಕೂಡ ಸಭೆ ನಡೆಸಲಾಗಿದೆ. ಏಡ್ಸ್ ಕಾಯಿಲೆ ಬಂದರೂ 10-50 ವರ್ಷ ಮನುಷ್ಯ ಬದುಕುತ್ತಾನೆ. ಆದರೆ ನಾಯಿ ಕಡಿತ ಅದಕ್ಕಿಂತ ಗಂಭೀರವಾದದ್ದು. ಅದಕ್ಕೆ ಔಷಧಿಯೇ ಇಲ್ಲ ಹಾಗಾಗಿ ತಡೆಗಟ್ಟಲು ಅಗತ್ಯವಾದ ಕ್ರಮ ಕೈಗೊಳ್ಳಲಾಗಿದೆ. ನಾಯಿಗಳನ್ನು ಕೊಲ್ಲಲು ಬರುವುದಿಲ್ಲ. ಹಾಗಾಗಿ ಎನ್‌ಜಿಒ ಜತೆ ಮಾತನಾಡಲಾಗಿದೆ ಅವುಗಳನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

# ಏಕತಾ ಸಮಾವೇಶದಲ್ಲಿ ನಮ್ಮ ಸಮಾಜದವರೂ ಭಾಗವಹಿಸಬಾರದು

**ಬೆಳಗಾವಿ:** ರಾಜ್ಯ ಸರಕಾರ ನಡೆಸಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಮಯದಲ್ಲಿ ಲಿಂಗಾಯತ ಪಂಚಮಸಾಲಿ ಎಂದೇ ಬರೆಸಬೇಕು. ಹುಬ್ಬಳ್ಳಿಯಲ್ಲಿ ನಡೆಯುವ ಏಕತಾ

ಸಮಾವೇಶದಲ್ಲಿ ಸಹ ಸಮಾಜದ ಯಾರೊಬ್ಬರೂ ಭಾಗವಹಿಸ ಬಾರದು ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಕರೆ ನೀಡಿದರು. ಬೆಳಗಾವಿಯಲ್ಲಿ ಮಾತನಾಡಿದ ಅವರು, ಈ ವಿಷಯದಲ್ಲಿ ಪಂಚಮಸಾಲಿ ವಕೀಲರ ಪರಿಷತ್ ಸಾಕಷ್ಟು ಚರ್ಚೆ, ಸಭೆ ಮಾಡಿ ನಿರ್ಣಯ ಕೈಗೊಂಡಿದೆ. ಯಾವುದೇ ಕಾರಣಕ್ಕೂ ಮಹಾಸಭೆಯ, ಮಠಾಧೀಶರ ಹಾಗೂ ಸಂಘ ಸಂಸ್ಥೆಗಳ ಮಾತುಗಳನ್ನು ಕೇಳಬೇಡಿ. ಪಂಚಮಸಾಲಿ ಗುರುಗಳು, ಪಂಚಮಸಾಲಿ ಸಂಘದ ಅಧ್ಯಕ್ಷರು ನೀಡುವ ಸಂದೇಶ ಪಾಲಿಸಬೇಕು ಎಂದರು.

# ಚುನಾವಣಾ ಆಯೋಗ ಬಿಜೆಪಿ ಕೈಗೊಂಬೆಯಾಗಿದೆ: ಸಚಿವ ರಾಮಲಿಂಗಾರೆಡ್ಡಿ

**ಬೆಂಗಳೂರು:** ಚುನಾವಣಾ ಆಯೋಗ ಬಿಜೆಪಿ ಕೈಗೊಂಬೆಯಾಗಿದ್ದು, ಪ್ರಧಾನಿ ಹೇಳಿದಂತೆ ಕೇಳುತ್ತಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿಯವರು ಮತಗಳವು ಆರೋಪವನ್ನು ಮಾಡಿದ್ದಾರೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಮೂರನೇ ಅವಧಿಯಲ್ಲಿ ಜನಪ್ರಿಯತೆ ಕಡಿಮೆಯಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ಹವಾ ಕೂಡ ಕಡಿಮೆಯಾಗಿದ್ದು, ವಿರೋಧಪಕ್ಷಗಳ ಮತ ತೆಗೆದು ಹಾಕುವ ಕೆಲಸ ಮಾಡಲಾಗುತ್ತಿದೆ ಎಂದು ಆಪಾದಿಸಿದರು. ಬಿಜೆಪಿ ಅಧಿಕಾರ ಇರುವ ಕಡೆ ಇದು ಹೆಚ್ಚು ನಡೆಯುತ್ತದೆ. ಈ ರೀತಿ ಮಾಡದಿದ್ದರೆ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುತ್ತಿರಲಿಲ್ಲ. ಗಾಂಧಿನಗರ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಹೆಸರು ಬಳಸಲಾಗಿದೆ. ಇಂತಹುದನ್ನು ಮಾಡುವ ಮೂಲಕ ಬಿಜೆಪಿಯವರು ಅಧಿಕಾರಕ್ಕೆ ಬರುತ್ತಿದ್ದಾರೆ ಎಂದು ಟೀಕಿಸಿದರು.

# ಜೈಲಿನ ಮೇಲೆ ಸರಕಾರದ ಹದ್ದಿನ ಕಣ್ಣು

## 16.75 ಕೋಟಿ ವೆಚ್ಚದಲ್ಲಿ ಕಾಲ್ ಬ್ಲಾಕಿಂಗ್ ಅಳವಡಿಕೆ | ಸರಕಾರಿ ಶಾಲೆಗಳಿಗೆ ಹೊಸ ಅಡುಗೆ ಪಾತ್ರೆ

**ಬೆಂಗಳೂರು:** ಜೈಲುಗಳಲ್ಲಿ ಕೈದಿಗಳ ಮೊಬೈಲ್ ಬಳಕೆ, ವಿಧ್ವಂಸಕಾರಿ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ಸರಕಾರ 16.75 ಕೋಟಿ ರು. ವೆಚ್ಚದಲ್ಲಿ ಕಾಲ್ ಬ್ಲಾಕಿಂಗ್ ಸಿಸ್ಟಮ್ಸ್ ಅಳವಡಿಸಲು ತೀರ್ಮಾನಿಸಿದೆ.



ಸಚಿವ ಸಂಪುಟ ಸಭೆಯ ನಂತರ ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಹಿತಿ ನೀಡಿ, ಕೇಂದ್ರ ಕಾರಾಗೃಹಗಳಾದ ಬಳ್ಳಾರಿ, ವಿಜಯಪುರ, ಧಾರವಾಡ, ಶಿವಮೊಗ್ಗ, ಬೆಳಗಾವಿ, ಮೈಸೂರು, ಕಲಬುರಗಿ ಮತ್ತು ತುಮಕೂರು ಜಿಲ್ಲಾ ಕಾರಾಗೃಹಗಳಲ್ಲಿ ಒಟ್ಟು 16.75 ಕೋಟಿ ಮೊತ್ತದಲ್ಲಿ 10 ಕಾಲ್ ಬ್ಲಾಕಿಂಗ್ ಸಿಸ್ಟಮ್‌ಗಳನ್ನು ಅಳವಡಿಸಲಾಗುವುದು. ಮೊಬೈಲ್ ಟವರ್‌ಗಳನ್ನು ಅಳವಡಿಸಲು ಮತ್ತು 5 ವರ್ಷದ ನಿರ್ವಹಣೆಯನ್ನು ಮಾಡುವ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದರು.

ಬೆಂಗಳೂರಿನ ದಾಸನಪುರ, ಕೋಲಾರ, ಮೈಸೂರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ತಲಾ ಒಂದು 50 ಟಿಪಿಡಿ ಜೈವಿಕ ಘಟಕವನ್ನು 74.88 ಕೋಟಿ ರು.(ಪ್ರತಿ ಘಟಕಕ್ಕೆ ರೂ.24.96 ಕೋಟಿ) ಅಂದಾಜು ಮೊತ್ತದಲ್ಲಿ ಸ್ಥಾಪಿಸಲಾಗುವುದು. ಮಾರುಕಟ್ಟೆ ಪ್ರಾಂಗಣದಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಈ ತ್ಯಾಜ್ಯದಿಂದ ಬಯೋ ಸಿಎನ್‌ಜಿ ಉತ್ಪಾದಿಸಲಾಗುವುದು ಎಂದರು.

ಸರಕಾರಿ ಕೈಗಾರಿಕೆ ತರಬೇತಿ ಸಂಸ್ಥೆಗಳಲ್ಲಿ ಅನುಷ್ಠಾನಗೊಂಡಿರುವ ಫಿಟ್ಟರ್ ಮತ್ತು ಎಲೆಕ್ಟ್ರೀಷಿಯನ್ ವೃತ್ತಿಗಳಿಗೆ ಡಿಜಿಟಿ ಪಠ್ಯಕ್ರಮದಂತೆ ಅಗತ್ಯವಿರುವ ಉಪಕರಣ ಮತ್ತು ಯಂತ್ರೋಪಕರಣಗಳ ಖರೀದಿಗೆ 50 ಕೋಟಿ ರು., ರಾಜ್ಯದ 9337 ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಸಿದ್ಧಪಡಿಸಲು ಹೊಸ ಪಾತ್ರೆ, ಪರಿಕರಗಳನ್ನು ಸಿದ್ಧಪಡಿಸಲು 21.55 ಕೋಟಿ ರು. ಅಂದಾಜು ಮೊತ್ತದಲ್ಲಿ ಪರಿಕರಗಳನ್ನು ಖರೀದಿ, ಆರ್‌ಡಿಪಿಆರ್ ವಿಶ್ವವಿದ್ಯಾಲಯ ಆವರಣದಲ್ಲಿ ಅಭಿವೃದ್ಧಿ ಕಾಮಗಾರಿಗೆ 48.43 ಕೋಟಿ, ಗದಗ ಜಿಲ್ಲೆಯ ರೋಣ ತಾಲೂಕಿನ ನೀರಾವರಿ ಯೋಜನೆಗೆ 43.50 ಕೋಟಿ, ಇಟಗಿ ವಿತರಣಾ ಕಾಲುವೆ ಗಳ ಆಧುನೀಕರಣ ಕಾಮಗಾರಿಗೆ 31.08 ಕೋಟಿ, ಛಲವಾದಿ ಸಮುದಾಯ ಭವನಕ್ಕೆ 22.33 ಕೋಟಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಸ್ಪೇಸ್‌ಟೆಕ್ ಕೇಂದ್ರ ಸ್ಥಾಪಿಸಲು ಒಪ್ಪಿಗೆ:** ಮುಂದಿನ ಒಂದೂವರೆ ವರ್ಷಗಳ ಅವಧಿಯಲ್ಲಿ 10 ಕೋಟಿ ವೆಚ್ಚದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ (ಸ್ಪೇಸ್ ಟೆಕ್) ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶ್ರೇಷ್ಠತಾ ಕೇಂದ್ರ ಸ್ಥಾಪಿಸಲು ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

### ಪ್ರಮುಖಾಂಶ

- ಬಂಗಾರಪೇಟೆ ಪುರಸಭೆಯಿಂದ ನಗರಸಭೆಗೆ ಮೇಲ್ದರ್ಜೆ
- ವಿಜಯಪುರ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಕಾಮಗಾರಿಗಳಿಗೆ 618.75 ಕೋಟಿ ರು.
- ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ಕರ್ನಾಳ್ ಏತ ನೀರಾವರಿ ಯೋಜನೆಗೆ 50.75 ಕೋಟಿ ರು.
- ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕಾರ್ಡಿಯಾಕ್ ಯೂನಿಟ್ ಆರಂಭಿಸಲು 10.89 ಕೋಟಿ ರು.

ಈ ಬಾರಿ ಬಜೆಟ್‌ನಲ್ಲಿ ಸಿಎಂ ಪ್ರಕಟಿಸಿದಂತೆ ಸರಕಾರ ಈ ನಿರ್ಧಾರವನ್ನು ತೆಗೆದುಕೊಂಡಿದ್ದು, ಉದ್ದೇಶಿತ ಕೇಂದ್ರವು ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಸಮಗ್ರ ಸಂಶೋಧನೆ ಮತ್ತು ನಾವೀನ್ಯತೆ

ಪರಿಸರ ವ್ಯವಸ್ಥೆಯನ್ನು ಬೆಳೆಸುವುದು, ವೇಗವರ್ಧನೆ ಸ್ಟಾರ್ಟ್‌ಅಪ್ ಇನ್ಕ್ಯುಬೇಷನ್ ಮತ್ತು ಉದ್ಯಮಶೀಲತೆ ಪ್ರೋತ್ಸಾಹಿಸುವುದು, ಕೌಶಲ ಅಭಿವೃದ್ಧಿ ಮತ್ತು ಕಾರ್ಯಪಡೆಯ ಸಾಮರ್ಥ್ಯವನ್ನು ಹೆಚ್ಚಿಸುವುದು, ಕಾರ್ಯತಂತ್ರದ ಉದ್ಯಮ-ಶೈಕ್ಷಣಿಕ-ಆಡಳಿತ ಸಹಯೋಗವನ್ನು ಉತ್ತೇಜಿಸುವುದು, ತಂತ್ರಜ್ಞಾನ ಅಳವಡಿಕೆ ಮತ್ತು ವಾಣಿಜ್ಯೀಕರಣವನ್ನು ಚಾಲನೆ ಮಾಡುವುದು, ಜಾಗತಿಕ ಸಂಪರ್ಕಗಳು ಮತ್ತು ಮಾರುಕಟ್ಟೆ ವಿಸ್ತರಣೆಯನ್ನು ಹೆಚ್ಚಿಸುವುದು, ನೀತಿ ನಾವೀನ್ಯತೆ ಮತ್ತು ನಿಯಂತ್ರಕ ವಕಾಲತ್ತುಗಳನ್ನು ಬೆಂಬಲಿಸುವುದು, ಜ್ಞಾನ ಪ್ರಸರಣ ಮತ್ತು ಚಿಂತನೆಯ ನಾಯಕತ್ವವನ್ನು ಸಕ್ರಿಯಗೊಳಿಸುವುದು, ಆರ್ಥಿಕ ಬೆಳವಣಿಗೆ ಮತ್ತು ಜಾಗತಿಕ ಸ್ಪರ್ಧಾತ್ಮಕತೆಯನ್ನು ವೇಗಗೊಳಿಸುವ ಗುರಿಯನ್ನು ಹೊಂದಿದೆ. ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ, ಸಂಶೋಧನೆ, ಉತ್ಪನ್ನ ಅಭಿವೃದ್ಧಿ, ಕೈಗಾರಿಕೆ-ಶೈಕ್ಷಣಿಕ-ಪ್ರಾರಂಭಿಕ ಸಹಯೋಗ, ಕಾರ್ಯಾಗಾರಗಳು ಮತ್ತು ನೀತಿ ಸಂವಾದಗಳು ನಾವೀನ್ಯತೆ ಪ್ರಯೋಗಾಲಯ ಸೇರಿ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಬಾಹ್ಯಾಕಾಶ ವಲಯದಲ್ಲಿ ತಾಂತ್ರಿಕ ಶ್ರೇಷ್ಠತೆ, ಆರ್ಥಿಕ ಬೆಳವಣಿಗೆ ಮತ್ತು ಜಾಗತಿಕ ಸ್ಪರ್ಧಾತ್ಮಕತೆಯನ್ನು ಚಾಲನೆ ಮಾಡುವ ದೃಢವಾದ, ಭವಿಷ್ಯಕ್ಕೆ ಸಿದ್ಧವಾದ ಪರಿಸರ ವ್ಯವಸ್ಥೆಯನ್ನು ರಚಿಸಲು ಶ್ರೇಕೇಂದ್ರವು ಗುರಿಯನ್ನು ಹೊಂದಿದೆ ಎಂದು ಹೇಳಿದರು.

### ವಿಜಯಪುರ ವಿಮಾನ ನಿಲ್ದಾಣ ಅಭಿವೃದ್ಧಿಗೆ ಅನುದಾನ

ವಿಜಯಪುರ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣದ ಅಭಿವೃದ್ಧಿ ಕಾರ್ಯಗಳಿಗಾಗಿ 618.75 ಕೋಟಿ ರು.ಗಳ ಪರಿಷ್ಕೃತ ಅಂದಾಜುಗೆ ರಾಜ್ಯ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ. ಎಟಿಆರ್ ವಿಮಾನಗಳ ಬದಲಿಗೆ ದೊಡ್ಡ ವಿಮಾನಗಳ ಲ್ಯಾಂಡಿಂಗ್‌ಗೆ ಅನುಕೂಲವಾಗುವಂತೆ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸಲಾಗುವುದು. ಮೂಲತಃ ಅನುಮೋದಿ ಸಲಾದ ವೆಚ್ಚ 347.92 ಕೋಟಿ ರು.ಗಳಾಗಿದ್ದು, ಹೆಚ್ಚುವರಿ ಅಂದಾಜು ವೆಚ್ಚ 270.08 ಕೋಟಿ ರು.ಗಳಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ವಿವರಿಸಿದರು.

### ಜಾತಿ ದೌರ್ಜನ್ಯ: ಮೃತರ ಆಶ್ರಿತರಿಗೆ ಸರಕಾರಿ ಹುದ್ದೆ

ಇನ್ನು ಜಾತಿ ತಾರತಮ್ಯದಿಂದ ದೌರ್ಜನ್ಯಕ್ಕೊಳಗಾಗಿ ಮೃತಪಟ್ಟ ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದ ವ್ಯಕ್ತಿಗಳ ಕುಟುಂಬಸ್ಥರಿಗೆ ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ಸರಕಾರಿ ಉದ್ಯೋಗ ನೀಡಲು ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಸಂಬಂಧ ನಿಯಮ ತಿದ್ದುಪಡಿ ತರಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಇದರೊಂದಿಗೆ ಬಡ್ತಿ ಪಡೆಯಲು ಅಧಿಕಾರಿಗಳು, ಉದ್ಯೋಗಿಗಳಿಗೆ ತರಬೇತಿಯನ್ನು ಕಡ್ಡಾಯಗೊಳಿಸುವ ಬಗ್ಗೆಯೂ ಸಂಪುಟ ಚರ್ಚಿಸಿದೆ. ಈ ನಿಟ್ಟಿನಲ್ಲಿ ಕರಡು ನಿಯಮಗಳನ್ನು ಸಿದ್ಧಪಡಿಸಲು ಮತ್ತು ಅಂತಿಮಗೊಳಿಸುವ ಮೊದಲು ಅಭಿಪ್ರಾಯವನ್ನು ಪಡೆಯಲು ನಿರ್ಧರಿಸಲಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ಹೇಳಿದರು.

ವಿಶ್ವವಾಣಿ

## ಸಂಪಾದಕೀಯ

### ಅಪ್ಪಾ... ಐ ಹೇಟ್ ಯೂ ಪಾ!

ಬೆಂಗಳೂರಿನಲ್ಲಿ ವರದಿಯಾಗಿರುವ ಈ ಸುದ್ದಿಯು ಸಹೃದಯಿಗಳ ಮನವನ್ನು ಇನ್ನಿಲ್ಲದಂತೆ ಕಲಕಿದೆ. ಇದು ನಾಗರಿಕ ಸಮಾಜವು ಕಲ್ಪಿಸಿಕೊಳ್ಳುವುದಕ್ಕೂ ಆಗದ ಸುದ್ದಿಯೂ ಹೌದು. ಕುಡಿತಕ್ಕೆ ದಾಸನಾಗಿದ್ದು, ನಿರುದ್ಯೋಗಿಯೂ ಆಗಿದ್ದ 'ಅಪ್ಪ' ಎನಿಸಿಕೊಂಡ ವ್ಯಕ್ತಿ, ತನ್ನ ಪತ್ನಿಯು ವಾಡಿಕೆಯಂತೆ ಗಾರ್ಮೆಂಟ್ಸ್ ಕೆಲಸಕ್ಕೆಂದು ಹೋದ ಸಂದರ್ಭದಲ್ಲಿ, ಅಪ್ರಾಪ್ತ ವಯಸ್ಕ ಮಗಳ ಮೇಲೆಯೇ ಲೈಂಗಿಕ ದೌರ್ಜನ್ಯವನ್ನು ಎಸಗುತ್ತಿದ್ದನಂತೆ. ಪೋಕ್ಸೋ ಕಾಯಿದೆಯಡಿ ದಾಖಲಾಗಿದ್ದ ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯವು, ಅಪರಾಧಿ ತಂದೆಗೆ 5 ವರ್ಷಗಳ ಸಾದಾ ಜೈಲುಶಿಕ್ಷೆಯನ್ನು ವಿಧಿಸಿದೆ. 'ಕಾಮಾತುರಾಣಾಂ ನ ಭಯಂ, ನ ಲಜ್ಜಾ' ಎಂಬ ಗ್ರಹಿಕೆಗೆ ಪುಷ್ಟಿ ನೀಡುವಂತೆ ನಡೆದುಕೊಂಡಿರುವ ಈ ಆಸಾಮಿ, 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಂಬ ಶ್ಲೋಕವನ್ನು ಪ್ರಾಯಶಃ ಕೇಳಿಸಿಕೊಂಡಿಲ್ಲ ಎನಿಸುತ್ತದೆ. 'ಎಲ್ಲಿ ಸ್ತ್ರೀಯರನ್ನು ಗೌರವಿಸಲಾಗುತ್ತದೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ' ಎಂಬುದು ಈ ಶ್ಲೋಕದ ಸ್ಥೂಲ ಅರ್ಥ. ಮಹಿಳೆಯರಿಗೆ ನೀಡಬೇಕಾದ ಗೌರವ ಮತ್ತು ಪ್ರಾಮುಖ್ಯದ ಕುರಿತು ಒತ್ತಿಹೇಳುವ ಈ ಶ್ಲೋಕವು, ಮಹಿಳೆಯರನ್ನು ಸರಿಯಾಗಿ ನಡೆಸಿಕೊಳ್ಳದಿದ್ದರೆ ಪ್ರಯತ್ನಗಳು ಫಲಪ್ರದವಾಗುವುದಿಲ್ಲ ಎಂದೂ ತಿಳಿಹೇಳುತ್ತದೆ. ಆದರೆ, ಕಾಮಾಂಧರಿಗೆ ಇಂಥ ನೀತಿಪಾಠವು ಹೇಗೆ ತಾನೇ ನಾಟೀತು?! ಮನೆಮಗಳ ಮೇಲೆ ಹಾದಿಬೀದಿಯ ಪುಂಡರು-ಪೋಕರಿಗಳು ಕಣ್ಣುಹಾಕಿ ಕಿರಿಕಿರಿ ನೀಡಿದರೆ, ಲೈಂಗಿಕ ದೌರ್ಜನ್ಯಕ್ಕೆ ಮುಂದಾದರೆ, ಅವರನ್ನು ಬಡಿದೋಡಿಸಿ ಸ್ವಂತ ಮಗಳ ಪಾಲಿಗೆ ಗುರಾಣಿಯಾಗಬೇಕಾದ ಅಪ್ಪನೇ ಅವಳನ್ನು ಹುರಿದು ಮುಕ್ಕುವ ಹದ್ದಾಗಿ ಪರಿಣಮಿಸಿದರೆ, ಆಕೆ ಯಾರನ್ನು ಆಪ್ತರಕ್ಷಕ ಎಂದಾಳು?! ತನ್ನ ಜನ್ಮವನ್ನೇ ಛಿದ್ರಗೊಳಿಸುವ ಅಪ್ಪನನ್ನು ಮಗಳು ಹೇಗೆ ತಾನೇ 'ಜನ್ಮದಾತ' ಎಂದಾಳು, 'ಅಪ್ಪಾ' ಎಂದು ಬಾಯಿತುಂಬಾ ಕರೆದಾಳು?! ಥೇ, ಕುರುಳಿನ ಕುಡಿಯ ಮೇಲೆಯೇ ಕೇಡುಬಗೆಯುವ ಇಂಥ ದುರುಳರಿಗೆ ಧಿಕ್ಕಾರವಿರಲಿ...

## ಸೊಂಪಾದಕೀಯ

### 'ನಾಯಿ'ಸ್ ಪಲ್ಯೂಷನ್, ಸಲ್ಯೂಷನ್

ಬೆಂಗಳೂರಿನಲ್ಲಿ ಈಗ ನಾಯಿಕಾಟ ಹೆಚ್ಚಾಗಿದೆ. ಟ್ರಾಫಿಕ್‌ನಲ್ಲಿ ನಾಯ್ಸ್ ಪಲ್ಯೂಷನ್‌ನಿಂದ ಬೇಸತ್ತಿದ್ದ ಜನರಿಗೆ 'ನಾಯಿ'ಸ್ ಪಲ್ಯೂಷನ್ ಕೂಡಾ ತಲೆನೋವಾಗಿದೆ. ಇದಕ್ಕೆ ಸಲ್ಯೂಷನ್ ಕಂಡುಹಿಡಿಯೋದು ಎಲ್ಲರಿಗೂ ಕಷ್ಟವಾಗಿದೆ. ಹೆಂಗಸರು-ಮಕ್ಕಳ ಮೇಲೆ ನಾಯಿಗಳು ಅಟ್ಯಾಕ್ ಮಾಡುವ ಘಟನೆಗಳು ಹೆಚ್ಚಾಗುತ್ತಿದ್ದಂತೆ, ನಾಯಿಗಳಿಗೆ ಸಪರೇಟ್ ಶೆಡ್ ಮಾಡಿ ಕೂಡಿಹಾಕುವ ಯೋಚನೆ ಎದುರಾಗಿತ್ತು. ಅದಕ್ಕೂ ಪ್ರಾಣಿದಯಾ

ಸಂಘದವರ ಕಿರಿಕಿರಿ. ಆದರೂ ಅಧಿಕಾರಿಗಳು ಈಗ ಬೀದಿನಾಯಿಗಳಿಗೆ ಸಂಬಂಧಪಟ್ಟಂತೆ ಕೆಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಇನ್ನು ಮುಂದೆ ನಾಯಿಗಳನ್ನು ದತ್ತು ತೆಗೆದುಕೊಂಡು ಸಾಕುವವರು ಅವುಗಳನ್ನು ಬೀದಿಗೆ ಬಿಡಲ್ಲ ಅಂತ ಮುಚ್ಚಳಿಕೆ ಬರೆದುಕೊಡಬೇಕಾಗಿದೆ. ಅಲ್ಲದೆ ಅವುಗಳಿಂದ ಏನಾದರೂ ತೊಂದರೆ ಆದರೆ ಅದರ ಮಾಲೀಕರೇ ಜವಾಬ್ದಾರರು ಅಂತ ಫರ್ಮಾನು ಹೊರಡಿಸಲಾಗಿದೆ. ಇನ್ನು ನಾಯಿ ಹಾವಳಿ ಕಂಟ್ರೋಲ್ ಮಾಡಲು ಇನ್ನೊಂದು ವಿಚಿತ್ರವಾದ ನಿಯಮ ಬಂದಿದೆ. ನಾಯಿಯೊಂದು ಎರಡನೇ ಬಾರಿ ಯಾರಿಗಾದರೂ ಕಚ್ಚಿದರೆ ಅದಕ್ಕೆ ಜೀವಾವಧಿ ಶಿಕ್ಷೆ ಎಂದು ಆರ್ಡರ್ ಮಾಡಲಾಗಿದೆ. ಹೆಚ್ಚು ಕಮ್ಮಿ ಇದರ ಅರ್ಥ ಏನೆಂದರೆ ಒಂದು ನಾಯಿ ಯಾರಿಗಾದರೂ ಒಮ್ಮೆ ಕಚ್ಚಿದರೆ ಅದನ್ನು ರೌಡಿ ಶೀಟರ್ ಪಟ್ಟಿಗೆ ಸೇರಿಸಲಾಗುತ್ತದೆ. ಅಪರಾಧದ ಪುನರಾವರ್ತನೆಯಾಗಿ ನಾಯಿಯ ವರ್ತನೆ ಸರಿಹೋಗದಿದ್ದಲ್ಲಿ ಅದನ್ನು ಜೀವನ ಪರ್ಯಂತ ಶೆಡ್‌ನಲ್ಲಿ ಕೂಡಿಹಾಕುವ ಶಿಕ್ಷೆ ಕೊಡಲಾಗುತ್ತದೆ. ಇದನ್ನು ನೋಡಿದರೆ ಒಂದು ಬಾರಿ ಉಲ್ಲಂಘಿಸಿದರೆ ದಂಡ, ಎರಡನೇ ಬಾರಿ ರಿಪೀಟ್ ಆದರೆ ಜೈಲುಶಿಕ್ಷೆ ಅನ್ನುವ ನಮ್ಮ ಟ್ರಾಫಿಕ್ ನಿಯಮಗಳು ನೆನಪಾದರೆ ಅಚ್ಚರಿಯಿಲ್ಲ. ಹಾಗಾಗಿ ಬೀದಿ ಎಲ್ಲಾ ನಮ್ಮದೇ ಎನ್ನುವಂತೆ ದುಂಡಾವರ್ತನೆ ತೋರುವ ನಾಯಿಗಳಿಗೆ ಇದು ಎಚ್ಚರಿಕೆಯ ಗಂಟೆ ಆಗಿದೆ. ಈ ಮೂಲಕ, 'ನಾಯಿಗಳ ಕೊರಳಿಗೆ ಗಂಟೆ ಕಟ್ಟುವವರು ಯಾರು?' ಅನ್ನೋ ಪ್ರಶ್ನೆಗೆ ಉತ್ತರ ಸಿಕ್ಕಿದೆ. 'ಕಮ್' ಅಂದ್ರೆ ಬರುವ, 'ಸಿಟ್' ಅಂದ್ರೆ ಕೂರುವ ಮನೆನಾಯಿಗಳಿಗೆ, 'ಫ್ರೆಂಡ್ಲಿ ಡಾಗ್'ಗಳಿಗೆ ಇದರಿಂದ ತೊಂದರೆ ಇಲ್ಲ. ಆದರೆ, 'ಎಲ್ಲಿ ಜೀವನ ನಡೆವುದೋ ಅದೇ ನಮ್ಮೂರು, ಯಾರು ಊಟ ಹಾಕುವರೋ ಅವರೆ ನಮ್ಮೋರು' ಅಂತ ಬೀದಿಯಲ್ಲಿ ಬಿಂದಾಸ್ ಆಗಿ ಓಡಾಡಿಕೊಂಡಿರುವ ನಾಯಿಗಳಿಗೆ ಮಾತ್ರ ಈಗ ನಾಯಿಪಾಡು ಬಂದಿದೆ ಎನ್ನಬಹುದು!

## ಸಂಪಾದಕರ ಸದ್ಯಶೋಧನೆ

### ದುರಂತದಿಂದ ಕಲಿತ ಪಾಠ

1977ರ ಮಾರ್ಚ್ 27, ವಿಮಾನಯಾನ ಇತಿಹಾಸದ ಅತ್ಯಂತ ದುಃಖಕರ ದಿನ. ಕೆನರಿ ದ್ವೀಪಗಳಲ್ಲಿನ ಟೆನೆರಿಫ್‌ನ ಲಾಸ್ ರೋಡಿಯೋಸ್ ವಿಮಾನ ನಿಲ್ದಾಣದಲ್ಲಿ, ದಟ್ಟವಾದ ಮಂಜಿನ ನಡುವೆ ಎರಡು ಬೋಯಿಂಗ್ 747 ವಿಮಾನಗಳು- ಒಂದು ಕೆಎಲ್‌ಎಂ ವಿಮಾನ ಮತ್ತು ಇನ್ನೊಂದು ಪಾನ್ ಆಮ್ ವಿಮಾನ- ರನ್‌ವೇ ಮೇಲೆ ಡಿಕ್ಕಿ ಹೊಡೆದವು. ಈ ದುರಂತದಲ್ಲಿ ಒಟ್ಟು 583 ಜನರು ಪ್ರಾಣ ಕಳೆದುಕೊಂಡರು. ಇದು ವಿಮಾನಯಾನ ಇತಿಹಾಸದ ಅತಿ ಭೀಕರ ಅಪಘಾತವಾಗಿದೆ. ಈ ದುರಂತಕ್ಕೆ ಕಾರಣಗಳೇನು? ಅಂದು ವಿಪರೀತ ದಟ್ಟವಾದ ಮಂಜು ಕವಿದಿತ್ತು. ಇದರಿಂದ ಏರ್ ಟ್ರಾಫಿಕ್ ಕಂಟ್ರೋಲ್ (ಎಟಿಸಿ) ಟವರ್‌ಗೆ ರನ್‌ವೇ ಮೇಲೆ ವಿಮಾನಗಳನ್ನು ನೋಡಲು ಸಾಧ್ಯವಾಗಲಿಲ್ಲ. ಹಾಗಾಗಿ ರನ್‌ವೇಯಲ್ಲಿ ಏನು ನಡೆಯುತ್ತಿದೆ ಎಂಬುದು ಎಟಿಸಿಗೆ ತಿಳಿಯಲಿಲ್ಲ. ವಿಮಾನದ ಪೈಲಟ್‌ಗಳು ಮತ್ತು ಏರ್ ಟ್ರಾಫಿಕ್ ಕಂಟ್ರೋಲ್ ನಡುವಿನ ರೇಡಿಯೋ ಸಂಭಾಷಣೆ ಸರಿಯಾಗಿರಲಿಲ್ಲ. ಒಂದೇ ಸಮಯದಲ್ಲಿ ಅನೇಕ ಸಂದೇಶಗಳು ರವಾನೆಯಾಗಿ ಗೊಂದಲ ಉಂಟಾಯಿತು. ಪಾನ್ ಆಮ್ ವಿಮಾನವು ಇನ್ನೂ ರನ್‌ವೇ ಮೇಲೆ ಇರುವಾಗ, ಕೆಎಲ್‌ಎಂ ವಿಮಾನಕ್ಕೆ ಟೇಕಾಫ್ ಮಾಡಲು ಅನುಮತಿ ನೀಡಿದ ಬಗ್ಗೆ ಪೈಲಟ್‌ಗೆ ತಪ್ಪು ಮಾಹಿತಿ ತಲುಪಿತು. ಕೆಎಲ್‌ಎಂ ವಿಮಾನದ ಕ್ಯಾಪ್ಟನ್, ತನಗೆ ಟೇಕಾಫ್ ಮಾಡಲು ಅನುಮತಿ ಸಿಕ್ಕಿದೆ ಎಂದು ಭಾವಿಸಿ, ಪಾನ್ ಆಮ್ ವಿಮಾನ ಇನ್ನೂ ರನ್‌ವೇಯಲ್ಲಿದೆ ಎಂದು ಖಚಿತಪಡಿಸಿಕೊಳ್ಳದೇ ವಿಮಾನವನ್ನು ಚಲಾಯಿಸಲು ಪ್ರಾರಂಭಿಸಿದರು. ಇದೇ ದುರಂತಕ್ಕೆ ಮುಖ್ಯ ಕಾರಣವಾಯಿತು. ಅಂದು ಟೆನೆರಿಫ್ ವಿಮಾನ ನಿಲ್ದಾಣದ ಬಳಿಯ ಮತ್ತೊಂದು ವಿಮಾನ ನಿಲ್ದಾಣದಲ್ಲಿ ಬಾಂಬ್ ಬೆದರಿಕೆ ಇದ್ದ ಕಾರಣ, ಅಲ್ಲಿಗೆ ಹೋಗಬೇಕಿದ್ದ ಅನೇಕ ವಿಮಾನಗಳನ್ನು ಟೆನೆರಿಫ್‌ಗೆತಿರುಗಿಸಲಾಗಿತ್ತು. ಇದರಿಂದ ಕಿರಿದಾದ ಲಾಸ್ ರೋಡಿಯೋಸ್ ವಿಮಾನ ನಿಲ್ದಾಣವು ವಿಮಾನಗಳಿಂದ ತುಂಬಿ ಹೋಗಿತ್ತು. ರನ್‌ವೇಯಲ್ಲಿ ಟೇಕಾಫ್‌ಗಾಗಿ ಕಾಯುತ್ತಿದ್ದ ವಿಮಾನಗಳು ಹಾಗೂ ಹೊರಬರಲು ಪ್ರಯತ್ನಿಸುತ್ತಿದ್ದ ವಿಮಾನಗಳಿಂದ ಗೊಂದಲಮಯ ವಾತಾವರಣ ಸೃಷ್ಟಿಯಾಗಿತ್ತು. ಟೆನೆರಿಫ್ ದುರಂತವು ವಿಮಾನಯಾನ ಉದ್ಯಮಕ್ಕೆ ಒಂದು ದೊಡ್ಡ ಪಾಠವಾಯಿತು. ಈ ದುರಂತದಿಂದ ಅನೇಕ ಅಮೂಲ್ಯ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಅವು ಇಂದಿನ ವಿಮಾನ ಪ್ರಯಾಣವನ್ನು ಸುರಕ್ಷಿತಗೊಳಿಸಲು ಸಹಾಯಕವಾದವು. ರೇಡಿಯೋ ಸಂವಹನದಲ್ಲಿ ಯಾವುದೇ ಗೊಂದಲ ಆಗಬಾರದೆಂದು, 'ಟೇಕಾಫ್' ಮತ್ತು 'ಕ್ಲಿಯರ್ಡ್ ಟು ಟೇಕಾಫ್' ಎಂಬ ಪದಗಳನ್ನು ಬಳಸುವ ಹೊಸ ನಿಯಮಗಳನ್ನು ಜಾರಿಗೆ ತರಲಾಯಿತು. ಇದರಿಂದ ಪೈಲಟ್‌ಗಳು ಮತ್ತು ಟವರ್ ನಡುವಿನ ಸಂವಹನ ಸ್ಪಷ್ಟವಾಯಿತು. ವಿಮಾನ ನಿಲ್ದಾಣಗಳಲ್ಲಿ ಕಣ್ಗಾವಲು ರೇಡಾರ್‌ಗಳನ್ನು ಅಳವಡಿಸಲಾಯಿತು. ಇದರಿಂದ ಮಂಜು ಅಥವಾ ಕಡಿಮೆ ಗೋಚರ ಸಮಯದಲ್ಲಿಯೂ ಏರ್ ಟ್ರಾಫಿಕ್ ಕಂಟ್ರೋಲ್ ಸಿಬ್ಬಂದಿ ರನ್‌ವೇ ಮೇಲಿನ ವಿಮಾನಗಳನ್ನು ನಿರಂತರವಾಗಿ ಗಮನಿಸಲು ಸಾಧ್ಯವಾಯಿತು. ಈ ದುರಂತದ ನಂತರ, ವಿಮಾನದ ಸಿಬ್ಬಂದಿ ನಡುವೆ ಉತ್ತಮ ಸಂವಹನ ಮತ್ತು ತಂಡದ ಕೆಲಸದ ಪ್ರಾಮುಖ್ಯದ ಬಗ್ಗೆ ತರಬೇತಿ ಆರಂಭಿಸಲಾಯಿತು. ಯಾವುದೇ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಕ್ಯಾಪ್ಟನ್ ಮತ್ತು ಇತರೆ ಸಿಬ್ಬಂದಿಯ ಸಲಹೆಗಳನ್ನು ಗಣನೆಗೆ ತೆಗೆದುಕೊಳ್ಳುವ ಪದ್ಧತಿಯನ್ನು ಸಹ ಜಾರಿಗೆ ತರಲಾಯಿತು. ಇಂದು ವಿಮಾನ ಪ್ರಯಾಣವನ್ನು ವಿಶ್ವದ ಅತಿ ಸುರಕ್ಷಿತ ಸಾರಿಗೆ ವಿಧಾನವೆಂದು ಪರಿಗಣಿಸಲು ಟೆನೆರಿಫ್ ದುರಂತದ ಪಾಠಗಳೂ ಮುಖ್ಯ ಕಾರಣ. ಈ ದುರಂತವು ವಿಮಾನಯಾನ ಜಗತ್ತಿಗೆ ಒಂದು ನೋವಿನ ಅನುಭವವಾಗಿರಬಹುದು. ಆದರೆ ಆ ನೋವಿನಿಂದ ಕಲಿತ ಪಾಠಗಳು ಇಂದಿನ ಪ್ರಗತಿಗೆ ಅಡಿಪಾಯವಾಗಿವೆ. ಇದು ವಿಮಾನಯಾನ ಉದ್ಯಮವು ಹೇಗೆ ದುರಂತಗಳನ್ನು ಸಹ ಒಂದು ಪ್ರಗತಿಯ ಹಾದಿಯನ್ನಾಗಿ ಪರಿವರ್ತಿಸುತ್ತದೆ ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದೆ.

# ಅಭಿಪ್ರಾಯ ಬಯಸುವ ನಮಗೆ ಟೀಕೆ ಏಕೆ ಸಹ್ಯವಾಗುವುದಿಲ್ಲ?

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

'ನಿಮ್ಮ ಅಭಿಪ್ರಾಯವೇನು?' ಇದು ನನಗೆ ನಿತ್ಯ ನಿರಂತರ ಎದುರಾಗುವ ಪ್ರಶ್ನೆ.

ಭರತನಾಟ್ಯ, ಯಕ್ಷಗಾನ, ನಾಟಕ, ಹಾಡು ಇತ್ಯಾದಿಯನ್ನು ವೇದಿಕೆಯಲ್ಲಿ ನೇರವೇರಿಸಿ ಬಂದವರು ಕಂಡಾಕ್ಷಣ 'ಹೇಗಾಯಿತು?' ಎಂದು ಅಭಿಪ್ರಾಯ ಕೇಳುತ್ತಾರೆ. ಭಾಷಣ ಮುಗಿಸಿ ವೇದಿಕೆಯಲ್ಲಿ ಪಕ್ಕಕ್ಕೆ ಕೂತವರು 'ಭಾಷಣ ಹೇಗಾಯಿತು?' ಎಂದು ಬೆವರು ಒರೆಸಿಕೊಳ್ಳುತ್ತ, ಪಿಸುಮಾತಿನಲ್ಲಿ ಕೇಳುತ್ತಾರೆ. ವೃತ್ತಿಯಲ್ಲಿ- ಪ್ರೆಸೆಂಟೇಶನ್ ಮುಗಿಸಿ ಬಂದ ಸಹೋದ್ಯೋಗಿಗಳು, 'ಪ್ರಸ್ತುತ ಪಡಿಸಿದ್ದು ಹೇಗಾಯ್ತು' ಎಂದು ಕೇಳುತ್ತಾರೆ. ಮಗಳು ತನ್ನ ಹೊಸ ಹೇರ್ ಸ್ಟೈಲ್, ಹೆಂಡತಿ ಉಟ್ಟ ಹೊಸ ಸೀರೆ, ಅಮ್ಮ ತಾನು ಮಾಡಿದ ಅಡುಗೆ ಹೀಗೆ ಎಲ್ಲರೂ 'ಹೇಗಿದೆ?' ಎಂದು ಕೇಳುತ್ತಲೇ ಇರುತ್ತಾರೆ. ಕೆಲವು ಸ್ನೇಹಿತ ಬರಹಗಾರರು ತಾವು ಬರೆದ ಪುಸ್ತಕದ ಕಾಪಿ/ಪಿಡಿಎಫ್ ಕಳುಹಿಸಿ ಓದಿ ಅಭಿಪ್ರಾಯ ಕೇಳುತ್ತಾರೆ. ಕಾರ್ಪೊರೇಟ್ ವೃತ್ತಿಯಲ್ಲಿ ಮ್ಯಾನೇಜರ್ ತನ್ನ ಕೆಳಗಿನವರಿಗೆ, ಕೆಳಗಿನವರು ಮ್ಯಾನೇಜರ್‌ಗೆ ಫೀಡ್‌ಬ್ಯಾಕ್ ಕೇಳುವುದು-ಕೊಡುವುದು ವಾರ್ಷಿಕ ಪರಿಪಾಠ.

ಈ 'ಅಭಿಪ್ರಾಯ'ದ್ದೊಂದು ಪೀಕಲಾಟವಿದೆ. ಅಭಿಪ್ರಾಯವನ್ನು ಎಲ್ಲರೂ ಕೇಳುತ್ತಾರೆ, ಅಭಿಪ್ರಾಯವೇನೆಂಬ ಪ್ರಶ್ನೆಯನ್ನು ಎಲ್ಲರೂ ಎದುರಿಸುತ್ತಾರೆ. ಆದರೆ ಬಹುತೇಕರು ನಿಜವಾದ ಅಭಿಪ್ರಾಯ ಬಯಸಿರುವುದಿಲ್ಲ. ಕೆಲವು ಅಕ್ಷರ ಸ್ನೇಹಿತರು ಆಗೀಗ ತಾವು ಬರೆದ, ಪ್ರಕಟವಾದ ಲೇಖನವನ್ನು ಇಮೇಲ್‌ನಲ್ಲಿ ಕಳುಹಿಸಿ ಪ್ರತಿಕ್ರಿಯೆಯನ್ನು ಕೇಳುತ್ತಾರೆ. ನಾನು ಇತ್ತೀಚೆಗೆ ಒಂದು ಪ್ರಯೋಗ ಮಾಡಿದೆ. ಇಂಥ ಕೆಲವಕ್ಕೆ ಪ್ರತಿಕ್ರಿಯಿಸುವಾಗ ಅತ್ಯಂತ ಕ್ರಿಟಿಕ್- ನೇರಾನೇರ ವಿಮರ್ಶಿಸಿ ಪ್ರತಿಕ್ರಿಯಿಸಿದೆ. ಇನ್ನು ಕೆಲವರ ಲೇಖನಗಳಲ್ಲಿ ಒಳ್ಳೆಯದಷ್ಟನ್ನೇ ಕಂಡು 'ಬಹಳ ಒಳ್ಳೆಯದಾಗಿದೆ' ಎಂದಷ್ಟೇ ಹೇಳಿದೆ. ನಾನು ಯಾರೆಲ್ಲರಲ್ಲಿ ನೇರ ವಿಮರ್ಶೆ ಮಾಡಿದೆನೋ, ಅವರಲ್ಲಿ ಅನೇಕರು ನನ್ನ ಪ್ರತಿಕ್ರಿಯೆಗೆ ಮರುಉತ್ತರಿಸಲಿಲ್ಲ, ಅಥವಾ 'ಧನ್ಯವಾದ' ಎಂದು ಹೇಳಿ ಮುಗಿಸಿಬಿಟ್ಟರು. ಅವರ ಜತೆ ಪತ್ರಸಂಬಂಧ ಬೆಳೆಯಲಿಲ್ಲ. ನಾನು ಅವರಿಗೆ ಕೊಟ್ಟ ಅಭಿಪ್ರಾಯ ಪ್ರಾಮಾಣಿಕವಾಗಿಯೇ ಇತ್ತು. ಆದರೆ ಮತ್ತೆ ಅವರಿಂದ ಅಭಿಪ್ರಾಯ ಕೇಳಿ ಇನ್ನೊಂದು ಕೋರಿಕೆ ಬರಲೇ ಇಲ್ಲ. ಆದರೆ ಯಾರ್‍ಯಾರಲ್ಲಿ ಒಳ್ಳೆಯದಾಗಿದೆ ಎಂದೇನೋ ಅವರೆಲ್ಲ ಉದ್ದುದ್ದದ ಮರುಉತ್ತರ ಕೊಟ್ಟು 'ಧನ್ಯವಾದ' ಎಂದರು. ಅವರ ಇಮೇಲ್‌ನಲ್ಲಿ ಖುಷಿಯ ಭಾವ ಎದ್ದು ಕಾಣಿಸುತ್ತಿತ್ತು.

ಇದೊಂದು ಉದಾಹರಣೆ ಅಷ್ಟೆ. ಅಸಲಿಗೆ, ಅಭಿಪ್ರಾಯ ಕೇಳುವವರು, ಅಭಿಪ್ರಾಯಿಸುವವರಲ್ಲಿ ಪ್ರಾಮಾಣಿಕತೆಯನ್ನೇ ಬಯಸುವುದು. ಆದರೆ ಅದು ಹಿತಕರವಾಗಿದ್ದರಷ್ಟೇ ಖುಷಿಪಡುತ್ತಾರೆ. ಅಹಿತ, ನೇರ, ಅದರಲ್ಲೇನೋ ಒಂದು ತಪ್ಪನ್ನು ಗ್ರಹಿಸಿ ಹೇಳಿದರೆ ಅದನ್ನು ಕೇಳಿಸಿಕೊಳ್ಳಲು ತಯಾರಿರುವುದಿಲ್ಲ. ಉದ್ದೇಶ ಪ್ರಾಮಾಣಿಕವಾದರೂ, ಅವರ ಔನ್ನತ್ಯವನ್ನು ಬಯಸಿಯೇ ಹೇಳಿದರೂ ಅದು ಅವರಿಗೆ ಸಹ್ಯವಾಗುವುದಿಲ್ಲ. ಬಹುತೇಕರು ಅಂಥ ಅಭಿಪ್ರಾಯ ಕೇಳುತ್ತಿದ್ದಂತೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲು, ಡಿಫೆಂಡ್ ಮಾಡಿಕೊಳ್ಳಲು ಆರಂಭಿಸಿಬಿಡುತ್ತಾರೆ. 'ನಾನು ಇಂತಿಂಥ ಕಾರಣಕ್ಕೆ ಹೀಗೆ ಮಾಡಿದೆ, ಹೀಗಾಯ್ತು' ಎನುತ್ತಾರೆ. ಅಥವಾ ಅವರಿವರ ಕಾರಣ ಕೊಟ್ಟು ತಪ್ಪನ್ನು ಇನ್ನೊಬ್ಬರ ಮೇಲೆ ಹೊರಿಸಲು ಮುಂದಾಗುತ್ತಾರೆ. ಇಲ್ಲವೇ, 'ಇವತ್ತು ನನಗೆ ನೆಗಡಿಯಾಗಿತ್ತು, ಮೊನ್ನೆ ಜ್ವರ ಬಂದಿತ್ತು, ಮಳೆ ಜಾಸ್ತಿಯಿತ್ತು' ಎಂಬಿತ್ಯಾದಿ ನಮ್ಮ ನಿಯಂತ್ರಣದಲ್ಲಿರದಿದ್ದನ್ನು ಕಾರಣವಾಗಿ ಕೊಡುತ್ತಾರೆ.

ಅಭಿಪ್ರಾಯ ಕೇಳುವವರು ಹೊಗಳಿಕೆಯನ್ನೇ ಬಯಸುವುದೋ ಅಥವಾ ಅವರು ಬಯಸುವುದು ಪ್ರಾಮಾಣಿಕ ಅಭಿಪ್ರಾಯವೋ ಎಂಬುದನ್ನು ತಿಳಿಯುವುದೇ ದೊಡ್ಡ ಸವಾಲಿನ ಕೆಲಸ. ಈ ಕಾರಣಕ್ಕೇ ಇರಬೇಕು ಬಹುತೇಕರು, ಯಾರೇ ಅವರಲ್ಲಿ ಅಭಿಪ್ರಾಯ ಕೇಳಿದರೂ 'ತುಂಬಾ ಚೆನ್ನಾಗಿದೆ, ಸರಿಯಾಗಿದೆ, ಉತ್ತಮವಾಗಿದೆ' ಎಂದಷ್ಟೇ ಹೇಳಿ ಸುಮ್ಮನಾಗಿಬಿಡುತ್ತಾರೆ. ಏನೋ ಒಂದು ಟೀಕಿಸುವುದು, ಎದುರಿನವನು ಅದನ್ನು ಡಿಫೆಂಡ್ ಮಾಡಿಕೊಳ್ಳುವುದು, 'ನಾನು ಈ ಕಾರಣಕ್ಕೆ ಈ ಅಭಿಪ್ರಾಯ ಕೊಟ್ಟೆ' ಎಂದು ವಿವರಿಸುವುದು ಇವೆಲ್ಲ ಯಾರಿಗೆ ಬೇಕು? ಕಿರಿಕಿರಿ. ಹಾಗಾಗಿ, 'ಚೆನ್ನಾಗಿತ್ತು', 'ಅದ್ಭುತವಾಗಿತ್ತು' ಎಂದುಬಿಟ್ಟರೆ ಯಾವ ರಗಳೆ-ರಂಪಾಟಗಳಿಲ್ಲ.

ಈ ರೀತಿಯ ಅಭಿಪ್ರಾಯದಿಂದ ಕೇಳಿದವರಿಗೆ ಸಂತೋಷವಾಗುವುದೇನೋ ನಿಜ, ಆದರೆ ಅದಕ್ಕೆ ಕಿಮ್ಮತ್ತಿಲ್ಲ. ಕೆಲವೊಮ್ಮೆ 'ಕೆಸುವಿನ ಎಲೆಯ ಮೇಲೆ ನೀರು ಜಾರಿದಂತೆ' ಬರುವ ಇಂಥ ನಯವಾದ ಅಭಿಪ್ರಾಯಗಳು ನಮ್ಮನ್ನು ದಾರಿ ತಪ್ಪಿಸಬಹುದು. ಇನ್ನಷ್ಟು ಅಧೋಗತಿಗೆ ತೆಗೆದುಕೊಂಡು ಹೋಗಬಹುದು. ಅದೆಷ್ಟೋ ಜನರು ಇಂಥ ಹೊಗಳುವಿಕೆಯನ್ನೇ ನಂಬಿ ಅವರ ಹವ್ಯಾಸ ಇತ್ಯಾದಿಯ ಬಗ್ಗೆ ಏನೇನೋ ಕಲ್ಪಿಸಿಕೊಂಡುಬಿಟ್ಟಿರುತ್ತಾರೆ. ಆಮೇಲೆ ಸಿಕ್ಕಸಿಕ್ಕವರ ತಲೆಯನ್ನೆಲ್ಲ ತಿನ್ನಲು ಆರಂಭಿಸುವುದು ಹೀಗೆ.

ಅದೇಕೆ ನಮಗೆ ಅಭಿಪ್ರಾಯವನ್ನು ಯಥಾವತ್ತು ಸ್ವೀಕರಿಸಲಿಕ್ಕೆ ಸಾಧ್ಯವಾಗುವುದಿಲ್ಲ? ನಾವು ಏನೇ ಮಾಡಲಿ, ಹೊಸ ಪ್ರಯತ್ನದಲ್ಲಿ ತೊಡಗಲಿ, ಇನ್ನೊಬ್ಬರ ಅಭಿಪ್ರಾಯ, ಫೀಡ್‌ಬ್ಯಾಕ್ ನಮ್ಮ ಬೆಳವಣಿಗೆಗೆ ಬಹಳ ಮುಖ್ಯ. ಇದು ಎಲ್ಲರಿಗೂ ಗೊತ್ತಿರುವ ಹರಕು ಪುರಾಣ, ಎಲ್ಲರೂ ಹೇಳುವ ಸಂಗತಿ. ಆದರೆ ಎಲ್ಲಾ ರೀತಿಯ ಪ್ರತಿಕ್ರಿಯೆಯನ್ನು ಜೀರ್ಣಿಸಿಕೊಳ್ಳುವುದು ನಮಗೇಕೆ ಅಷ್ಟು ಕಷ್ಟ?



ಮನಃಶಾಸ್ತ್ರದಲ್ಲಿ ನಮ್ಮ ಮಿದುಳಿನ ಒಂದು ವ್ಯವಸ್ಥೆಯ ಉಲ್ಲೇಖವಿದೆ. Self-relevance system- ಸ್ವಯಂ ಪ್ರಸ್ತುತತೆಯ ವ್ಯವಸ್ಥೆ. ನಮ್ಮ ಪ್ರಸ್ತುತತೆಯನ್ನು ನಿಭಾಯಿಸುವ ಈ ವ್ಯವಸ್ಥೆ ಇರುವುದು ಮಿದುಳಿನ ಅಮಿಗ್ದೆಲ ಭಾಗದಲ್ಲಿ, ಅದನ್ನು ವಿಜ್ಞಾನಿಗಳು ಪಿನ್‌ಪಾಯಿಂಟ್ ಮಾಡಿದ್ದಾರೆ. ನೀವು ಸಂತೆಯಲ್ಲಿ, ಮದುವೆಮನೆಯ ಗದ್ದಲದಲ್ಲಿದ್ದಾಗಲೂ ಯಾರೋ ನಿಮ್ಮ ಹೆಸರನ್ನು ಕರೆದರೆ ತಕ್ಷಣ ಅದು ನಿಮ್ಮ ಗ್ರಹಿಕೆಗೆ ಬರುವುದು ಈ ಭಾಗದ, ವ್ಯವಸ್ಥೆಯ ಜಾಗೃತಾವಸ್ಥೆಯಿಂದ. ನಮ್ಮ ಇಂದ್ರಿಯಗಳು ಗ್ರಹಿಸುವ ಬೆಳಕು, ಶಬ್ದ, ಸ್ಪರ್ಶ, ರುಚಿ, ವಾಸನೆ ಇತ್ಯಾದಿಗಳಲ್ಲಿ ಯಾವುದು ನಮಗೆ ಮುಖ್ಯ, ಯಾವುದನ್ನು ಗ್ರಹಿಸಬೇಕು, ಯಾವುದನ್ನು ಅಲಕ್ಷಿಸಬೇಕು ಎನ್ನುವುದನ್ನೆಲ್ಲ ಲೆಕ್ಕ ಹಾಕುವುದು ಈ ವ್ಯವಸ್ಥೆ. ಒಟ್ಟಾರೆ ಅಹಂ- ನಮ್ಮ ಅಸ್ತಿತ್ವದ ನಿರಂತರ ಗ್ರಹಿಕೆ ಈ ವ್ಯವಸ್ಥೆಯ ಕೆಲಸ. ಅದು ಮಾನಸಿಕವಾಗಿಯೂ ಹೌದು. 'ಅಹಂ' ಇದೇ ವ್ಯವಸ್ಥೆಯ ಸೃಷ್ಟಿ.

ಹಾಗಾಗಿ, 'ಅಹಂ' ಅನ್ನು ಪ್ರಶ್ನಿಸುವ ಟೀಕೆ ಎದುರಾದಾಗ ಕೂಡ ಅದೇ ವ್ಯವಸ್ಥೆ ಜಾಗೃತವಾಗುತ್ತದೆ. 'ಈ ಟೀಕೆ ನನ್ನ ಬಗ್ಗೆಯೇ? ಇದು ನನ್ನನ್ನು ಉಳಿದವರೆದುರು ಸಣ್ಣವನನ್ನಾಗಿ ಸುತ್ತಿದೆಯೇ?' ಎಂಬ ಪ್ರಶ್ನೆಗಳನ್ನು ಎದುರಿಟ್ಟು ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಯ ಉಪೋತ್ಪತ್ತಿಯೇ 'ಭಯ'. ಮಿದುಳು ಟೀಕೆಯನ್ನು ಈ ಕಾರಣಕ್ಕೆ ಭಯದಿಂದಲೇ ಎದುರಿಸುವುದು. ಮತ್ತು ಟೀಕೆ ಎದುರಾದಾಗ ಅದರ ಕಾರಣ, ಹಿನ್ನೆಲೆ ಯಾವುದೂ ಗ್ರಹಿಕೆಗೆ ಬಾರದೆ ಅದೊಂದು ಅಪಾಯ ಎಂಬಂತೆ ವರ್ತಿಸುವುದು, ಪ್ರತಿಕ್ರಿಯಿಸುವುದು. ಇದು ದೊಡ್ಡ ದೊಡ್ಡ ವಿಷಯಗಳಲ್ಲೂ ಹೌದು, ಸಣ್ಣ ಪುಟ್ಟ 'ಇವತ್ತಿನ ಅಡುಗೆಗೆ ಉಪ್ಪು ಹೆಚ್ಚಾಗಿದೆ' ಎಂಬ ಚಿಲ್ಲರೆ ಟೀಕೆಗಳಲ್ಲೂ ಹೌದು.

ಯಾರು ಏನೇ ಪ್ರತಿಕ್ರಿಯಿಸಲಿ, ವಸ್ತು-ವಿಷಯ ನಾವಾದಾಗ ನಮ್ಮೆದುರಿಗಿರುವುದು ಮೂರು ಆಯ್ಕೆಗಳು. ಮೊದಲನೆಯದು- ಅವರ ಟೀಕೆಯನ್ನು ಹಿಂದೆ ಮುಂದೆ ವಿಚಾರ ಮಾಡದೆ, ಹೇಳಿದವರು ದೊಡ್ಡವರು, ತಿಳಿದವರು ಎಂದು ಶರಣಾಗಿ ಒಪ್ಪಿಬಿಡುವುದು. ಎರಡನೆಯದು- ಟೀಕೆಯನ್ನು ಪೂರ್ತಿ ಏನೆಂದು ಕೇಳದೆ, ಅದರ ಹಿನ್ನೆಲೆಯನ್ನು, ಪ್ರಯೋಜನವನ್ನು ಗ್ರಹಿಸದೆ ಟೀಕೆಯನ್ನು ಒಂದರ ನಂತರ ಇನ್ನೊಂದರಂತೆ ಲೆಕ್ಕವಿಟ್ಟು ಅಲ್ಲಗಳೆಯುವುದು, ಅಥವಾ ಅದಕ್ಕೊಂದಿಷ್ಟು ಬಾಹ್ಯ ಕಾರಣಗಳನ್ನು ಕೊಡುವುದು. ಮೂರನೆಯದು- ಕೇಳಿ ಒಂದು ಕ್ಷಣ ಆ ಬಗ್ಗೆ ಯೋಚಿಸುವುದು. ಕೆಲವು ಕ್ಷಣ ಉಸಿರುತೆಗೆದುಕೊಳ್ಳುವುದು. ಸಮಚಿತ್ತದಿಂದ, 'ಇದು ಸತ್ಯವೇ? ಸತ್ಯವಾದರೆ ನನಗೇನು ಲಾಭ? ನಾನೇನು ಪಡೆಯಬಹುದು?' ಎಂದು ವಿಚಾರ ಮಾಡುವುದು. ಟೀಕೆ ಮಾಡುವವರು, ಅವರ ವಿಧಾನ, ಮಾಡುವ ರೀತಿ, ತೀಕ್ಷ್ಣತೆ, ನೇರವಂತಿಕೆ, ಪರೋಕ್ಷತೆ ಇವೆಲ್ಲವನ್ನು ಮೀರಿ ವ್ಯಕ್ತಿಗತ ಬೆಳವಣಿಗೆಗೆ ಏನು ಪ್ರಯೋಜನ ಎಂದು ಸಮಚಿತ್ತದಿಂದ ಗ್ರಹಿಸುವುದು. ಈ ಮೂರನೆಯದನ್ನು ಅಭ್ಯಾಸ ಮಾಡಿಕೊಂಡರೆ ಯಾವುದೇ ಟೀಕೆ ಅ-ಸಹ್ಯವೆನಿಸುವುದಿಲ್ಲ. ಟೀಕೆ ಬಂದಷ್ಟು ಖುಷಿಕೊಡುತ್ತದೆ. ಟೀಕೆ ಕ್ರಮೇಣ ನಮ್ಮನ್ನು ಬೆಳೆಸುತ್ತದೆ.

ಮಿಥಿಲೆಯ ರಾಜ ಜನಕ ಸಮರ್ಥ ಆಡಳಿತಗಾರ. ಅಷ್ಟೇ ಅಲ್ಲ, ಅವನೊಬ್ಬ ತತ್ವಜ್ಞಾನಿಯಾಗಿದ್ದ, ಎಲ್ಲಾ ಶಾಸ್ತ್ರ-ಪುರಾಣಗಳನ್ನು ಬಲ್ಲವನಾಗಿದ್ದ. ಜನಕ ಒಮ್ಮೆ ತನ್ನ ಅರಮನೆಯಲ್ಲಿ ಪುರಾಣ, ವೇದ, ಅಧ್ಯಾತ್ಮಗಳ ಮೇಲೆ ಚರ್ಚಾಸ್ಪರ್ಧೆಯನ್ನು ಇಟ್ಟುಕೊಂಡ. ಗೆದ್ದವರಿಗೆ ಚಿನ್ನ-ವಜ್ರಗಳ ಭಾರಿ ಬಹುಮಾನ. ಜನಕನ ಆಸ್ಥಾನದ ಮಹಾಜ್ಞಾನಿ 'ಬಂಡಿ' ಎಂಬುವವನ ಜತೆ 'ಕಹೋಲ' ಎಂಬ ಇನ್ನೊಬ್ಬ ಮಹಾಜ್ಞಾನಿಯ ವಾದ-ಚರ್ಚೆ ಆರಂಭವಾಯಿತು. ಮುಂಜಾನೆಯೇ ಆರಂಭವಾದ ಚರ್ಚೆ ಮಧ್ಯಾಹ್ನವಾದರೂ ಮುಂದುವರಿದಿತ್ತು. ಕಹೋಲ ಸೋಲುತ್ತಿದ್ದ, ಬಂಡಿ ಗೆಲ್ಲುತ್ತಿದ್ದ. ಈ ಸುದ್ದಿ ಮಿಥಿಲೆಯಲ್ಲಿ ಹರಡಿತು ಮತ್ತು ಕಹೋಲನ ಹನ್ನೆರಡು ವರ್ಷದ ಮಗ ಅಷ್ಟಾವಕ್ರನಿಗೂ ತಿಳಿಯಿತು. ಇದನ್ನು ಕೇಳಿದ ಅಷ್ಟಾವಕ್ರ ಅರಮನೆಯತ್ತ ಬಂದ ಮತ್ತು ಚರ್ಚೆ ನಡೆಯುತ್ತಿದ್ದ ವೇದಿಕೆಯತ್ತ ನಡೆದು ಬಂದ.

ಅಷ್ಟಾವಕ್ರ- ಆತನ ಹೆಸರೇ ಹೇಳುವಂತೆ ಅಕರಾಳ ವಿಕರಾಳ ದೇಹ. ಆತನ ದೇಹದಲ್ಲಿ ಎಂಟು ಕಡೆ ವಕ್ರತೆ. ವಿರೂಪ, ಕೈ ಕಾಲಿನ ಗಂಟುಗಳು. ಅವನು ಅರಮನೆಯ ಸಭೆಯೊಳಗೆ ನಡೆದುಬರುತ್ತಿದ್ದಂತೆ, ಅವನ ಕುಂಟು ಹಾವಭಾವ, ವಿಚಿತ್ರವೆನಿಸುವ ನಡಿಗೆ ಕಂಡು ಅಲ್ಲಿ ನೆರೆದಿದ್ದ ಎಲ್ಲರೂ ನಕ್ಕರು. ಜನಕ ಕೂಡ ಅವನನ್ನು ಕಂಡು ನಕ್ಕ. ಅಷ್ಟಾವಕ್ರ ಇದ್ದದ್ದೇ ಹಾಗೆ. ಹೀಗೆ ಎಲ್ಲರೂ ನಗುತ್ತಿದ್ದಂತೆ ಅಷ್ಟಾವಕ್ರ ಕೂಡ ಅವರ ಜತೆ ದೊಡ್ಡಕ್ಕೆ ನಗಲಾರಂಭಿಸಿದ. ಸ್ವಲ್ಪ ಸಮಯದ ನಂತರ ಸಭೆ ಶಾಂತವಾಯಿತು. ಜನಕನು ಅಷ್ಟಾವಕ್ರನತ್ತ ನೋಡುತ್ತ ಅವನ ಪರಿಚಯ ಮಾಡಿಕೊಂಡ. "ಅಷ್ಟಾವಕ್ರ, ನೀನು ನಡೆದುಬಂದದ್ದು ಕಂಡು ಎಲ್ಲರೂ ನಕ್ಕರು, ನಾನು ಕೂಡ ನಿನ್ನನ್ನು ನೋಡಿ ನಕ್ಕೆ. ಆದರೆ ನೀನೇಕೆ ಅಷ್ಟು ನಗೆಯಾಡಿದ್ದು?" ಎಂದು ಜನಕ ಕೇಳಿದ. ಅಷ್ಟಾವಕ್ರ ಅತ್ಯಂತ ನೇರ ನುಡಿಯ ವ್ಯಕ್ತಿ. "ಮಹಾರಾಜಾ, ನೀನು ಚರ್ಮಗಾರರನ್ನಿಟ್ಟುಕೊಂಡು ಸತ್ಯಾನ್ವೇಷಣೆಗೆ ಹೊರಟಿದ್ದೀಯ! ಹಾಗಾಗಿ ನಾನು ಕೂಡ ನಕ್ಕೆ. ನನಗೆ ಇಲ್ಲಿ ಯಾರೂ ವಿದ್ವತ್ ಜನ ಕಾಣಿಸುತ್ತಿಲ್ಲ, ಎಲ್ಲರೂ ನನ್ನ ಚರ್ಮ, ದೇಹವನ್ನಷ್ಟೇ ನೋಡುತ್ತಿದ್ದಾರೆ. ಒಬ್ಬ ಚರ್ಮದ ಕೆಲಸ ಮಾಡುವವನು ಚರ್ಮವನ್ನು ನೋಡುವುದರಲ್ಲಿ ಅರ್ಥವಿದೆ. ಆದರೆ ವಿದ್ವತ್ ಜನರು ಕೂಡ ಚರ್ಮವನ್ನೇ ನೋಡುತ್ತಾರೆ, ನನ್ನೊಳಗಿನ ವ್ಯಕ್ತಿತ್ವವನ್ನು ನೋಡುವುದಿಲ್ಲ ಎಂದಾದರೆ ಇವರಿಗೂ, ಚರ್ಮದ ಕೆಲಸ ಮಾಡುವವರಿಗೂ ವ್ಯತ್ಯಾಸ ಏನುಳಿಯಿತು?''. ಆ ಹನ್ನೆರಡು ವರ್ಷದ ಅಷ್ಟಾವಕ್ರನ ಮಾತನ್ನು ಕೇಳಿ ಜನಕ ಮತ್ತು ಎಲ್ಲ ಸಭಾಸದರು ತಲೆತಗ್ಗಿಸಿದರು. ಜನಕ ಹೆಚ್ಚಿನ ಮಾತನಾಡದೆ ಅಷ್ಟಾವಕ್ರನನ್ನು ಆ ದಿನ ಬೀಳ್ಕೊಟ್ಟ.

ಜನಕ ಆ ಪೋರನ ಟೀಕೆಯನ್ನು ಇನ್ನಷ್ಟು ಯೋಚಿಸಿದ. ಏಕಾಂತದಲ್ಲಿ ಯೋಚಿಸುತ್ತಿದ್ದಂತೆ ಆತನಿಗೆ ಅಷ್ಟಾವಕ್ರ ಹೇಳಿದ ಮಾತುಗಳು ಸತ್ಯವೆನಿಸಿದವು. ಅಷ್ಟಾವಕ್ರನ ಮಾತುಗಳು ಅವನನ್ನು ರಾತ್ರಿಯಿಡೀ ಕಾಡಿದವು. ಜನಕ ಮಾರನೆಯ ದಿನ ಕುದುರೆಯ ಮೇಲೆ ಮಿಥಿಲೆಯಲ್ಲಿ ಓಡಾಡುವಾಗ ಅಷ್ಟಾವಕ್ರ ಮತ್ತೆ ಅವನಿಗೆ ಕಾಣಿಸಿದ. ಕಾಣಿಸಿದ್ದೇ ತಡ, ತಾನು ಮಹಾರಾಜನೆಂದು ಎಣಿಸದೆ ಹನ್ನೆರಡು ವರ್ಷದ ಅಷ್ಟಾವಕ್ರನ ಕಾಲಿಗೆರಗಿದ. ಅಷ್ಟೇ ಅಲ್ಲ, ಅಷ್ಟಾವಕ್ರನನ್ನು ತನ್ನ ಆಸ್ಥಾನಕ್ಕೆ ಕರೆದುಕೊಂಡು ಬಂದ. ಅವನ ಜ್ಞಾನ ಕಂಡು ತನ್ನ ಪ್ರಶ್ನೆಗಳನ್ನು ಅವನ ಮುಂದಿಟ್ಟ. ಅಷ್ಟಾವಕ್ರ ಅದಕ್ಕುತ್ತರಿಸಿದ. ಜನಕ-ಅಷ್ಟಾವಕ್ರರ ನಡುವೆ ನಡೆಯುವ ಸಂಭಾಷಣೆಯೇ 'ಅಷ್ಟಾವಕ್ರಗೀತ'. ಇದು ಅದ್ವೈತ ವೇದಾಂತದ ಮಹೋನ್ನತ ಕೃತಿ.

ಬಹುಶಃ ಜನಕ ಮಹಾರಾಜನ ಜಾಗದಲ್ಲಿ ಇನ್ನು ಯಾರೇ ಇದ್ದಿದ್ದರೂ ಅಷ್ಟಾವಕ್ರನ ವರ್ತನೆಯನ್ನು ಸಹಿಸುತ್ತಿರಲಿಲ್ಲ. ಜ್ಞಾನಿಗಳೇ ತುಂಬಿದ ಸಭೆಯನ್ನು ಚರ್ಮಗಾರರೆನ್ನುವುದು! ಅದು ಕೂಡ ಮಹಾರಾಜನನ್ನೂ ಸೇರಿಸಿ! ಇಷ್ಟು ನೇರವಾದ ಟೀಕೆ! ಆದರೆ ಜನಕ ಆತುರಗೆಡಲಿಲ್ಲ, ಟೀಕೆಯನ್ನು ವಿವೇಚಿಸಲು ಸಮಯ ತೆಗೆದುಕೊಂಡ. ಸೂಕ್ಷ್ಮವನ್ನು ಗ್ರಹಿಸಿದ. ಟೀಕಿಸಿದ್ದು ಹನ್ನೆರಡು ವರ್ಷದ ಬಾಲಕ ಎಂದು ಅವಮಾನಗೊಳ್ಳಲಿಲ್ಲ. 'ಕೈಕಾಲು ನೆಟ್ಟಗಿಲ್ಲದವನ ಅಧಿಕಪ್ರಸಂಗತನ' ಎಂದು ಸಿಟ್ಟಿಗೇಳಲಿಲ್ಲ, ಬದಲಿಗೆ ಟೀಕೆಯ ಹಿಂದೆ ಇರುವ ಉದ್ದೇಶ, ವ್ಯಕ್ತಿತ್ವ ಮತ್ತು ಜ್ಞಾನವನ್ನು ಗ್ರಹಿಸಿದ. ಅದೆಲ್ಲದರ ಪರಿಣಾಮವಾಗಿ ಮನುಕುಲಕ್ಕೆ ಅಷ್ಟಾವಕ್ರಗೀತೆಯಂಥ ಅನರ್ಘ್ಯ ರತ್ನ ಸಿಕ್ಕಿತು. ಒಂದು ವೇಳೆ ಜನಕ ಸಿಟ್ಟಿಗೆದ್ದು ಅಷ್ಟಾವಕ್ರನನ್ನು ಕಾರಾಗೃಹಕ್ಕೆ ಅಟ್ಟಿಬಿಟ್ಟಿದ್ದರೆ!

ಟೀಕೆ ಹಾಗೆಯೇ. ದೊಡ್ಡವರಿಂದಲೂ ಬರಬಹುದು, ಚಿಕ್ಕವರಿಂದಲೂ ಬರಬಹುದು. ಟೀಕಿಸುವವರು ನಾವು ಶ್ರೇಣೀಕರಿಸುವ ಯಾವೊಂದು ವಿಷಯದಲ್ಲಿ ಮೇಲಿರಬಹುದು-ಕೆಳಗಿರಬಹುದು. ಅವರು ದೊಡ್ಡ ವ್ಯಕ್ತಿಯೇ ಆಗಿರಬಹುದು ಅಥವಾ ಯಾರೋ ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿಯಾಗಿರಬಹುದು. ಟೀಕೆಯೂ ಅಷ್ಟಾವಕ್ರನಂತೆ ವಕ್ರವಕ್ರವಾಗಿ ಅಥವಾ ನೇರವಾಗಿ ಬರಬಹುದು. ಹಾನಿಯನ್ನು ಬಯಸಿ ಟೀಕಿಸುವವರು ಇಲ್ಲವೆಂದಲ್ಲ, ಅಂಥ ಟೀಕಾಕಾರರಿಗೆ ಉದಾಸೀನವೇ ಮದ್ದು. ದ್ವೇಷದ ಟೀಕೆಗಳು ವಿರಳ- ಸತ್ಕಾರಣಕ್ಕೆ ಬರುವ ಟೀಕೆಗಳೇ ಜಾಸ್ತಿ. ಆದರೆ ನಾವು ಬರುವ ಟೀಕೆಯನ್ನೆಲ್ಲ ದುರುದ್ದೇಶವೆಂಬ ತಕ್ಕಡಿಯಲ್ಲಿ ಹಾಕಿಯೇ ತೂಗಿ ಪರೀಕ್ಷಿಸುವುದು. ಅಲ್ಲಿಯೇ ನಮ್ಮ ದಿಕ್ಕು ತಪ್ಪುವುದು. ಇನ್ನು, ಬಹುತೇಕ ಟೀಕೆಗಳು ಯಾವುದೋ ಒಂದು ವಿಚಾರಕ್ಕಷ್ಟೇ ಸೀಮಿತವಾಗಿರುತ್ತವೆ. ಆದರೆ ಅದನ್ನು ನಮ್ಮ ವ್ಯಕ್ತಿತ್ವದ ಮೇಲಿನ ಟೀಕೆ ಎಂದು ತೀರಾ ವೈಯಕ್ತಿಕವಾಗಿ ತೆಗೆದುಕೊಂಡರೆ, ತಪ್ಪಾಗಿ ಗ್ರಹಿಸಿದರೆ ಅದರಿಂದ ನಷ್ಟ. ಮಾನಸಿಕ ಕಿರಿಕಿರಿ, ಟೀಕೆಗಳು ನಮ್ಮನ್ನು ಇನ್ನಷ್ಟು ಕುಗ್ಗಿಸಿಬಿಡುತ್ತವೆ.

ಇಂದು ಸಾಮಾಜಿಕ ಜಾಲತಾಣಗಳಲ್ಲಿ ಜನರು ಚಿಕ್ಕದೊಂದು ಟೀಕೆಗೆ ಸಿಟ್ಟಿಗೆದ್ದುಬಿಡುತ್ತಾರೆ. ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳು ಜಾಲತಾಣಗಳಲ್ಲಿ ಕಾಲು ಕೆರೆದು ಜಗಳಕ್ಕೆ ನಿಲ್ಲುವುದು ಆಗೀಗ ಕಾಣಿಸುತ್ತದೆ. ಟೀಕಿಸಿದ್ದಕ್ಕೆ ಕೊಲೆಯಾದ ನಿದರ್ಶನಗಳಿವೆ. ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳು ಮಾಡಿದ ಟೀಕೆಗಳನ್ನು ಅರಗಿಸಿಕೊಳ್ಳಲಾಗದೆ ಆತ್ಮಹತ್ಯೆ ಮಾಡಿಕೊಂಡವರಿದ್ದಾರೆ. ಸಿನಿಮಾ ನಟರು ಟೀಕೆಯನ್ನು ಎದುರಿಸಲಾಗದೆ ಖಿನ್ನತೆಗೊಳಗಾದದ್ದಿದೆ. ಅವರೆಲ್ಲರೂ ಟೀಕೆಯನ್ನು ಬಳಸಿಕೊಳ್ಳುವುದರಲ್ಲಿ, ಗ್ರಹಿಸುವುದರಲ್ಲಿ ಸೋತವರು. ಆದರೆ ಟೀಕೆಯನ್ನೇ ಮೆಟ್ಟಿಲು ಮಾಡಿಕೊಂಡು ಮೇಲೆ ಹತ್ತಿದ ಅದೆಷ್ಟೋ ಸಾಧಕರಿದ್ದಾರೆ.

'ಅಷ್ಟಾವಕ್ರ' ತನ್ನ ತಾಯಿಯ ಗರ್ಭದಲ್ಲಿರುವಾಗ ತಂದೆ 'ಕಹೋಲ' ಹೇಳಿದ ಶಾಸ್ತ್ರವಿವರಣೆಯನ್ನು ಕೇಳಿಸಿಕೊಂಡು 'ಅದು ತಪ್ಪು' ಎಂದು ಹೇಳಿದನಂತೆ. ಆ ನೇರ ಟೀಕೆಗೆ ತಂದೆ ಕಹೋಲ ಸಿಟ್ಟಿಗೆದ್ದು ನೀನು 'ಅಷ್ಟ' ವಕ್ರ- ಎಂಟು ಕಡೆ ವಕ್ರವಾಗಿ ಹುಟ್ಟು ಎಂದು ಶಾಪ ಕೊಟ್ಟನಂತೆ. ಹಾಗಾಗಿ ಅಷ್ಟಾವಕ್ರ ಆ ರೀತಿ ವಿರೂಪವಾಗಿ ಹುಟ್ಟಿದ ಎಂಬುದು ಇನ್ನೊಂದು ಕಥೆ. ಟೀಕೆಯನ್ನು ಸ್ವೀಕರಿಸಲು ಕಹೋಲನಂತೆ ಕೇವಲ ಜ್ಞಾನವಿದ್ದರಷ್ಟೇ ಸಾಲದು, ಜನಕನಂತೆ ಪ್ರೌಢತೆ-ಮೆಚ್ಯುರಿಟಿ ಬೆಳೆಸಿಕೊಳ್ಳಬೇಕು.

# ಮೋದಿಯುಗದಲ್ಲಿ 3ನೇ ದೊಡ್ಡ ಆರ್ಥಿಕ ಶಕ್ತಿಯಾಗಲಿದೆ ಭಾರತ!

**ಭಾರತವು ಕಳೆದ ಹನ್ನೊಂದು ವರ್ಷಗಳಲ್ಲಿ ರಷ್ಯಾ, ಬ್ರೆಜಿಲ್, ಫ್ರಾನ್ಸ್, ಬ್ರಿಟನ್ ಅನ್ನು ಹಿಂದಿಕ್ಕಿ 4ನೇ ಅತಿ ದೊಡ್ಡ ಆರ್ಥಿಕತೆಯಾಗಿದೆ. ಜರ್ಮನಿಗೆ ತೀವ್ರ ಸ್ಪರ್ಧೆಯೊಡ್ಡಿದೆ. 2013ರಲ್ಲಿ ವಿಶ್ವದ ದೊಡ್ಡ ಆರ್ಥಿಕತೆಗಳ ಪಟ್ಟಿಯಲ್ಲಿ ಅಮೆರಿಕ, ಚೀನಾ, ಜಪಾನ್, ಜರ್ಮನಿ, ಫ್ರಾನ್ಸ್, ಬ್ರಿಟನ್, ಬ್ರೆಜಿಲ್, ರಷ್ಯಾ, ಇಟಲಿಯ ಬಳಿಕ ಭಾರತ ಹತ್ತರಲ್ಲಿತ್ತು. ಆದರೆ ಈಗ 2025ರಲ್ಲಿನ ಚಿತ್ರಣವೇ ಬೇರೆ.**

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಅಮೆರಿಕದ ಬಹುರಾಷ್ಟ್ರೀಯ ಬ್ಯಾಂಕ್ ಮೋರ್ಗಾನ್ ಸ್ಟ್ಯಾನ್ಲಿಯು 2013ರ ಆಗಸ್ಟ್‌ನಲ್ಲಿ 'ಫ್ರಾಜೈಲ್ ಫೈವ್' ಎಂಬ ಪದವನ್ನು ಹುಟ್ಟುಹಾಕಿತ್ತು. ಟರ್ಕಿ, ಬ್ರೆಜಿಲ್, ದಕ್ಷಿಣ ಆಫ್ರಿಕಾ, ಇಂಡೋನೇಷ್ಯಾ ಮತ್ತು ಭಾರತ ದೇಶಗಳು ಇದರಲ್ಲಿದ್ದವು. ಏನಿದು 'ಫ್ರಾಜೈಲ್ ಫೈವ್'? ಹೀಗೆಂದರೆ- ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮತ್ತು ಬೆಳವಣಿಗೆಗೆ ವಿದೇಶಿ ಹೂಡಿಕೆಯನ್ನೇ ಅವಲಂಬಿಸಿರುವ ಸಂಕಷ್ಟಪೀಡಿತ ರಾಷ್ಟ್ರಗಳು ಎಂದರ್ಥ.

2008ರ ಜಾಗತಿಕ ಆರ್ಥಿಕ ಹಿಂಜರಿತದ ಬಳಿಕ ಹಲವಾರು ರಾಷ್ಟ್ರಗಳು ಕಂಗಾಲಾಗಿದ್ದವು. ಕ್ರಮೇಣ ಅಮೆರಿಕ ಚೇತರಿಸಿಕೊಂಡಿತು. ಆಗ ಹೂಡಿಕೆದಾರರು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ಹೂಡಿಕೆಯನ್ನು ಹಿಂತೆಗೆದುಕೊಂಡು, ಡಾಲರ್‌ನಲ್ಲಿ ಇನ್ವೆಸ್ಟ್ ಮಾಡಲು ಆರಂಭಿಸಿದರು. ಇದರ ಪರಿಣಾಮವಾಗಿ ಬ್ರೆಜಿಲ್, ಭಾರತ, ಇಂಡೋನೇಷ್ಯಾ, ದಕ್ಷಿಣ ಆಫ್ರಿಕಾ, ಟರ್ಕಿಯಲ್ಲಿ ವಿದೇಶಿ ಹೂಡಿಕೆಯ ಹಠಾತ್ ಹೊರಹರಿವು ಸಂಭವಿಸಿತು. ಇದರ ಪರಿಣಾಮವಾಗಿ ಈ ದೇಶಗಳಿಗೆ ತಮ್ಮ ವಿತ್ತೀಯ ಕೊರತೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ, ವಿದೇಶಿ ಸಾಲವನ್ನು ಮರುಪಾವತಿಸಲು ಆಗುತ್ತಿಲ್ಲ, ಹೊಸ ಸಾಲಗಳು ಹುಟ್ಟುತ್ತಿಲ್ಲ, ಹೀಗಾಗಿ ಇಂಥ ದೇಶಗಳು ಆರ್ಥಿಕ ಹಿಂಜರಿತಕ್ಕೆ ಮರಳುವ ಸಾಧ್ಯತೆ ಇದೆ ಎಂದು ಮೋರ್ಗಾನ್ ಸ್ಟ್ಯಾನ್ಲಿ ವರದಿ ಮಾಡಿತ್ತು. ಇದೇ ಮೋರ್ಗಾನ್ ಸ್ಟ್ಯಾನ್ಲಿ ಈ ವರ್ಷ ತನ್ನ ವರದಿಯಲ್ಲಿ, ಭಾರತ 2025ರಲ್ಲಿ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಲಿದೆ. 2035ಕ್ಕೆ ಜಿಡಿಪಿ ಇಮ್ಮಡಿಯಾಗಲಿದ್ದು, 10.6 ಟ್ರಿಲಿಯನ್ ಡಾಲರ್‌ಗೆ ಏರಿಕೆಯಾಗಲಿದೆ ಎಂದು ತಿಳಿಸಿದೆ. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಗುಜರಾತ್, ಉತ್ತರಪ್ರದೇಶ ರಾಜ್ಯಗಳು ತಲಾ 1 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಲಿದ್ದು, ಜಗತ್ತಿನ ಟಾಪ್ 20 ಇಕಾನಮಿಗಳ ಪಟ್ಟಿಗೆ ಸೇರ್ಪಡೆಯಾಗಲಿವೆ ಎಂದೂ ತಿಳಿಸಿದೆ.

ಭಾರತವು ಕಳೆದ ಹನ್ನೊಂದು ವರ್ಷಗಳಲ್ಲಿ ರಷ್ಯಾ, ಬ್ರೆಜಿಲ್, ಫ್ರಾನ್ಸ್, ಬ್ರಿಟನ್ ಅನ್ನು ಹಿಂದಿಕ್ಕಿ 4ನೇ ಅತಿ ದೊಡ್ಡ ಆರ್ಥಿಕತೆಯಾಗಿದೆ. ಜರ್ಮನಿಗೆ ತೀವ್ರ ಸ್ಪರ್ಧೆಯೊಡ್ಡಿದೆ. 2013ರಲ್ಲಿ ವಿಶ್ವದ ದೊಡ್ಡ ಆರ್ಥಿಕತೆಗಳ ಪಟ್ಟಿಯಲ್ಲಿ ಅಮೆರಿಕ, ಚೀನಾ, ಜಪಾನ್, ಜರ್ಮನಿ, ಫ್ರಾನ್ಸ್, ಬ್ರಿಟನ್, ಬ್ರೆಜಿಲ್, ರಷ್ಯಾ, ಇಟಲಿಯ ಬಳಿಕ ಭಾರತ ಹತ್ತರಲ್ಲಿತ್ತು. ಆಗ 1.9 ಟ್ರಿಲಿಯನ್ ಡಾಲರ್ (ಲಕ್ಷ ಕೋಟಿ) ಇಕಾನಮಿಯಾಗಿತ್ತು. ಆದರೆ ಈಗ 2025ರಲ್ಲಿನ ಚಿತ್ರಣವೇ ಬೇರೆ. ಈಗ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದಿಂದ ಅಮೆರಿಕಕ್ಕೆ ಆಮದಾಗುವ ಸರಕುಗಳ ಮೇಲೆ ಬರೋಬ್ಬರಿ 50 ಪರ್ಸೆಂಟ್ ಸುಂಕ ವಿಧಿಸುವುದಾಗಿ ಘೋಷಿಸಿದ್ದರೂ, ಭಾರತದ ಇಕಾನಮಿಯನ್ನು ಪುಡಿಮಾಡುವುದಾಗಿ ತನ್ನ ಬಂಟರ ಮೂಲಕ ಅಬ್ಬರಿಸಿದ್ದರೂ, ಭಾರತ 'ಐ ಡೋಂಟ್ ಕೇರ್' ಎಂಬ ಸಂದೇಶ ರವಾನಿಸಿದೆ. ಟ್ರಂಪ್ ತಿಪ್ಪರಲಾಗ ಹಾಕಿದರೂ, ರಷ್ಯಾದಿಂದ ಕಚ್ಚಾ ತೈಲ ಖರೀದಿಯನ್ನು ಸಾಂಗವಾಗಿ ಮುಂದುವರಿಸಿದೆ. ಭಾರತದ ಛಲವನ್ನು ಕಂಡು ಬೆಚ್ಚಿರುವ ಟ್ರಂಪ್, ಮೋದಿಯವರ ಜನ್ಮದಿನದ ನೆಪದಲ್ಲಿ ಕರೆ ಮಾಡಿ, ಮೈತ್ರಿಯನ್ನು ಬಯಸಿದ್ದಾರೆ. ಇದರೊಂದಿಗೆ ಭಾರತ ತನ್ನ ಆರ್ಥಿಕ ಹಿತಾಸಕ್ತಿಯನ್ನೂ ತಾನೇ ನೋಡಿಕೊಳ್ಳಬಲ್ಲದು, ಅಮೆರಿಕ ಆಮದು ಮಾಡಿಕೊಳ್ಳದಿದ್ದರೂ ಪರ್ವಾಗಿಲ್ಲ ಎಂಬ ದಿಟ್ಟ ಉತ್ತರ ಕೊಟ್ಟಿದೆ. ಆದ್ದರಿಂದಲೇ ಟ್ರಂಪ್ ಮತ್ತೆ ದೋಸ್ತಿಯ ಮಾತುಗಳನ್ನಾಡುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ 75ನೇ ಜನ್ಮದಿನದ ಸಂಭ್ರಮದ ವೇಳೆಯಲ್ಲಿ, ಕಳೆದ 11 ವರ್ಷಗಳಲ್ಲಿ ಭಾರತದ ಆರ್ಥಿಕ ಬೆಳವಣಿಗೆಗೆ ಅವರು ತೆಗೆದುಕೊಂಡ ದಿಟ್ಟ ನಿರ್ಧಾರಗಳು ನೆನಪಾಗುವುದು ಸಹಜ. ಭಾರತದ ಆರ್ಥಿಕತೆಯ ಮೇಲೆ ಮೋದಿಯವರ ಪ್ರಭಾವವನ್ನು ನೀವು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಜವಾಹರಲಾಲ್ ನೆಹರು, ನರೇಂದ್ರ ಮೋದಿ, ಇಂದಿರಾ ಗಾಂಧಿ ಮತ್ತು ಮನಮೋಹನ್ ಸಿಂಗ್ ಅವರು 10 ವರ್ಷಕ್ಕೂ ಹೆಚ್ಚು ಕಾಲ ಪ್ರಧಾನಿ ಹುದ್ದೆಯಲ್ಲಿದ್ದವರು. ಈಗ ಭಾರತದ ಆರ್ಥಿಕತೆ ಹತ್ತರಿಂದ ನಾಲ್ಕನೇ ಸ್ಥಾನಕ್ಕೆ ಏರಿಕೆಯಾಗಿರುವುದು ಮತ್ತು ಮೂರನೇ ಸ್ಥಾನ ಅಲಂಕರಿಸುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ದುರದೃಷ್ಟವಶಾತ್ ಕೋವಿಡ್-19ರ ಬಿಕ್ಕಟ್ಟು ಮೂರು ವರ್ಷಗಳ ಕಾಲ ಪ್ರಗತಿಯನ್ನು ಕುಂಠಿತಗೊಳಿಸಿತ್ತು. ಈ ಸವಾಲಿನ ನಡುವೆಯೂ ಭಾರತ ತಲೆಯೆತ್ತಿ ನಿಂತಿರುವುದನ್ನು ಜಗತ್ತು ಬೆರಗಿನಿಂದ ನೋಡಿದೆ. ಹಾಗಾದರೆ ಮೋದಿಯವರು ಭಾರತದ ಆರ್ಥಿಕತೆಯ ವೇಗವನ್ನು ಹೇಗೆ ಹೆಚ್ಚಿಸಿದರು? ಎಂಬುದನ್ನು ನೋಡೋಣ.

ಮೊದಲನೆಯದಾಗಿ ಮೋದಿಯವರು 2014ರಲ್ಲಿ ಪ್ರಧಾನಿಯಾದ ಬಳಿಕ ಭಾರತದ ಜಿಡಿಪಿ ಗ್ರೋತ್ ರೇಟ್ ಏರತೊಡಗಿತು. ಕೋವಿಡ್-19ರ ಪರಿಣಾಮ ಮಾತ್ರ 2020-21ರಲ್ಲಿ ಮೈನಸ್ 5.8 ಪರ್ಸೆಂಟ್‌ಗೆ ಕುಸಿದಿತ್ತು. ಅದು ಬೇರೆ ವಿಚಾರ. 2014-2024ರಲ್ಲಿ ಭಾರತದ ಜಿಡಿಪಿ ಮೌಲ್ಯವು 106 ಲಕ್ಷ ಕೋಟಿ ರುಪಾಯಿಗಳಿಂದ 331 ಲಕ್ಷ ಕೋಟಿಗೆ ಏರಿಕೆಯಾಗಿದೆ. ಅಂದರೆ ಕೇವಲ ಹತ್ತೇ ವರ್ಷದಲ್ಲಿ ಮೂರು ಪಟ್ಟು ಹೆಚ್ಚಳ!

ಎರಡನೆಯದಾಗಿ, ಕಳೆದ ದಶಕದಲ್ಲಿ ದೇಶದ ರಫ್ತು 76 ಪರ್ಸೆಂಟ್ ವೃದ್ಧಿಸಿದೆ. 2014ರಲ್ಲಿ 466 ಶತಕೋಟಿ ಡಾಲರ್ ನಷ್ಟಿದ್ದ ರಫ್ತು 2024ರಲ್ಲಿ 466 ಶತಕೋಟಿ ಡಾಲರ್‌ಗೆ ವೃದ್ಧಿಸಿದೆ. ಎಂಜಿನಿಯರಿಂಗ್ ಉತ್ಪನ್ನಗಳು, ಇಲೆಕ್ಟ್ರಾನಿಕ್ಸ್, ಔಷಧಿಗಳ ರಫ್ತಿನಲ್ಲಿ ದೇಶವು ಮುಂಚೂಣಿಯಲ್ಲಿದೆ. ಅಮೆರಿಕ, ಯುಎಇ, ಸೌದಿ ಅರೇಬಿಯಾ, ಜರ್ಮನಿ, ಇಟಲಿ, ನೆದರ್ಲೆಂಡ್ಸ್ ಸೇರಿದಂತೆ ಇನ್ನೂರಕ್ಕೂ ಹೆಚ್ಚು ದೇಶಗಳಿಗೆ ಭಾರತ ನಾನಾ ವಸ್ತುಗಳನ್ನು ರಫ್ತು ಮಾಡುತ್ತದೆ.

ಮೂರನೆಯದಾಗಿ ಸ್ಟಾಕ್ ಮಾರ್ಕೆಟ್ ಬೆಳವಣಿಗೆ. 2014ರಲ್ಲಿ ನಿಫ್ಟಿ 7,360ರಲ್ಲಿತ್ತು. ಈಗ 25,100ಕ್ಕೆ ಏರಿದೆ. 240 ಪರ್ಸೆಂಟ್ ಹೆಚ್ಚಳವಾಗಿದೆ. ಸೆನ್ಸೆಕ್ಸ್ 24,690ರಿಂದ 82,000ಕ್ಕೆ ಏರಿದೆ, ಶೇ. 235ರಷ್ಟು ವೃದ್ಧಿಸಿದೆ. ಹಣದುಬ್ಬರ ಶೇ. 4ರಿಂದ 6ರ ಮಟ್ಟದಲ್ಲಿದೆ.

ನಾಲ್ಕನೆಯದಾಗಿ 2014ರಿಂದ 2024ರ ತನಕ ಭಾರತ 667 ಶತಕೋಟಿ ಡಾಲರ್ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಸ್ವೀಕರಿಸಿದೆ. ಈ ಹಿಂದಿನ ದಶಕಕ್ಕೆ ಹೋಲಿಸಿದರೆ 67 ಪರ್ಸೆಂಟ್ ಹೆಚ್ಚಳವಾಗಿದೆ. ಕಳೆದ ಹತ್ತು ವರ್ಷದಲ್ಲಿ ಮೋದಿಯವರು ಆರ್ಥಿಕ ಉದಾರೀಕರಣವನ್ನೂ ಹೆಚ್ಚಿಸಿದರು. ರಕ್ಷಣಾ ಕ್ಷೇತ್ರದಲ್ಲಿ ಆಟೋಮ್ಯಾಟಿಕ್ ರೂಟ್‌ನಲ್ಲಿ 74 ಪರ್ಸೆಂಟ್ ಮತ್ತು ಸರಕಾರಿ ಮಾರ್ಗದಲ್ಲಿ ಎಫ್‌ಡಿಐ ಮಿತಿಯನ್ನು 100 ಪರ್ಸೆಂಟ್‌ಗೆ ಹೆಚ್ಚಿಸಿದರು. ರೈಲ್ವೆ, ರಕ್ಷಣಾ ಉತ್ಪಾದನೆ, ಸ್ಪೇಸ್ ಇಂಡಸ್ಟ್ರಿ, ವಿಮಾನಯಾನ, ಸಿಂಗಲ್ ಬ್ರಾಂಡ್ ರಿಟೇಲ್, ವಿಮೆ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆಯ ಮಿತಿಯನ್ನು ಹೆಚ್ಚಿಸಿದರು. ಡಿಜಿಟಲ್ ಕ್ಷೇತ್ರದ ಮೂಲ ಸೌಕರ್ಯವನ್ನು ವೃದ್ಧಿಸಿದರು.

ಐದನೆಯದಾಗಿ ತೆರಿಗೆ ಸುಧಾರಣೆ. 2017ರಲ್ಲಿ ಜಾರಿಯಾದ ಜಿಎಸ್‌ಟಿ, ಸ್ವತಂತ್ರ ಭಾರತದ ಅತಿ ದೊಡ್ಡ ಪರೋಕ್ಷ ತೆರಿಗೆ ಸುಧಾರಣೆ. ದೇಶಾದ್ಯಂತ ಏಕರೂಪದ ತೆರಿಗೆ, ಮಾರುಕಟ್ಟೆ ವ್ಯವಸ್ಥೆ ಅನುಷ್ಠಾನಕ್ಕೆ ಬಂತು. "ಜಿಎಸ್‌ಟಿ ಅತ್ಯಂತ ನಿರ್ಣಾಯಕ ನೀತಿಯಾಗಿತ್ತು. ಇದರ ಜಾರಿಯೂ ಸಂಕೀರ್ಣವಾಗಿತ್ತು. ಅಷ್ಟೂ ರಾಜ್ಯಗಳ ಒಮ್ಮತವನ್ನು ಪಡೆಯುವುದು, ಸಾಂವಿಧಾನಿಕ ತಿದ್ದುಪಡಿಗಳು, ಹಳೆಯ ಡಜನುಗಟ್ಟಲೆ ಪರೋಕ್ಷ ತೆರಿಗೆಗಳನ್ನು ರದ್ದುಪಡಿಸುವುದು, ಆರಂಭಿಕ ವರ್ಷಗಳಲ್ಲಿ ರಾಜ್ಯಗಳಿಗೆ ನಷ್ಟ ಪರಿಹಾರ ನೀಡುವುದು ಹೀಗೆ ಹಲವಾರು ಆಯಾಮಗಳ ಪ್ರಕ್ರಿಯೆಗಳಿದ್ದವು. ಆದರೆ ಇದು ಬಡತನ ನಿರ್ಮೂಲನೆಗೆ, ತೆರಿಗೆ ಇಳಿಕೆಗೆ ಸಹಕರಿಸಿದೆ. ಕೇಂದ್ರ ಮತ್ತು ರಾಜ್ಯಗಳ ತೆರಿಗೆ ಆದಾಯ ಹೆಚ್ಚಿಸಿದೆ'' ಎನ್ನುತ್ತಾರೆ ನೀತಿ ಆಯೋಗದ ಮೊದಲ ಉಪಾಧ್ಯಕ್ಷ ಅರವಿಂದ್ ಪನಗಾರಿಯಾ.

ಆರನೆಯದಾಗಿ ಬ್ಯಾಂಕಿಂಗ್ ಸುಧಾರಣೆ. ಜನ್‌ಧನ್ ಯೋಜನೆ ಅಡಿಯಲ್ಲಿ ಕೆಲವೇ ವರ್ಷಗಳಲ್ಲಿ 56 ಕೋಟಿಗೂ ಹೆಚ್ಚು ಮಂದಿ ಬ್ಯಾಂಕ್ ಖಾತೆಗಳನ್ನು ಪಡೆದಿರುವುದು ಮತ್ತು ಅವುಗಳಲ್ಲಿ 2 ಲಕ್ಷದ 66 ಸಾವಿರ ಕೋಟಿಗೂ ಹೆಚ್ಚು ಬ್ಯಾಲೆನ್ಸ್ ಇರುವುದು ಗಮನಾರ್ಹ. ಆರಂಭದಲ್ಲಿ ಈ ಖಾತೆಗಳಲ್ಲಿ ಯಾರು ದುಡ್ಡು ಇಡುತ್ತಾರೆ? ಎಂದು ಟೀಕಿಸಲಾಗಿತ್ತು. ಆದರೆ ಇವತ್ತು ಸರಕಾರಿ ಯೋಜನೆಗಳ ಪ್ರಯೋಜನಗಳು ಇದರ ಮೂಲಕ ಫಲಾನುಭವಿಗಳಿಗೆ ನೇರವಾಗಿ ಸಿಗುತ್ತಿವೆ. ಸೋರಿಕೆ ತಡೆಯಲಾಗಿದೆ. ಇನ್ಸಾಲ್ವೆನ್ಸಿ ಆ್ಯಂಡ್ ಬ್ಯಾಂಕ್ರಪ್ಟಸಿ ಕೋಡ್ (ಐಬಿಸಿ) ಕೂಡ ಚಾರಿತ್ರಿಕ. ಇದರಿಂದಾಗಿ ಬ್ಯಾಂಕಿಂಗ್ ಸೆಕ್ಟರ್‌ನಲ್ಲಿ ವಸೂಲಾಗದಿರುವ ಸಾಲದ ಪ್ರಮಾಣ ಗಣನೀಯವಾಗಿ ಇಳಿಯಿತು. ಇವತ್ತು ಪಿಎಸ್‌ಯು ಬ್ಯಾಂಕುಗಳು ಲಾಭದ ಹಳಿಗೆ ಮರಳಿವೆ. ಭಾರತದಲ್ಲಿ ದೇಶೀಯ ಉತ್ಪಾದನೆ ಹೆಚ್ಚಿಸಲು ಪಿಎಲ್‌ಐ ಸ್ಕೀಮ್ ಪರಿಣಾಮಕಾರಿಯಾಗಿದೆ.

ಏಳನೆಯದಾಗಿ, ದೇಶದ ಮೂಲಸೌಕರ್ಯ ವಲಯದ ಅಭಿವೃದ್ಧಿ. ಕಳೆದೊಂದು ದಶಕದಿಂದ ಇದು ಅಭೂತಪೂರ್ವ ರೀತಿಯಲ್ಲಿ ನಡೆದಿದೆ. ಇದಕ್ಕಾಗಿ ಕ್ಯಾಪಿಟಲ್ ಎಕ್ಸ್‌ಪೆಂಡೀಚರ್ 2 ಲಕ್ಷ ಕೋಟಿ ರುಪಾಯಿಯಿಂದ 11.21 ಲಕ್ಷ ಕೋಟಿ ರುಪಾಯಿಗೆ ಏರಿಕೆಯಾಗಿದೆ. ವಿಶ್ವದ ಅತ್ಯಂತ ಎತ್ತರದ ರೈಲ್ವೆ ಸೇತುವೆ (ಚೆನಾಬ್ ಬ್ರಿಡ್ಜ್), ಜಗತ್ತಿನ ಅತಿ ಎತ್ತರದ ಮತ್ತು ಉದ್ದದ ಹೆದ್ದಾರಿ ಸುರಂಗ ಮಾರ್ಗ (ಅಟಲ್ ಟನೆಲ್) ನಿರ್ಮಿಸಲಾಗಿದೆ. ಜಗತ್ತಿನಲ್ಲೇ ಎರಡನೇ ದೊಡ್ಡ ಹೆದ್ದಾರಿ ನೆಟ್‌ವರ್ಕ್ ಭಾರತದ್ದು. 2014-24ರ ಅವಧಿಯಲ್ಲಿ ಹೆದ್ದಾರಿಗಳು 91,287 ಕಿಲೋಮೀಟರ್‌ನಿಂದ 146,195 ಕಿಲೋಮೀಟರ್‌ಗೆ ವೃದ್ಧಿಸಿವೆ! ಅತ್ಯಾಧುನಿಕ ಮೆಟ್ರೊ ರೈಲ್ವೆ ಮಾರ್ಗ 248 ಕಿ.ಮೀ.ಗಳಿಂದ 1011 ಕಿಲೋಮೀಟರ್‌ಗೆ ವಿಸ್ತರಿಸಿದೆ.

ಇನ್ನೇನು 2028-2029ರೊಳಗೆ ಭಾರತವು ಅಮೆರಿಕ-ಚೀನಾದ ಬಳಿಕ ಮೂರನೇ ಸ್ಥಾನಕ್ಕೆ ಜಿಗಿಯುವುದು ಬೆಳಕಿನಷ್ಟೇ ಸ್ಪಷ್ಟ! ಪ್ರಸ್ತುತ ಭಾರತದ ಜಿಡಿಪಿ ಮೌಲ್ಯ 4.19 ಟ್ರಿಲಿಯನ್ ಡಾಲರ್ ಆಗಿದ್ದರೆ, ಜರ್ಮನಿಯದ್ದು 4.74 ಟ್ರಿಲಿಯನ್ ಡಾಲರ್. ಹೀಗಾಗಿ ಅಂತರ ಕಡಿಮೆ. ಮಾತ್ರವಲ್ಲದೆ, ಕರೆನ್ಸಿಯ ಖರೀದಿ ಸಾಮರ್ಥ್ಯ ಅಥವಾ ಪರ್ಚೇಸಿಂಗ್ ಪವರ್ ಪ್ಯಾರಿಟಿಯಲ್ಲಿ ಭಾರತ ಈಗಾಗಲೇ ಮೂರನೇ ಸ್ಥಾನದಲ್ಲಿದೆ. ಹಾಗಾದರೆ ತಲಾ ಆದಾಯದಲ್ಲಿ ಹಿಂದುಳಿದಿರುವುದೇಕೆ? ಎಂಬ ಪ್ರಶ್ನೆಯನ್ನು ಕೇಳಬಹುದು. ಜನಸಂಖ್ಯೆಯ ಹೆಚ್ಚಳವೇ ಇದಕ್ಕೆಕ ಕಾರಣ. ಆದರೆ ಮುಂದಿನ ದಶಕದಲ್ಲಿ ಪ್ರತಿ ವರ್ಷವೂ ಭಾರತವು ತನ್ನ ಜಿಡಿಪಿಗೆ ಒಂದು ಟ್ರಿಲಿಯನ್ ಡಾಲರ್‌ಗಳನ್ನು ಸೇರಿಸಲಿದೆ. ಹೀಗಾಗಿ ಭವಿಷ್ಯದ ದಿನಗಳಲ್ಲಿ ತಲಾ ಆದಾಯವೂ ಏರಿಕೆಯಾಗಲಿದೆ. ಇನ್ನೊಂದೈವತ್ತು ವರ್ಷ ಚೀನಾವನ್ನು ಹಿಂದಿಕ್ಕಲು ಸಾಧ್ಯವಾಗದಿರಬಹುದು. ಆದರೆ ಜಿಡಿಪಿ ಮತ್ತು ತಲಾ ಆದಾಯ ಎರಡೂ ಏರಿಕೆಯಾಗಲಿರುವುದು ನಿಶ್ಚಿತ.

ಈ ಬಗೆಯ ಗಣನೀಯ ವೇಗ ಇದೆಯಲ್ಲವೇ? ಅದು ಚಾರಿತ್ರಿಕ. ಭಾರತದ ಇತಿಹಾಸದ ಸುವರ್ಣಾಕ್ಷರಗಳಲ್ಲಿ ಇದು ದಾಖಲಾಗಲಿದೆ. ಹಾಗಾದರೆ ಮೋದಿಯವರ ಮುಂದಿನ ಸುಧಾರಣಾ ಕ್ರಮಗಳೇನಿರಬಹುದು? ಎಸ್‌ಬಿಐನ ಆರ್ಥಿಕ ಸಲಹೆಗಾರ ಸೌಮ್ಯ ಕಾಂತಿ ಘೋಷ್ ಪ್ರಕಾರ, ನಗರಗಳ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಕೃಷಿ ಕ್ಷೇತ್ರದ ಸುಧಾರಣೆ ಆಗಿರಬಹುದು! ದೇಶ ಕುತೂಹಲದಿಂದ ಇದನ್ನು ನಿರೀಕ್ಷಿಸುತ್ತಿದೆ.

## ಭಟ್ಟರ್ ಸ್ಕಾಚ್

- ಶ್ರೀಲತಾ ಮಂಜುನಾಥ, ತುಮಕೂರು
ಭಟ್ರೇ, ಪರಚುವುದು ಹೆಣ್ಣಿನ ವರ್ತನೆ, ಆದರೆ ಆ ಕೆಲಸವನ್ನು ಗಂಡು ಮಾಡಿದರೆ?
– **ಅವನಿಗೆ 'ಪರಚುರಾಮ' ಎನ್ನಬಹುದು!**

- ಎಸ್.ರಾಘವೇಂದ್ರ, (ಇಮೇಲ್ ಮೂಲಕ)
ಭಟ್ರೇ, ನಾನು ಮತ್ತು ನನ್ನ ಹೆಂಡತಿ ಎಲ್ಲ ವಿಷಯಗಳಲ್ಲೂ ರಾಜಿ ಆಗ್ತೇವೆ, ಸರಿನಾ?
– **ಜಗಳವಾಡಿದ ನಂತರ ಕೊನೆಗುಳಿಯುವುದು ಅದೊಂದೇ ದಾರಿ!**

- ಹರಿಓಂ ಶಾಸ್ತ್ರಿ, ಶಂಕರಪುರ
ಮದುವೆಯಲ್ಲಿ ಮದುಮಕ್ಕಳನ್ನು ಬಿಟ್ಟರೆ ಬೇರೆ ಯಾರಲ್ಲಿ ಭಾವನೆಗಳು ಮಡುಗಟ್ಟಿರುತ್ತದೆ?
– **ಸಂ'ಭಾವನೆ' ಪಡೆಯುವ ಪುರೋಹಿತರಲ್ಲಿ!**

- ನಿಂಗರಾಜು ಆರ್.,(ಇಮೇಲ್ ಮೂಲಕ)
ಭಟ್ರೇ, ಹೆಂಡತಿಗೂ, ಅಮ್ಮನ ಪ್ರೀತಿಗೂ ಏನ್ ವ್ಯತ್ಯಾಸ?
– **ಹೆಂಡತಿಯೂ ಮುಂದೆ ಅಮ್ಮ ಆಗ್ತಾಳಲ್ಲ!**

- ರಾಜಾರಾಮ ಹೆಗಡೆ, ಬೆಂಗಳೂರು
ಭಟ್ರೇ, ಒಬ್ಬಳಿಗಿಂತ ಹೆಚ್ಚು ಹೆಂಡತಿ ಇದ್ರೆ ಏನು ಪ್ರಯೋಜನ?
– **ಆಗ ಒಂದಕ್ಕಿಂತ ಹೆಚ್ಚು ಮನೆ ಇರುತ್ತದಲ್ಲ?!**

- ಸತೀಶ ಎಲ್.ವಿ. (ಇಮೇಲ್ ಮೂಲಕ)
ಭಟ್ರೇ, ಮರಗಳನ್ನು ಯಾಕೆ ಬೆಳೆಸಬೇಕು?
– **ಮರಕೋತಿ ಆಟವಾಡಲು ಬೇಕಲ್ಲ?!**

- ರಾಜೇಶ ಶೆಟ್ಟಿ, ಬೆಳ್ತಂಗಡಿ
ಭಟ್ರೇ, ಬಿಜೆಪಿಯಲ್ಲಿ ಯಾರಿಗೂ ಬೆಳೆಯಲು ಬಿಡುವುದಿಲ್ಲವಲ್ಲ?
– **ಗಡ್ಡ, ಕೂದಲು, ಉಗುರುಗಳನ್ನು ಬೆಳೆಸಿಕೊಳ್ಳುವವರಿಗಷ್ಟೇ ಪ್ರಾಶಸ್ತ್ಯವಂತೆ!**

- ಸಂದೀಪ ಪೈ,(ಇಮೇಲ್ ಮೂಲಕ)
ಭಟ್ರೇ, ಮುತ್ತು ಪರಿಶುದ್ಧವಾ?
– **ನೊರೆ ಬಂದ್ರೆ, ಸೋಡಾ ಬೆರೆಸಿರುವ ಸಾಧ್ಯತೆ ಇದೆ ಅಂತೀಯಾ?!**

- ರಾಜೇಶ ನಾಮಪಿಲ್ಲ, ದಾವಣಗೆರೆ
ಭಟ್ರೇ, ಗಣಿತ ಬಹಳ ಒಳ್ಳೆಯ ವಿಷಯ ಅಂತಾರಲ್ಲ?
– **ವಿಷಯವೇನೋ ಒಳ್ಳೆಯದು, ಆದರೆ ಉತ್ತರ ತಪ್ಪಾಗಿರುತ್ತದಲ್ಲ?!**

- ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಹೆಂಡತಿ ಆಗಾಗ ಅತಿಯಾದ ಪ್ರೀತಿ ತೋರಿಸುವ ಗುಟ್ಟೇನು?
– **ಹೇಮಂತು, ಯಾರ ಹೆಂಡತಿ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು ಅಲ್ವಾ?!**

# ಅರಾಜಕತೆಯ ಕಿಚ್ಚನ್ನು ಭಾರತಕ್ಕೂ ಹಬ್ಬಿಸಲು ಸಂಚು

**ನೆರೆದೇಶಗಳಲ್ಲಿ ಪದೇಪದೆ ರಾಜಕೀಯ ಅಸ್ಥಿರತೆ ಸಂಭವಿಸುತ್ತಿದ್ದು, ಭಾರತದ ಮೇಲೂ ಇದರ ಪ್ರಭಾವ ಉಂಟಾಗುತ್ತಿದೆ. ಅಕ್ರಮ ವಲಸಿಗರು ಪರಿಸ್ಥಿತಿಯ ದುರ್ಲಾಭ ಪಡೆದು, ಗಡಿದಾಟಿ ಬಂದು, ದೇಶದ ಕಾನೂನು-ಸುವ್ಯವಸ್ಥೆಗೆ ಸವಾಲಾಗಿದ್ದಾರೆ. ಇಂಥವರಿಗೆ ಆಶ್ರಯ ನೀಡುವವರು ನಮ್ಮಲ್ಲಿ ಸಾಕಷ್ಟಿದ್ದಾರೆ.**

**ಪ್ರಕಾಶಪಥ**
ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ನೆರೆಯ ರಾಷ್ಟ್ರಗಳಲ್ಲಿ ಉಂಟಾಗಿರುವ ಅರಾಜಕತೆಯ ಕಿಚ್ಚನ್ನು ಭಾರತದಲ್ಲೂ ಹಬ್ಬಿಸುವ ಷಡ್ಯಂತ್ರವನ್ನು ಮೋದಿ ವಿರೋಧಿಗಳು ಹೂಡಿದ್ದಾರಾ? ಎಂಬ ಅನುಮಾನ ಕಾಡುತ್ತಿದೆ.

ಭಾರತದ ನೆರೆಹೊರೆಯಲ್ಲಿನ ವಿದ್ಯಮಾನಗಳನ್ನು ಗಮನಿಸಿದಾಗ 'ಭಾರತೀಯರು ಅದೆಷ್ಟು ಅದೃಷ್ಟವಂತರು' ಎಂದು ಹೆಮ್ಮೆ ಪಡಬೇಕಾಗಿತ್ತು. ಆದರೆ, ಹಿಂಸೆ, ಗಲಭೆ, ದೊಂಬಿಯಿಂದ ನಲುಗಿಹೋದ ಆ ದೇಶಗಳ ದುರ್ಭರ ಪರಿಸ್ಥಿತಿ ನಮಗೂ ಬರಲಿ ಎಂದು ಆಶಿಸುತ್ತಿದ್ದಾರೆ ವಿಕೃತ ಮನಸ್ಸಿನ ಕಾಂಗ್ರೆಸ್ ನಾಯಕರು. ಇವರ ಜತೆಗೆ ಸಾಮಾಜಿಕ ಜಾಲತಾಣದ 'ಕಾಗದದ ಹುಲಿಗಳು' ಕೂಡ ತಲೆಯೆತ್ತಿವೆ.

ರಾಜಕೀಯ ಅಸ್ಥಿರತೆ, ಅಧಿಕಾರಸ್ಥರ ಸ್ಥಾನಪಲ್ಲಟ/ಪದಚ್ಯುತಿ, ಆರ್ಥಿಕ ಕ್ಷೋಭೆ, ಮತಾಂಧತೆಯ ಅಟ್ಟಹಾಸ, ವ್ಯಾಪಕ ಹಿಂಸಾಚಾರ ಹೀಗೆ ಒಂದಲ್ಲಾ ಒಂದು ಬಾಧೆಯಿಂದ ನಮ್ಮ ನೆರೆಯ ಬಹುತೇಕ ರಾಷ್ಟ್ರಗಳು ಬಳಲಿಹೋಗಿವೆ. ಪ್ರಭುತ್ವದ ವಿರುದ್ಧದ ಬಂಡಾಯದ ದನಿಯು ಹಿಂಸೆಗೆ ತಿರುಗಿ, ಸಾರ್ವಜನಿಕ ಸ್ವತ್ತುಗಳು ಲೂಟಿಯಾಗಿ, ಸಾವಿರಾರು ಕೋಟಿ ಹಣ ಕರಗಿಹೋಗಿ, ನೂರಾರು ಜನರ ಸಾವುಗಳಾಗಿ ಹೋರಾಟವು ದಿಕ್ಕುತಪ್ಪಿತು, ಆ ದೇಶಗಳನ್ನು 25 ವರ್ಷದಷ್ಟು ಹಿಂದಕ್ಕೆ ಕೊಂಡೊಯ್ದಿತು. ಸರಕಾರಗಳು ತಪತಪನೆ ಉದುರಿದವು. ಅಫ್ಘಾನಿಸ್ತಾನ, ಶ್ರೀಲಂಕಾ, ನೇಪಾಳ ದೇಶಗಳ ಪ್ರಧಾನಿ/ಅಧ್ಯಕ್ಷರು ಜೀವ ಉಳಿಸಿಕೊಳ್ಳಲು ರಾತ್ರೋರಾತ್ರಿ ದೇಶ ತೊರೆದು ಪರದೇಶಗಳಲ್ಲಿ ಆಶ್ರಯ ಪಡೆಯುವಂತಾದರೆ, ಪಾಕ್ ಮತ್ತು ಮ್ಯಾನ್ಮಾರ್ ಪ್ರಧಾನಿಗಳು ಸೆರೆಮನೆ ಸೇರಿದ್ದಾರೆ.

20 ವರ್ಷಗಳಿಂದ ನೆಲೆಯೂರಿದ್ದ ಅಮೆರಿಕದ ಸೇನೆಯು ಅಫ್ಘಾನಿಸ್ತಾನದಿಂದ ನಿರ್ಗಮಿಸಲು ಮುಂದಾಗುತ್ತಿದ್ದಂತೆ, ಆಫ್ಘನ್ ಸರಕಾರದ ವಿರುದ್ಧ ತಾಲಿಬಾನ್ ಯುದ್ಧವನ್ನು ಘೋಷಿಸಿತು. ಅಮೆರಿಕದ ಸೇನೆಯ ನೆರವಿಲ್ಲದೆ ಆಫ್ಘನ್ ಸೈನ್ಯವು ತಾಲಿಬಾನಿಗಳಿಗೆ ಸುಲಭದ ತುತ್ತಾಯಿತು. ಅಧ್ಯಕ್ಷ ಅಶ್ರಫ್ ಘನಿ ಯುಎಇಗೆ ಪರಾರಿಯಾದರು. ಅಫ್ಘಾನಿಸ್ತಾನವು ಮತ್ತೊಮ್ಮೆ ಕಟ್ಟರ್ ಮುಸ್ಲಿಂ ಮೂಲಭೂತವಾದಿಗಳ ಕಪಿಮುಷ್ಟಿಯಲ್ಲಿ ಸಿಲುಕಿತು.

ಮ್ಯಾನ್ಮಾರ್‌ನಲ್ಲಿ 2020ರಲ್ಲಿ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದಿದ್ದ ಅಂಗ್ ಸಾನ್ ಸೂಕಿಯವರ ವಿರುದ್ಧ 2021ರಲ್ಲಿ ನಡೆದ ಮಿಲಿಟರಿ ಕ್ಷಿಪ್ರಕ್ರಾಂತಿಯಿಂದಾಗಿ ಸರಕಾರವು ಸೇನೆಯ ತೆಕ್ಕೆಗೆ ಹೋಯಿತು. ಸೇನಾಡಳಿತವು ಪ್ರಧಾನಿ ಅಂಗ್ ಸಾನ್ ಸೂಕಿಯವರನ್ನು ಸೆರೆಮನೆಗೆ ದೂಡಿತು. 2016ರಿಂದ ನಡೆಯುತ್ತಿದ್ದ ಜನಾಂಗೀಯ ದಂಗೆಗೆ ರೋಹಿಂಗ್ಯಾ ಮುಸ್ಲಿಮರು ಗುರಿಯಾಗಿದ್ದಾರೆ. ಈ ರೋಹಿಂಗ್ಯಾಗಳು ಮ್ಯಾನ್ಮಾರ್‌ನಲ್ಲಿ ನಿರಾಶ್ರಿತರಾಗಿ, ಭಾರತಕ್ಕೆ ಬಂದು ನೆಲೆಸಿ ನಮಗೆ ದೊಡ್ಡ ತಲೆನೋವಾಗಿದ್ದಾರೆ.

ಪಾಕಿಸ್ತಾನದಲ್ಲಿ ರಾಜಕೀಯ ಸ್ಥಿರತೆಯು ಅನಿಶ್ಚಿತವಾಗಿದ್ದು, ಅಧಿಕಾರ ಪಲ್ಲಟವು ಸರ್ವೇಸಾಮಾನ್ಯ ಸಂಗತಿಯಾಗಿಬಿಟ್ಟಿದೆ. ಪಾಕಿಸ್ತಾನದ ಡಿಎನ್‌ಎಯಲ್ಲಿ ದ್ವೇಷದ ರಾಜಕೀಯ ಬೆರೆತುಹೋಗಿದೆ. ಒಂದು ಕಾಲಕ್ಕೆ ಮೆರೆಯುತ್ತಿದ್ದ ಜಿಯಾ-ಉಲ್-ಹಕ್ ಅವರು, ಮಾಜಿ ಪ್ರಧಾನಿ ಜುಲ್ಫಿಕರ್ ಅಲಿ ಭುಟ್ಟೋ ಅವರನ್ನು ನ್ಯಾಯಾಲಯದ ಮೂಲಕ ನೇಣುಗಂಬಕ್ಕೆ ಕಳುಹಿಸಿದರು. ಇವರ ಪರಸ್ಪರ ದ್ವೇಷದ ಭೀಕರತೆಯನ್ನು ನೆನೆದರೆ ಮೈ 'ಜುಂ' ಎನ್ನುತ್ತದೆ. ಇನ್ನು, 2022ರಲ್ಲಿ ಅಂದಿನ ಪ್ರಧಾನಿ ಇಮ್ರಾನ್ ಖಾನ್‌ರನ್ನು ಕೆಳಗಿಳಿಸಿ ಜೈಲಿಗೆ ಅಟ್ಟಲಾಯಿತು. ಇಮ್ರಾನ್‌ರು ಹೊರಗೇ ಬರಲಾಗದಷ್ಟು ಮೊಕದ್ದಮೆಗಳನ್ನು ಅವರ ಮೇಲೆ ಹಾಕಲಾಗಿದೆ. ಬಲೂಚಿ ವಿಮೋಚನಾ ಹೋರಾಟಗಾರರು ಮತ್ತು ಪಾಕಿಸ್ತಾನದ ಸೇನೆಯ ನಡುವಿನ ಸಂಘರ್ಷ ಮತ್ತು ಸಾವು-ನೋವು ದಿನನಿತ್ಯದ ಸುದ್ದಿಯಾಗಿಬಿಟ್ಟಿದೆ. ಒಟ್ಟಿನಲ್ಲಿ ಅರಾಜಕತೆಯಿಂದಾಗಿ ಪಾಕಿಸ್ತಾನವು ಆರ್ಥಿಕವಾಗಿ ದಿವಾಳಿಯಾಗಿದೆ.

2022ರಲ್ಲಿ ಶ್ರೀಲಂಕಾ ದೇಶವು ತೀವ್ರ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿತು. ವಿದೇಶಿ ವಿನಿಮಯ ಖಾಲಿಯಾಗಿ, ಇಂಧನ ಖರೀದಿಸಲೂ ಹಣವಿಲ್ಲದಂತಾಯಿತು. ಅಂದಿನ ರಾಷ್ಟ್ರಾಧ್ಯಕ್ಷ ಗೋಟಬಯ ರಾಜಪಕ್ಸೆ ವಿರುದ್ಧ ದೇಶಾದ್ಯಂತ ಪ್ರತಿಭಟನೆ ಶುರುವಾಯಿತು. ನಾಗರಿಕರ ಉಗ್ರ ಪ್ರತಿಭಟನೆಗೆ ಬೆದರಿದ ಸಚಿವ ಸಂಪುಟದ 26 ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಜನಾಕ್ರೋಶವು ರಾಜಕೀಯ ನಾಯಕತ್ವದ ವಿರುದ್ಧ ತಿರುಗಿತು, ಪ್ರತಿಭಟನೆ ಹಿಂಸಾರೂಪವನ್ನು ತಳೆಯಿತು. ಪರಿಸ್ಥಿತಿ ವಿಕೋಪಕ್ಕೆ ತಲುಪಿದಾಗ ರಾಜಪಕ್ಸೆ ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತು, ಪ್ರಾಣ ಉಳಿದರೆ ಸಾಕೆಂದು ಮಾಲ್ಡೀವ್ಸ್‌ಗೆ ಪರಾರಿಯಾದರು.

2024ರಲ್ಲಿ, ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾರ ಸರಕಾರದ ಮೀಸಲಾತಿ ನೀತಿಯ ವಿರುದ್ಧ ಶುರುವಾದ ವಿದ್ಯಾರ್ಥಿಗಳ ಪ್ರತಿಭಟನೆಯು ಹಿಂಸೆಗೆ ತಿರುಗಿತು. ಸರಕಾರದ ವಿರುದ್ಧ ಜನರು ದಂಗೆಯೆದ್ದರು. ನೂರಾರು ಜನರ ಸಾವು ಸಂಭವಿಸಿ ಬಾಂಗ್ಲಾದೇಶ ಹೊತ್ತಿ ಉರಿಯಿತು. ದೌರ್ಭಾಗ್ಯದ ಸಂಗತಿಯೆಂದರೆ, ಆಡಳಿತಾರೂಢರ ವಿರುದ್ಧದ ಪ್ರತಿಭಟನೆಯು ಮೂಲಭೂತವಾದಿಗಳ ಹಿಡಿತಕ್ಕೆ ಸಿಕ್ಕಿ, ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮನೆ-ಮಂದಿರಗಳ ಮೇಲೆ ದಾಳಿಗಳಾದವು. ಸಾವಿರಾರು ಹಿಂದೂಗಳು ಅಸಹಾಯಕರಾಗಿ ನಾನಾ ಸಂಕಟವನ್ನು ಅನುಭವಿಸಬೇಕಾಗಿ ಬಂತು. ಜನಾಕ್ರೋಶಕ್ಕೆ ಮಣಿದ ಪ್ರಧಾನಿ ಶೇಖ್ ಹಸೀನಾರು ದೇಶವನ್ನು ತೊರೆದು ಭಾರತದಲ್ಲಿ ಆಶ್ರಯ ಪಡೆಯಬೇಕಾಗಿ ಬಂತು.

ನೇಪಾಳದ 'ಜೆನ್-ಝುಡ್' ಪೀಳಿಗೆಯ ಯುವಜನರು, ಅಧಿಕಾರಸ್ಥರ ಭ್ರಷ್ಟಾಚಾರ, ಅವರಿಂದ ಸೃಷ್ಟಿಯಾದ ವ್ಯಾಪಕ ನಿರುದ್ಯೋಗ ಸಮಸ್ಯೆಯಿಂದ ಬಳಲಿ ಬೆಂಡಾಗಿದ್ದರು. ಅಲ್ಲಿನ ಸರಕಾರವು ಯುವಜನರ ಭಾವನೆಯನ್ನು ಕಡೆಗಣಿಸಿ, ಅವರ ದನಿಯನ್ನು ಅಡಗಿಸಲು ಸಾಮಾಜಿಕ ಜಾಲತಾಣಗಳ ಮೇಲೆ ನಿಷೇಧ ಹೇರಿತು. ಇದರಿಂದಾಗಿ ಯುವಜನರ ಸಹನೆಯ ಕಟ್ಟೆಯೊಡೆದು, ಅವರು ಬೀದಿಗಿಳಿದು ಅತ್ಯುಗ್ರವಾಗಿ ಪ್ರತಿಭಟಿಸಿದರು. ಪ್ರತಿಭಟನೆಯು ನಿಯಂತ್ರಣವನ್ನು ಕಳೆದುಕೊಂಡ ಕಾರಣದಿಂದಾಗಿ ಮಾಜಿ ಉಪಪ್ರಧಾನಿಗಳ ಪತ್ನಿಯ ಜೀವಂತ ದಹನವಾಯಿತು. ಹಣಕಾಸು ಸಚಿವರನ್ನು ಅಟ್ಟಾಡಿಸಿಕೊಂಡು ಹೊಡೆಯಲಾಯಿತು. ಸಂಸತ್ ಭವನ ಮತ್ತು ಸರ್ವೋಚ್ಚ ನ್ಯಾಯಾಲಯದ ಕಟ್ಟಡಗಳು ಅಗ್ನಿಗಾಹುತಿಯಾದವು. ಎರಡು ದಿನಗಳ ಹೋರಾಟವು ನೇಪಾಳದ ಇತಿಹಾಸವನ್ನೇ ಬದಲಿಸಿಬಿಟ್ಟಿತು. ತತ್ಪರಿಣಾಮವಾಗಿ, ಪ್ರಧಾನಿ ಕೆ.ಪಿ.ಓಲಿ ಅವರು ದೇಶವನ್ನು ತೊರೆದು ಪರಾರಿಯಾಗುವಂಥ ಪರಿಸ್ಥಿತಿ ಸೃಷ್ಟಿಯಾಯಿತು. ಇದು ಪ್ರಸಕ್ತ ವರ್ಷದಲ್ಲಿ ನೇಪಾಳದಲ್ಲಾದ ಬೆಳವಣಿಗೆ.

ಒಟ್ಟಿನಲ್ಲಿ, ಭಾರತದ ನೆರೆಹೊರೆ ದೇಶಗಳಲ್ಲಿ ಪದೇಪದೆ ರಾಜಕೀಯ ಅಸ್ಥಿರತೆ ಸಂಭವಿಸುತ್ತಿರುವುದು ದುರ್ದೈವದ ಸಂಗತಿ. ಭಾರತದ ಮೇಲೂ ಇದರ ಪ್ರಭಾವ ಉಂಟಾಗುತ್ತಿದೆ. ಅಕ್ರಮ ವಲಸಿಗರು ಪರಿಸ್ಥಿತಿಯ ದುರ್ಲಾಭ ಪಡೆದು, ಗಡಿದಾಟಿ ಬಂದು, ದೇಶದ ಕಾನೂನು ಮತ್ತು ಸುವ್ಯವಸ್ಥೆಗೆ ಸವಾಲಾಗಿದ್ದಾರೆ. ಹೀಗೆ ಅಕ್ರಮವಾಗಿ ನುಸುಳಿ ಬಂದವರಿಗೆ ಆಶ್ರಯ ನೀಡುವವರು ನಮ್ಮಲ್ಲಿ ಸಾಕಷ್ಟಿದ್ದಾರೆ. ವೋಟಿಗೋಸ್ಕರ ಅವರಿಗೆ ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯನ್ನು ಕೊಡಿಸಲು ಕೆಲವು ರಾಜಕೀಯ ಪಕ್ಷಗಳು ಪೈಪೋಟಿಗೆ ನಿಂತಿರುವುದು ಕಟುಸತ್ಯ.

ಮತದಾನದ ಮೂಲಕ ನಮ್ಮ ಹಕ್ಕು ಚಲಾಯಿಸಿ, ಅಧಿಕಾರಸ್ಥರ ಭ್ರಷ್ಟಾಚಾರ, ಸ್ವಜನಪಕ್ಷಪಾತಗಳನ್ನು ಕಿತ್ತೊಗೆದು, ಸರ್ವಾಧಿಕಾರಿ ಆಡಳಿತಗಳನ್ನು ಬದಲಾಯಿಸುವ ಸುಸಂಸ್ಕೃತಿಯ ನಾಡು ನಮ್ಮದು. 1977ರಲ್ಲಿ, ಇಂದಿರಾ ಗಾಂಧಿಯವರ ದಮನಕಾರಿ ಸರಕಾರವನ್ನು ಮತದಾನದ ಮೂಲಕ ಗುಡಿಸಿ ಬಿಸಾಡಲಾಯಿತು. ಆದರೆ ಅದೇ ಜನರು 1980ರಲ್ಲಿ, ದೇಶದ ಹಿತವನ್ನು ಕಡೆಗಣಿಸಿ ಕಚ್ಚಾಟದಲ್ಲಿ ತೊಡಗಿ ರಾಜಕೀಯ ಅಸ್ಥಿರತೆಯನ್ನು ಹುಟ್ಟುಹಾಕಿದ್ದ ಜನತಾಪಾರ್ಟಿಯ ಸರಕಾರವನ್ನು ಕಿತ್ತೆಸೆದು, ತಾವೇ ದೂರ ತಳ್ಳಿದ್ದ ಇಂದಿರಾ ಗಾಂಧಿಯವರನ್ನು ಮತ್ತೆ ಅಧಿಕಾರಕ್ಕೆ ತಂದರು.

2004ರಿಂದ 2014ರವರೆಗೆ ಅಧಿಕಾರದಲ್ಲಿದ್ದ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರವು ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿತ್ತು, ಭಯೋತ್ಪಾದಕರ ಉಪಟಳವನ್ನು ನಿಯಂತ್ರಿಸಲು ಸೋತಿತ್ತು. ವಸೂಲಾಗದ ಸಾಲದ ಪ್ರಮಾಣವು ಮೇರೆ ಮೀರಿ, ಆರ್ಥಿಕ ಸಂಕಟ ತೀವ್ರವಾಗಿ, ಬ್ಯಾಂಕಿಂಗ್ ವ್ಯವಸ್ಥೆಯು ಕುಸಿಯುವ ಹಂತಕ್ಕೆ ತಲುಪಿದಾಗ, 2014ರ ಲೋಕಸಭಾ ಚುನಾವಣೆಯಲ್ಲಿ ಜನರು ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರಕಾರವನ್ನು ಅಧಿಕಾರಕ್ಕೆ ತಂದರು.

ಕಾಂಗ್ರೆಸ್ಸಿಗರು ಮತ್ತು 'ಮೋದಿ-ವಿರೋಧಿ' ಶಕ್ತಿಗಳು, ಕಳೆದ ಮೂರು ಚುನಾವಣೆಗಳಲ್ಲಿ ಬಿಜೆಪಿಯನ್ನು ಮಣಿಸಲು ಹರಸಾಹಸಪಟ್ಟು ಅಕ್ಷರಶಃ ದಿಕ್ಕೆಟ್ಟವರಾಗಿದ್ದಾರೆ. ಅವರು ಉರುಳಿಸಿದ ದಾಳಗಳು ಅವರಿಗೇ ಉರುಳಾಗಿ ಪರಿಣಮಿಸಿವೆ. ಮೋದಿಯವರನ್ನು ಕಟ್ಟಿಹಾಕಲು ಹೂಡಿದ ತಂತ್ರಗಾರಿಕೆಗಳೇ ಮೋದಿಯವರನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿವೆ. ಯಾವುದೇ ಕುತಂತ್ರ, ಷಡ್ಯಂತ್ರಗಳು ಮೋದಿಯವರ ಸರಕಾರವನ್ನು ಅಲುಗಾಡಿಸಲು ವಿಫಲವಾಗಿವೆ. ಹೀಗಾಗಿ 'ಮೋದಿ-ವಿರೋಧಿ' ಶಕ್ತಿಗಳು ಮಣಿಸುವ ದಾರಿ ಕಾಣದೆ ಕಂಗೆಟ್ಟಿದ್ದಾರೆ. ಇದೀಗ ಅವರು ಮೋದಿಯವರ ವಿರುದ್ಧ ಮತ್ತೊಂದು ತಂತ್ರಗಾರಿಕೆಯನ್ನು ಹೆಣೆದಿದ್ದಾರೆ. ಭ್ರಷ್ಟಾಚಾರ, ದುರಾಡಳಿತ ಮುಂತಾದ ಕಾರಣಗಳಿಂದಾಗಿ ನೆರೆರಾಷ್ಟ್ರಗಳಲ್ಲಿ ಅಲ್ಲಿನ ಜನರು ಸರಕಾರದ ವಿರುದ್ಧ ಬಂಡಾಯವೆದ್ದರೆ, ಇವರು ಕೂಡಲೇ ಮುಗಿಬಿದ್ದು 'ಮುಂದಿನ ಸರದಿ ಭಾರತದ್ದು' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡಿ, ಬಂಡಾಯವೇಳಲು ಜನರನ್ನು ಪ್ರಚೋದಿಸುವ ಅಪಾಯಕಾರಿ ಚಟುವಟಿಕೆಗೆ ಮುಂದಾಗಿದ್ದಾರೆ.

ನೇರವಾಗಿ ಇದರ ನೇತೃತ್ವವನ್ನು ವಹಿಸುವ ಧೈರ್ಯವಿಲ್ಲದ ಕಾಂಗ್ರೆಸ್ಸಿಗರು, ತಮ್ಮ ಟ್ರೋಲ್‌ಗಳ ಮೂಲಕ ಅಥವಾ ಮೋದಿಯವರನ್ನು ಸದಾ ವಿರೋಧಿಸುವ ಖಾತೆಗಳ ಮೂಲಕ ಈ 'ಮಹತ್ಕಾರ್ಯ'ಕ್ಕೆ ಇಳಿದಿದ್ದಾರೆ, ತನ್ಮೂಲಕ ಸಾಮಾಜಿಕ ಜಾಲತಾಣಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರಲ್ಲಿ ಕಾಂಗ್ರೆಸ್ ನಾಯಕ ಉದಿತ್ ರಾಜ್, ಸಂಜಯ್ ಝಾ, ಶಿವಸೇನೆಯ ನಾಯಕ ಸಂಜಯ್ ರಾವತ್ ಮುಂತಾದವರ ಪಾತ್ರ ಗಮನಾರ್ಹವಾಗಿದೆ. ಸ್ವತಃ ರಾಹುಲ್ ಗಾಂಧಿಯವರು, ಮತದಾರರ ಪಟ್ಟಿಯ ದೋಷವನ್ನು 'ಮತಗಳ್ಳತನ' ಎಂದು ಬಿಂಬಿಸಿ, ನಮ್ಮ ಚುನಾವಣಾ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಹಾಳುಮಾಡಿ, ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಆರ್ಥಿಕತೆಯನ್ನು 'ಸತ್ತ ಆರ್ಥಿಕತೆ' ಎಂದು ಲೇವಡಿ ಮಾಡಿದರೆ, ರಾಹುಲರು ಅದನ್ನು ಬೆಂಬಲಿಸುತ್ತಾರೆ. ದಿನಗಳೆದಂತೆ ಅವರ ನಕಾರಾತ್ಮಕ ನಡೆ ಸಾಮಾನ್ಯವಾಗುತ್ತಿದೆ. ಕಾಂಗ್ರೆಸ್ ಮತ್ತು ಇತರ ವಿಪಕ್ಷಗಳ ನಾಯಕರು ನರೇಂದ್ರ ಮೋದಿಯವರ ನಾಯಕತ್ವದ ಮುಂದೆ ಮಂಕಾಗಿದ್ದಾರೆ. ಮೋದಿಯವರನ್ನು ದೂಷಿಸಿ ದೂಷಿಸಿ, ಬಳಲಿ ಬೆಂಡಾಗಿರುವ ಕಾಂಗ್ರೆಸ್ಸಿಗರು, ಮೃತಪಟ್ಟಿರುವ ಅವರ ತಾಯಿಯವರನ್ನೂ ಹೀಯಾಳಿಸುವಂಥ ಹುಂಬತನವನ್ನು ಈಗ ತೋರಿದ್ದಾರೆ.

'ಭಾರತ-ವಿರೋಧಿ'ಗಳು ಆಧಾರರಹಿತ ಭ್ರಷ್ಟಾಚಾರ ಆರೋಪಗಳ ಮೂಲಕ ಜನರನ್ನು ಎತ್ತಿಕಟ್ಟಿ, ಅಂತಿಮವಾಗಿ ಅರಾಜಕತೆಯನ್ನು ಸೃಷ್ಟಿಸುವ ಅತಿರೇಕದ ಹುನ್ನಾರಕ್ಕೆ ಮುಂದಾಗಿದ್ದಾರೆ. ಅಧಿಕಾರದ ಹಪಾಹಪಿಯಿಂದಾಗಿ, 'ವಿಕಸಿತ ಭಾರತ'ದ ಕನಸಿಗೆ ಕೊಳ್ಳಿಯಿಡಲೂ ಅವರು ಹಿಂಜರಿಯುತ್ತಿಲ್ಲ. ಇನ್ನು ಮುಂದೆ ಇದನ್ನು ಹಗುರವಾಗಿ ಪರಿಗಣಿಸಲು ಸಾಧ್ಯವಿಲ್ಲ...

**(ಲೇಖಕರು ಬಿಜೆಪಿಯ ವಕ್ತಾರರು)**

**ಚೇತನ-ಚಿಂತನ**
ಲಿಂಗದಹಳ್ಳಿ ಚೇತನ್‌ಕುಮಾರ್
vveditoped@gmail.com

## ಕಿವಿಯ ಮೇಲೆ ಲಾಲ್‌ಬಾಗ್ ಇಡಬೇಡಿ!

ಹೊಸತೊಂದು ಸೇವೆಯೇ ಇರಲಿ, ಸರಕೇ ಇರಲಿ, ಅದನ್ನು ಗ್ರಾಹಕರಿಗೆ ಮುಟ್ಟಿಸಬೇಕೆಂದರೆ ಯಥೋಚಿತ ರೀತಿಯಲ್ಲಿ ಪ್ರಮೋಷನ್ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುತ್ತದೆ ಅಥವಾ ಚಿತ್ತಾಕರ್ಷಕ ರೀತಿಯಲ್ಲಿರುವ ಜಾಹೀರಾತುಗಳನ್ನು ನೀಡಬೇಕಾಗುತ್ತದೆ. ಚಲನಚಿತ್ರರಂಗವೂ ಈ ಪರಿಪಾಠಕ್ಕೆ ಹೊರತಲ್ಲ. ಆದರೆ, ಈ ಪ್ರಮೋಷನ್ ಅಥವಾ ಜಾಹೀರಾತು ಎಂಬುದು ಒಂದು ಮಿತಿಯಲ್ಲಿದ್ದರೆ ಚೆನ್ನ, ಅದಕ್ಕೆ ಉತ್ಪ್ರೇಕ್ಷೆಯ ಸ್ವರೂಪ ಸಿಕ್ಕಿಬಿಟ್ಟರೆ ಹಾಗೂ ಹೀಗೆ ಬಿಂಬಿತವಾಗಿರುವ ಸೇವೆ-ಸರಕು ಅಥವಾ ಚಲನಚಿತ್ರವು, ಹಾಗೆ ಬಿಂಬಿಸಿರುವಷ್ಟರ ಮಟ್ಟಿಗೇನೂ ಚೆನ್ನಾಗಿಲ್ಲ ಎಂಬುದು ಜನರಿಗೆ ಮನವರಿಕೆಯಾಗಿಬಿಟ್ಟರೆ, ಅವರು ಆಯಾ ಸೇವೆ-ಸರಕು ಅಥವಾ ಚಲನಚಿತ್ರದ ಮೇಲಿನ ನಂಬಿಕೆಯನ್ನೇ ಕಳೆದುಕೊಂಡುಬಿಡುತ್ತಾರೆ. ಮಾತ್ರವಲ್ಲ, ಇಂಥ ಪ್ರಮೋಷನ್ ಚಟುವಟಿಕೆಗಳನ್ನೇ ಅನುಮಾನದ ದೃಷ್ಟಿಯಿಂದ ನೋಡಲು ಆರಂಭಿಸುತ್ತಾರೆ ಮತ್ತು ಮುಂದೆ ಬರುವ ಪ್ರಮೋಷನ್‌ಗಳನ್ನೂ ಲೆಕ್ಕಿಸುವ ಗೋಜಿಗೆ ಹೋಗುವುದಿಲ್ಲ.

ಇಂಥ ಅಭಿಪ್ರಾಯಕ್ಕೆ ಕಾರಣವಾಗಿರುವುದು, ಇತ್ತೀಚೆಗಷ್ಟೇ ಬಿಡುಗಡೆಯಾಗಿ, ''ಜನರನ್ನು ನಗಬಾರದ ಕಡೆಯಿಂದೆಲ್ಲಾ ನಗಿಸಿ, ಗಲ್ಲಾಪೆಟ್ಟಿಗೆಯಲ್ಲಿ ನೂರಾರು ಕೋಟಿ ರುಪಾಯಿಗಳನ್ನು ಗಳಿಸಿಬಿಟ್ಟಿದೆ; ಇಂಥದೊಂದು ಚಲನಚಿತ್ರಕ್ಕಾಗಿ ಜನರು ಚಾತಕಪಕ್ಷಿಯಂತೆ ಕಾಯುತ್ತಿದ್ದರು; ಒಟಿಟಿ ವೇದಿಕೆಗೆ ಇದು ಭಾರಿ ಮೊತ್ತಕ್ಕೆ ಮಾರಾಟವಾಗುವ ಸಾಧ್ಯತೆಯಿದೆ; ಸಾಕಷ್ಟು ಭಾಷೆಗಳಿಗೆ ಡಬ್ ಆಗಿರುವುದರ ಜತೆಗೆ ಹಿಂದಿ ಭಾಷೆಗೂ ರೀಮೇಕ್ ಆಗುವ ಸೌಭಾಗ್ಯವನ್ನು ತನ್ನದಾಗಿಸಿಕೊಂಡಿದೆ'' ಎಂಬೆಲ್ಲಾ ಕಿರೀಟಗಳನ್ನು ಧರಿಸಿಕೊಂಡ 'ಸು ಫ್ರಮ್ ಸೋ' ಎಂಬ ಚಲನಚಿತ್ರ.

ಈ ಚಿತ್ರವು ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗಿದ್ದೇ ಆಗಿದ್ದು, ''ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಇಂಥ ಚಿತ್ರ ಬಂದಿರಲಿಲ್ಲ, ಕೇವಲ 4 ಕೋಟಿ ರುಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡ ಈ ಚಿತ್ರವು ನೂರಾರು ಕೋಟಿಯನ್ನು ಗಳಿಸುವ ಹಾದಿಯಲ್ಲಿದೆ; ಸಮಾನಾಂತರ ಅವಧಿಯಲ್ಲಿ ಬಿಡುಗಡೆಯಾದ ರಜನೀಕಾಂತ್ ಅವರ 'ಕೂಲಿ' ಚಲನಚಿತ್ರದ ಆರ್ಭಟದಿಂದಲೂ ಇದು ಬೆದರಿಲ್ಲ'' ಎಂಬೆಲ್ಲಾ ಪ್ರಚಾರದ ಮಾತುಗಳೂ ಬಾಯಿಂದ ಬಾಯಿಗೆ ಹಬ್ಬತೊಡಗಿದವು. ಕೆಲವು ಕಡೆಯಂತೂ, ''ಕಮಲ್‌ಹಾಸನ್, ರಮೇಶ್ ಅರವಿಂದ್, ಡೈಸಿ ಬೋಪಣ್ಣ, ಊರ್ವಶಿ ಅಭಿನಯದ 'ರಾಮ ಶಾಮ ಭಾಮ' ಚಿತ್ರವನ್ನೂ ಮೀರಿಸುವ ರೀತಿಯಲ್ಲಿ 'ಸು ಫ್ರಮ್ ಸೋ' ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸುತ್ತದೆ'' ಎಂಬ ಮಾತುಗಳೂ ಕೇಳಿಬಂದವು!

'ಅರೆ ಇಸ್ಕಿ! ಇಷ್ಟೆಲ್ಲಾ ಪ್ರಭಾವಳಿಯನ್ನು ಹೊಂದಿರುವ ಚಿತ್ರವನ್ನು ಒಮ್ಮೆ ಕಣ್ತುಂಬಿಕೊಳ್ಳದಿದ್ದರೆ ಅದೂ ಒಂದು ಬದುಕೇ?' ಅಂದುಕೊಂಡು ಚಿತ್ರಮಂದಿರವೊಂದರ ಕಡೆಗೆ ಹೆಜ್ಜೆ ಹಾಕಿದೆ. ಬೆಳಗಿನ ಪ್ರದರ್ಶನಕ್ಕೆ ನನಗೆ ಹೋಗಲು ಸಮಯಾವಕಾಶ ಸಿಗದ ಕಾರಣ, ಮಧ್ಯಾಹ್ನದ 1.30ರ ಪ್ರದರ್ಶನವನ್ನು ಸವಿಯಲು ತೆರಳಿದ್ದೆ. ಆದರೆ, ಸಮಯ 1.15 ಆಗಿ ಟಿಕೆಟ್ ವಿತರಣೆಯ ಕೌಂಟರ್ ತೆರೆದುಕೊಂಡರೂ ಜನರ ಸಂತೆ ಸೇರಲಿಲ್ಲ. ಯಾಕೋ ಸಣ್ಣಗೆ ಅನುಮಾನದ ವಾಸನೆ ಹೊಡೆಯತೊಡಗಿತು. ನಾನು ಸದರಿ ಚಿತ್ರದ ವೀಕ್ಷಣೆಗೆ ತೆರಳಿದಾಗ ಚಿತ್ರಮಂದಿರದ ಮುಂದೆ ಅಮೋಘ 35ನೇ ದಿನ ಎಂಬ ಪೋಸ್ಟರ್ ರಾರಾಜಿಸುತ್ತಿತ್ತು. ಹಾಗೇ ಒಮ್ಮೆ ಗಾಜಿನ ಬಾಗಿಲೊಳಗೆ ಇಣುಕಿ ನೋಡಿದಾಗ, 'ಏಳುಮಲೆ' ಎಂಬ ಚಿತ್ರದ ಪೋಸ್ಟರ್ ಅನ್ನು ಚಿತ್ರಮಂದಿರದ ಶೋಕೇಸ್‌ನಲ್ಲಿ ಸಜ್ಜುಗೊಳಿಸುತ್ತಿದ್ದರು. ''ಮುಂದಿನ ವಾರ ಆ ಚಿತ್ರ ಬಿಡುಗಡೆ ಆಗ್ತಾ ಇದೆಯಾ?'' ಅಂತ ಚಿತ್ರಮಂದಿರದ ಸಿಬ್ಬಂದಿಯೊಬ್ಬರನ್ನು ಕೇಳಿದೆ. ''ಮುಂದಿನ ವಾರ ಅಲ್ಲ ಕಣ್ರೀ, ನಾಳೆಯಿಂದಲೇ. ಈ 'ಸು ಫ್ರಮ್ ಸೋ' ಚಿತ್ರ ಇವತ್ತೇ ಲಾಸ್ಟ್'' ಎಂದರು ಆ ಮಹಾಶಯರು. ನನಗೆ ಅನುಮಾನದ ವಾಸನೆ ಮತ್ತಷ್ಟು ದಟ್ಟವಾಯಿತು. ಅಷ್ಟರಲ್ಲಿ ಬೆಳಗಿನ ಪ್ರದರ್ಶನ ಮುಗಿದು, ಪ್ರೇಕ್ಷಕರು ಹೊರಗೆ ಬರುವ ಸಮಯವಾಯಿತು. ನೋಡಿದರೆ, ಗುಡಿಸಿ ಗುಡ್ಡೆ ಹಾಕಿದರೂ 18 ಜನ ಇರಲಿಲ್ಲ. ಅಂದರೆ, ಇಷ್ಟೇ ಜನರಿಗೆ ಬರೋಬ್ಬರಿ ಎರಡೂ ಕಾಲು ಗಂಟೆ ಅವಧಿಯ ಚಲನಚಿತ್ರವನ್ನು ಪ್ರದರ್ಶಿಸಿದರಾ? ಎಂಥಾ ಗ್ರೇಟು ನಮ್ಮ ಜನ! ಎನಿಸಿತು. ಹಾಗೇ ಒಮ್ಮೆ, ಮಧ್ಯಾಹ್ನದ ಪ್ರದರ್ಶನಕ್ಕೆ ಬಂದಿದ್ದ ಜನರನ್ನು ಕಣ್ಣಲ್ಲೇ ಅಳೆದೆ– ಸಂಖ್ಯೆ 20ನ್ನು ಮೀರಲಿಲ್ಲ. ನನ್ನ ಅನುಮಾನ ಇನ್ನಷ್ಟು ಗಟ್ಟಿಯಾಯಿತು. ಆದರೆ, ಅಷ್ಟು ಹೊತ್ತಿಗಾಗಲೇ ಟಿಕೆಟ್ ಅನ್ನು ಖರೀದಿಸಿದ್ದೆ, ಹೀಗಾಗಿ ವಿಧಿಯಿಲ್ಲದೆ ಚಿತ್ರಮಂದಿರದೊಳಗೆ ತೂರಿಕೊಳ್ಳಲೇಬೇಕಾಯಿತು ಎನ್ನಿ!

ಇಲ್ಲಿ, 'ಸು ಫ್ರಮ್ ಸೋ' ಚಿತ್ರವನ್ನು ಲೇವಡಿ ಮಾಡುವುದು ನನ್ನ ಉದ್ದೇಶವಲ್ಲ. ನಿಜ ಹೇಳಬೇಕೆಂದರೆ, 'ಸಂತೆಯ ಹೊತ್ತಿಗೆ ಮೂರು ಮೊಳ ನೇಯುವವರು' ನಿರ್ಮಿಸುವ ಚಿತ್ರಗಳಿಗಿಂತ ಇದು ಸಾಕಷ್ಟು ಚೆನ್ನಾಗಿದೆ. ಕಥೆಯ ಆಶಯವನ್ನು ಬಿಂಬಿಸುವ ನಿಟ್ಟಿನಲ್ಲಿ ಕಲಾವಿದರು ಮತ್ತು ತಂತ್ರಜ್ಞರು ಸಾಕಷ್ಟು ಶ್ರಮ ಹಾಕಿದ್ದಾರೆ. ಇದು ಕೀಳು ಅಭಿರುಚಿಯ ದೃಶ್ಯವಾಗಲೀ, ಅಶ್ಲೀಲ ಸಂಭಾಷಣೆಯಾಗಲೀ ಇಲ್ಲದ, ಒಂದು ಸಲ ನೋಡಬಹುದಾದ ಚಿತ್ರ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ''ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಇಂಥ ಹಾಸ್ಯಪ್ರಧಾನ ಚಿತ್ರ ಬಂದಿಲ್ಲ'' ಎಂಬುದಾಗಲೀ, ''ಇದು 'ನ ಭೂತೋ, ನ ಭವಿಷ್ಯತಿ' ಎನ್ನುವ ರೀತಿಯಲ್ಲಿ ಗಳಿಕೆ ಮಾಡಿದ ಚಿತ್ರ'' ಎಂಬುದಾಗಲೀ ಹಸಿಸುಳ್ಳು, ಅಷ್ಟೇ!

ಹಾಗಾದರೆ, ಈ ಚಿತ್ರಕ್ಕೆ ಅಷ್ಟೊಂದು 'ಹೈಪ್' ಸಿಕ್ಕಿದ್ದೇಕೆ? ಎಂಬ ಯಕ್ಷಪ್ರಶ್ನೆ ಹಲವರನ್ನು ಕಾಡಬಹುದು. ಇದಕ್ಕೆ ಉತ್ತರ– 'ಮತ್ತದೇ ಪ್ರಚಾರತಂತ್ರ'! ಕೆಲವೊಮ್ಮೆ ಪತ್ರಿಕಾ ವಿಮರ್ಶೆಗಳು ಮಾಡದ ಕೆಲಸವನ್ನೂ ಮೌತ್ ಪಬ್ಲಿಸಿಟಿಗಳು, ಸಾಮಾಜಿಕ ಮಾಧ್ಯಮಗಳಲ್ಲಿನ ಅಬ್ಬರಗಳು ಮಾಡಬಲ್ಲವು. ಹಾಗಾದರೆ, ಅದನ್ನು ನಂಬಿಕೊಂಡು ''ಈ ಚಿತ್ರ ಸೂಪರ್'' ಎಂದು ಹೇಳಿ ಮೌತ್‌ಪಬ್ಲಿಸಿಟಿ ಮಾಡಿದ ಜನರು ದಡ್ಡರಾ? ಎಂದು ಕೆಲವರು ಕೇಳಬಹುದು. ಅಲ್ಲೇ ಇರುವುದು ಗಮ್ಮತ್ತು. 100 ಮಂದಿಯಿರುವ ಒಂದು ಗುಂಪಿನಲ್ಲಿ ಬರೋಬ್ಬರಿ 75 ಜನರು ವಿವಿಧ ಕಾರಣಗಳಿಗಾಗಿ, ''ವಾವ್! ಎಂಥಾ ಸೂಪರ್ ಚಿತ್ರ. ಇಂಥ ಹಾಸ್ಯಪ್ರಧಾನ ಚಲನಚಿತ್ರವನ್ನು ನಾವು ಇದುವರೆಗೂ ನೋಡಿರಲಿಲ್ಲ. ನಾವಂತೂ ಒಂದು ಫ್ರೇಮ್ ಮಿಸ್ ಮಾಡಿಕೊಂಡರೆ ಎಲ್ಲಿ ಮಜಾ ಮಿಸ್ ಆಗುತ್ತೋ ಅನ್ನುವ ಕಾರಣಕ್ಕೆ ಬೆಳ್ಳಿತೆರೆಯ ಮೇಲೇ ಕಣ್ಣುನೆಟ್ಟುಕೊಂಡು ಕೂತಿದ್ದೆವು'' ಎಂದು ಹೇಳಿದರು ಅಂದಿಟ್ಟುಕೊಳ್ಳಿ. ಆಗ, ಅಂಥದ್ದೇನೂ ಅನುಭೂತಿಯಾಗದ ಜನರು, ನಾವೂ ಹೀಗೆ ಹೇಳಿಕೊಳ್ಳದಿದ್ದರೆ, 'ಇವರಿಗೆ ಚಿತ್ರವನ್ನು ಆಸ್ವಾದಿಸಲು ಬಂದಿಲ್ಲ, ದಡ್ಡರು' ಎಂದು ಗೇಲಿಮಾಡುತ್ತಾರೆ ಎಂಬ ಕಾರಣಕ್ಕೆ ತಾವು ಕೂಡ ಈ ಮೌತ್ ಪಬ್ಲಿಸಿಟಿಗೆ ಬಾಯಿ ಸೇರಿಸುವಂತಾಗುತ್ತದೆ. 'ಸು ಫ್ರಮ್ ಸೋ' ಚಲನಚಿತ್ರದ ವಿಷಯದಲ್ಲಿ ಪ್ರಾಯಶಃ ವರ್ಕೌಟ್ ಆಗಿರುವುದು ಈ ಟೆಕ್ನಿಕ್ಕೇ ಇರಬೇಕು!

ಡಾ. ರಾಜ್‌ಕುಮಾರ್ ಅಭಿನಯದ 'ಭಾಗ್ಯದ ಲಕ್ಷ್ಮೀ ಬಾರಮ್ಮಾ', ವಿಷ್ಣುವರ್ಧನ್ ಅಭಿನಯದ 'ನೀನು ನಕ್ಕರೆ ಹಾಲು ಸಕ್ಕರೆ', ಅನಂತ್‌ನಾಗ್ ಅವರ 'ಗಣೇಶನ ಮದುವೆ', 'ಗೌರಿ ಗಣೇಶ', 'ಹೆಂಡ್ತಿಗ್ಹೇಳ್ಬೇಡಿ', ರಾಘವೇಂದ್ರ ರಾಜ್‌ಕುಮಾರ್ ಅವರ 'ನಂಜುಂಡಿ ಕಲ್ಯಾಣ', ಜಗ್ಗೇಶರ ಸಾಕಷ್ಟು ಚಿತ್ರಗಳು, ಅಷ್ಟೇಕೆ ನರಸಿಂಹರಾಜು-ಬಾಲಕೃಷ್ಣ ಮುಂತಾದ ಕಲಾವಿದರ ಸರಣಿ ಚಿತ್ರಗಳು ಸೇರಿದಂತೆ ಸಾಕಷ್ಟು ಹಾಸ್ಯಪ್ರಧಾನ ಚಿತ್ರಗಳನ್ನು ಕನ್ನಡ ಕಲಾರಸಿಕರು ಸವಿದಿದ್ದಾರೆ. ಚಲನಚಿತ್ರವೊಂದು ಚೆನ್ನಾಗಿದ್ದರೆ, ಚಿತ್ರಮಂದಿರದ ಕಡೆಗೆ ಅವರು ದಾಂಗುಡಿಯಿಟ್ಟು ಬರುವುದರ ಜತೆಗೆ, ಮತ್ತಷ್ಟು ಜನಕ್ಕೂ ಹೇಳುತ್ತಾರೆ. ಹೀಗಾಗಿ ಅವರಿಗೆ ಇಂಥ ಗಿಮಿಕ್ಕುಗಳ ಅಗತ್ಯವಿಲ್ಲ.

ಚಲನಚಿತ್ರಗಳಿಗಾಗಲೀ, ಸರಕು-ಸೇವೆಗಳ ಸ್ವರೂಪದ ಮಿಕ್ಕಾವ ಉತ್ಪನ್ನಗಳಿಗೇ ಆಗಲೀ ಜಾಹೀರಾತು ಅಥವಾ ಪ್ರಮೋಷನ್ ಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಅದು ಒಂದೊಮ್ಮೆ 'ಕಿವಿ ಮೇಲೆ ಹೂವು' ಇಟ್ಟ ರೀತಿಯಲ್ಲಿದ್ದರೂ ಜನರು ಏನೂ ತಪ್ಪು ತಿಳಿದುಕೊಳ್ಳುವುದಿಲ್ಲ; ಆದರೆ 'ಕಿವಿ ಮೇಲೆ ಲಾಲ್‌ಬಾಗ್' ಇಡಲು ಹೊರಟರೆ, ಅದು ಅವರಿಗೆ ಇಷ್ಟವಾಗುವುದಿಲ್ಲ.

ಇದನ್ನು ಸಂಬಂಧಪಟ್ಟವರು ಅರ್ಥಮಾಡಿಕೊಂಡರೆ ಒಳಿತು...

**(ಲೇಖಕರು ಪತ್ರಕರ್ತರು ಮತ್ತು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)**

# ಇಂದಿನ ಭಾರತ ಎಂದಿಗೂ ನೇಪಾಳ-ಬಾಂಗ್ಲಾ ಆಗದು

**ಭಾರತದಲ್ಲೂ ಸರಕಾರದ ವಿರುದ್ಧ ಜನರು ತಿರುಗಿಬಿದ್ದು ಆಡಳಿತಾರೂಢರನ್ನು ಕಿತ್ತೊಗೆದ ಉದಾಹರಣೆಗಳಿವೆ; ಆದರೆ ಹಿಂಸಾತ್ಮಕವಾಗಿ ಅಲ್ಲ. ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿಯನ್ನು ಹೇರಿ, ವಿಪಕ್ಷಗಳ ನಾಯಕರನ್ನು ಜೈಲಿಗಟ್ಟಿದಾಗಲೂ ಅಹಿಂಸಾತ್ಮಕವಾಗಿ ಪ್ರತಿಭಟಿಸಿದ ಜನರು, 1977ರ ಚುನಾವಣೆಯಲ್ಲಿ ಇಂದಿರಾರನ್ನು ಸೋಲಿಸಿ ಆಡಳಿತ ವ್ಯವಸ್ಥೆಯನ್ನು ಬದಲಿಸಿದರು.**

**ಚರ್ಚಾವೇದಿಕೆ**
ಗಣೇಶ್‌ಭಟ್ ವಾರಾಣಸಿ
vveditoped@gmail.com

ಭಾರತದ ನೆರೆರಾಷ್ಟ್ರಗಳ ರಾಜಕೀಯ ಪರಿಸ್ಥಿತಿ ಸರಿಯಾಗಿಲ್ಲ. ಪಾಕಿಸ್ತಾನವಂತೂ ಪೂರ್ಣಪ್ರಮಾಣದ ಪ್ರಜಾಪ್ರಭುತ್ವ ದೇಶವಾಗಲೇ ಇಲ್ಲ. ಅಲ್ಲಿ ಮಿಲಿಟರಿಯು ಅಧಿಕೃತವಾಗಿ 4 ಬಾರಿ ಆಡಳಿತವನ್ನು ನೇರವಾಗಿ ಕೈಗೆ ತೆಗೆದುಕೊಂಡಿದೆ. ಸುಮಾರು 33 ವರ್ಷಗಳಷ್ಟು ಕಾಲ ಅಲ್ಲಿ ಸೇನಾಡಳಿತವಿತ್ತು. ಇಂದು ಪಾಕಿಸ್ತಾನದ ಪ್ರಧಾನಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶೆಹಬಾಜ್ ಷರೀಫ್ ಅವರು ಸೇನಾ ಮುಖ್ಯಸ್ಥ ಅಸಿಮ್ ಮುನೀರ್‌ನ ಕೈಗೊಂಬೆಯಾಗಿರುವುದು ಜಗಜ್ಜಾಹೀರಾಗಿರುವ ಸಂಗತಿ.

2022ರಲ್ಲಿ ಆರ್ಥಿಕ ದಿವಾಳಿತನಕ್ಕೆ ಸಿಲುಕಿದ್ದ ಶ್ರೀಲಂಕಾದಲ್ಲೂ ಕ್ಷಿಪ್ರಕ್ರಾಂತಿಯಾಗಿ ಪ್ರಭುತ್ವದ ಬದಲಾವಣೆಯಾಗಿತ್ತು. ಕಳೆದ ವರ್ಷ ಬಾಂಗ್ಲಾದೇಶದಲ್ಲಿ ದಂಗೆ ನಡೆದು, ಪ್ರಧಾನಿ ಶೇಖ್ ಹಸೀನಾರ ಪದಚ್ಯುತಿಯಾದಾಗ, ಮಧ್ಯಸ್ಥಿಕೆ ವಹಿಸಿ ಮೊಹಮ್ಮದ್ ಯೂನುಸ್‌ರನ್ನು ಮಧ್ಯಂತರ ಆಡಳಿತಗಾರರನ್ನಾಗಿ ನೇಮಿಸಿದ್ದು ಅಲ್ಲಿನ ಮಿಲಿಟರಿಯೇ! ಬಾಂಗ್ಲಾದಲ್ಲಿ ಶೀಘ್ರದಲ್ಲೇ ಸಾರ್ವತ್ರಿಕ ಚುನಾವಣೆ ನಡೆಸುವ ಭರವಸೆ ನೀಡಿದ್ದ ಯೂನುಸ್, 2026ರ ಏಪ್ರಿಲ್‌ವರೆಗೆ ಅದನ್ನು ಮುಂದೂಡಿದ್ದಾರೆ. ಬಾಂಗ್ಲಾದಲ್ಲಿ ಅಲ್ಪಸಂಖ್ಯಾತರಾದ ಹಿಂದೂಗಳ ಮೇಲೆ, ಶೇಖ್ ಹಸೀನಾರ 'ಅವಾಮಿ ಲೀಗ್' ಪಕ್ಷದ ಸದಸ್ಯರ ಮೇಲೆ ಕೊಲೆ-ಅತ್ಯಾಚಾರಗಳಂಥ ದೌರ್ಜನ್ಯಗಳು ಇಂದಿಗೂ ಮುಂದುವರಿದಿವೆ.

ನೇಪಾಳದಲ್ಲಿ 'ಜೆನ್ ಝೀ' (1990ರ ನಂತರ ಹಾಗೂ 2010ರ ಮೊದಲು ಜನಿಸಿದ ಯುವಜನರನ್ನು 'ಜೆನರೇಷನ್ ಝೆಡ್' ಅಥವಾ 'ಜೆನ್ ಝೆಡ್ ಅಥವಾ ಜೆನ್ ಝೀ' ಎನ್ನುವುದುಂಟು) ನಡೆಸಿದ ದಂಗೆ ಮತ್ತು ಹಿಂಸಾಚಾರದಿಂದಾಗಿ, ಕೆ.ಪಿ.ಶರ್ಮಾ ಓಲಿ ನೇತೃತ್ವದ ಸರಕಾರ ಪತನಗೊಂಡು, ಇದೀಗ ಸುಶೀಲಾ ಕರ್ಕಿಯವರು ಮಧ್ಯಂತರ ಸರಕಾರದ ಪ್ರಧಾನಿಯಾಗಿ ನಿಯುಕ್ತರಾಗಿದ್ದಾರೆ. 2008ರಲ್ಲಿ, ಮಾವೋವಾದಿ ಕಮ್ಯುನಿಸ್ಟ್ ಸಂಘಟನೆಗಳ ಹೋರಾಟಕ್ಕೆ ಮಣಿದು, ನೇಪಾಳದ ಅರಸ ಗ್ಯಾನೇಂದ್ರ ಶಾ ಸಿಂಹಾಸನದಿಂದ ಇಳಿದ ನಂತರ ಅಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಆರಂಭವಾಯಿತು. ಕಮ್ಯುನಿಸ್ಟ್ ಪಕ್ಷಗಳೇ ಅಧಿಕಾರ ಹಿಡಿದವು. ಆದರೆ ನೇಪಾಳದ ಪ್ರಜಪ್ರಭುತ್ವ ವ್ಯವಸ್ಥೆ ಎಷ್ಟು ಅಸ್ಥಿರವಾಗಿತ್ತೆಂದರೆ, ಕಳೆದ 17 ವರ್ಷಗಳಲ್ಲಿ ಅಲ್ಲಿ 13 ಬಾರಿ ಪ್ರಧಾನಿಗಳು ಬದಲಾದರು. ಒಳಜಗಳ, ಗುಂಪುಗಾರಿಕೆಗಳಿಂದಾಗಿ ರಾಜಕೀಯ ನಾಯಕರುಗಳು ನಿರಂತರವಾಗಿ ಒಕ್ಕೂಟಗಳನ್ನು ಬದಲಾಯಿಸುತ್ತಾ ಹೋದರು. ಇದರಿಂದಾಗಿ ಆಗಾಗ ಸರಕಾರಗಳು ಬೀಳುತ್ತಾ ಹೋದವು. ಯಾವೊಂದು ಸರಕಾರವೂ ಅಲ್ಲಿ 5 ವರ್ಷಗಳನ್ನು ಪೂರೈಸಲೇ ಇಲ್ಲ. ರಾಜಕೀಯ ಅಸ್ಥಿರತೆಯಿಂದಾಗಿ ನೇಪಾಳದ ಆರ್ಥಿಕತೆಯೂ ಕುಸಿಯಿತು, ಭ್ರಷ್ಟಾಚಾರ ಮಿತಿಮೀರಿತು. ಪ್ರಾದೇಶಿಕ ಅಸಮಾನತೆಯು ಜನರ ಅಸಮಾಧಾನವನ್ನು ಹೆಚ್ಚಿಸುತ್ತಾ ಹೋಯಿತು. ಹಣದುಬ್ಬರದ ಹೆಚ್ಚಳದಿಂದಾಗಿ ಆಹಾರಧಾನ್ಯಗಳ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆಯೇರಿ ಜನಸಾಮಾನ್ಯರು ಬದುಕು ಸಾಗಿಸುವುದು ದುಸ್ತರವಾಯಿತು. ನಿರುದ್ಯೋಗ ಪ್ರಮಾಣವು ಶೇ.20ಕ್ಕೇರಿದ್ದು ಯುವಜನರು ಸರಕಾರದ ವಿರುದ್ಧ ಬಂಡೇಳಲು ಕಾರಣವಾಯಿತು. ಸರಕಾರವು ಸಾಮಾಜಿಕ ಮಾಧ್ಯಮಗಳನ್ನು ನಿಷೇಧಿಸಿದ್ದು ಯುವಜನರು ಬಂಡೇಳಲು ಒಂದು ನೆಪವಾಯಿತಷ್ಟೇ. ಉದ್ರಿಕ್ತರ ಅಬ್ಬರಕ್ಕೆ ನೇಪಾಳದ ಸಂಸತ್ತು, ಪ್ರಧಾನಿ ನಿವಾಸ ಮುಂತಾದ ಸರಕಾರಿ ಸ್ವತ್ತುಗಳು ನಾಶವಾದವು. ಪ್ರಜಾಪ್ರಭುತ್ವಕ್ಕಾಗಿ ಹೋರಾಡಿ ರಾಜಪ್ರಭುತ್ವವನ್ನು ಕೊನೆಗೊಳಿಸಿದ ಕಮ್ಯುನಿಸ್ಟರೇ ನೇಪಾಳವನ್ನು ಆಳುವಲ್ಲಿ ಸಂಪೂರ್ಣ ವಿಫಲರಾದರು.

ಭಾರತದಲ್ಲೂ ಸರಕಾರದ ವಿರುದ್ಧ ಜನರು ತಿರುಗಿಬಿದ್ದು ಆಡಳಿತ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆದ ಉದಾಹರಣೆಗಳಿವೆ; ಆದರೆ ನಮ್ಮ ಜನರು ಆಡಳಿತಾರೂಢರ ವಿರುದ್ಧ ಚುನಾವಣೆಗಳಲ್ಲಿ ಮತ ಚಲಾಯಿಸಿ, ಸರಕಾರವನ್ನು ವಿಧ್ಯುಕ್ತವಾಗಿಯೇ ಬದಲಾಯಿಸಿದ್ದಾರೆಯೇ ವಿನಾ ಹಿಂಸಾತ್ಮಕವಾಗಿ ಅಲ್ಲ. ಇಂದಿರಾ ಗಾಂಧಿ ಸರಕಾರವು ತುರ್ತು ಪರಿಸ್ಥಿತಿಯನ್ನು ಹೇರಿ, ವಿಪಕ್ಷಗಳ ನಾಯಕರನ್ನು ಜೈಲಿಗಟ್ಟಿದಾಗಲೂ, ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಅಹಿಂಸಾತ್ಮಕವಾಗಿ ಪ್ರತಿಭಟಿಸಿದ ಜನರು, ಕೊನೆಗೆ 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾರನ್ನು ಸೋಲಿಸಿ ಆಡಳಿತ ವ್ಯವಸ್ಥೆಯನ್ನು ಬದಲಿಸಿದರು. 2004-2014ರ ಅವಧಿಯಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಯುಪಿಎ ಸರಕಾರದ ಪತನಕ್ಕೂ ಅಹಿಂಸಾತ್ಮಕ ಜನಾಂದೋಲನವೇ ಕಾರಣವಾಯಿತು. ಯುಪಿಎ ಸರಕಾರದ ಅವಧಿಯಲ್ಲಿ ನಡೆದ ವಿವಿಧ ಭ್ರಷ್ಟಾಚಾರ ಪ್ರಕರಣಗಳನ್ನು ವಿರೋಧಿಸಿ ಅಣ್ಣಾ ಹಜಾರೆ ನೇತೃತ್ವದಲ್ಲಿ ನಡೆದ ಹೋರಾಟಗಳು, ಯುಪಿಎ ಸರಕಾರವನ್ನು ಸೋಲಿಸಿದ್ದು ಮಾತ್ರವಲ್ಲದೆ, ಕಾಂಗ್ರೆಸ್ ಪಕ್ಷಕ್ಕೆ ಅತಿ ಕಡಿಮೆ ಸ್ಥಾನಗಳು ಲಭಿಸುವಂತಾಗುವುದಕ್ಕೆ ಪರೋಕ್ಷ ಕಾರಣಗಳಾಗಿದ್ದವು.

ನೆರೆದೇಶಗಳಲ್ಲಿ ಕ್ಷಿಪ್ರಕ್ರಾಂತಿಗಳಾಗುತ್ತಿರುವ ಹಿನ್ನೆಲೆಯಲ್ಲಿ ಭಾರತಕ್ಕೂ ಅಂಥ ಸ್ಥಿತಿ ಒದಗುವ ಸಾಧ್ಯತೆಯಿದೆಯೇ ಎಂಬ ಪ್ರಶ್ನೆ ಕೆಲವರಲ್ಲಿ ಮೂಡಿರಬಹುದು. ಭಾರತದಲ್ಲೂ ಹೀಗೊಂದು ಕ್ರಾಂತಿಯಾಗಿ ಈಗಿನ ಸರಕಾರ ಬಿದ್ದುಹೋಗಲಿ ಎಂದು ವಿಪಕ್ಷಗಳೂ ಸೇರಿದಂತೆ ಕೆಲವಷ್ಟು ಸ್ಥಾಪಿತ ಹಿತಾಸಕ್ತಿಗಳು ಆಶಿಸುತ್ತಿವೆ. 'ಸೊರೋಸ್ ಗ್ಯಾಂಗ್', 'ಡೀಪ್ ಸ್ಟೇಟ್'ಗಳೂ ಮೋದಿ ಸರಕಾರವನ್ನು ಬೀಳಿಸಲು ಇನ್ನಿಲ್ಲದಂತೆ ಯತ್ನಿಸುತ್ತಿವೆ. ತಮ್ಮ ತಾಳಕ್ಕೆ ಕುಣಿಯದ, ಭಾರತವನ್ನು ಸ್ವಾಯತ್ತ ರಾಷ್ಟ್ರವನ್ನಾಗಿ, ಪ್ರಬಲ ಜಾಗತಿಕ ಶಕ್ತಿಯಾಗಿ ರೂಪಿಸುತ್ತಿರುವ ಮೋದಿಯವರನ್ನು ಕೆಳಗಿಳಿಸಲೇಬೇಕೆಂದು ಅಮೆರಿಕ, ಯುರೋಪ್ ಪಣತೊಟ್ಟಂತೆ ಕೆಲಸ ಮಾಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಆದರೆ, 64ಕ್ಕೂ ಹೆಚ್ಚು ದೇಶಗಳಲ್ಲಿ ಪ್ರಭುತ್ವಗಳನ್ನು ಬದಲಾಯಿಸಿದ ಅನುಭವವಿರುವ ಅಮೆರಿಕಕ್ಕೆ, ಭಾರತವು ಮಾತ್ರ ಕಗ್ಗಂಟಾಗಿದೆ! ಆದರೂ, ಸರಕಾರವನ್ನು ಪತನಗೊಳಿಸುವ 'ಟೂಲ್‌ಕಿಟ್'ಗಳು ವಿದೇಶಗಳಲ್ಲಿ ಸಿದ್ಧಗೊಂಡು ಬೇರೆ ಬೇರೆ ರೂಪಗಳಲ್ಲಿ ಭಾರತಕ್ಕೆ ಬರುತ್ತಲೇ ಇವೆ...

ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಇಂಥ ಯಾವ ಕ್ರಾಂತಿಯೂ ಭಾರತದಲ್ಲಿ ಯಶಸ್ವಿಯಾಗುವ ಸಾಧ್ಯತೆಯಿಲ್ಲ. ಹೊಸ ಕೃಷಿ ಕಾಯಿದೆಗಳನ್ನು ವಿರೋಧಿಸಿ ರೈತ ಸಂಘಟನೆಗಳು ತಿಂಗಳುಗಟ್ಟಲೆ ಪ್ರತಿಭಟನೆ ನಡೆಸಿದರೂ, ಅದನ್ನು ಸರಕಾರದ ವಿರುದ್ಧದ ಜನಾಭಿಪ್ರಾಯವಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ. ಕೊನೆಗೆ ಇದು, ಪಂಜಾಬ್ ಮತ್ತು ಹರಿಯಾಣಗಳ ಕೃಷಿ ದಳ್ಳಾಳಿಗಳ ಪ್ರತಿಭಟನೆ ಎನ್ನುವ ಮಟ್ಟಕ್ಕೆ ಸೀಮಿತವಾಯಿತು. ಖಲಿಸ್ತಾನ್ ಉಗ್ರರು ಈ ಪ್ರತಿಭಟನೆಯ ಮೂಲಕ ದೇಶದೊಳಗೆ ನುಸುಳಲು ಯತ್ನಿಸುತ್ತಿದ್ದಾರೆ ಎಂಬುದನ್ನರಿತ ಕೇಂದ್ರ ಸರಕಾರವು ಈ ಕಾಯಿದೆಯನ್ನು ಹಿಂತೆಗೆದುಕೊಂಡಾಗ ಪ್ರತಿಭಟನೆಯು ಸಂಪೂರ್ಣ 'ಠುಸ್' ಆಯಿತು.

'ಪೌರತ್ವ ತಿದ್ದುಪಡಿ ಕಾಯಿದೆ' (ಸಿಎಎ) ವಿರುದ್ಧ ನಡೆದ ಪ್ರತಿಭಟನೆಯೂ 'ನಿರ್ದಿಷ್ಟ ಸಮುದಾಯದ' ಪ್ರತಿಭಟನೆಗೆ ಸೀಮಿತವಾಗಿ ತನ್ನ ಕಾವನ್ನು ಕಳೆದುಕೊಂಡಿತು. ಮೋದಿ ಸರಕಾರವು ಸಂವಿಧಾನವನ್ನು ಬದಲಿಸಲು ಯತ್ನಿಸಲಿದೆ ಎಂದು ನಡೆದ ಅಪಪ್ರಚಾರಗಳಿಂದಲೂ ಯಾವ ಪರಿಣಾಮವಾಗಲಿಲ್ಲ. ಇದೀಗ ಮತಗಳ್ಳತನದ ಆರೋಪ ಹೊರಿಸಿ ಸರಕಾರದ ವಿರುದ್ಧ ಜನರನ್ನು ಎತ್ತಿಕಟ್ಟುವ ವಿಫಲ ಯತ್ನಗಳಾಗುತ್ತಿವೆ.

ಭ್ರಷ್ಟಾಚಾರ, ಬೆಲೆಯೇರಿಕೆ, ನಿರುದ್ಯೋಗ, ಆರ್ಥಿಕ ಕುಸಿತ, ಬಡತನ, ಕಾನೂನು-ಸುವ್ಯವಸ್ಥೆಯ ಕುಸಿತ, ಮೂಲಭೂತ ಸೌಕರ್ಯಗಳ ಕೊರತೆ, ಸ್ವಜನ ಪಕ್ಷಪಾತ ಮೊದಲಾದ ಸಮಸ್ಯೆಗಳಿದ್ದರೆ ಜನರು ಸರಕಾರದ ವಿರುದ್ಧ ಬಂಡೇಳುವ ಸಾಧ್ಯತೆ ಹೆಚ್ಚು. ಆದರೆ, ಭಾರತ ಸರಕಾರವಿಂದು ಆಡಳಿತ ವ್ಯವಸ್ಥೆಯಲ್ಲಿದ್ದ ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಸಫಲವಾಗಿದೆ. ಕೇಂದ್ರದ ಯೋಜನೆಗಳು ಜನರನ್ನು ಸಂಪೂರ್ಣವಾಗಿ ತಲುಪುತ್ತಿವೆ. ಅಂದರೆ, ಸರಕಾರವು ಜನರಿಗೆ ಒದಗಿಸುವ ಸಬ್ಸಿಡಿ, ಪಿಂಚಣಿ, ವಿದ್ಯಾರ್ಥಿವೇತನ, ಪ್ರೋತ್ಸಾಹಕ ಧನ ಮುಂತಾದ ಆರ್ಥಿಕ ನೆರವುಗಳು, ಗ್ರಾಹಕರ ಜನಧನ್ ಬ್ಯಾಂಕ್‌ಖಾತೆ, ಆಧಾರ್ ಕಾರ್ಡ್, ಮೊಬೈಲ್ ನಂಬರ್‌ಗಳನ್ನು ಬೆಸೆದ ('ಜ್ಯಾಮ್') ವ್ಯವಸ್ಥೆಯಡಿ, ಡಿಜಿಟಲ್ ಮಾಧ್ಯಮದ ಮೂಲಕ ಫಲಾನುಭವಿಗಳಿಗೆ ನೇರವಾಗಿ ತಲುಪುತ್ತಿವೆ. 'ಡಿಜಿಟಲ್ ಇಂಡಿಯಾ' ಉಪಕ್ರಮದಿಂದಾಗಿ ಭ್ರಷ್ಟಾಚಾರವು ಗಣನೀಯವಾಗಿ ತಗ್ಗಿದೆ. ಬ್ಯಾಂಕುಗಳಿಂದ ಸಾಲ ಪಡೆದು ವಂಚಿಸಿ ಓಡಿಹೋದವರ ಮೇಲೆ 'Insolvency and Bankruptcy Code', Fugitive Economic Offenders Act ಮುಂತಾದ ಕಾನೂನುಗಳ ಮೂಲಕ ಕ್ರಮ ಕೈಗೊಂಡು 10 ಲಕ್ಷ ಕೋಟಿ ರುಪಾಯಿಗಳಷ್ಟು 'ಕೆಟ್ಟ ಸಾಲ'ಗಳನ್ನು ವಸೂಲು ಮಾಡಲಾಗಿದೆ. ಹೀಗಾಗಿ ಭ್ರಷ್ಟಾಚಾರದ ವಿಚಾರವಾಗಿ ಕೇಂದ್ರವನ್ನು ಟೀಕಿಸಲು ವಿಪಕ್ಷಗಳಿಗೆ ಸಾಧ್ಯವಾಗುತ್ತಿಲ್ಲ.

ಭಾರತದ ನಿರುದ್ಯೋಗ ಸಮಸ್ಯೆಯ ಪ್ರಮಾಣವು ಶೇ.2ಕ್ಕಿಂತಲೂ ಕೆಳಗಿಳಿದಿದೆ. ಮುದ್ರಾ ಸಾಲ, ಸ್ಟಾರ್ಟ್ ಅಪ್ ಇಂಡಿಯಾ, ಮೇಕ್ ಇನ್ ಇಂಡಿಯಾದಂಥ ಉಪಕ್ರಮಗಳು ಉದ್ಯೋಗ ಮತ್ತು ಸ್ವ-ಉದ್ಯೋಗಗಳ ಅವಕಾಶಗಳನ್ನು ಹೆಚ್ಚಿಸಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುತ್ತಿವೆ. ಹೀಗಾಗಿ ಯುವಜನರು ಸರಕಾರದ ವಿಚಾರದಲ್ಲಿ ಫುಲ್ ಖುಷ್! ದೇಶದಲ್ಲಿಂದು ಬೆಲೆಯೇರಿಕೆ ನಿಯಂತ್ರಣದಲ್ಲಿದ್ದು, ಹಣದುಬ್ಬರದ ಪ್ರಮಾಣ ಶೇ.2ಕ್ಕಿಂತಲೂ ಕಮ್ಮಿಯಿದೆ. ಇದೀಗ ಜಿಎಸ್‌ಟಿಯಲ್ಲೂ ಇಳಿಕೆಯಾಗಿರುವುದರಿಂದ ಶ್ರೀಸಾಮಾನ್ಯರ ಬದುಕು ಹೆಚ್ಚು ಸಹನೀಯವಾಗಲಿದೆ. 12 ಲಕ್ಷ ರುಪಾಯಿವರೆಗಿನ ಆದಾಯವನ್ನು ತೆರಿಗೆಮುಕ್ತಗೊಳಿಸಿರುವುದರಿಂದ ಮಧ್ಯಮ ವರ್ಗದ ಉದ್ಯೋಗಸ್ಥರು ಸಂತುಷ್ಟರಾಗಿದ್ದಾರೆ. 2014ರಲ್ಲಿ, 'ದುರ್ಬಲ ಆರ್ಥಿಕತೆಯುಳ್ಳ 5 ದೇಶಗಳ ಪಟ್ಟಿ'ಯಲ್ಲಿದ್ದ ಭಾರತವಿಂದು ಜಾಗತಿಕವಾಗಿ 4ನೇ ಅತಿದೊಡ್ಡ ಆರ್ಥಿಕತೆಯುಳ್ಳ ದೇಶವಾಗಿ ಬೆಳೆದು ನಿಂತಿದೆ.

ದೇಶದ 2.8 ಕೋಟಿ ಬಡವರ ಮನೆಗಳಿಗೆ ಉಚಿತ ವಿದ್ಯುತ್ ಸಂಪರ್ಕವನ್ನು ಒದಗಿಸುವ ಮೂಲಕ, ಸಂಪೂರ್ಣ ವಿದ್ಯುದೀಕರಣವನ್ನು ಸಾಧಿಸಲಾಗಿದೆ, 10 ಕೋಟಿ ಬಡಮಹಿಳೆಯರಿಗೆ ಉಚಿತ ಅಡುಗೆ ಅನಿಲದ ಸಂಪರ್ಕವನ್ನು ಒದಗಿಸಲಾಗಿದೆ, 10 ಕೋಟಿ ಮನೆಗಳಿಗೆ ಉಚಿತ ಶೌಚಾಲಯಗಳನ್ನು ಕಟ್ಟಿಸಿಕೊಟ್ಟು ಬಯಲುಶೌಚದ ಸಮಸ್ಯೆಯನ್ನು ನಿವಾರಿಸಲಾಗಿದೆ. ದೇಶದ ಮೂಲಭೂತ ಸೌಕರ್ಯ ವ್ಯವಸ್ಥೆಯಲ್ಲಿ ಭಾರಿ ಸುಧಾರಣೆಯಾಗಿದ್ದು, ಗ್ರಾಮೀಣ ರಸ್ತೆ, ಷಟ್ಪಥ-ದಶಪಥ ಹೆದ್ದಾರಿಗಳು ನಿರ್ಮಾಣವಾಗುತ್ತಿವೆ. 'ವಂದೇ ಭಾರತ್ ಎಕ್ಸ್‌ಪ್ರೆಸ್' ರೈಲುಗಳ ಸೇರ್ಪಡೆ ಸೇರಿದಂತೆ ಭಾರತೀಯ ರೇಲ್ವೆಯು ವಿವಿಧ ಬಗೆಗಳಲ್ಲಿ ಆಧುನೀಕರಣಗೊಂಡು ಆರಾಮದಾಯಕವೂ ಸುರಕ್ಷಿತವೂ ಆಗಿದೆ. ಕಳೆದ 10 ವರ್ಷಗಳಲ್ಲಿ ದೇಶದ ವಿಮಾನ ನಿಲ್ದಾಣಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದೆ. ದೇಶದ ಪ್ರಜೆಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಸುರಕ್ಷಿತರಾಗಿದ್ದಾರೆ. ಭಯೋತ್ಪಾದಕರಿಗೆ ಕಾಶ್ಮೀರದ ಗಡಿಯನ್ನು ದಾಟಿ ಭಾರತದೊಳಗೆ ಬರಲಾಗುತ್ತಿಲ್ಲ. 2014ರ ಮುಂಚೆ ಇದ್ದ ಪರಿಸ್ಥಿತಿಗೆ ಹೋಲಿಸಿದರೆ ದೇಶದಲ್ಲಿಂದು ಭಯೋತ್ಪಾದನಾ ಚಟುವಟಿಕೆಗಳು ಗಣನೀಯವಾಗಿ ಕಮ್ಮಿಯಾಗಿವೆ. ನಕ್ಸಲರನ್ನೂ ಭಾರಿ ಪ್ರಮಾಣದಲ್ಲಿ ಹತ್ತಿಕ್ಕಲಾಗುತ್ತಿದೆ.

ಒಟ್ಟಾರೆ ಹೇಳುವುದಾದರೆ, ಮೋದಿ ಸರಕಾರದ ಕಾರ್ಯವೈಖರಿಯ ಬಗ್ಗೆ ಜನರು ಸಾಕಷ್ಟು ಸಂತೃಪ್ತರಾಗಿದ್ದಾರೆ. ಜನರ ಸುರಕ್ಷತೆಯ ಬಗ್ಗೆ ಈ ಸರಕಾರವು ಹೆಚ್ಚಿನ ಕಾಳಜಿಯನ್ನು ವಹಿಸುತ್ತಿದೆ. ಎಲ್ಲಕ್ಕಿಂತ ಮಿಗಿಲಾಗಿ, ಸಮೀಕ್ಷೆಗಳ ಪ್ರಕಾರ ಪ್ರಧಾನಿ ನರೇಂದ್ರ ಮೋದಿಯವರಿಗೆ ಜನರು ಶೇ.75ರಷ್ಟು 'ಅನುಮೋದನಾ ಮೌಲ್ಯಾಂಕನ'ವನ್ನು (ಅಪ್ರೂವಲ್ ರೇಟಿಂಗ್) ನೀಡಿದ್ದಾರೆ. ಜಾಗತಿಕವಾಗಿ ಅತಿಹೆಚ್ಚು ಜನಪ್ರಿಯರಾಗಿರುವ ನಾಯಕ ನಮ್ಮ ಪ್ರಧಾನಿ. ಇದೀಗ ದಂಗೆಯೆದ್ದಿರುವ ನೇಪಾಳದ ಯುವಜನರು ಕೂಡ, 'ನಮಗೆ ನರೇಂದ್ರ ಮೋದಿಯವರಂಥ ನಿರ್ಣಾಯಕ ನಿಲುವಿನ ನಾಯಕ ಬೇಕು' ಎಂದು ಹೇಳುತ್ತಿರುವುದು ಮೋದಿಯವರ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ. ಹೀಗಿರುವಾಗ, ಭಾರತದಲ್ಲೂ ಕ್ಷಿಪ್ರಕ್ರಾಂತಿ ಸಂಭವಿಸಿ, ಮೋದಿಯವರು ಪದಚ್ಯುತಗೊಳ್ಳಬೇಕು ಎಂದು ಆಶಿಸುವುದು ಹಗಲುಗನಸೇ ಸರಿ!

**(ಲೇಖಕರು ಹವ್ಯಾಸಿ ಬರಹಗಾರರು)**

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:248

## ಸಮಾಚಾರ ಸಣ್ಣದಲ್ಲ

### ‘ಆಂಟಿಫಾ’ ಉಗ್ರ ಸಂಘಟನೆ: ಟ್ರಂಪ್

**ವಾಷಿಂಗ್ಟನ್:** ಅಮೆರಿಕದಲ್ಲಿ ಎಡಪಂಥೀಯ ಹಾಗೂ ಸಮಾಜವಿರೋಧಿ ಚಟುವಟಿಕೆಗಳ ಗುಂಪುಗಳನ್ನು ‘ಆಂಟಿಫಾ’ ಎಂದೇ ಗುರುತಿಸಲಾಗುತ್ತಿದೆ. ಆಂಟಿಫಾ ಒಂದು ಅನಾರೋಗ್ಯಕಾರಿ, ಅಪಾಯಕಾರಿ, ಮೂಲಭೂತ ಎಡಪಂಥೀಯ ವಿಪತ್ತು ಎಂದು ಕರೆದಿರುವ



ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಆಂಟಿಫಾ’ವನ್ನು ಪ್ರಮುಖ ಭಯೋತ್ಪಾದಕ ಸಂಘಟನೆ ಎಂದು ಘೋಷಿಸುವುದಾಗಿ ಹೇಳಿದ್ದಾರೆ. ಪೊಲೀಸರ ಮೇಲಿನ ದಾಳಿ, ಅಮೆರಿಕ ರಾಜಧಾನಿ ಗಲಭೆ ಮತ್ತಿತರ ಕೃತ್ಯಗಳಲ್ಲಿ ಆಂಟಿಫಾ ಕೈವಾಡದ ಆರೋಪಗಳಿವೆ. ‘ಆಂಟಿಫಾ’ಗೆ ಹಣದ ನೆರವು ನೀಡುವವರನ್ನೂ ಕಾನೂನು ಪ್ರಕಾರ ತನಿಖೆಗೆ ಒಳಪಡಿಸುವುದಕ್ಕೂ ಶಿಫಾರಸು ಮಾಡುವೆ ಎಂದು ಟ್ರೂತ್ ಸಂದೇಶದಲ್ಲಿ ಟ್ರಂಪ್ ‘ಟ್ರೂಥ್’ ಸಂದೇಶದಲ್ಲಿ ಬರೆದಿದ್ದಾರೆ. ಬಲಪಂಥೀಯ, ಟ್ರಂಪ್ ಆಪ್ತ ಚಾರ್ಲಿ ಕಿರ್ಕ್ ಹತ್ಯೆಗೆ ಕಾರಣವಾದ ಭಯೋತ್ಪಾದನಾ ಚಟುವಟಿಕೆಯ ಮೂಲವನ್ನು ನಾಶಪಡಿಸುವುದಾಗಿ ಶ್ವೇತಭವನದ ಹಿರಿಯ ಅಧಿಕಾರಿ ಸ್ಟೀಫನ್ ಮಿಲ್ಲರ್ ಪಣ ತೊಟ್ಟಿದ್ದಾರೆ ಎಂದು ವರದಿಯಾಗಿದೆ.

### 2026 ಚುನಾವಣೆ ನಂತರ ಮಾತನಾಡುವೆ: ಆಂಟನಿ

**ತಿರುವನಂತಪುರಂ:** 2026ರ ಕೇರಳ ವಿಧಾನಸಭೆ ಚುನಾವಣೆ ನಂತರ ‘ನನ್ನ ರಾಜಕೀಯ ಜೀವನದ ಕೆಲವು ವಿಷಯಗಳ ಕುರಿತು ಮಾತನಾಡುವೆ’ ಎಂದು 3 ಬಾರಿ ಕೇರಳ ಮುಖ್ಯಮಂತ್ರಿಯಾಗಿದ್ದ, ಅತ್ಯಂತ ದೀರ್ಘಾವಧಿಗೆ ದೇಶದ ರಕ್ಷಣಾ ಸಚಿವರಾಗಿದ್ದ ಕಾಂಗ್ರೆಸ್ ನಾಯಕ ಎ.ಕೆ.ಆ್ಯಂಟನಿ

ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ‘ನನಗೀಗ 85 ವರ್ಷ. ಬದುಕಿದ್ದರೆ 2026ರ ಏಪ್ರಿಲ್–ಮೇ ಚುನಾವಣೆ ನಂತರ ಆ ಬಗ್ಗೆ ಮಾತನಾಡುವೆ’ ಎಂದು ಹಿರಿಯ ಕಾಂಗ್ರೆಸ್ ನಾಯಕ ಹೇಳಿದ್ದು, ಭಾರೀ ಕುತೂಹಲಕ್ಕೆ ಕಾರಣವಾಗಿದೆ. ನನ್ನ ಅಧಿಕಾರಾವಧಿಯ 2 ಘಟನೆಗಳನ್ನು ವಿಧಾನಸಭಾ ಅಧಿವೇಶನದಲ್ಲಿ ಮರಳಿ ಪ್ರಸ್ತಾಪಿಸಲಾಗಿದೆ. ಹಾಗಾಗಿ ಇಂದು ಸುದ್ದಿಗೋಷ್ಠಿ ಕರೆಯಬೇಕಾಯಿತು ಎಂದಿದ್ದಾರೆ. ‘1995ರಲ್ಲಿ ಶಿವಗಿರಿಯ ನಾರಾಯಣ ಗುರು ನಿವಾಸದಲ್ಲಿನ ಪೊಲೀಸ್ ಕ್ರಮಕ್ಕೆ ಪ್ರತಿಕ್ರಿಯಿಸುವುದು ಅನಿವಾರ್ಯವಾಗಿದೆ. ಹೈಕೋರ್ಟ್ ಆದೇಶದಂತೆ ಕ್ರಮ ಕೈಗೊಂಡ ಬಳಿಕ ಪೊಲೀಸರನ್ನು ಕಳುಹಿಸಬೇಕಾಯಿತು ಎಂದು ಸ್ಪಷ್ಟಪಡಿಸಿದ್ದಾರೆ. ಮುತಂಗ ಘಟನೆ ಪ್ರಸ್ತಾಪಿಸಿ ಆದಿವಾಸಿಗಳಿಗೆ ಹೆಚ್ಚಿನ ಭೂಮಿ ಒದಗಿಸಿದ್ದು ನಾನೇ. ಆದರೆ ಅವರ ಜೀವಂತ ದಹನದ ಆರೋಪ ನನ್ನ ಮೇಲಿದೆ ಎಂದು ಆಂಟನಿ ವಿಷಾದಿಸಿದರು.

### ಹುರಿಯತ್ ನಾಯಕ ಅಬ್ದುಲ್ ಗನಿ ನಿಧನ

**ಶ್ರೀನಗರ:** ಹುರ‍್ರಿಯತ್ ಕಾನ್ಫರೆನ್ಸ್ ಮಾಜಿ ಅಧ್ಯಕ್ಷ ಪ್ರೊ. ಅಬ್ದುಲ್ ಗನಿ ಭಟ್(90) ಬುಧವಾರ ಸಂಜೆ ನಿಧನರಾದರು. ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಬಾರಾಮುಲ್ಲಾ ಜಿಲ್ಲೆಯ ಸೋಪೋರ್‌ನ ಬೊಟೆಂಗೊ ಪ್ರದೇಶದ ನಿವಾಸದಲ್ಲಿ ಕೊನೆಯುಸಿರೆಳೆದರು. ಅಬ್ದುಲ್ ಪರ್ಷಿಯನ್ ಭಾಷೆಯ ಮಾಜಿ ಪ್ರಾಧ್ಯಾಪಕರಾಗಿದ್ದರು. ಪ್ರತ್ಯೇಕತಾವಾದಿ ಮುಸ್ಲಿಂ ಕಾನ್ಫರೆನ್ಸ್ ಅಧ್ಯಕ್ಷರಾಗಿದ್ದರು. 1999–2001 ಅವಧಿಗೆ ಹುರ‍್ರಿಯತ್ ಕಾನ್ಫರೆನ್ಸ್ ಅಧ್ಯಕ್ಷರಾಗಿದ್ದರು.

### ಎಲ್ಲಾ ಧರ್ಮಗಳನ್ನೂ ಗೌರವಿಸುವೆ: ಸಿಜೆಐ

**ದೆಹಲಿ:** ‘ನಾನು ಎಲ್ಲಾ ಧರ್ಮಗಳನ್ನು ಗೌರವಿಸುತ್ತೇನೆ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಗುರುವಾರ ಹೇಳಿದ್ದಾರೆ. ಮಧ್ಯಪ್ರದೇಶದ ಯುನೆಸ್ಕೋ ವಿಶ್ವ ಪರಂಪರೆಯ ಖಜುರಾಹೊ ದೇವಾಲಯ

ಸಂಕೀರ್ಣದ ಭಾಗವಾಗಿರುವ ಜವಾರಿ ದೇವಾಲಯದಲ್ಲಿ 7 ಅಡಿಯ ವಿಷ್ಣುವಿನ ವಿಗ್ರಹ ಮರುಸ್ಥಾಪನೆಗೆ ನಿರ್ದೇಶನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾ. ಬಿ.ಆರ್.ಗವಾಯಿ ಅವರ ಪೀಠ ಮೇ 16ರಂದು ವಜಾಗೊಳಿಸಿತ್ತು. ಆಗ, ಪ್ರಚಾರಕ್ಕಾಗಿಯೇ ಅರ್ಜಿ ಸಲ್ಲಿಸಲಾಗಿದೆ ಎಂದು ಟೀಕಿಸಿದ್ದ ಪೀಠ, ನೀವು ವಿಷ್ಣುವಿನ ಬಲವಾದ ಭಕ್ತ ಎನ್ನುತ್ತಿದ್ದೀರಿ. ಹಾಗಿದ್ದರೆ ಈ ಬಗ್ಗೆ ಹೋಗಿ ನಿಮ್ಮ ದೇವರನ್ನೇ ಏನಾದರೂ ಮಾಡಲು ಕೇಳಿ ಎಂದು ಅರ್ಜಿದಾರರಿಗೆ ಸೂಚಿಸಿತ್ತು. ಸಿಜೆಐ ಅವರ ಹೇಳಿಕೆ ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ವಿಮರ್ಶೆ, ಚರ್ಚೆಗೆ ಕಾರಣವಾಯಿತು. ಈ ಹಿನ್ನೆಲೆಯಲ್ಲಿಯೇ ಮುಖ್ಯ ನ್ಯಾಯಮೂರ್ತಿ ಗುರುವಾರ ಪ್ರತಿಕ್ರಿಯೆ ನೀಡಿದ್ದಾರೆ.

{ ಕಾಜಾ ಕಲ್ಲಾಸ್ } ಇ.ಸಿ ಉಪಾಧ್ಯಕ್ಷೆ

**ಭಾರತದ ಜತೆ ಕಾರ್ಯತಂತ್ರ ಸಂಬಂಧ ನವೀಕರಣಕ್ಕೆ ಯುರೋಪಿಯನ್ ಆಯೋಗ(ಇ.ಸಿ) ಯೋಜನೆ ರೂಪಿಸಿದೆ. ಆದರೆ ಭಾರತ ಯುದ್ಧಗ್ರಸ್ತ ರಷ್ಯಾ ಜತೆ ಸೇನಾ ತಾಲೀಮು ನಡೆಸುತ್ತದೆ, ರಷ್ಯಾದಿಂದ ತೈಲ ಖರೀದಿ ಮುಂದುವರಿಸಿದೆ. ಇದರಿಂದ ಬ್ರಸೆಲ್ಸ್–ದೆಹಲಿ ನಡುವಿನ ಕಾರ್ಯತಂತ್ರ ಸಂಬಂಧ ಮುಂದುವರಿಕೆ**

# ಆನ್‌ಲೈನ್‌ನಲ್ಲಿ ಮತದಾರರ ಹೆಸರು ರದ್ದು ಅಸಾಧ್ಯ

## ಮತ ಕಳವು ಕುರಿತ ರಾಹುಲ್ ಗಾಂಧಿ ಆರೋಪ ಆಧಾರರಹಿತ: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್

**ದೆಹಲಿ:** ಯಾವುದೇ ವ್ಯಕ್ತಿ ಆನ್‌ಲೈನ್‌ನಲ್ಲಿ ಯಾವುದೇ ಮತದಾರರ ಹೆಸರನ್ನು ಅಳಿಸಿ ಹಾಕಲು ಸಾಧ್ಯವೇ ಇಲ್ಲ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಆರೋಪ ನಿರಾಧಾರ ಎಂದು ಭಾರತೀಯ ಚುನಾವಣಾ ಆಯೋಗದ ಆಯುಕ್ತ ಜ್ಞಾನೇಶ್ ಕುಮಾರ್ ಗುರುವಾರ ಸ್ಪಷ್ಟಪಡಿಸಿದ್ದಾರೆ.

ಇಂದಿರಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಜ್ಞಾನೇಶ್ ಕುಮಾರ್ ಅವರು, ಮತ ಕಳವು ಪ್ರಕರಣಗಳಲ್ಲಿ ಮತ ಚೋರರನ್ನು ರಕ್ಷಿಸಲಾಗುತ್ತಿದೆ. ಕೇಂದ್ರ ಚುನಾವಣಾ ಆಯೋಗ ಮತ ಕಳ್ಳರ ಪರವಾಗಿ ಕೆಲಸ ಮಾಡುತ್ತಿದೆ ಎಂಬ ರಾಹುಲ್ ಗಾಂಧಿ ಅವರ ಆರೋಪ ಆಧಾರರಹಿತ ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿ ಅವರ ಆಲೋಚನೆಯೇ ತಪ್ಪು. ಯಾವುದೇ ಮತದಾರನ ಒಪ್ಪಿಗೆ ಇಲ್ಲದೆಯೇ ಆತನ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲು ಹೊರಗಿನ ವ್ಯಕ್ತಿಗಳಿಗೆ ಯಾರಿಗೂ ಸಾಧ್ಯವೇ ಇಲ್ಲ ಎಂದು ಮುಖ್ಯ ಚುನಾವಣಾ ಆಯುಕ್ತರು ದೃಢವಾಗಿ ಹೇಳಿದ್ದಾರೆ. 2023ರ ಚುನಾವಣೆಗೂ ಮುನ್ನ ಕರ್ನಾಟಕದಲ್ಲಿ ಕಾಂಗ್ರೆಸ್ ಬೆಂಬಲಿಗರ ಮತಗಳನ್ನು ವ್ಯವಸ್ಥಿತವಾಗಿ ಅಳಿಸಿಹಾಕಲಾಗಿದೆ. ಮತಗಳ್ಳರು ಮತ್ತು ಪ್ರಜಾಪ್ರಭುತ್ವ ನಾಶಪಡಿಸುವವರನ್ನು ಭಾರತದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಕ್ಷಿಸುತ್ತಿದ್ದಾರೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಗುರುವಾರ ಸುದ್ದಿಗೋಷ್ಠಿಯಲ್ಲಿ ನೇರ ಆರೋಪ ಮಾಡಿದ್ದರು.

### ರಾಹುಲ್ ನಿರೂಪಣೆ ಪೂರ್ಣ ಸುಳ್ಳು: ಶಾ

**ಪಟನಾ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ‘ಮತ ಕಳವು’ ಆರೋಪ ಸಂಪೂರ್ಣ ಸುಳ್ಳು ನಿರೂಪಣೆಯಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಟೀಕಿಸಿದ್ದಾರೆ.



ಬಿಹಾರ ಪ್ರವಾಸದಲ್ಲಿರುವ ಅಮಿತ್ ಶಾ, ರಾಹುಲ್ ಗಾಂಧಿ ಬಿಹಾರದಲ್ಲಿ ಇತ್ತೀಚೆಗೆ ನಡೆಸಿದ ‘ಮತದಾರರ ಅಧಿಕಾರ ಯಾತ್ರೆ’ ಎಂಬುದು ಬಾಂಗ್ಲಾ ನುಸುಳುಕೋರರನ್ನು ರಕ್ಷಿಸುವ ಗುರಿಯನ್ನು ಮಾತ್ರವೇ ಹೊಂದಿದೆ ಎಂದು ಆರೋಪಿಸಿದ್ದಾರೆ. ಬಿಹಾರದಲ್ಲಿ ‘ಇಂಡಿ’ ಒಕ್ಕೂಟವೇನಾದರೂ ಅಧಿಕಾರಕ್ಕೆ ಬಂದರೆ ಇಡೀ ರಾಜ್ಯ ಬಾಂಗ್ಲಾದೇಶದ ನುಸುಳುಕೋರರಿಂದಲೇ ತುಂಬಿ ಬಿಡುತ್ತದೆ ಎಂದು ಎಚ್ಚರಿಸಿದ್ದಾರೆ.

### ಒಳನುಸುಳುಕೋರರಿಗೆ ಅವಕಾಶದ ಕಾರ್ಯಸೂಚಿ

**ದೆಹಲಿ:** ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮತ್ತು ಅವರ ಪಕ್ಷಕ್ಕೆ ಭಾರತದ ಪ್ರಜಾಪ್ರಭುತ್ವ, ಸಾಂವಿಧಾನಿಕ ಸಂಸ್ಥೆಗಳ ಮೇಲೆ ಸ್ವಲ್ಪವೂ ನಂಬಿಕೆ ಇಲ್ಲ, ಅನುಮಾನಿಸುವುದು, ಅವಮಾನಿಸುವುದೇ ರಾಹುಲ್ ಗಾಂಧಿ ಅವರ ಕಾಯಕವಾಗಿದೆ ಎಂದು ಬಿಜೆಪಿ ಟೀಕಿಸಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಚುನಾವಣಾ ಆಯೋಗದ ವಿರುದ್ಧ ಮತ ಕಳವು ಆರೋಪ ಮಾಡಿದ ಬಳಿಕ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಬಿಜೆಪಿ ನಾಯಕ ಅನುರಾಗ್ ಠಾಕೂರ್, ದೇಶದೊಳಕ್ಕೆ ಅಕ್ರಮ ಮಾರ್ಗದಲ್ಲಿ ನುಸುಳಿಕೊಂಡು ಬರುತ್ತಿರುವವರಿಗೆ ಆದ್ಯತೆ ನೀಡುವ ರಾಜಕೀಯ ಕಾರ್ಯಸೂಚಿಯನ್ನು ರಾಹುಲ್ ಗಾಂಧಿ ಅನುಸರಿಸುತ್ತಿದ್ದಾರೆ. ಹಾಗಾಗಿಯೇ ಅಕ್ರಮ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪ ಮಾಡಿದರು.

ಒಳನುಸುಳುಕೋರರಿಗೆ ಕಾಂಗ್ರೆಸ್ ಅವಕಾಶ ಮಾಡಿಕೊಡಲು ಮುಂದಾಗಿರುವುದರಿಂದ ದೇಶದಲ್ಲಿನ ಪರಿಶಿಷ್ಟ ಜಾತಿ–ಪಂಗಡಗಳು (ಎಸ್‌ಸಿ–ಎಸ್‌ಟಿ) ಮತ್ತು ಒಬಿಸಿ ಸಮುದಾಯಗಳ ಹಿತಾಸಕ್ತಿಗೆ ಹಾನಿಯಾಗುತ್ತದೆ ಎಂದು ಗಮನ ಸೆಳೆದರು.

**ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ವಿರುದ್ಧ ಅನುರಾಗ್ ಠಾಕೂರ್ ಕಿಡಿ**

ತುಷ್ಟೀಕರಣ ರಾಜಕೀಯದಲ್ಲಿ ಮುಳುಗಿರುವ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷ, ಭಾರತದ ಸಾಂವಿಧಾನಿಕ ಸಂಸ್ಥೆ ಚುನಾವಣಾ ಆಯೋಗವನ್ನು ಅನುಮಾನಿಸುತ್ತಾ, ಅವಮಾನ ಮಾಡುತ್ತಾ ಬರುತ್ತಿದ್ದು, ಸಂಸ್ಥೆಯನ್ನು ದುರ್ಬಲಗೊಳಿಸುವ ಕಾರ್ಯಸೂಚಿ ಹೊಂದಿದ್ದಾರೆ ಎಂದು ಆರೋಪಿಸಿದರು.

ಈ ಹಿಂದೆ ಚುನಾವಣಾ ಆಯೋಗದಲ್ಲಿ ಮುಖ್ಯಸ್ಥರಾಗಿದ್ದವರ ಜತೆ ಸಂಬಂಧ ಹೊಂದಿದ್ದ ಕಾಂಗ್ರೆಸ್ ಪಕ್ಷಕ್ಕಾಗಲೀ, ಅದರ ನಾಯಕರಿಗಾಗಲೀ ಚುನಾವಣಾ ಆಯೋಗದ ಈಗಿನ ಅಧಿಕಾರಿಗಳ ವಿರುದ್ಧ ಆರೋಪ ಮಾಡುವುದಕ್ಕೆ ನೈತಿಕ ಹಕ್ಕು ಇಲ್ಲ. ರಾಹುಲ್ ಆರೋಪದಲ್ಲೇನಾದರೂ ಸತ್ಯ ಇದ್ದರೆ, ಹುರುಳಿದ್ದರೆ ಅದೇ ವಿಷಯವನ್ನು ನ್ಯಾಯಾಲಯಕ್ಕೆ ಕೊಂಡೊಯ್ಯ ಬಹುದಲ್ಲವೇ ಎಂದು ಸವಾಲೆಸಿದಿದ್ದಾರೆ.

**ರಾಹುಲ್‌ಗೆ ಅನುರಾಗ್ ಪ್ರಶ್ನೆ:** ಕರ್ನಾಟಕದ ಆಳಂದ ಮತ ಕಳವು ಆರೋಪಕ್ಕೆ ಸಂಬಂಧಿಸಿದ ಮೊಬೈಲ್ ಸಂಖ್ಯೆ, ಐಪಿ ವಿಳಾಸಗಳನ್ನೂ ಚುನಾವಣಾ ಆಯೋಗವೇ ನೀಡಿದ್ದರೂ ಕಾಂಗ್ರೆಸ್ ಆಡಳಿತವೇ ಇರುವ ಕರ್ನಾಟಕದ ಸಿಐಡಿ ಏಕೆ ಕ್ರಮ ಕೈಗೊಂಡಿಲ್ಲ? ಎಂದು ಅನುರಾಗ್ ಠಾಕೂರ್ ಪ್ರಶ್ನೆ ಮಾಡಿದ್ದಾರೆ.

2023ರಲ್ಲಿ ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿಯಿಂದ ಸಾವಿರಾರು ಹೆಸರುಗಳನ್ನು ತೆಗೆದುಹಾಕಲು ಯತ್ನ ನಡೆದಿತ್ತು. ಆದರೆ, ಆ ಪ್ರಯತ್ನ ಮಾಡಿದವರು ವಿಫಲರಾದರು. ಈ ಸಂಬಂಧ ಚುನಾವಣಾ ಆಯೋಗವೇ ಎಫ್‌ಐಆರ್ ದಾಖಲಿಸಲು ಜಿಲ್ಲಾ ಚುನಾವಣಾಧಿಕಾರಿಗೆ ನಿರ್ದೇಶನ ನೀಡಿತ್ತು ಎಂದೂ ಠಾಕೂರ್ ಹೇಳಿದರು.

ಆಳಂದ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯೇ ಗೆದ್ದಿದ್ದಾರೆ. ಹಾಗಿದ್ದರೆ ‘ಮತ ಕಳವು’ ಮಾಡಿಯೇ ಕಾಂಗ್ರೆಸ್ ಗೆದ್ದಿದೆಯೇ? ಇನ್ನೊಂದೆಡೆ, ಕೋಲಾರ ಜಿಲ್ಲೆ ಮಾಲೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವನ್ನು ಹೈಕೋರ್ಟ್ ಅಸಿಂಧುವಾಗಿಸಿದೆ. ಮತಕಳವು ಆರೋಪ ಮಾಡುವ ರಾಹುಲ್ ಈ ವಿಚಾರದ ಬಗ್ಗೆ ಏನು ಹೇಳುತ್ತಾರೆ? ಟೂಲ್‌ಕಿಟ್‌ಗಳ ನೆರವು ಪಡೆಯುವ ರಾಹುಲ್, ಸಾಂವಿಧಾನಿಕ ಸಂಸ್ಥೆಯನ್ನೇ ನಿರಂತರ ಪ್ರಶ್ನಿಸುತ್ತಾ ಸಂಸ್ಥೆಯನ್ನು ದುರ್ಬಲಗೊಳಿಸಲು ಯತ್ನಿಸುತ್ತಿದ್ದಾರೆ ಏಕೆ? ಎಂದೂ ಬಿಜೆಪಿ ಮುಖಂಡ ಪ್ರಶ್ನೆ ಮಾಡಿದ್ದಾರೆ.

ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಈವರೆಗೆ 90 ಚುನಾವಣೆಗಳಲ್ಲಿ ಸೋತಿದೆ. ಹೈಡ್ರೋಜನ್ ಬಾಂಬ್ ಹಾಕುವುದಾಗಿ ಹೇಳಿದ್ದ ರಾಹುಲ್, ಸುದ್ದಿಗೋಷ್ಠಿಯಲ್ಲಿ ಸಾಮಾನು ಪಟಾಕಿ ಸಿಡಿಸಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

### ಮಸ್ಕ್ ಎಕ್ಸ್‌ಎಐ ‘ಗ್ರೂಕ್’ಗೆ 19ರ ವಿದ್ಯಾರ್ಥಿ ನೇತೃತ್ವ

**ವಾಷಿಂಗ್ಟನ್:** ಟೆಸ್ಲಾ ಕಾರು, ಸ್ಪೇಸ್ ಎಕ್ಸ್, ‘ಎಕ್ಸ್’ ಕಂಪನಿಗಳ ಮುಖ್ಯಸ್ಥ ಎಲಾನ್ ಮಸ್ಕ್, ತಮ್ಮದೇ ಒಡೆತನದ ಕೃತಕ ಬುದ್ಧಿಮತ್ತೆಯ ಸಂಸ್ಥೆ ‘ಎಕ್ಸ್ ಎಐ’ನ ‘ಗ್ರೂಗ’ ತಂಡಕ್ಕೆ 19 ವರ್ಷದ ನವತರುಣನ್ನೇ ಮುಖ್ಯಸ್ಥನನ್ನಾಗಿ ನೇಮಕ ಮಾಡಿ ಉದ್ಯಮ ಜಗತ್ತು ಹುಬ್ಬೇರಿಸುವಂತೆ ಮಾಡಿದ್ದಾರೆ.

ಪ್ರಸ್ತುತ ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿರುವ ಡಿಯಾಗೊ ಪಸಿನಿ ಎಂಬಾತನೇ ಎಲಾನ್ ಮಸ್ಕ್ ಅವರ ಅಚ್ಚರಿಯ ಆಯ್ಕೆಯಾಗಿದ್ದಾನೆ.

ಬಹಳ ಸಂಕೀರ್ಣವಾದ, ಸವಾಲಿನ ಕ್ಷೇತ್ರವಾದ ‘ಎಐ’ ಉದ್ಯಮ ಕ್ಷೇತ್ರದ ಕಂಪನಿಯ ಪ್ರಮುಖ ಭಾಗವಾಗಿ ‘ಎಕ್ಸ್ ಎಐ’ನ ‘ಗ್ರೂಕ್ ಎಐ ಚಾಟ್‌ಬಾಟ್’ ವಿಭಾಗದ ಜವಾಬ್ದಾರಿಯನ್ನು ಡಿಯಾಗೊ ನಿರ್ವಹಿಸಬೇಕಿದೆ. ಡಿಯಾಗೊ 2023ರಲ್ಲಷ್ಟೇ ಪ್ರೌಢಶಾಲೆ ಪೂರ್ಣಗೊಳಿಸಿ ಕಾಲೇಜಿಗೆ ಸೇರಿದ್ದಾರೆ ಎಂಬುದು ಉಲ್ಲೇಖಾರ್ಹ. ಇದೇ ವೇಳೆ, ಎಲಾನ್ ಮಸ್ಕ್ ‘ಎಕ್ಸ್ ಎಐ’ ಕಂಪನಿ ಯಿಂದ 500ಕ್ಕೂ ಅಧಿಕ ಸಿಬ್ಬಂದಿಯನ್ನು ಹೊರದೂಡಿದ್ದಾರೆ.

### ಮೆದುಳು ತಿನ್ನುವ ಅಮೀಬಾ ಸೋಂಕಿಗೆ 19 ಬಲಿ

**ತಿರುವನಂತಪುರಂ:** ಮೆದುಳು ತಿನ್ನುವ ಅಮೀಬಾ ಸೋಂಕಿಗೆ ಕೇರಳದಲ್ಲಿ ಈ ವರ್ಷದಲ್ಲಿ ಈವರೆಗೆ 19 ಮಂದಿ ಬಲಿಯಾಗಿದ್ದಾರೆ. ಕೋವಿಡ್–19 ಬಳಿಕ ಈ ಅಮೀಬಾ ಸೋಂಕು ರಾಜ್ಯದ ಜನರಲ್ಲಿ ಭಾರಿ ಆತಂಕ ಉಂಟು ಮಾಡಿದೆ. ಈಜುಕೊಳ, ಕೆರೆ ಕಟ್ಟೆ ಮತ್ತಿತರೆಡೆ, ಹರಿಯದೇ ನಿಂತ ನೀರಿಗೆ ಮನುಷ್ಯರು ಇಳಿದಾಗ ಈ ಸೋಂಕು ಹರಡುತ್ತದೆ. ‘ನೆಗ್ಲೇರಿಯಾ ಫೌಲೆರಿ’ ಎಂಬ ವೈಜ್ಞಾನಿಕ ನಾಮದ ಈ ರೋಗಕ್ಕೆ ದಕ್ಷಿಣ ಕೊರಿಯಾ ದೇಶದಲ್ಲಿ ಮೊದಲಿಗೆ ಒಬ್ಬರು ಬಲಿಯಾದರು. ಈಗ ಸೋಂಕು ಕೇರಳದಲ್ಲಿ ನಿಧಾನವಾಗಿ ವ್ಯಾಪಿಸುತ್ತಿದೆ. ಪ್ರಸಕ್ತ ವರ್ಷದಲ್ಲಿ ಕೇರಳದಲ್ಲಿ 61 ಮಂದಿಯಲ್ಲಿ ಈ ಸೋಂಕು ಇರುವುದು ದೃಢಪಟ್ಟಿದೆ. ಅವರಲ್ಲಿ 19 ಮಂದಿ ಚಿಕಿತ್ಸೆಗೆ ಸ್ಪಂದಿಸಲಾಗದೇ ಸಾವಿಗೀಡಾದರು. ನೀರಿನಲ್ಲಷ್ಟೇ ಜೀವಿಸುವ ಈ ಅಮೀಬಾ, ಮೂಗಿನ ಮೂಲಕ ಮನುಷ್ಯರ ದೇಹವನ್ನು ಪ್ರವೇಶಿಸುತ್ತದೆ. ಬಳಿಕ ನೇರವಾಗಿ ಮೆದುಳಿನ ಮೇಲೆಯೇ ಆಕ್ರಮಣ ಮಾಡುತ್ತದೆ.

### ಬುರ್ಜ್ ಖಲೀಫಾದಲ್ಲಿ ಮಿನುಗಿದ ಮೋದಿ ಚಿತ್ರ

**ದುಬೈ:** ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಜನ್ಮದಿನಕ್ಕೆ ಶುಭ ಕೋರಲು ದುಬೈನಲ್ಲಿರುವ ವಿಶ್ವದ ಅತಿ ಎತ್ತರದ ಕಟ್ಟಡ ಬುರ್ಜ್ ಖಲೀಫಾ, ಬುಧವಾರ ರಾತ್ರಿ ಝಗಮಗಿಸುವ ವಿದ್ಯುತ್ ದೀಪಗಳು, ಮೋದಿ ಚಿತ್ರಗಳಿಂದ ಮಿನುಗುಟ್ಟಿತು.

ಮೋದಿ ಜಿ ಜನ್ಮದಿನದ ಶುಭಾಶಯ ಎಂಬ ಸಂದೇಶವನ್ನೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಬೆಳಗಿಸಲಾಯಿತು. ಇದೇ ವೇಳೆ ಭಾರತೀಯ ಧ್ವಜದ ಕೇಸರಿ, ಬಿಳಿ ಮತ್ತು ಹಸಿರು ಬಣ್ಣಗಳನ್ನೂ ಬುರ್ಜ್ ಖಲೀಫಾ ಕಟ್ಟಡ ಮೇಲೆ ಪ್ರದರ್ಶಿಸಲಾಯಿತು. ಬುರ್ಜ್ ಖಲೀಫಾ ವಿದ್ಯುತ್ ದೀಪ, ಮೋದಿ ಚಿತ್ರಗಳಿಂದ ಬೆಳಗಿದ ವಿಡಿಯೊವನ್ನು ಜಾಲತಾಣದಲ್ಲಿ ಹಂಚಿಕೊಳ್ಳಲಾಗಿದೆ.

ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಪ್ರಧಾನಿ ಮೋದಿ ಅವರ ಹುಟ್ಟುಹಬ್ಬಕ್ಕೆ ಶುಭ ಹಾರೈಸಿದ್ದಾರೆ. ‘ನರೇಂದ್ರ ಮೋದಿ ಜಿ, ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಉತ್ತಮ ಆರೋಗ್ಯ–ಸಂತೋಷ ನಿಮ್ಮದಾಗಲೆಂದು ಸದಾ ಬಯಸುವೆ. ಭಾರತದ ಪ್ರಗತಿ ಮತ್ತು ಭಾರತೀಯರ ಸಮೃದ್ಧಿಯನ್ನು ಮುನ್ನಡೆಸುವಲ್ಲಿ ನಿಮ್ಮ ನಿರಂತರ ಯಶಸ್ಸನ್ನು ಹಾರೈಸುವೆ ಎಂದು ‘ಎಕ್ಸ್’ ಸಂದೇಶದಲ್ಲಿ ಬರೆದಿದ್ದಾರೆ.

### ಪಾಕ್–ಸೌದಿ ಪರಸ್ಪರ ರಕ್ಷಣಾ ಒಪ್ಪಂದಕ್ಕೆ ಸಹಿ

**ರಿಯಾದ್:** ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಸೌದಿ ಅರೇಬಿಯ ಪ್ರವಾಸ ಕೈಗೊಂಡಿದ್ದು, ರಿಯಾದ್ ಭೇಟಿಯಲ್ಲಿ ಮಹತ್ವದ ಒಪ್ಪಂದ ಮಾಡಿಕೊಂಡಿದ್ದಾರೆ.

ಸೌದಿ ಅರೇಬಿಯಾ ಮತ್ತು ಪಾಕಿಸ್ತಾನ ಪರಸ್ಪರ ರಕ್ಷಣೆಗೆ ಸಂಬಂಧಿಸಿದ ಒಪ್ಪಂದಕ್ಕೆ ಸಹಿ ಹಾಕಿವೆ. ಎರಡೂ ದೇಶಗಳಲ್ಲಿ ಯಾರ ಮೇಲೆ ಯುದ್ಧ ನಡೆದರೂ ಎರಡೂ ದೇಶಗಳ ವಿರುದ್ಧದ ಆಕ್ರಮಣ ಎಂದೇ ಪರಿಗಣಿಸುವುದು ಈ’ ಒಪ್ಪಂದದ ಪ್ರಮುಖ ಅಂಶವಾಗಿದೆ.

ಸೌದಿ ಕ್ರೌನ್ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಆಹ್ವಾನದ ಮೇರೆಗೆ ಪಾಕ್ ಪ್ರಧಾನಿ ಶೆಹಬಾಜ್ ಬುಧವಾರ ರಿಯಾದ್‌ಗೆ ಭೇಟಿ ನೀಡಿದ್ದು, ರಿಯಾದ್‌ನ ಅಲ್–ಯಮಾಮಾ ಅರಮನೆಯಲ್ಲಿ ಇಬ್ಬರೂ ನಾಯಕರು ಭೇಟಿಯಾದರು.

ಸೌದಿ–ಪಾಕ್ ಮಧ್ಯೆ 7 ದಶಕಗಳ ಐತಿಹಾಸಿಕ ಪಾಲುದಾರಿಕೆ ಇದೆ. ಇಸ್ಲಾಮಿಕ್ ರಾಷ್ಟ್ರಗಳ ಒಗ್ಗಟ್ಟಿನ ದೃಷ್ಟಿಯಿಂದ ಈ ಒಪ್ಪಂದ ಮಾಡಿಕೊಳ್ಳಲಾಗಿದೆ. ಒಪ್ಪಂದ ಉಭಯ ದೇಶಗಳ ರಕ್ಷಣೆಗೆ ನಿಕಟ ಸಹಕಾರ ಒದಗಿಸಲಿದೆ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

**ಭಾರತ ಪ್ರತಿಕ್ರಿಯೆ:** ಈ ಕುರಿತು ಭಾರತ ಸೀಮಿತ ಪ್ರತಿಕ್ರಿಯೆ ನೀಡಿದೆ. ಸೌದಿ–ಪಾಕ್ ನಡುವಿನ ಕಾರ್ಯತಂತ್ರ, ರಕ್ಷಣಾ ಒಪ್ಪಂದದ ವರದಿ ಗಮನಕ್ಕೆ ಬಂದಿದೆ ಎಂದಷ್ಟೇ ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದೆ.

ಎರಡೂ ದೇಶಗಳ ನಡುವಿನ ಈ ಒಪ್ಪಂದದಿಂದ ಭಾರತದ ರಾಷ್ಟ್ರೀಯ ಭದ್ರತೆ ಹಾಗೂ ಪ್ರಾದೇಶಿಕ ಮತ್ತು ಜಾಗತಿಕ ಸ್ಥಿರತೆ ಮೇಲೆ

**ರಿಯಾದ್‌ನಲ್ಲಿ ಸೌದಿ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅವರನ್ನು ಆಲಂಗಿಸಿ ಗೌರವ ವಿನಿಮಯ ಮಾಡಿಕೊಂಡ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್.**

ಎಂಥ ಪರಿಣಾಮವಾಗಲಿದೆ ಎಂಬ ಬಗ್ಗೆ ಅಧ್ಯಯನ ಮಾಡುತ್ತೇವೆ. ರಾಷ್ಟ್ರೀಯ ಹಿತಾಸಕ್ತಿ ರಕ್ಷಣೆ ಮತ್ತು ಸಮಗ್ರ ರಾಷ್ಟ್ರೀಯ ಭದ್ರತೆ ಖಚಿತಪಡಿಸಿಕೊಳ್ಳಲು ಭಾರತ ಸರಕಾರ ಬದ್ಧವಾಗಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

### ಸೇನೆ ಸೂಚನೆಯಂತೆ ಮೃತ ಜೆಇಎಂ ಸದಸ್ಯರಿಗೆ ಗೌರವ

**ದೆಹಲಿ:** ಜೈಶ್ ಎ ಮೊಹಮ್ಮದ್ ನಾಯಕರು, ಸದಸ್ಯರು ಭಾರತದ ಆಪರೇಷನ್ ಸಿಂದೂರ್ ದಾಳಿಯಲ್ಲಿ ಹತರಾದಾಗ ಅವರಲ್ಲಿ ಕೆಲವು ಮುಖಂಡರ ಅಂತ್ಯಕ್ರಿಯೆ ವೇಳೆ ಸೇನಾಧಿಕಾರಿಗಳು ಹಾಜರಿದ್ದು ಗೌರವ ಸಲ್ಲಿಸಲು ಸೂಚಿಸಿದ್ದೇ ಪಾಕ್ ಸೇನಾ ಮುಖ್ಯಸ್ಥ ಜನರಲ್ ಅಸೀಂ ಮುನೀರ್ ಎಂಬುದು ಈಗ ದೃಢಪಟ್ಟಿದೆ.

ಜೈಶ್ ಎ ಮೊಹಮ್ಮದ್ ಸಂಘಟನೆಯ ಕಮಾಂಡರ್ ಮಸೂದ್ ಇಲ್ಯಾಸಿ ಪಾಕಿಸ್ತಾನದ ಕಾರ್ಯಕ್ರಮವೊಂದರಲ್ಲಿ ಮಾತನಾಡಿ, ಜೈಶ್ ಎ ಮೊಹಮ್ಮದ್ ಸಂಘಟನೆ ಸದಸ್ಯರು ಹತರಾದಾಗ ಅವರಿಗೆ ಅಂತಿಮ ನಮನ ಸಲ್ಲಿಸಲು ಜನರಲ್ ಅಸೀಂ ಮುನೀರ್ ಸೂಚನೆ ಮೇರೆಗೆ ಸೇನಾಧಿಕಾರಿಗಳೇ ಬಂದಿದ್ದರು ಎಂದು ಹೇಳಿದ್ದಾನೆ.

ಮಸೂದ್ ಅಜರ್ ಪಾಕ್‌ನಲ್ಲಿದ್ದುಕೊಂಡೇ ಮುಂಬೈ, ದೆಹಲಿಯಲ್ಲಿ ಅತ್ಯುಗ್ರ ದಾಳಿ ನಡೆಸಿದ ಶೂರ ಎಂದೂ ಇಲ್ಯಾಸಿ ಬಡಬಡಿಸಿದ್ದಾನೆ. ಸಂಸತ್ ಮೇಲೆ ದಾಳಿ, ಮುಂಬೈನಲ್ಲಿ ನ.26ರಂದು ಸರಣಿ ಸ್ಫೋಟ ಸೇರಿದಂತೆ ಭಾರತದಲ್ಲಿ ವಿಧ್ವಂಸಕಾರಿ ಚಟುವಟಿಕೆಗಳನ್ನು ನಡೆಸಿದ್ದೇ ಜೈಶ್–ಎ–ಮೊಹಮ್ಮದ್ ಸಂಘಟನೆ ಮುಖ್ಯಸ್ಥ ಮಸೂದ್ ಅಜರ್. ದೆಹಲಿಯ ತಿಹಾರ್ ಜೈಲಿಂದ ತಪ್ಪಿಸಿಕೊಂಡು ಪಾಕ್‌ಗೆ ಬಂದ ಬಳಿಕ ಅಜರ್, ಬಾಲಾಕೋಟ್‌ನಲ್ಲಿ ಉಗ್ರ ಚಟುವಟಿಕೆ ಶಿಬಿರ ಆರಂಭಿಸಿದ ಎಂದು ಹೇಳಿದ್ದಾನೆ. ಆ

**ಆಪರೇಷನ್ ಸಿಂದೂರ್ ದಾಳಿಯಲ್ಲಿ ಗಾಯಗೊಂಡ ಉಗ್ರನನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದ ಪಾಕ್ ಸೇನಾ ಮುಖ್ಯಸ್ಥ ಅಸೀಂ ಮುನೀರ್ ಚಿತ್ರ.**

ಮೂಲಕ ಮಸೂದ್ ಅಜರ್ ಭಾರತದಲ್ಲಿನ ಉಗ್ರ ಕೃತ್ಯಗಳ ಸೂತ್ರಧಾರಿ. ಪಾಕ್ ಉಗ್ರರ ಸುರಕ್ಷಿತ ತಾಣ ಎಂಬುದನ್ನು ಇಲ್ಯಾಸಿ ದೃಢೀಕರಿಸಿದ್ದಾನೆ.

#### ಭಾರತಕ್ಕೆ ಉಗ್ರನ ನೇರ ಬೆದರಿಕೆ

ಭಾರತದ ‘ಆಪರೇಷನ್ ಸಿಂದೂರ್’ ಸೇನಾ ಕಾರ್ಯಾಚರಣೆಗೆ ತಕ್ಕ ಪ್ರತೀಕಾರ ಕೈಗೊಳ್ಳುತ್ತೇವೆ ಎಂದು ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಮುಖ್ಯಸ್ಥ ಸೈಫುಲ್ಲಾ ಕಸೂರಿ ಭಾರತಕ್ಕೆ ಬಹಿರಂಗ ಬೆದರಿಕೆ ಹಾಕಿದ್ದಾನೆ.

ಪ್ರಧಾನಿ ಮೋದಿ ಅವರನ್ನು ಉದ್ದೇಶಿಸಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಕಸೂರಿ, ನಮ್ಮ ಸಂಕಲ್ಪ ಬಲವಾಗಿದೆ. ಜಮ್ಮು– ಕಾಶ್ಮೀರದ ನದಿಗಳು, ಅಣೆಕಟ್ಟುಗಳು ನಮಗೇ ಸೇರುತ್ತವೆ. ಇದು ಕಠಿಣವಾದ ಸಮಯ. ಆದರೆ ನಮ್ಮ ಸಹೋದರರ ರಕ್ತ ಹರಿಸಿದ್ದಕ್ಕೆ ತಕ್ಕ ರೀತಿಯಲ್ಲೇ ಸೇಡು ತೀರಿಸಿಕೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾನೆ.

ಭಾರತದ ಆಪರೇಷನ್ ಸಿಂದೂರ್‌ನಿಂದ ನಾಶವಾದ ಮುರಿಡ್ಕೆಯಲ್ಲಿನ ಭಯೋತ್ಪಾದಕ ಗುಂಪಿನ ಪ್ರಧಾನ

**ಸೈಫುಲ್ ಕಸೂರಿ ಭಾಷಣ ಮಾಡುತ್ತಿರುವ.**

ಕಚೇರಿಯನ್ನು ಪುನರ್ ನಿರ್ಮಿಸಲಾಗಿದೆ. ಅದಕ್ಕೆ ಪಾಕಿಸ್ತಾನ ಸರಕಾರ ಮತ್ತು ಸೇನೆಯೇ ಹಣ ಒದಗಿಸಿವೆ ಎಂದು ಕಸೂರಿ ಹೇಳಿದ್ದಾನೆ.

ಕಸೂರಿಯೇ ಏ.22ರ ಪಹಲ್ಗಾಮ್ ಭಯೋತ್ಪಾದಕ ದಾಳಿ ಸೂತ್ರದಾರ ಎನ್ನಲಾಗಿದೆ.

## ಉತ್ತರಾಖಂಡ ಮತ್ತೆ ಪ್ರಕೃತಿ ವಿಕೋಪ: 19 ಜನ ಕಣ್ಮರೆ

ಸರಣಿ ಮೇಘಸ್ಫೋಟ–ಧಾರಾಕಾರ ಮಳೆ | ಚಮೋಲಿ ಜಿಲ್ಲೆ ಗ್ರಾಮಗಳಲ್ಲಿ ಭೂಕುಸಿತ | ಸಂಪರ್ಕ ಕಳೆದುಕೊಂಡ ಹಲವು ಗ್ರಾಮ

**ಡೆಹರಾಡೂನ್:** ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಸರಣಿ ಮೇಘ ಸ್ಫೋಟವಾಗುತ್ತಿದ್ದು, ಧಾರಾಕಾರ ವಾಗಿ ಮಳೆ ಸುರಿಯುತ್ತಿದೆ. ಜಿಲ್ಲೆಯ ಮೂರು ಗ್ರಾಮಗಳಲ್ಲಿ ಭಾರೀ ಭೂಕುಸಿತವಾಗಿದ್ದು, 35ಕ್ಕೂ ಹೆಚ್ಚು ಮನೆಗಳು ನೆಲಕಚ್ಚಿವೆ. ಒಟ್ಟು 19 ಜನರು ಕಣ್ಮರೆಯಾಗಿದ್ದಾರೆ. ಕುಸಿದ ಮಣ್ಣಿನಡಿ ಸಿಲುಕಿದ್ದ ಇಬ್ಬರನ್ನು ಜೀವಂತ ರಕ್ಷಿಸಲಾಗಿದೆ.

ನಂದನಗರ, ಸರಪಾನಿ ಮತ್ತು ಧುರ್ಮಾ ಗ್ರಾಮಗಳಲ್ಲಿ ಹತ್ತು ಜನರು ಕಾಣೆಯಾಗಿದ್ದಾರೆ. ನಂದಪ್ರಯಾಗದ ಕುಂತಾರಿಯಲ್ಲಿ ಆರು ಮನೆಗಳಿಗೆ ಹಾನಿಯಾಗಿದ್ದು, ಒಂದು ಕುಟುಂಬದ ನಾಲ್ವರು ಸೇರಿದಂತೆ ಒಟ್ಟು 7 ಮಂದಿ ನಾಪತ್ತೆಯಾಗಿದ್ದಾರೆ. ಸರಪಾನಿ ಗ್ರಾಮದಲ್ಲಿ ವೃದ್ಧ ದಂಪತಿ ಕಾಣೆಯಾಗಿದ್ದಾರೆ. ಸತತ ಹುಡುಕಾಟ ನಡೆದಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಪ್ರವಾಹ ಮತ್ತು ಭೂಕುಸಿತದಿಂದಾಗಿ ರಸ್ತೆಗಳು ತೀವ್ರ ಹಾನಿಗೊಂಡಿವೆ. ಪ್ರವಾಹ ಪೀಡಿತ ಪ್ರದೇಶಗಳನ್ನು ತಲುಪುವುದೇ ರಕ್ಷಣಾ ತಂಡಗಳಿಗೆ ದೊಡ್ಡ ಸವಾಲಾಗಿದೆ. ಚಮೋಲಿ ಜಿಲ್ಲೆಯ ನಂದನಗರ ಪ್ರದೇಶದ ಹಲವು ಗ್ರಾಮಗಳ ಸಂಪರ್ಕ ಪೂರ್ಣ ಕಡಿದುಹೋಗಿದೆ. ವಿದ್ಯುತ್ ಕಡಿತವಾಗಿದ್ದು, ಮೊಬೈಲ್ ಟವರ್‌ಗಳು ಕಾರ್ಯನಿರ್ವಹಿಸದ ಕಾರಣ ಹತ್ತಾರು ಗ್ರಾಮಗಳು ಹೊರಗಿನ ಜಗತ್ತಿನ ಸಂಪರ್ಕ ಕಳೆದುಕೊಂಡಿವೆ.

ಮೋಕ್ಷ ನದಿಯ ಪಕ್ಕದ ಸೆರಾ ಗ್ರಾಮದಲ್ಲಿ ಹೆಚ್ಚು ಹಾನಿಯಾಗಿದೆ. ಗ್ರಾಮದ ಪೆಟ್ರೋಲ್ ಪಂಪ್ ಅವಶೇಷಗಳಲ್ಲಿ ಹೂತುಹೋಗಿದೆ. ಬಗಾದ್ ಟಾಪ್ ಪ್ರದೇಶದಲ್ಲಿ ಹಲವು ಅಂಗಡಿ ಮತ್ತು ಮನೆಗಳು ಪ್ರವಾಹದಲ್ಲಿ ಕೊಚ್ಚಿಹೋಗಿವೆ. ನಂದಪ್ರಯಾಗ ಬ್ಲಾಕ್‌ನ ಕುಂತಿ, ಪಫ್ಲಿ ಮತ್ತು ಬಂಜ್‌ಗಢದಲ್ಲಿ ಅನೇಕ ಮನೆಗಳು ಕೆಸರಿನಡಿ ಹೂತುಹೋಗಿವೆ.

ಬುಧವಾರವೊಂದೇ ದಿನ ಮಳೆ ಅವಘಡಗಳಲ್ಲಿ ಉತ್ತರಾಖಂಡದಲ್ಲಿ ಒಟ್ಟು 18 ಜನರು ಸಾವಿಗೀಡಾಗಿ, 20 ಜನರು ಕಾಣೆಯಾಗಿದ್ದಾರೆ ಎಂದು ವರದಿಯಾಗಿತ್ತು.

#### ವಾಡಿಕೆಗಿಂತ ಅಧಿಕ ಮಳೆ

ಉತ್ತರಾಖಂಡದಲ್ಲಿ ಆಗಸ್ಟ್‌ನಿಂದ ಧಾರಾಕಾರ ಮಳೆಯಾಗುತ್ತಿದೆ. ಆಗಸ್ಟ್‌ನಲ್ಲಿ ಒಟ್ಟು 574.4 ಮಿಮೀ ಮಳೆಯಾಗಿದೆ. ಇದು ಮಾಸಿಕ ಸರಾಸರಿಗಿಂತ ಶೇ.189ರಷ್ಟು ಅಧಿಕವಾಗಿದೆ. ಸೆಪ್ಟೆಂಬರ್‌ನಲ್ಲಿ ಈವರೆಗೆ 211 ಮಿಮೀ ಮಳೆಯಾಗಿದ್ದು, ವಾಡಿಕೆಗಿಂತ (128.5 ಮಿಮೀ) ಶೇ. 64ರಷ್ಟು ಹೆಚ್ಚಾಗಿದೆ. ಡೆಹರಾಡೂನ್ ಜಿಲ್ಲೆಯಲ್ಲಿ ಸೆ.1ರಿಂದ 16ರವರೆಗೆ 384.2 ಮಿ.ಮೀ ಮಳೆಯಾಗಿದ್ದು, ವಾಡಿಕೆಯ 153 ಮಿ.ಮೀ.ಗಿಂತ ಶೇ. 151ರಷ್ಟು ಹೆಚ್ಚು ಮಳೆ ಸುರಿದಿದೆ ಎಂದು ರಾಜ್ಯ ಹವಾಮಾನ ಕೇಂದ್ರ ತಿಳಿಸಿದೆ.

#### ಮಸ್ಸೂರಿ: 2500 ಪ್ರವಾಸಿಗರಿಗೆ ಕಷ್ಟ

ಉತ್ತರಾಖಂಡ ಪ್ರಮುಖ ಪ್ರವಾಸಿ ತಾಣ ಮಸ್ಸೂರಿಯಲ್ಲಿಯೂ ಧಾರಾಕಾರ ಮಳೆಯ ಕಾರಣ ಬಹಳಷ್ಟು ಕಡೆ ಭೂಕುಸಿತವಾಗಿದೆ. ರಸ್ತೆಗಳಿಗೆ ಭಾರೀ ಹಾನಿಯಾಗಿದ್ದು, ವಾಹನ ಸಂಚಾರವೇ ಅಸಾಧ್ಯವೆನಿಸಿದೆ. ಪರಿಣಾಮ ಮಸ್ಸೂರಿಗೆ ಪ್ರವಾಸಕ್ಕೆಂದು ಬಂದವರಲ್ಲಿ 2500ಕ್ಕೂ ಅಧಿಕ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರಸ್ತೆಗಳೆಲ್ಲಾ ಹಾನಿಯಾಗಿರುವುದರಿಂದ ತಕ್ಷಣಕ್ಕೆ ಮಸ್ಸೂರಿಯಿಂದ ಹೊರಡುವುದೇ ಕಷ್ಟವಾಗಿದ್ದು, ಪರಿತಪಿಸುತ್ತಿದ್ದಾರೆ.

### ಪ್ರಧಾನಿ ಸುಶೀಲಾ ಕರ್ಕಿ ಪ್ರಧಾನಿ ಮೋದಿ ಚರ್ಚೆ

**ದೆಹಲಿ:** ನೇಪಾಳದಲ್ಲಿ ಇತ್ತೀಚೆಗೆ ರಚನೆಯಾಗಿರುವ ಮಧ್ಯಂತರ ಸರಕಾರದ ಹಂಗಾಮಿ ಪ್ರಧಾನಿ ಸುಶೀಲಾ ಕರ್ಕಿ ಅವರೊಂದಿಗೆ ದೂರವಾಣಿಯಲ್ಲಿ ಗುರುವಾರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ನೇಪಾಳದಲ್ಲಿ ಶಾಂತಿ–ಸ್ಥಿರತೆಯ ಮರುಸ್ಥಾಪನೆಗೆ ಭಾರತ ಪೂರ್ಣ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದರು.

**ನೇಪಾಳದಲ್ಲಿ ಶಾಂತಿ ಮರುಸ್ಥಾಪನೆಗೆ ಬೆಂಬಲ ಘೋಷಣೆ**

ಸೆ.19ರಂದು ನಡೆಯಲಿರುವ ನೇಪಾಳದ ರಾಷ್ಟ್ರೀಯ ದಿನಕ್ಕೆ ಮೋದಿ ಶುಭಾಶಯ ಕೋರಿದರು. ಅಲ್ಲದೇ, ನೇಪಾಳದಲ್ಲಿ ಇತ್ತೀಚಿನ ಗಲಭೆಗಳಿಂದಾದ ಜೀವಹಾನಿಗೆ ಸಂತಾಪ ವ್ಯಕ್ತಪಡಿಸಿದರು.

ಶೋಕ ದಿನ:

ಸೆ.8–9ರ ಪ್ರತಿಭಟನೆಯಲ್ಲಿ ಮಡಿದವರನ್ನು ಹುತಾತ್ಮರು ಎಂದು ಘೋಷಿಸುವುದಾಗಿ ಪ್ರಧಾನಿ ಸುಶೀಲಾ ಕರ್ಕಿ ಪ್ರಕಟಿಸಿದ್ದಾರೆ. ಪ್ರತಿಭಟನೆಯಲ್ಲಿ ಮಡಿದವರ ಗೌರವಾರ್ಥ ಬುಧವಾರ ರಾಷ್ಟ್ರೀಯ ಶೋಕ ಆಚರಿಸಲಾಗಿದ್ದು, ದೇಶಾದ್ಯಂತ ಶಾಲೆ–ಕಾಲೇಜು, ಸರಕಾರಿ ಕಚೇರಿಗಳು ರಜೆ ಮಾಡಿದ್ದವು.

## ಸಮಾಚಾರ ಸಣ್ಣದಲ್ಲ

### ರಸ್ತೆ ಗುಂಡಿ ಸಮಸ್ಯೆ: ಕಾಮಗಾರಿ ಪ್ರಗತಿ ಸಭೆ

**ಬೆಂಗಳೂರು:** ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಗಳ ಸಮಸ್ಯೆ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಕುರಿತು ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಡಾ. ರಾಜೇಂದ್ರ ಕೆ.ವಿ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅಗತ್ಯ ನಿರ್ದೇಶನ ನೀಡಿದರು. ಹೈ ಡೆನ್ಸಿಟಿ ಕಾರಿಡಾರ್‌ಗಳು, ಪ್ರಮುಖ ರಸ್ತೆಗಳು ಸೇರಿದಂತೆ ಆರ್ಟೀರಿಯಲ್, ಸಬ್-ಆರ್ಟೀರಿಯಲ್ ಮತ್ತು ವಾರ್ಡ್ ಮಟ್ಟದ ಎಲ್ಲಾ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಿ, ಪಾಲಿಕೆಯ ರಸ್ತೆಗಳನ್ನು ಗುಂಡಿ ರಹಿತ ರಸ್ತೆಗಳಾಗಿ ಮಾಡಬೇಕು. ಪ್ರತಿಯೊಂದು ರಸ್ತೆ ಗುಂಡಿಗೆ ಸಂಬಂಧಿಸಿದಂತೆ ರಸ್ತೆ ಗುಂಡಿ ಮುಚ್ಚುವ ಮೊದಲು, ಕಾಮಗಾರಿ ನಡೆಯುವಾಗ ಮತ್ತು ಗುಂಡಿ ಮುಚ್ಚಿದ ನಂತರದ ಫೋಟೋಗಳನ್ನು ದಾಖಲಾತಿಗಾಗಿ ತೆಗೆದುಕೊಳ್ಳಬೇಕು ಎಂದು ಮುಖ್ಯ ಅಭಿಯಂತರರಿಗೆ ಹಾಗೂ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಸಂಬಂಧಪಟ್ಟ ಅಧಿಕಾರಿಗಳ ದೂರವಾಣಿ ಡೈರೆಕ್ಟರಿ ಸಿದ್ಧಪಡಿಸ ಬೇಕು ಹಾಗೂ ಟ್ರಾಫಿಕ್ ಪೋಲಿಸ್ ಇಲಾಖೆಯ ಸಹಯೋಗದೊಂದಿಗೆ ರಸ್ತೆ ಗುಂಡಿಗಳನ್ನು ಗುರುತಿಸಿ, ತ್ವರಿತವಾಗಿ ಅವುಗಳನ್ನು ಮುಚ್ಚುವಂತೆ ಕ್ರಮ ಕೈಗೊಳ್ಳಬೇಕು. ವಾರ್ಡ್ ಮಟ್ಟದಲ್ಲಿ ತ್ಯಾಜ್ಯ ಹಾಗೂ ಕಟ್ಟಡ ಭಗ್ನಾವಶೇಷಗಳು ಕಾಣದಂತೆ ಸ್ವಚ್ಛತೆ ಕಾಪಾಡಬೇಕು. ಸಹಾಯಕ ಎಂಜಿನಿಯರ್ (ಎಇ) ಹಾಗೂ ಜೂನಿಯರ್ ಎಂಜಿನಿಯರ್‌ಗಳು ಖುದ್ದಾಗಿ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸೂಚನೆ ನೀಡಿದರು.

### ಅ.1ರಿಂದ ಗೇಮಿಂಗ್ ನಿಷೇಧ ಕಾಯ್ದೆ ಜಾರಿ

**ದೆಹಲಿ:** ಆನ್‌ಲೈನ್ ಬೆಟ್ಟಿಂಗ್‌ನಂತಹ ಚಟುವಟಿಕೆಗಳನ್ನು ನಿಷೇಧಿಸುವುದು, ಅವುಗಳ ಕಾರ್ಯಾಚರಣೆ ಉತ್ತೇಜಿಸುವುದು ಹಾಗೂ ಜಾಹೀರಾತು ಪ್ರಕಟಿಸುವುದನ್ನು ನಿಷೇಧಿಸುವ 'ಆನ್‌ಲೈನ್ ಗೇಮಿಂಗ್ ನಿಷೇಧ' ಕಾಯ್ದೆ ಅಕ್ಟೋಬರ್ 1ರಿಂದ ಜಾರಿಯಾಗಲಿದೆ ಎಂದು ಐ.ಟಿ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ತಿಳಿಸಿದ್ದಾರೆ. ಕಳೆದ ತಿಂಗಳು ಸಂಸತ್‌ನಲ್ಲಿ ಈ ಮಸೂದೆ ಅಂಗೀಕರಿಸಲಾಗಿತ್ತು. 'ಭಾರತದಲ್ಲಿ ಎ.ಐ.ಯ ಪರಿಣಾಮ' ಶೃಂಗಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಆನ್‌ಲೈನ್ ಗೇಮಿಂಗ್ ಉದ್ಯಮಿಗಳ ಜತೆಗೆ ಸರಕಾರ ಮಾತುಕತೆ ನಡೆಸಿದೆ. ಮಸೂದೆ ಅಂಗೀಕಾರವಾದ ಬಳಿಕವೂ ಮಾತುಕತೆ ಮುಂದುವರಿದಿದೆ. ಇನ್ನೊಂದು ಸುತ್ತಿನ ಮಾತುಕತೆಗೂ ಸರಕಾರ ಸಿದ್ಧವಿದೆ. ಆದರೂ ಅವರಿಗೆ ಇನ್ನೂ ಸ್ವಲ್ಪ ಸಮಯ ಬೇಕಾದರೆ, ನಾವು ಖಂಡಿತವಾಗಿಯೂ ಕೊಡುತ್ತೇವೆ. ಆದರೆ ಅಕ್ಟೋಬರ್ 1ರಿಂದ ಹೊಸ ಕಾಯ್ದೆಯ ಅನುಷ್ಠಾನವನ್ನು ಪ್ರಾರಂಭಿಸುವ ಗುರಿಯನ್ನು ನಾವು ಹೊಂದಿದ್ದೇವೆ ಎಂದು ಅಶ್ವಿನ್ ವೈಷ್ಣವ್ ತಿಳಿಸಿದ್ದಾರೆ.

### ಶಶಿಕಲಾ ಬೇನಾಮಿ ಆಸ್ತಿಗಳ ಮೇಲೆ ದಾಳಿ

**ಚೆನ್ನೈ:** ಬ್ಯಾಂಕ್‌ಗೆ ರು. 200 ಕೋಟಿ ಮೊತ್ತದ ವಂಚನೆ ಮತ್ತು ಬೇನಾಮಿ ಸಂಪತ್ತು ಗಳಿಕೆ ಪ್ರಕರಣ ದಲ್ಲಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಪರಮಾಪ್ತ ಶಶಿಕಲಾ ಸೇರಿದಂತೆ ಹಲವು ಆಪ್ತರ ಮನೆ ಹಾಗೂ ಇತರೆ ಕಡೆಗಳಲ್ಲಿ ಜಾರಿ ನಿರ್ದೇಶನಾಲಯ ಗುರುವಾರ ದಾಳಿ ಮಾಡಿದೆ. ಚೆನ್ನೈ ಮತ್ತು ಹೈದರಾಬಾದ್ ನಗರಗಳಲ್ಲಿ ಇಡಿ ಅಧಿಕಾರಿಗಳು ಪರಿಶೀಲನೆ ನಡೆಸಿ ದ್ದಾರೆ. ಶಶಿಕಲಾ ಅವರ ಬೇನಾಮಿ ಎನ್ನಲಾದ ಮಾರ್ಗ್ ಸಮೂಹದ ಜಿ.ಆರ್.ಕೆ ರೆಡ್ಡಿ ಅವರಿಗೆ ಸಂಬಂಧಿಸಿದ 10 ಸ್ಥಳಗಳಲ್ಲಿ ಪರಿಶೀಲನೆ ನಡೆದಿದೆ. ಕೆನರಾ ಬ್ಯಾಂಕ್‌ಗೆ ರು.200 ಕೋಟಿ ವಂಚಿಸಿದ ಆರೋಪ ಇದಾಗಿದ್ದು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ತನಿಖೆ ನಡೆಯುತ್ತಿದೆ. ಈಗಾ ಗಲೇ ಸಿಬಿಐ ಕೂಡಾ ಎಫ್‌ಐಆರ್ ದಾಖಲು ಮಾಡಿದೆ. ಆದರೆ ಸಿಬಿಐ ಎಫ್‌ಐಆರ್‌ನಲ್ಲಿ ಶಶಿಕಲಾ ಹೆಸರು ಇಲ್ಲ. ಮೂಲಗಳ ಪ್ರಕಾರ ಆದಾಯ ತೆರಿಗೆ ಇಲಾಖೆ ಕೆಲ ದಿನಗಳ ಹಿಂದೆ ಆದೇಶವೊಂದನ್ನು ಹೊರಡಿಸಿ, ಮಾರ್ಗ್ ಸಮೂಹದಲ್ಲಿ ಶಶಿಕಲಾ ಅವರ ಕೆಲ ಬೇನಾಮಿ ಆಸ್ತಿಗಳಿವೆ ಎಂಬ ಮಾಹಿತಿಯನ್ನೂ ನೀಡಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಡಿಸೆಂಬರ್ ಅಂತ್ಯಕ್ಕೆ ವ್ಯೋಮಮಿತ್ರ ರೋಬೋ

**ಕೊಯಮತ್ತೂರು:** ಮಾನವಸಹಿತ ಗಗನಯಾನಕ್ಕೆ ಪೂರ್ವಭಾವಿಯಾಗಿ ಕೈಗೊಳ್ಳಲಾಗುವ ಮಾನವ ರಹಿತ ಕಾರ್ಯಾಚರಣೆಗೆ ವಿನ್ಯಾಸಗೊಳಿಸಲಾಗಿರುವ ವ್ಯೋಮಮಿತ್ರವು, ಮನುಷ್ಯನ ಪ್ರತಿಕೃತಿಯಂತಿರುವ ರೊಬೋಟ್ ಆಗಿದ್ದು, ಇದು ಕೃತಕ ಬುದ್ಧಿಮತ್ತೆ (ಎ.ಐ) ಆಧರಿಸಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ ಎಂದು ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಗುರುವಾರ ಇಲ್ಲಿ ಹೇಳಿದ್ದಾರೆ. ವ್ಯೋಮಮಿತ್ರವನ್ನು ಹೊತ್ತ ಬಾಹ್ಯಾಕಾಶ ಕೋಶವನ್ನು ಡಿಸೆಂಬರ್ ಅಂತ್ಯಕ್ಕೆ ಉಡ್ಡಯನ ಮಾಡಲಾಗುವುದು. ಈ ಕುರಿತ ಕಾರ್ಯಗಳು ಭರದಿಂದ ಸಾಗಿವೆ ಎಂದು ಸುದ್ದಿಗಾರರಿಗೆ ತಿಳಿಸಿದರು. ಮಾನವಸಹಿತ ಗಗನಯಾನ ಕಾರ್ಯಕ್ರಮದ ಭಾಗವಾಗಿ ಗಗನಯಾನಿಗಳನ್ನು ಹೊತ್ತ ಕೋಶವನ್ನು ಭೂಮಿಯಿಂದ 400 ಕಿ.ಮೀ ದೂರದ ಕಕ್ಷೆಗೆ ಕಳುಹಿಸಲಾಗುವುದು. ಈ ವೇಳೆ, ತಾಪಮಾನ, ವಾಯುಭಾರ, ತೇವಾಂಶ ಹಾಗೂ ಇಂಗಾಲದ ಡೈ ಆಕ್ಸೆಡ್ ಪ್ರಮಾಣದಂತಹ ಅಂಶಗಳ ಕುರಿತು ಅಧ್ಯಯನ ನಡೆಸಲಾಗುವುದು ಎಂದು ಅವರು ನುಡಿದರು. ಈ ಮಹತ್ವಾಕಾಂಕ್ಷೆ ಯೋಜನೆಗೆ ಭಾರತೀಯ ವಾಯುಪಡೆ, ನೌಕಾಪಡೆ, ಡಿಆರ್‌ಡಿಒ ಹಾಗೂ ಇತರ ಹಲವು ಸಂಸ್ಥೆಗಳು ಇಸ್ರೊ ಜೊತೆ ಕೈಜೋಡಿಸಿವೆ ಎಂದೂ ಹೇಳಿದರು.

---

ಶಾಸಕರಿಗೆ ನೀಡಿರುವ ಅನುದಾನ ರಸ್ತೆ ದುರಸ್ತಿಗಾಗಿ ಬಳಸಲು ಸೂಚನೆ | ಮಾಧ್ಯಮಗಳ ಮುಂದೆ ಹೇಳಿಕೆ ಸರಿಯಲ್ಲ

# ರಸ್ತೆಗುಂಡಿ ಮುಚ್ಚಲು ಗಡುವು: ಡಿಸಿಎಂ ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಳೆ ಬಂದಾಗ ರಸ್ತೆ ಗುಂಡಿ ಬೀಳುವುದು ಸಹಜವಾಗಿದೆ. ಆದರೆ ನಾವು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಿಲ್ಲ, ಬದಲಾಗಿ ರಸ್ತೆ ಗುಂಡಿ ಮುಚ್ಚಲು ಗಡುವು ನೀಡಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಮಾತನಾಡಿದ ಅವರು, ಶಾಸಕರಿಗೆ ನೀಡಿರುವ ಅನುದಾನ ರಸ್ತೆ ದುರಸ್ತಿಗಾಗಿ ಬಳಸುವಂತೆ ತಿಳಿಸಿದ್ದೇವೆ. ರಸ್ತೆ ಗುಂಡಿ ಮುಚ್ಚಲು ಸಾವಿರಾರು ಕೋಟಿ ಬಿಡುಗಡೆ ಮಾಡಿದ್ದರೂ ಈ ಸಮಸ್ಯೆ ಬಗೆಹರಿದಿಲ್ಲ, ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೇ ಎಂದು ಕೇಳಿದಾಗ, ರಸ್ತೆ ಗುಂಡಿ ಮುಚ್ಚಲು ಗಡುವು ನೀಡಿದ್ದು, ಹೊಣೆಗಾರಿಕೆ ನೀಡಿದ್ದೇನೆ. ಬುಧವಾರ ರಾತ್ರಿ ಸುರಿದ ಮಳೆಗೆ ವಿಧಾನಸೌಧ ಸುತ್ತಮುತ್ತ ಹತ್ತಾರು ಗುಂಡಿ ಬಿದ್ದಿವೆ. ರಾಜಕೀಯವಾಗಿ ಹೆಸರು ಬರುತ್ತದೆ ಎಂದು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಬೇರೆ ಕಡೆ ರಸ್ತೆ ಗುಂಡಿ ಚರ್ಚೆಯಾಗದೆ ಬೆಂಗಳೂರು ವಿಚಾರದಲ್ಲಿ ಮಾತ್ರ ಯಾಕೆ ಚರ್ಚೆಯಾಗುತ್ತಿದೆ? ಎಂದು ತಿಳಿಸಿದರು.

ಸಂಸದರಾಗಿ, ಕೇಂದ್ರ ಸಚಿವರಾಗಿ ಕುಮಾರಸ್ವಾಮಿ ಅವರಿಂದ ಬೆಂಗಳೂರು ನಗರಕ್ಕೆ ಕೊಡುಗೆಯೇನು? ಯುಪಿಎ ಸರಕಾರದಲ್ಲಿ ನೆಹರೂ ಅವರ ಹೆಸರಿನಲ್ಲಿ ಜೆಎನ್ ನರ್ಮ್ ಯೋಜನೆ ಮೂಲಕ ಅನೇಕ ಅನುದಾನ ನೀಡಲಾಗಿತ್ತು. ಅದೇ ರೀತಿ ನೀವು ಪ್ರಧಾನ ಮಂತ್ರಿಗಳಿಗೆ ಬಲಗೈ ಆಗಿರುವ ನೀವು ಬೆಂಗಳೂ ರಿಗೆ, ಇಲ್ಲಿನ ರಸ್ತೆ ಅಭಿವೃದ್ಧಿಗೆ ವಿಶೇಷ ಅನುದಾನ ಕೊಡಿಸಿ. ಬೆಂಗಳೂರಿನ ರಸ್ತೆ ಬಗ್ಗೆ ಅವರಿಗೆ ಕಾಳಜಿ ಇದ್ದರೆ ಕೇಂದ್ರ ಸರಕಾರದಿಂದ 10 ಸಾವಿರ ಕೋಟಿ ರು. ಅನುದಾನ ಕೊಡಿಸಲಿ. ಮೇಕೆದಾಟು ಯೋಜನೆಗೆ ಐದೇ ನಿಮಿಷದಲ್ಲಿ ಅನುಮತಿ ಕೊಡಿಸುತ್ತೇನೆ ಎಂದು ಹೇಳಿ ಇದುವರೆಗೂ ಏಕೆ ಕೊಡಿಸಿಲ್ಲ? ರೈತರ ಮಕ್ಕಳು ಎಂದು ಹೇಳಿಕೊಳ್ಳುವ ನೀವು ಯುಕೆಪಿ ಯೋಜನೆ ವಿರುದ್ಧ ಮಹಾರಾಷ್ಟ್ರ ಸಿಎಂ ಸುಪ್ರೀಂ ಕೋರ್ಟ್‌ಗೆ ಹೋಗುತ್ತೇವೆ ಎಂದು ಹೇಳಿರುವಾಗ ಅದರ ವಿರುದ್ಧ ಏಕೆ ಧ್ವನಿ ಎತ್ತುತ್ತಿಲ್ಲ? ಮಾಧ್ಯಮಗಳ ಮುಂದೆ ಹೇಳಿಕೆ ನೀಡಿ, ಟ್ವೀಟ್ ಮಾಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ತಿಳಿಸಿದರು.

> ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಇತರೆ ಇಲಾಖೆಗಳ ಅನುದಾನಕ್ಕೆ ಕತ್ತರಿ ಹಾಕಲಾಗುವುದು ಎನ್ನುವುದೆಲ್ಲ ಸುಳ್ಳು. ಆ ರೀತಿಯ ಯಾವುದೇ ಪ್ರಸ್ತಾವವಿಲ್ಲ. ನಾವು ಈ ಯೋಜನೆ ಪೂರ್ಣಗೊಳಿಸಲು ಬದ್ಧವಿದ್ದೇವೆ. ಇದಕ್ಕಾಗಿ 1.33 ಲಕ್ಷ ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಬೇಕು. ನ್ಯಾಯಾಲಯದಲ್ಲಿ ಅನೇಕ ಪ್ರಕಾರಣಗಳಿದ್ದು, ಹೀಗಾಗಿ ಕಾನೂನು ಪ್ರಕಾರ ಪ್ರಾಧಿಕಾರ ರಚಿಸುತ್ತಿದ್ದೇವೆ. ನಮ್ಮ ಪಾಲಿನ ನೀರು ಹಂಚಿಕೆಯಾಗಿದೆ ಅದನ್ನು ಬಳಸಿಕೊಳ್ಳಲು ಕೇಂದ್ರ ಸರಕಾರ ಅಧಿಸೂಚನೆ ಹೊರಡಿಸಬೇಕು.
>
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

**ಲಾಭವಿರುವಲ್ಲಿ ಉದ್ಯಮಿಗಳಿರುತ್ತಾರೆ:** ಉದ್ಯಮಿಗಳಿಗೆ ನಾ.ರಾ. ಲೋಕೇಶ್ ಪತ್ರ ಬರೆದು ಆಂಧ್ರ ಪ್ರದೇಶಕ್ಕೆ ಆಹ್ವಾನ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿ, ಅವರಿಗೆ ಅಲ್ಲಿ ಜನ ಇಲ್ಲ. ಹೀಗಾಗಿ ಕರೆಯುತ್ತಾರೆ. ಪ್ರಧಾನಮಂತ್ರಿಗಳು ಬೆಂಗಳೂರನ್ನು ಜಾಗತಿಕ ನಗರ ಎಂದು ಏಕೆ ಕರೆದರು? ಅವರು ಯಾರಿಗಾದರೂ ಆಹ್ವಾನ ನೀಡಲಿ. ಯಾರಿಗೆ ಬೆಂಗಳೂರಿನಲ್ಲಿ ವ್ಯಾಪಾರ ಮಾಡುವುದರಿಂದ ಲಾಭವಾಗುತ್ತದೆಯೋ ಅವರು ಇಲ್ಲೇ ಉಳಿಯುತ್ತಾರೆ. ವಿಶ್ವದ ಪ್ರತಿಷ್ಠಿತ ಕಂಪನಿಗಳು ಬೆಂಗಳೂರಿನಲ್ಲೇ ಏಕಿವೆ? 25 ಲಕ್ಷ ಎಂಜಿನಿಯರ್‌ಗಳು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಕ್ಯಾಲಿಫೋರ್ನಿಯಾದಲ್ಲಿ ಕೆಲಸ ಮಾಡುತ್ತಿರುವ ಎಂಜಿನಿಯರ್‌ಗಳನ್ನು ಸಂಖ್ಯೆ ಕೇವಲ 13 ಲಕ್ಷ. 2 ಲಕ್ಷಕ್ಕೂ ಹೆಚ್ಚು ವಿದೇಶಿ ಪಾಸ್ ಪೋರ್ಟ್ ದಾರರು ಇಲ್ಲಿ ಕೆಲಸ ಮಾಡುತ್ತಿರುವುದು ಏಕೆ? ಇಲ್ಲಿನ ವ್ಯವಸ್ಥೆ ಚೆನ್ನಾಗಿದೆ, ಉತ್ತಮ ಪ್ರತಿಭೆಗಳಿದ್ದಾರೆ ಎಂದರು.

### ಬೆಂಗಳೂರು ಬಿಡಬೇಡಿ: ಎಚ್‌ಡಿಕೆ

**ಬೆಂಗಳೂರು:** ಬೆಂಗಳೂರಿನ ರಸ್ತೆಗಳ ದುಸ್ಥಿತಿಯ ಬಗ್ಗೆ ದನಿ ಎತ್ತಿರುವ ಉದ್ಯಮಿಗಳ ಪರ ನಿಂತಿರುವ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಎಚ್.ಡಿ. ಕುಮಾರಸ್ವಾಮಿ, ರಾಜ್ಯವನ್ನು ಬಿಟ್ಟು ಹೋಗುವುದು ಬೇಡ ಎಂದು ಮನವಿ ಮಾಡಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ, 'ನೀವು ಬೆಂಗಳೂರು ಬಿಡುವುದು ಬೇಡ. ಈ ನಗರಕ್ಕೆ ಮಹಾನ್ ಪರಂಪರೆ, ಹಿನ್ನೆಲೆ ಇದೆ. ಈ ಎಮ್ಮೆ ಚರ್ಮದ ಸರಕಾರಕ್ಕೆ ಪಾಠ ಕಲಿಸುತ್ತೇವೆ. ನಿಮ್ಮ ಜತೆ ನಾವು, ಇಡೀ ಕರ್ನಾಟಕದ ಜನತೆ ಇದ್ದೇವೆ. ಹೋಗುತ್ತೇವೆ ಎನ್ನುವ ಮಾತನ್ನು ಮನಸ್ಸಿನಿಂದ ತೆಗೆದುಬಿಡಿ. ನಾವೆಲ್ಲರೂ ಸೇರಿ ಬೆಂಗಳೂರು ನಗರವನ್ನು ಬದಲಿಸೋಣ' ಎಂದು ಕಂಪನಿಗಳಿಗೆ ಮನವಿ ಮಾಡಿಕೊಂಡಿದ್ದಾರೆ. ಉದ್ಯಮಿಗಳು ಸರಕಾರದ ವೈಫಲ್ಯವನ್ನು ಇಷ್ಟು ಕಠಿಣವಾಗಿ ಎತ್ತಿ ತೋರಿಸಿರುವುದು ಇತಿಹಾಸದಲ್ಲಿ ಇದೇ ಮೊದಲು. ಈ ಸರಕಾರಕ್ಕೆ ಎಳ್ಳಷ್ಟೂ ಸಂಕೋಚ, ಆತ್ಮಾಭಿಮಾನವಿಲ್ಲ. ಕನ್ನಡಿಗರ ಸ್ವಾಭಿಮಾನ ಗುಂಡಿಪಾಲು ಮಾಡಿದೆ. ಇದಕ್ಕೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಇಬ್ಬರು ಈ ಅಪಮಾನಕ್ಕೆ ಹೊಣೆಗಾರರು ಎಂದು ಎಚ್‌ಡಿಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ರಸ್ತೆ ಅಗೆತ ಸ್ಥಗಿತಕ್ಕೆ ಚೋಳನ್ ಸೂಚನೆ

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಆಯುಕ್ತ ರಾಜೇಂದ್ರ ಚೋಳನ್ ಪರಿಶೀಲನೆ ನಡೆಸಿದರು.

**ಬೆಂಗಳೂರು:** ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೆಂಗಳೂರು ಜಲಮಂಡಳಿ, ಬೆಸ್ಕಾಂ, ಕೆಪಿಟಿಸಿಎಲ್ ಸೇರಿದಂತೆ ಯಾವುದೇ ಇಲಾಖೆಗಾಗಲಿ ರಸ್ತೆ ಅಗೆತಕ್ಕೆ ಅನುಮತಿ ನೀಡಬಾರದು. ಜತೆಗೆ ಪ್ರಸ್ತುತ ನಡೆಯುತ್ತಿರುವ ಎಲ್ಲಾ ರಸ್ತೆ ಅಗೆತ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಆಯುಕ್ತ ರಾಜೇಂದ್ರ ಚೋಳನ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗುರುವಾರ ಬೆಳಗ್ಗೆ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ, ಬೆಂಗಳೂರು ಜಲಮಂಡಳಿ, ಬೆಸ್ಕಾಂ, ಕೆಪಿಟಿಸಿಎಲ್ ಸೇರಿದಂತೆ ಇನ್ನಿತರೆ ಇಲಾಖೆಗಳವರು ರಸ್ತೆಗಳನ್ನು ಅಗೆದು ಅವರ ಇಲಾಖೆಗಳಿಗೆ ಸಂಬಂಧಿಸಿದ ಕಾಮಗಾರಿ ಪೂರ್ಣಗೊಂಡಿದ್ದರೂ ಸಹ ಅಗೆದಿರುವ ರಸ್ತೆಗಳನ್ನು ದುರಸ್ಥಿ ಕಾರ್ಯ ನಡೆಸಿರುವುದಿಲ್ಲ. ಈಗಾಗಲೇ ಈ ಇಲಾಖೆಗಳು ರಸ್ತೆ ಅಗೆದಿರುವ ಭಾಗವನ್ನು ಸರಿಯಾದ ರೀತಿಯಲ್ಲಿ ಮುಚ್ಚುವವರೆಗೆ ಆ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಗತಿಯಲ್ಲಿರುವ ಕಾಮಗಾರಿ ನಿಲ್ಲಿಸುವುದರ ಜೊತೆಗೆ ಹೊಸದಾಗಿ ಯಾವುದೇ ಇಲಾಖೆಗೂ ರಸ್ತೆ ಅಗೆತಕ್ಕೆ ಅನುಮತಿ ನೀಡದಂತೆ ಹೇಳಿದರು.

**ರಸ್ತೆ ಕಾಮಗಾರಿ ಬಳಿಕ ನಿರ್ಲಕ್ಷ್ಯ:** ನಗರ ಪಾಲಿಕೆ ವತಿಯಿಂದ ರಸ್ತೆ ಅಭಿವೃದ್ಧಿಪಡಿಸಿದ ನಂತರ ವಿವಿಧ ಇಲಾಖೆಗಳು ಆಯಾಯ ಇಲಾಖೆಗಳ ಸುಸ್ಥಿತಿಯಲ್ಲಿರುವ ರಸ್ತೆಗಳಲ್ಲಿ ಕಾಮಗಾರಿಗಳನ್ನು ನಡೆಸಿ ಅದನ್ನು ದುರಸ್ತಿಗೊಳಿಸದೇ ಹಾಗೆಯೇ ಬಿಡುತ್ತಾರೆ. ಇದರಿಂದ ಪಾಲಿಕೆಗೆ ಕೆಟ್ಟ ಹೆಸರು ಬರಲಿದೆ. ಅಲ್ಲದೇ ವಾಹನಗಳ ಸಂಚಾರಕ್ಕೂ ಸಾಕಷ್ಟು ಸಮಸ್ಯೆ ಆಗುತ್ತಿದೆ. ದುರಸ್ಥಿ ಕಾರ್ಯ ಕೈಗೊಳ್ಳುವಲ್ಲಿ ನಿರ್ಲಕ್ಷ್ಯ ತೋರುತ್ತಿದ್ದಾರೆ. ಆದ್ದರಿಂದ ಎಲ್ಲೆಲ್ಲಿ ಕಾಮಗಾರಿ ನಡೆಸಿದ್ದಾರೆ ಅಲ್ಲೆಲ್ಲಾ ಲೊಕೇಶನ್‌ನ ಫೋಟೋ ಸಮೇತ ಪಟ್ಟಿ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದು ಸಭೆ ನಡೆಸಿ ಕೂಡಲೆ ದುರಸ್ಥಿ ಕಾರ್ಯ ಕೈಗೊಳ್ಳಲು ಸೂಚನೆ ನೀಡಬೇಕು ಎಂದರು.

---

ವೈಟ್‌ಟಾಪಿಂಗ್ ಕಾಮಗಾರಿ ಶೀಘ್ರ ಪೂರ್ಣಗೊಳಿಸಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

## ಅ.31ರೊಳಗೆ ಜೆಸಿ ರಸ್ತೆ ಕಾಮಗಾರಿ ಪೂರ್ಣ

**ಬೆಂಗಳೂರು:** ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಜೆಸಿ ರಸ್ತೆಯಲ್ಲಿ ಕೈಗೆತ್ತಿ ಕೊಂಡಿರುವ ವೈಟ್ ಟಾಪಿಂಗ್ ಕಾಮಗಾರಿ ಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದ್ದಾರೆ.

ಜೆಸಿ ರಸ್ತೆಯಲ್ಲಿರುವ ವೈಟ್ ಟಾಪಿಂಗ್ ಕಾಮಗಾರಿ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಜೆಸಿ ರಸ್ತೆಯ ಮಿನರ್ವ ವೃತ್ತದಿಂದ ಟೌನ್ ಹಾಲ್ ವರೆಗೆ 1 ಕಿ.ಮೀ ಉದ್ದದ ರಸ್ತೆಯನ್ನು ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಂಡಿದ್ದು, ರಸ್ತೆಯ ಅರ್ಧ ಭಾಗದಲ್ಲಿ ಕಾಮಗಾರಿ ಪ್ರಾರಂಭಿಸಿ ಉಳಿದರ್ಧ ಭಾಗದಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುವುದನ್ನು ಗಮನಿಸಿ, ಶೀಘ್ರಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸೂಚಿಸಿದರು.

**ಅ.31ರೊಳಗಾಗಿ ಕಾಮಗಾರಿ ಪೂರ್ಣ:** ಜೆಸಿ ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಸೆ.2 ರಂದು ಬಿ-ಸ್ಮೈಲ್‌ಗೆ ಹಸ್ತಾಂತರಿಸಲಾಯಿತು. ಆ ಬಳಿಕ ವಾಹನ ಸಂಚಾರಕ್ಕೆ ಯಾವುದೇ ಅಡಚಣೆಯಾಗದಂತೆ ಕಾಮಗಾರಿಗೆ ವೇಗ ನೀಡಲಾಗಿದೆ. ಒಂದು ಭಾಗದಲ್ಲಿ ಕೈಗೆತ್ತಿಕೊಂಡಿ ರುವ ಕಾಮಗಾರಿ ಯನ್ನು ಸೆ.30 ರೊಳಗಾಗಿ ಪೂರ್ಣಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಉಳಿದರ್ಧ ಭಾಗವನ್ನು ಅ.31 ರೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಬಿ-ಸ್ಮೈಲ್ ತಾಂತ್ರಿಕ ನಿರ್ದೇಶಕ ಡಾ. ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

---



ಯಲಹಂಕದ ಸಿಂಗನಾಯಕನಹಳ್ಳಿಯ ಖಾಸಗಿ ರೆಸಾರ್ಟ್‌ನಲ್ಲಿ ಗುರುವಾರ ಚಿಂತನಾ ಶಿಬಿರ ನಡೆಯಿತು. ವಿಜಯೇಂದ್ರ, ಆರ್.ಅಶೋಕ್, ವಿ. ಸೋಮಣ್ಣ ಸೇರಿ ಹಲವರಿದ್ದರು.

ಇಂದು ನಡೆಯಲಿರುವ ಚಿಂತನಾ ಸಭೆಯಲ್ಲಿ ಹಲವು ಮಹತ್ವದ ಸೂಚನೆ ಸಾಧ್ಯತೆ

## ಬಿಜೆಪಿ ಒಳಬೇಗುದಿಗೆ ಹೈಕಮಾಂಡ್ ಮದ್ದು

**ಬೆಂಗಳೂರು:** ಜಾತಿ ಜನಗಣತಿಯ ವಿಚಾರ ತಾರಕಕ್ಕೇರಿರುವ ಮಧ್ಯೆಯೇ ಪ್ರತಿಪಕ್ಷ ಬಿಜೆಪಿಯಲ್ಲಿನ ಒಳಬೇಗುದಿಯ ಬಗ್ಗೆಯೂ ಗಂಭೀರ ಚರ್ಚೆ ನಡೆದಿದ್ದು, ಪಕ್ಷ ಸಂಘಟನೆ ಸಂಬಂಧ ಹೈಕಮಾಂಡ್ ರಾಜ್ಯ ಬಿಜೆಪಿಯ ಕಿವಿ ಹಿಂಡಿದೆ.

ಯಲಹಂಕದ ಸಿಂಗನಾಯಕನಹಳ್ಳಿಯ ಖಾಸಗಿ ರೆಸಾರ್ಟ್‌ನಲ್ಲಿ ಗುರುವಾರ ನಡೆದ ಚಿಂತನ ಶಿಬಿರದಲ್ಲಿ ಪಕ್ಷದೊಳಗಿನ ಒಳಜಗಳ ಹಾಗೂ ಆಡಳಿತ ಪಕ್ಷದ ವಿರುದ್ಧ ಸರಿಯಾದ ಹೋರಾಟ ನಡೆಸದ ಕ್ರಮದ ಬಗ್ಗೆ ರಾಜ್ಯ ಬಿಜೆಪಿಯ ನಾಯಕರಿಗೆ ಹೈಕಮಾಂಡ್ ನೀಡಿರುವ ಟಾಸ್ಕ್ ಬಗ್ಗೆ ಎಚ್ಚರಿಸಲಾಗಿದೆ.

> ಕರ್ನಾಟಕದ ಕಾಂಗ್ರೆಸ್ ಸರಕಾರದ ವೈಫಲ್ಯ ಕುರಿತು ಇಂದಿನ ರಾಜಕೀಯ ಚಿಂತನ ಶಿಬಿರದಲ್ಲಿ ಚರ್ಚಿಸಲಿದ್ದೇವೆ. ರಾಜ್ಯ ಸರಕಾರದ ಸಾಮಾಜಿಕ-ಶೈಕ್ಷಣಿಕ-ಔದ್ಯೋಗಿಕ ಸರ್ವೇ ಮಾಡಬಾರದು. ಸ್ವಲ್ಪ ದಿನ ಮುಂದೂಡಬೇಕು. ಈ ಸರ್ವೇಯನ್ನು ನೀವು ಮಾಡುವ ಅವಶ್ಯಕತೆ ಇಲ್ಲ. ಹಿಂದೆ ಮಾಡಿದ ಸರ್ವೇಗಳನ್ನು ಅನುಷ್ಠಾನ ಮಾಡಿಲ್ಲ.
>
> -ಎನ್.ರವಿಕುಮಾರ್, ಮೇಲ್ಮನೆ ವಿಪಕ್ಷದ ಮುಖ್ಯ ಸಚೇತಕ

ಚಿಂತನ ಶಿಬಿರದಲ್ಲಿ ಕೇಂದ್ರದ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಬಿಜೆಪಿ ಕರ್ನಾಟಕ ರಾಜ್ಯ ಉಸ್ತುವಾರಿ ಡಾ. ರಾಧಾ ಮೋಹನ್ ದಾಸ್ ಅಗರವಾಲ್ ರಾಜ್ಯ ನಾಯಕರಿಗೆ ಹೈಕಮಾಂಡ್ ನೀಡಿರುವ ಸೂಚನೆ ವಿವರಿಸಿದ್ದಾರೆ.

ಶುಕ್ರವಾರ ಕೂಡ ನಡೆಯಲಿರುವ ಸಭೆಯಲ್ಲಿ ಹಲವು ಮಹತ್ವದ ಸೂಚನೆಗಳನ್ನು ನೀಡಲಿರುವ ಕೇಂದ್ರ ನಾಯಕರು ಬಿಜೆಪಿ ಕಾರ್ಯಶೈಲಿಗೆ ಸಂಬಂಧಿಸಿ ವಿಷಯಗಳ ಕುರಿತು ಗೋಷ್ಠಿ ನಡೆಸಲಿದ್ದಾರೆ. ಗುರುವಾರ ನಡೆದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ಡಿ.ವಿ. ಸದಾನಂದ ಗೌಡ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಭಾಗವಹಿಸಿದ್ದರು. ಇಂದು ನಡೆಯುವ ಅಭ್ಯಾಸ ವರ್ಗದಲ್ಲಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಸಂತೋಷ್ ಭಾಗವಹಿಸಲಿದ್ದಾರೆ. ಜನಸಂಘದಿಂದ ಭಾರತೀಯ ಜನತಾ ಪಕ್ಷವಾದ ಬಿಜೆಪಿ ಸ್ವಂತ ಬಲದ ಮೇಲೆ ಸರಕಾರ ಮಾಡುವ ವರೆಗೆ ಹೇಗೆ ಪ್ರಪಂಚದಲ್ಲಿ ನಂಬರ್ 1 ಪಾರ್ಟಿಯಾಗಿದೆ. 14 ಕೋಟಿ ಸದಸ್ಯತ್ವ, ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ 100 ವರ್ಷವಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಾವೇನು ಮಾಡಬೇಕು ಎಂಬ ಬಗ್ಗೆಯೂ ಸಭೆ ನಡೆಯಲಿದೆ.

---

ಅಮೆರಿಕ ದಂದ್ವನೀತಿ: ಮಾದಕ ದ್ರವ್ಯ ಸಾಗಣೆ ರಾಷ್ಟ್ರಗಳ ಪಟ್ಟಿಗೆ ಭಾರತ

## ಡ್ರಗ್ಸ್ ದೇಶಗಳ ಸಾಲಿನಲ್ಲಿ ಭಾರತ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತವನ್ನೂ ಸೇರಿಸಿ 23 ರಾಷ್ಟ್ರಗಳನ್ನು ಅಕ್ರಮ ಮಾದಕವಸ್ತು ಉತ್ಪಾದನೆ ಮತ್ತು ಸಾಗಣೆಯ ಪ್ರಮುಖ ಕೇಂದ್ರಗಳ ಪಟ್ಟಿಯಲ್ಲಿ ಗುರುತಿಸಿದ್ದಾರೆ. ಅಮೆರಿಕಕ್ಕೆ ಅಪಾಯವನ್ನುಂಟು ಮಾಡುವ ಈ ರಾಷ್ಟ್ರಗಳಲ್ಲಿ ಪಾಕಿಸ್ತಾನ, ಚೀನಾವನ್ನೂ ಸೇರಿಸಿದ್ದಾರೆ.

ಅಮೆರಿಕ ಸಂಸತ್ತಿಗೆ ಸಲ್ಲಿಸಿದ ಅಧ್ಯಕ್ಷೀಯ ನಿರ್ಣಯದಲ್ಲಿ ಟ್ರಂಪ್, ಈ ದೇಶಗಳನ್ನು ಅಮೆರಿಕ ಮತ್ತು ಅದರ ನಾಗರಿಕರ ಸುರಕ್ಷತೆಗೆ ನಿರಂತರ ಅಪಾಯ ಉಂಟುಮಾಡುವ ರಾಷ್ಟ್ರಗಳೆಂದು ವಿವರಿಸಿದೆ. ಆದರೆ ಭಾರತವನ್ನು ಪಟ್ಟಿಯಲ್ಲಿ ಸೇರಿಸುವ ಕಾರಣಗಳ ಕುರಿತು ಯಾವುದೇ ವಿವರವಾದ ವರದಿ ಮಾಡಿಲ್ಲ. ಪಟ್ಟಿಯಲ್ಲಿ ಅಫ್ಘಾನಿಸ್ತಾನ, ಬಹಾಮಾಸ್, ಬೆಲೀಜ್, ಬೊಲಿವಿಯಾ, ಬರ್ಮಾ, ಕೊಲಂಬಿಯಾ, ಕೋಸ್ಟಾರಿಕಾ, ಡೊಮಿನಿಕನ್ ರಿಪಬ್ಲಿಕ್, ಈಕ್ವೆಡಾರ್, ಜಮೈಕಾ, ಲಾವೋಸ್, ಮೆಕ್ಸಿಕೋ, ಪನಾಮಾ, ಪೆರು ಮತ್ತು ವೆನೆಜುವೆಲಾ ಸೇರಿದಂತೆ ಅನೇಕ ರಾಷ್ಟ್ರಗಳ ಹೆಸರುಗಳಿವೆ.

ಪಟ್ಟಿಯಲ್ಲಿ ಹೆಸರು ಸೇರಿರುವುದು ಆ ದೇಶದ ಸರಕಾರ ಮಾದಕವಸ್ತು ನಿಯಂತ್ರಣದಲ್ಲಿ ವಿಫಲವಾಗಿದೆ ಎಂದು ಸೂಚಿಸುವುದಿಲ್ಲ, ಬದಲಿಗೆ ಭೌಗೋಳಿಕ, ಆರ್ಥಿಕ ಮತ್ತು ವ್ಯಾಪಾರಿಕ ಅಂಶಗಳ ಸಂಯೋಜನೆಯಿಂದ ಅಕ್ರಮ ಮಾದಕವಸ್ತು ಉತ್ಪಾದನೆ ಮತ್ತು ಸಾಗಣೆ ಸಾಧ್ಯವಾಗುತ್ತದೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ಸ್ಪಷ್ಟಪಡಿ ಸಿದೆ. ಐದು ರಾಷ್ಟ್ರಗಳಾದ ಅಫ್ಘಾನಿಸ್ತಾನ, ಬೊಲಿವಿಯಾ, ಬರ್ಮಾ, ಕೊಲಂಬಿಯಾ ಮತ್ತು ವೆನೆಜುವೆಲಾ ಕಳೆದ ವರ್ಷ ಮಾದಕ ವಸ್ತುಗಳನ್ನು ನಿಯಂತ್ರಿಸಲು ಗಣನೀಯ ಪ್ರಯತ್ನಗಳಲ್ಲಿ ವಿಫಲವಾಗಿವೆ ಎಂದು ವರದಿ ತಿಳಿಸಿದೆ. ಹಾಗಾಗಿ ಅಮೆರಿಕ ಈ ದೇಶಗಳಿಗೆ ತಮ್ಮ ನಿಯಂತ್ರಣ ಕ್ರಮ ಬಲಪಡಿಸಲು ಕರೆ ನೀಡಿದೆ.

ತಾಲಿಬಾನ್ ಮಾದಕ ವಸ್ತುಗಳ ಮೇಲೆ ನಿಷೇಧ ಹೇರಿದ್ದರೂ ಅಫ್ಘಾನಿಸ್ತಾನದಲ್ಲಿ ಮಾದಕವಸ್ತು ಉತ್ಪಾದನೆ ಮತ್ತು ದಾಸ್ತಾನು ಮುಂದುವರಿದಿದ್ದು, ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಅಕ್ರಮ ಮಾದಕವಸ್ತುಗಳ ಹರಿವಿಗೆ ಯಾವುದೇ ತಡೆ ನೀಡಿಲ್ಲ ಎಂದು ಉಲ್ಲೇಖಿಸಿದೆ. ಮಾದಕ ವಸ್ತು ವ್ಯಾಪಾರದ ಆದಾಯವು ಅಂತಾರಾಷ್ಟ್ರೀಯ ಅಪರಾಧ ಜಾಲಗಳು ಮತ್ತು ಭಯೋತ್ಪಾದಕ ಸಂಘಟನೆಗಳಿಗೆ ಹಣಕಾಸು ಒದಗಿಸುತ್ತದೆ ಎಂದು ಟ್ರಂಪ್ ಎಚ್ಚರಿಸಿದ್ದಾರೆ.

---

ಬ್ಯಾಲೆಟ್ ಪೇಪರ್ ಬಳಸುವಂತೆ ಚುನಾವಣಾ ಆಯೋಗಕ್ಕೆ ನೇರ ಶಿಫಾರಸು

## ಬ್ಯಾಲೆಟ್ ಬಳಕೆಗೆ ಸುಗ್ರೀವಾಜ್ಞೆ ಇಲ್ಲ

**ಬೆಂಗಳೂರು:** ಸ್ಥಳೀಯ ಸಂಸ್ಥೆಗಳಲ್ಲಿ ಇವಿಎಂ ಬದಲಿಗೆ ಬ್ಯಾಲೆಟ್ ಪತ್ರ ಬಳಕೆಗೆ ಸುಗ್ರೀವಾಜ್ಞೆ ಹೊರಡಿಸುವ ಅಗತ್ಯವಿಲ್ಲ ಎಂಬ ನಿಲುವು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವ್ಯಕ್ತವಾಗಿದೆ.

ಸೆ.4ರ ಸಂಪುಟ ಸಭೆ ನಿರ್ಣಯದಂತೆ ಜಿಬಿಎ, ಪಂಚಾಯಿತಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್ ಬಳಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಶನಿವಾರ ಶಿಫಾರಸು ಕಳುಹಿಸಿಕೊಡಲಾಗಿದೆ. ಇದಕ್ಕೆ ಪೂರಕವಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಾಯಿದೆ -2024, ಕರ್ನಾಟಕ ಮುನ್ಸಿಪಾಲಿಟಿಗಳ ಕಾಯಿದೆ ಸೇರಿ ಮೂರು ಕಾಯಿದೆಗಳಿಗೆ ತಿದ್ದುಪಡಿ ತರಲು ಸರ್ಕಾರ ಚಿಂತನೆ ನಡೆಸಿತ್ತು. ಆದರೆ ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ಬ್ಯಾಲೆಟ್ ಅಥವಾ ಇವಿಎಂ ಯಾವ ವ್ಯವಸ್ಥೆಯಲ್ಲಿ ಮಾಡಬೇಕು ಎಂಬುದು ರಾಜ್ಯ ಸರಕಾರಕ್ಕೆ ಬಿಟ್ಟ ವಿಷಯ. ಹೀಗಾಗಿ ರಾಜ್ಯ ಸರಕಾರ ಶಿಫಾರಸು ಮಾಡಿದಂತೆ ಚುನಾವಣಾ ಆಯೋಗ ಮಾಡಬೇಕಾಗುತ್ತದೆ. ಹೀಗಾಗಿ ಇದಕ್ಕೆ ಪ್ರತ್ಯೇಕವಾಗಿ ಸುಗ್ರೀವಾಜ್ಞೆ ಅಗತ್ಯವಿಲ್ಲ ಎಂದು ಸಂಪುಟದಲ್ಲಿ ಚರ್ಚಿಸಲಾಗಿದೆ ಎನ್ನಲಾಗಿದೆ. ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್, ಸುಗ್ರೀವಾಜ್ಞೆ ಅಗತ್ಯವಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಹೀಗಿದ್ದರೂ ಮತ್ತೊಮ್ಮೆ ಕಾನೂನು ತಜ್ಞರೊಂದಿಗೆ ಚರ್ಚಿಸಿ ಮುಂದಿನ ನಿರ್ಧಾರ ಮಾಡಲಾಗುವುದು ಎಂದರು.

### ವಿದ್ಯುತ್ ಸಂಪರ್ಕ ವಿಷಯ ಮುಂದಕ್ಕೆ

ರಾಜ್ಯದಲ್ಲಿ ಈಗಾಗಲೇ ನಿರ್ಮಾಣವಾಗಿರುವ ಕಟ್ಟಡಗಳಿಗೆ ಓಸಿ ಇಲ್ಲದಿದ್ದರೂ ವಿದ್ಯುತ್ ಸಂಪರ್ಕ ನೀಡಲು ಒಂದು ಬಾರಿಗೆ ಅನ್ವಯಿಸುವಂತೆ ನಿಯಮ ಸಡಲಿಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದ್ದರೂ, ಯಾವುದೇ ನಿರ್ಧಾರ ಮಾಡದೆ ವಿಷಯ ಮುಂದಿನ ಸಂಪುಟಕ್ಕೆ ಮುಂದೂಡಲಾಗಿದೆ. ರಾಜ್ಯದಲ್ಲಿ ಸುಪ್ರೀಂಕೋರ್ಟ್ ಆದೇಶದ ನೆಪ ನೀಡಿ ಓಸಿ, ಸಿಸಿ ಇಲ್ಲದ ಕಟ್ಟಡಗಳಿಗೆ ವಿದ್ಯುತ್, ನೀರು, ಒಳಚರಂಡಿ ಸಂಪರ್ಕ ನೀಡದಂತೆ ಆದೇಶ ಹೊರಡಿಸಲಾಗಿದೆ. ಇದರಂತೆ ಎಲ್ಲಾ ಎಸ್ಕಾಂಗಳು ಮಾರ್ಚ್‌ನಿಂದ ಓಸಿ, ಸಿಸಿ ಇಲ್ಲದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ. ಇದರಿಂದ 4 ಲಕ್ಷಕ್ಕೂ ಹೆಚ್ಚು ಕಟ್ಟಡಗಳು ನಿರ್ಮಾಣ ಪೂರ್ಣವಾಗಿದ್ದರೂ ವಿದ್ಯುತ್ ಸಂಪರ್ಕವಿಲ್ಲದೆ ಮಾಲೀಕರು ಪರದಾಡುವಂತಾಗಿದೆ. ಇಂತಹ ಪ್ರಕರಣಗಳಲ್ಲಿ ಓಸಿ ಇಲ್ಲದಿದ್ದರೂ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿರುವವರಿಗೆ ನಿಯಮಗಳನ್ನು ಸಡಿಲಿಸಿ ಒಂದು ಬಾರಿಯ ಕ್ರಮವಾಗಿ ಓಸಿಯಿಂದ ವಿನಾಯಿತಿ ನೀಡಲು ಚರ್ಚೆ ನಡೆಸಲಾಗಿದೆ. ಆದರೆ, ಸುಪ್ರೀಂಕೋರ್ಟ್ ಆದೇಶ ಇರುವುದರಿಂದ ಕಾಯಿದೆಯ ನಿಯಮಗಳಿಗೆ ತಿದ್ದುಪಡಿ ತರಬೇಕು. ಹೀಗಾಗಿ ಬೆಳಗಾವಿ ಅಧಿವೇಶನದಲ್ಲೇ ತಿದ್ದುಪಡಿ ವಿಧೇಯಕ ಮಾಡಬೇಕೆ ಅಥವಾ ಸುಗ್ರೀವಾಜ್ಞೆ ಜಾರಿಗೆ ತರಬೇಕೆ ಎಂಬ ಗೊಂದಲದ ಹಿನ್ನೆಲೆ ವಿಷಯ ಮುಂದೂಡಿಕೆ ಮಾಡಲಾಗಿದೆ ಎನ್ನಲಾಗಿದೆ.

---

ಕಾಂಗ್ರೆಸ್ ನಕಲಿ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದೆ | ಕಾಂಗ್ರೆಸ್ಸೇ ನಿಜವಾದ ಮತಚೋರ

## ಮಾಲೂರು ಬಗ್ಗೆ ರಾಹುಲ್ ಮಾತನಾಡಲಿ: ಜೋಶಿ

**ದೆಹಲಿ:** 'ವೋಟ್ ಚೋರಿ' ಹೆಸರಿಟ್ಟು ಆರೋಪಿಸುವ ರಾಹುಲ್ ಗಾಂಧಿ ಅವರು ಕರ್ನಾಟಕದ ಮಾಲೂರು ವಿಧಾಸಭಾ ಕ್ಷೇತ್ರದ ಬಗ್ಗೆ ಏಕೆ ಉಸಿರೆತ್ತುತ್ತಿಲ್ಲ?' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಡನೆ ಗುರುವಾರ ಮಾತನಾಡಿದ ಅವರು, ವೋಟ್ ಚೋರಿ ಎಂಬುದು ರಾಹುಲ್ ಗಾಂಧಿ ಅವರ ಹೊಸ ಕಾಲ್ಪನಿಕ ಕಥೆ ಎಂದಿರುವ ಜೋಶಿ, ಮಾಲೂರು ಕ್ಷೇತ್ರದ ಕಾಂಗ್ರೆಸ್ ಶಾಸಕತ್ವವನ್ನು ಹೈಕೋರ್ಟ್ ಅನರ್ಹಗೊಳಿಸಿದ್ದಲ್ಲದೆ ಮರು ಮತ ಎಣಿಕೆಗೆ ಆದೇಶಿಸಿದೆ. ವಾಸ್ತವ ಹೀಗಿರುವಾಗ ಈಗ ಯಾರು ವೋಟ್ ಚೋರಿ ಮಾಡಿರುವುದು? ಎಂದು ಕಾಂಗ್ರೆಸ್‌ಗೆ ಅವರು ತಿರುಗೇಟು ನೀಡಿದ್ದಾರೆ.

ಮಾಲೂರು ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಅತ್ಯಂತ ಕನಿಷ್ಠ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ಅಲ್ಲಿಯ ಮತದಾನ, ಮತ ಎಣಿಕೆಯಲ್ಲಿ ಲೋಪದೋಷವಾಗಿದೆ. ಹೀಗಾಗಿ ಪರಾಜಿತ ಅಭ್ಯರ್ಥಿ ಹೈಕೋರ್ಟ್ ಮೆಟ್ಟಿಲೇರಿದ್ದು, ಪೂರಕ ದಾಖಲೆಗಳನ್ನು ಸಲ್ಲಿಸಿದ್ದರು. ಹೈಕೋರ್ಟ್ ಇದೀಗ ಕಾಂಗ್ರೆಸ್ ಅಭ್ಯರ್ಥಿಯ ಶಾಸಕತ್ವ ಅನರ್ಹಗೊಳಿಸಿ ಮರು ಮತ ಎಣಿಕೆಗೆ ಆದೇಶಿಸಿದೆ. ಈಗೇನು ಹೇಳುತ್ತಾರೆ ಈ 'ವೋಟ್ ಚೋರಿ'ಯ ಕಥಾ ನಾಯಕರು? ಎಂದು ಸಚಿವ ಪ್ರಲ್ಹಾದ ಜೋಶಿ ಪ್ರಶ್ನಿಸಿದ್ದಾರೆ.

ವೋಟ್ ಚೋರಿ ಆರೋಪದಲ್ಲಿ ರಾಹುಲ್ ಗಾಂಧಿ ಅವರು ಉಲ್ಲೇಖಿಸಿದ ಆಳಂದ ವಿಧಾನಸಭೆ ಕ್ಷೇತ್ರವೂ ಕಾಂಗ್ರೆಸ್ ಆಡಳಿತದ ಕರ್ನಾಟಕ ವ್ಯಾಪ್ತಿಯಲ್ಲಿದೆ. ಈ ಕ್ಷೇತ್ರದಲ್ಲಿ ಗೆದ್ದಿರುವುದು ಸಹ ಕಾಂಗ್ರೆಸ್ ಅಭ್ಯರ್ಥಿ. ಅಲ್ಲಿ ಮತದಾರರನ್ನು ಆನ್‌ಲೈನ್‌ನಲ್ಲಿ ಅಳಿಸಲಾಗಿದೆ ಎಂಬ ರಾಹುಲ್ ಹೇಳಿಕೆ ನಿಜಕ್ಕೂ ನಗೆಪಾಟಲು ಎಂದು ಸಚಿವ ಜೋಶಿ ವ್ಯಂಗ್ಯವಾಡಿದ್ದಾರೆ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ನಾಯಕರ ವೋಟ್ ಚೋರಿ ಆರೋಪಗಳ ವಿಫಲ ಪ್ರಯತ್ನದ ನಂತರ ಅದು ಸುಳ್ಳೆಂಬುದು ಸಾಬೀತಾಗಿದೆ. ಕಾಂಗ್ರೆಸ್ ನಕಲಿ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿದೆ ಎಂಬುದು ಇದೀಗ ಸ್ಪಷ್ಟವಾಗಿದೆ. ರಾಹುಲ್ ಗಾಂಧಿ ಇನ್ನಾದರೂ ಹಿಂದಿನ ತಪ್ಪುಗಳಿಂದ ಬುದ್ಧಿ ಕಲಿಯಲಿ ಎಂದು ಸಚಿವ ಪ್ರಲ್ಹಾದ ಜೋಶಿ ಸಲಹೆ ನೀಡಿದ್ದಾರೆ.

### ಕಾಂಗ್ರೆಸ್ ಪಕ್ಷವೇ ದೋಷಪೂರಿತವಾಗಿದೆ

ಇವಿಎಂ ಆಧಾರಿತ 20ಕ್ಕೂ ಹೆಚ್ಚು ಚುನಾವಣೆಗಳಲ್ಲಿ ಕಾಂಗ್ರೆಸ್ ಸೋತ ನಂತರ ಕಾಂಗ್ರೆಸ್ ಮತಯಂತ್ರ ಮತ್ತು ಚುನಾವಣಾ ಆಯೋಗದ ಮೇಲೆ ದೋಷಾರೋಪ ಮಾಡುತ್ತಿದ್ದು, ದೋಷ ಇರುವುದು ಇವಿಎಂ ಅಥವಾ ಚುನಾವಣಾ ಆಯೋಗದಲ್ಲಲ್ಲ. ಕಾಂಗ್ರೆಸ್ ಪಕ್ಷವೇ ದೋಷಪೂರಿತವಾಗಿದೆ. ಹಾಗಾಗಿ ನಿಜವಾದ ವೋಟ್ ಚೋರಿ ಕಾಂಗ್ರೆಸ್ಸೇ ಆಗಿದೆ ಎಂದು ಪ್ರಲ್ಹಾದ ಜೋಶಿ ನೇರ ಆರೋಪ ಮಾಡಿದ್ದಾರೆ.

---

## ಒಬಿಸಿ ಕಾಯಿದೆ ಸಿಂಧುತ್ವ ಪ್ರಶ್ನಿಸಿ ಅರ್ಜಿ ಸಲ್ಲಿಕೆ

**ಬೆಂಗಳೂರು:** ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾಯಿದೆ 1995ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಹಿರಿಯ ವಕೀಲ ಕೆ.ಎನ್. ಸುಬ್ಬಾರೆಡ್ಡಿ ಮತ್ತಿತರರು ಅರ್ಜಿ ಸಲ್ಲಿಸಿದ್ದಾರೆ, ಅರ್ಜಿಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ, ರಾಜ್ಯ ಸರಕಾರದ ಪ್ರಧಾನ ಕಾರ್ಯದರ್ಶಿ, ರಾಜ್ಯ ಹಿಂದುಳಿದ ವರ್ಗಗಳ ಇಲಾಖೆಯ ಕಾರ್ಯದರ್ಶಿ, ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ ಮತ್ತು ಭಾರತ ಜನಗಣತಿ ಆಯೋಗ ಹಾಗೂ ರಿಜಿಸ್ಟ್ರಾರ್ ಜನರಲ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಸಂವಿಧಾನದ ಪರಿಚ್ಛೇದ 340ರ ಅಡಿ ತಿಳಿಸಿರುವಂತೆ ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸ್ಥಿತಿಗತಿಗಳ ಸಮೀಕ್ಷೆ ನಡೆಸುವುದಕ್ಕೆ ರಾಷ್ಟ್ರಪತಿಗಳಿಂದ ನೇಮಕಗೊಂಡ ವ್ಯಕ್ತಿಗಳ ಆಯೋಗಕ್ಕೆ ಮಾತ್ರ ಅಧಿಕಾರವಿದೆ. ಈ ರೀತಿಯ ಅಧಿಕಾರ ರಾಷ್ಟ್ರಪತಿಗಳಿಗೆ ಮಾತ್ರ ನೀಡಲಾಗಿದೆ. ಜತೆಗೆ, ಸಮೀಕ್ಷಾ ವರದಿ ಆದರಿಸಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂವಿಧಾನದ ಪರಿಚ್ಛೇದ 340(1)ರ ಅಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಸೂಚನೆ ನೀಡುವುದಕ್ಕೆ ಅವಕಾಶವಿದೆ. ರಾಜ್ಯ ಸರಕಾರ ಸಂವಿಧಾನ ಈ ಪರಿಚ್ಛೇದಗಳನ್ನು ಉಲ್ಲಂಘಿಸಿ ತನ್ನ ಅಧಿಕಾರ ವ್ಯಾಪ್ತಿ ಮೀರಿ ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸುತ್ತಿದ್ದು, ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ ಸಂವಿಧಾನ ಬಾಹಿರವಾಗಿರುವ ರಾಜ್ಯ ಹಿಂದುಳಿದ ವರ್ಗಗಳ ಕಾಯಿದೆ 1995 ಮತ್ತು ಅದಕ್ಕೆ ತಿದ್ದುಪಡಿ ಮಾಡಿರುವ ಸೆಕ್ಷನ್ 9(1)ನ್ನು ಅಸಾಂವಿಧಾನಿಕ ಎಂದು ಘೋಷಣೆ ಮಾಡಬೇಕು ಸಮೀಕ್ಷೆ ಅಧಿಸೂಚನೆ ರದ್ದುಪಡಿಸಬೇಕೆಂದು ಅರ್ಜಿಯಲ್ಲಿ ಕೋರಲಾಗಿದೆ.

## ಸಮಾಚಾರ ಸಣ್ಣದಲ್ಲ

### ಸಾತ್ವಿಕ್-ಚಿರಾಗ್ ಜೋಡಿ ಕ್ವಾ. ಫೈನಲ್‌ಗೆ

**ಬೀಜಿಂಗ್ (ಚೀನಾ):** ಭಾರತದ ಪುರುಷರ ಡಬಲ್ಸ್ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಚೀನಾ ಓಪನ್-2025 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ಸ್‌ಗೆ ಲಗ್ಗೆ ಇಟ್ಟಿದ್ದಾರೆ. ಗುರುವಾರ ನಡೆದ ಪ್ರೀಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಚೈನೀಸ್ ತೈಪೆಯ ಚಿಯು ಹಿಸಿಯಾಂಗ್ ಚಿಹೆ ಹಾಗೂ ವಾಂಗ್ ಚಿ ಲಿನ್ ಜೋಡಿಯ ವಿರುದ್ಧ ಗೆಲುವು ಪಡೆದಿದ್ದಾರೆ. ಆ ಮೂಲಕ ಚೀನಾ ಓಪನ್ ನಲ್ಲಿ ಪ್ರಶಸ್ತಿ ಗೆಲ್ಲುವ ಭರವಸೆಯನ್ನು ಭಾರತದ ಜೋಡಿ ಮೂಡಿಸಿದೆ. ಸಾತ್ವಿಕ್-ಚಿರಾಗ್ ಜೋಡಿ ಹಾಂಕಾಂಗ್ ಓಪನ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿತ್ತು. ಇದೀಗ ಅದೇ ಲಯವನ್ನು ಈ ಜೋಡಿ ಮುಂದುವರಿಸಿದೆ. ಈ ಜೋಡಿಯು 33 ನಿಮಿಷಗಳಲ್ಲಿ ನಡೆದಿದ್ದ ಹಣಾಹಣಿಯಲ್ಲಿ ಭರ್ಜರಿ ಪ್ರದರ್ಶನವನ್ನು ತೋರಿಸಿ 21-13 ಮತ್ತು 21-12 ಅಂತರದಲ್ಲಿ ಚಿಯು ಹಿಸಿಯಾಂಗ್ ಚಿಹೆ ಹಾಗೂ ವಾಂಗ್ ಚಿ ಲಿನ್ ಜೋಡಿಯನ್ನು ಮಣಿಸಿತು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಚೀನಾದ ರೆನ್ ಕ್ಸಿಯಂಗ್ ಯು ಹಾಗೂ ಕ್ಸಿ ಹಾನನ್ ಜೋಡಿಯ ವಿರುದ್ಧ ಭಾರತದ ಜೋಡಿ ಕಾದಾಟ ನಡೆಸಲಿದೆ.

### ಮೆಸ್ಸಿಯಿಂದ ಮೋದಿಗೆ ವಿಶೇಷ ಉಡುಗೊರೆ

**ದೆಹಲಿ:** ಭಾರತಕ್ಕೆ ತಮ್ಮ ಬಹುನಿರೀಕ್ಷಿತ ಭೇಟಿಗೆ ಸಿದ್ಧತೆ ನಡೆಸುತ್ತಿರುವ ಅರ್ಜೆಂಟೀನಾದ ಜನಪ್ರಿಯ ಫುಟ್ಬಾಲ್ ಆಟಗಾರ ಲಿಯೋನೆಲ್ ಮೆಸ್ಸಿ, 75ನೇ ಹುಟ್ಟುಹಬ್ಬದ ಸ್ಮರಣಾರ್ಥ ಪ್ರಧಾನಿ ಮೋದಿ ಅವರಿಗೆ 2022ರ ಫಿಫಾ ವಿಶ್ವಕಪ್ ವಿಜಯೋತ್ಸವದ ಸಹಿ ಹಾಕಿದ ಜೆರ್ಸಿಯನ್ನು ಕಳುಹಿಸಿದ್ದಾರೆ. 'ಭಾರತ ಭೇಟಿಯ ಬಗ್ಗೆ ಚರ್ಚಿಸಲು ಫೆಬ್ರವರಿಯಲ್ಲಿ ನಾನು ಮೆಸ್ಸಿಯನ್ನು ಭೇಟಿಯಾದಾಗ, ಮೋದಿಯವರ 75ನೇ ಹುಟ್ಟುಹಬ್ಬವೂ ಬರುತ್ತಿದೆ ಎಂದು ನಾನು ಅವರಿಗೆ ಹೇಳಿದ್ದೆ ಮತ್ತು ಅವರು ಪ್ರಧಾನಿಗೆ ಸಹಿ ಮಾಡಿದ ಜೆರ್ಸಿಯನ್ನು ಕಳುಹಿಸುವುದಾಗಿ ಹೇಳಿದ್ದರು. ಎರಡು ಅಥವಾ ಮೂರು ದಿನಗಳಲ್ಲಿ ಜೆರ್ಸಿ ಭಾರತಕ್ಕೆ ತಲುಪಲಿದೆ ಎಂದು ಮೆಸ್ಸಿ ಭಾರತ ಭೇಟಿಯ ಆಯೋಜಕರಲ್ಲಿ ಓರ್ವರಾದ ಸತಾದ್ರು ದತ್ತಾ ತಿಳಿಸಿದ್ದಾರೆ. ಡಿಸೆಂಬರ್‌ನಲ್ಲಿ ಮೆಸ್ಸಿ 3 ದಿನಗಳ ಭಾರತ ಭೇಟಿಯ ವೇಳೆ ಕೋಲ್ಕತಾ, ಅಹಮದಾಬಾದ್, ಮುಂಬೈ ಹಾಗೂ ದೆಹಲಿಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.

ಸೂಪರ್-4 ಪಂದ್ಯಕ್ಕೂ ಮುನ್ನ ಟೀಮ್ ಇಂಡಿಯಾಕ್ಕೆ ಲೀಗ್ ಹಂತದ ಕೊನೆಯ ಸೆಣಸಾಟ

# ಇಂದು ಭಾರತ-ಒಮಾನ್ ಔಪಚಾರಿಕ ಪಂದ್ಯ

**ದುಬೈ:** ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿರುವ ಎರಡೂ ಪಂದ್ಯಗಳನ್ನು ಗೆಲ್ಲುವ ಮೂಲಕ ಎ-ಗುಂಪಿನಲ್ಲಿ ಅಗ್ರಸ್ಥಾನದಲ್ಲಿರುವ ಭಾರತ ತಂಡವು ಈಗಾಗಲೇ ಸೂಪರ್-4 ಹಂತ ಪ್ರವೇಶಿಸಿದೆ. ಸೆ.21ರಂದು ನಡೆಯುವ ಸೂಪರ್-4 ಪಂದ್ಯದಲ್ಲಿ ಟೀಮ್ ಇಂಡಿಯಾ, ಪಾಕಿಸ್ತಾನ ವಿರುದ್ಧ ಸೆಣಸಾಡಲಿದೆ. ಆದರೆ ಇದಕ್ಕೂ ಮುನ್ನ ಭಾರತವು ತನ್ನ ಕೊನೆಯ ಲೀಗ್ ಪಂದ್ಯವನ್ನು ಇಂದು ಒಮಾನ್ ವಿರುದ್ಧ ಆಡಲಿದೆ.

ಇಂದಿನ ಪಂದ್ಯವು ಸೂಪರ್-4ಗೂ ಮುನ್ನ ಬ್ಯಾಟಿಂಗ್ ಅಭ್ಯಾಸ ನಡೆಸಲು ಟೀಮ್ ಇಂಡಿಯಾಗೆ ಉತ್ತಮ ಅವಕಾಶವಾಗಿದೆ. ಲೀಗ್‌ನಲ್ಲಿ ಆಡಿರುವ ಎರಡೂ ಪಂದ್ಯಗಳಲ್ಲೂ ಕಡಿಮೆ ಸ್ಕೋರ್ ಬೆನ್ನಟ್ಟಿ ಗೆದ್ದಿರುವ ಭಾರತೀಯ ತಂಡದ ಎಲ್ಲಾ ಬ್ಯಾಟರ್‌ಗಳಿಗೆ ತಮ್ಮ ಬ್ಯಾಟಿಂಗ್ ಸಾಮರ್ಥ್ಯ ಪ್ರದರ್ಶಿಸಲು ಸರಿಯಾದ ಅವಕಾಶ ಸಿಕ್ಕಿರಲಿಲ್ಲ, ಹಾಗಾಗಿ ಮೊದಲು ಬ್ಯಾಟಿಂಗ್ ಅವಕಾಶ ಸಿಕ್ಕಿದರೆ ಒಮಾನ್ ವಿರುದ್ಧದ ಪಂದ್ಯದಲ್ಲಿ ಪೂರ್ಣ 20 ಓವರ್‌ಗಳನ್ನು ಬಳಸಿಕೊಂಡು ಬ್ಯಾಟಿಂಗ್ ಮಾಡಲು ಟೀಮ್ ಇಂಡಿಯಾ ಎದುರು ನೋಡುತ್ತಿದೆ.

ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾಗಿರುವ ಸಂಜು ಸ್ಯಾಮ್ಸನ್, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್ ಅವರಿಗೆ ಎರಡೂ ಪಂದ್ಯಗಳಲ್ಲೂ ಬ್ಯಾಟಿಂಗ್ ಮಾಡುವ ಸರಿಯಾದ ಅವಕಾಶ ಸಿಕ್ಕಿಲ್ಲ. ಹಾಗಾಗಿ ಇಂದು ನಡೆಯಲಿರುವ ಒಮಾನ್ ವಿರುದ್ಧದ ಪಂದ್ಯ ಈ ಆಟಗಾರರಿಗೆ ತಮ್ಮ ಲಯಕ್ಕೆ ಮರಳಲು ಉತ್ತಮ ಅವಕಾಶವನ್ನು ನೀಡಲಿದೆ. ಒಂದು ವೇಳೆ ಒಮಾನ್ ತಂಡವು ಮೊದಲು ಬ್ಯಾಟಿಂಗ್ ನಡೆಸಿದರೆ, ಭಾರತೀಯ ಬೌಲರ್‌ಗಳನ್ನು ಎದುರಿಸಲಾಗದೆ ಕಡಿಮೆ ರನ್‌ಗಳಿಗೆ ಆಲೌಟ್ ಆಗುವ ಸಾಧ್ಯತೆ ಹೆಚ್ಚಿದೆ.

ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್, ಯಾವುದೇ ಆಟಗಾರರಿಗೆ ವಿಶ್ರಾಂತಿ ನೀಡದಿರಲು ನಿರ್ಧರಿಸಿದ್ದಾರೆ. ಆದರೆ ಜಸ್ಪ್ರೀತ್ ಬುಮ್ರಾ ತಮಗೆ ವಿಶ್ರಾಂತಿ ಬೇಕು ಅಂದರೆ ಮಾತ್ರ ಅವರದೊಂದು ಮನವಿಯನ್ನು ಪರಿಗಣಿಸುವ ಸಾಧ್ಯತೆ ಇದೆ. ಬುಮ್ರಾ ವಿಶ್ರಾಂತಿ ಪಡೆದರೆ ಅವರ ಬದಲು ಅರ್ಷದೀಪ್ ಸಿಂಗ್ ಅವರಿಗೆ ತಂಡದಲ್ಲಿ ಅವಕಾಶ ನೀಡುವ ಸಾಧ್ಯತೆ ಹೆಚ್ಚಿದೆ.

**ಭಾರತ ಸಂಭಾವ್ಯ ತಂಡ:** ಅಭಿಷೇಕ್ ಶರ್ಮಾ, ಶುಭ್‌ಮನ್ ಗಿಲ್, ಸಂಜು ಸ್ಯಾಮ್ಸನ್ (ಕೀಪರ್), ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಜಸ್ಪ್ರೀತ್ ಬುಮ್ರಾ/ಅರ್ಶ್‌ದೀಪ್ ಸಿಂಗ್, ವರುಣ್ ಚಕ್ರವರ್ತಿ

**ಒಮಾನ್ ಸಂಭಾವ್ಯ ತಂಡ:** ಜತೀಂದರ್ ಸಿಂಗ್ (ನಾಯಕ), ಹಮ್ಮದ್ ಮಿರ್ಜಾ, ವಿನಾಯಕ್ ಶುಕ್ಲಾ, ಸೂಫಿಯಾನ್ ಯೂಸೂಫ್, ಅಮೀರ್ ಕಲೀಮ್, ಮೊಹಮ್ಮದ್ ನದೀಮ್, ಸುಫಿಯಾನ್ ಮೊಹಮ್ಮದ್, ಆರ್ಯನ್ ಬಿಶ್ಟ್, ಜಿಕ್ರಿಯಾ ಇಸ್ಲಾಂ, ಸಮಯ್ ಶ್ರೀವತ್ಸ, ಹಸ್ನೇನ್ ಶಾ, ನದೀಮ್ ಖಾನ್, ವಸೀಂ ಅಲಿ, ಜಿತೆನ್ ರಾಮನಂದಿ, ಆರ್ಯನ್ ಬಿಶ್ಟ್, ಶಕೀಲ್ ಅಹ್ಮದ್, ಶಾ ಫೈಸಲ್,

### ಪಿಸಿಬಿ ವಿರುದ್ಧ ಅತಿಕ್ ಭ್ರಷ್ಟಾಚಾರದ ಆರೋಪ

**ದುಬೈ:** ಪ್ರಸ್ತುತ ನಡೆಯುತ್ತಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ಹ್ಯಾಂಡ್‌ಶೇಕ್ ವಿವಾದದಿಂದ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರೀ ಮುಜುಗರ ಅನುಭವಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ (ಪಿಸಿಬಿ) ಇದೀಗ ಮತ್ತೊಂದು ಹಿನ್ನಡೆಯಾಗಿದೆ. ಪಾಕಿಸ್ತಾನ ತಂಡದ ಆಟಗಾ ರರಿಗೆ ನೀಡಿರುವ ಕ್ರಿಕೆಟ್ ಕಿಟ್ ಕಳಪೆಯಿಂದ

ಕೂಡಿದೆ ಎಂದು ಮಾಜಿ ಕ್ರಿಕೆಟಿಗ ಅತಿಕ್ ಉಝ್ ಝುಮಾನ್ ಗಂಭೀರ ಆರೋಪ ಮಾಡಿದ್ದಾರೆ. ತಂಡದ ಕಿಟ್ ಟೆಂಡರ್ ಅನ್ನು ಆಡಳಿತ ಮಂಡಳಿಯ ಮುಖ್ಯಸ್ಥರ ಸ್ನೇಹಿತರೊಬ್ಬರಿಗೆ ನೀಡಲಾಗಿದೆ ಎಂದು ಕೂಡ ಅವರು ಟೀಕಿಸಿದ್ದಾರೆ. ಪಾಕ್ ಆಟಗಾರರು ಧರಿಸಿ ರುವ ಜೆರ್ಸಿ ಉತ್ತಮ ಗುಣಮಟ್ಟವನ್ನು ಹೊಂದಿಲ್ಲ ಎಂದು ದೂರಿದ್ದಾರೆ.

ಯುಎಇ ವಿರುದ್ಧದ ಪಂದ್ಯದ ವೇಳೆ ಪಾಕಿಸ್ತಾನ ತಂಡದ ಆಟಗಾರರು ಬೆವರುತ್ತಿದ್ದರು, ಜೆರ್ಸಿ ಒದ್ದೆಯಾಗುತ್ತಿತ್ತು ಮತ್ತು ಬೇಗ ಒಣಗುತ್ತಿರಲಿಲ್ಲ. ಆದರೆ ಎದುರಾಳಿ ಆಟಗಾರರ ಜೆರ್ಸಿ ಬೆವರು ಬಹುಬೇಗ ಒಣಗುತ್ತಿತ್ತು. ಪಾಕಿಸ್ತಾನ ತಂಡದ ಕಿಟ್ ತಯಾರು ಮಾಡುವ ಟೆಂಡರ್ ಅನ್ನು ವೃತ್ತಿಪರ ಸಂಸ್ಥೆಗೆ ನೀಡದೆ, ಸ್ನೇಹಿತರೊಬ್ಬರಿಗೆ ನೀಡಲಾಗಿದೆ ಎಂದು ತಮ್ಮ ಎಕ್ಸ್ ಖಾತೆಯಲ್ಲಿ ಅತಿಕ್ ಉಝ್ ಝುಮಾನ್ ಆರೋಪ ಮಾಡಿದ್ದಾರೆ.

ಕುಸಲ್ ಮೆಂಡಿಸ್ ಅಜೇಯ ಅರ್ಧ ಶತಕ

## ಲಂಕಾಗೆ 6 ವಿಕೆಟ್‌ಗಳ ಜಯ

**ಅಬುದಾಬಿ:** ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಶ್ರೀಲಂಕಾ ತಂಡವು ಕುಸಲ್ ಮೆಂಡಿಸ್ ಅವರ ಅಜೇಯ ಅರ್ಧ ಶತಕದ (74) ನೆರವಿನಿಂದ ಆಫ್ಘಾನ್ ವಿರುದ್ಧ 6 ವಿಕೆಟ್‌ಗಳ ಸುಲಭ ಗೆಲುವನ್ನು ದಾಖಲಿಸಿದೆ.

170 ರನ್‌ಗಳ ಗೆಲುವಿನ ಗುರಿ ಪಡೆದ ಶ್ರೀಲಂಕಾ ತಂಡವು 18.4 ಓವರ್‌ಗಳಲ್ಲಿ 171 ರನ್ ಗಳಿಸಿತು. ಕುಸಲ್ ಮೆಂಡಿಸ್ ಹೊರತುಪಡಿಸಿ, ಶ್ರೀಲಂಕಾ ಪರ 28 ರನ್ ಮತ್ತು ಕಮಿಂಡು ಮೆಂಡಿಸ್ ಅಜೇಯ 26 ರನ್ ಗಳಿಸಿದರು.

ಟಾಸ್ ಗೆದ್ದ ಅಫಘಾನಿಸ್ತಾನವು ಬ್ಯಾಟಿಂಗ್ ಆಯ್ದುಕೊಂಡಿತು. ಮೊದಲ ವಿಕೆಟ್‌ಗೆ ರಹಮಾನುಲ್ಲಾ ಗುರ್ಬಜ್ ಮತ್ತು ಸೆದಿಕುಲ್ಲಾ ಅಟಲ್ ಮೊದಲ ವಿಕೆಟ್‌ಗೆ 26 ರನ್‌ಗಳ ಜತೆಯಾಟವನ್ನಷ್ಟೇ ಪ್ರದರ್ಶಿಸಲು ಸಾಧ್ಯವಾಯಿತು. 14 ರನ್ ಗಳಿಸಿದ್ದ ಗುರ್ಬಜ್ ತುಷಾರ ಬೌಲಿಂಗ್‌ನಲ್ಲಿ ಔಟ್ ಆದರು. ಆ ಬಳಿಕ ಕ್ರೀಸ್‌ಗೆ ಬಂದ ಕರೀಮ್ ಜನತ್ ಕೇವಲ 1 ರನ್ ಗಳಿಸಿ ತುಷಾರ ಅವರಿಗೇ ವಿಕೆಟ್ ಒಪ್ಪಿಸಿದರು. ಆ ನಂತರ 18 ರನ್ ಗಳಿಸಿದ್ದ ಸೇದಿಕುಲ್ಲಾ ಅಟಲ್ ಕೂಡಾ ಅಟಲ್ ಬೌಲಿಂಗ್‌ನಲ್ಲೇ ವಿಕೆಟ್ ಕಳೆದುಕೊಂಡರು. ಅಫ್ಘಾನ್ ಬ್ಯಾಟರ್ ಡಾರ್ವಿಶ್ ರಸೂಲ್ ಕೇವಲ 9 ರನ್ ಗಳಿಸಿ ಚಾಮೆರಾ ಬೌಲಿಂಗ್‌ನಲ್ಲಿ ಔಟ್ ಆಗಿ ಪೆವಿಲಿಯನ್ ಸೇರಿದರು. ಕಳೆದೆರಡು ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಅಜ್ಮತುಲ್ಲಾ ಒಮರ್ಜಾಯ್ ಈ ಪಂದ್ಯದಲ್ಲಿ ಕೇವಲ 6 ರನ್ ಗಳಿಸಿ ಔಟ್ ಆದರು.

ಆ ನಂತರ ಕ್ರೀಸ್‌ಗೆ ಬಂದ ರಶೀದ್ ಖಾನ್ 23 ಬಾಲ್‌ಗಳನ್ನು ಎದುರಿಸಿ 24 ರನ್ ಗಳಿಸುವಲ್ಲಿ ಯಶಸ್ಸನ್ನು ಕಂಡರು. ಅದೇ ರೀತಿ ಕೇವರ 22 ಬಾಲ್‌ಗಳನ್ನು ಎದುರಿಸಿದ ಮೊಹಮ್ಮದ್ ನಬಿ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿ 60 ರನ್ ಗಳಿಸುವಲ್ಲಿ ಯಶಸ್ವಿಯಾದರು.

ಲಂಕಾ ಪರ ಕೇವಲ 18 ರನ್ ನೀಡಿ, 4 ವಿಕೆಟ್ ಪಡೆದ ತುಷಾರ ಯಶಸ್ವಿ ಬೌಲರ್ ಎನಿಸಿದರು.

ಫೈನಲ್‌ನಲ್ಲಿ 8ನೇ ಸ್ಥಾನಕ್ಕೆ ಕುಸಿದು ನಿರಾಸೆ

## ನೀರಜ್‌ಗೆ ಆಘಾತಕಾರಿ ಸೋಲು

**ಟೋಕಿಯೊ:** ಅವಳಿ ಒಲಿಂಪಿಕ್ಸ್ ಪದಕ ವಿಜೇತ ನೀರಜ್ ಚೋಪ್ರಾ, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಜಾವೆಲಿನ್ ಫೈನಲ್‌ನಲ್ಲಿ ಸೋತು ನಿರಾಸೆ ಮೂಡಿಸಿದ್ದಾರೆ. 84.03 ಮೀ. ಎಸೆತದೊಂದಿಗೆ 8ನೇ ಸ್ಥಾನ ಪಡೆದರು. 2012ರ ಒಲಿಂಪಿಕ್ ಚಾಂಪಿಯನ್ ಟ್ರಿನಿಡಾಡ್-ಟೊಬ್ಯಾಗೊದ ಕೆಶಾರ್ನ್ ವಾಲ್ಕಾಟ್ ನಾಲ್ಕನೇ ಪ್ರಯತ್ನದಲ್ಲಿ 88.16 ಮೀ. ದೂರ ಎಸೆದು ಚಿನ್ನದ ಪದಕಕ್ಕೆ ಕೊರಳೊಡಿದ್ದರು. ಈ ಕೂಟದಲ್ಲಿ ವಾಲ್ಕಾಟ್‌ಗೆ ಒಲಿದ ಚೊಚ್ಚಲ ಪದಕ ಇದಾಗಿದೆ. ಗ್ರೆನೇಡಾದ ಆಂಡರ್‌ಸನ್ ಪೀಟರ್ಸ್(87.38) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಅಮೆರಿಕದ ಕರ್ಟಿಸ್ ಥಾಂಪ್ಸನ್(86.67) ಕಂಚಿನ ಪದಕ ಗೆದ್ದರು.

2012ರ ಬಳಿಕ ಯಾವುದೇ ಪದಕ ಗೆಲ್ಲದ ಕೆಶಾರ್ನ್ ವಾಲ್ಕಾಟ್, ಯಾರೂ ನಿರೀಕ್ಷೆ ಮಾಡದಂತೆ ಪದಕ ಗೆದ್ದು ಬೆರಗುಗೊಳಿಸಿದರು. ಮೊದಲ ಪ್ರಯತ್ನದಲ್ಲಿ 81.22 ಮೀ., ಎರಡನೇ ಪ್ರಯತ್ನದಲ್ಲಿ 87.83, ಮೂರನೇ ಪ್ರಯತ್ನದಲ್ಲಿ 81.65, ನಾಲ್ಕನೇ ಪ್ರಯತ್ನದಲ್ಲಿ 88.16 ಮೀ. ಎಸೆದು ಚಿನ್ನದ ಪದಕ ತಮ್ಮದಾಗಿಸಿಕೊಂಡರು. 27 ವರ್ಷದ ನೀರಜ್ ಬುಧವಾರ ನಡೆದಿದ್ದ ಅರ್ಹತಾ ಸುತ್ತಿನ ಎ-ಗುಂಪಿನಲ್ಲಿ ಮೊದಲ ಯತ್ನದಲ್ಲೇ 84.85 ಮೀ. ದೂರ ಭರ್ಜಿ ಎಸೆದು ಫೈನಲ್ ಪ್ರವೇಶಿಸಿದ್ದರು. ಅರ್ಹತಾ ಸುತ್ತಿನಲ್ಲಿ ಗ್ರೆನೇಡಾದ ಆ್ಯಂಡರ್‌ಸನ್ ಪೀಟರ್ಸ್ 89.53 ದೂರ ಎಸೆದು ಅತೀ ಹೆಚ್ಚು ದೂರ ಥ್ರೋ ಮಾಡಿದ್ದರೂ, ಅವರು ಫೈನಲ್‌ನಲ್ಲಿ 87.38 ಮೀ. ದೂರ ಎಸೆಯಲಷ್ಟೇ ಶಕ್ತವಾದರು. ಕಳೆದ ವರ್ಷ ಪ್ಯಾರಿಸ್‌ನಲ್ಲಿ ನಡೆದಿದ್ದ ಒಲಿಂಪಿಕ್ ಕೂಟದಲ್ಲಿ ಚಾಂಪಿಯನ್ ಆಗಿದ್ದ ಪಾಕಿಸ್ತಾನದ ಅರ್ಷದ್ ನದೀಂ ಇಲ್ಲಿ ಸಂಪೂರ್ಣ ವಿಫಲರಾದರು. 12 ಮಂದಿ ಸ್ಪರ್ಧಿಗಳ ಪೈಕಿ 10ನೇ ಸ್ಥಾನ ಪಡೆದರು. ಜೂಲಿಯನ್ ವೆಬರ್ ಕೂಡ ಪದಕ ವಂಚಿತರಾದರು.

### ಸಚಿನ್ ಯಾದವ್ ಸಾಧನೆ

ಭಾರತದ ಇನ್ನೋರ್ವ ಜಾವೆಲಿನ್ ಪಟು ಸಚಿನ್ ಯಾದವ್ ಪದಕ ಗೆಲ್ಲದಿದ್ದರೂ, ವೈಯಕ್ತಿಕ ಶ್ರೇಷ್ಠ ಸಾಧನೆ 86.27 ಮೀ. ದೂರ ಎಸೆದು ತಮ್ಮ ಅತ್ಯುತ್ತಮ ಪ್ರದರ್ಶನ ತೋರಿದರು. ಈ ಮೂಲಕ ಮುಂಬರುವ ಟೂರ್ನಿಯಲ್ಲಿ ಭಾರತದ ಭರವಸೆಯ ಜಾವೆಲಿನ್ ಪಟು ಆಗಿ ಗುರುತಿಸಿಕೊಂಡರು

ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್

## ಸಿಂಧು ಕ್ವಾರ್ಟರ್ ಫೈನಲ್‌ಗೆ

**ಶೆಂಝೆನ್ (ಚೀನಾ):** ಭಾರತದ ಅಗ್ರ ಆಟಗಾರ್ತಿ ಪಿ.ವಿ. ಸಿಂಧು ಅವರು ಚೀನಾ ಮಾಸ್ಟರ್ಸ್ ಸೂಪರ್-750 ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಗುರುವಾರ ಶೆಂಝೆನ್‌ನಲ್ಲಿ ನಡೆದ ಪಂದ್ಯದಲ್ಲಿ ಥಾಯ್ಲೆಂಡ್‌ನ ಪೋರ್ನ್‌ಪಾವೀ ಚೊಚುವಾಂಗ್ ಅವರನ್ನು ಸೋಲಿಸುವ ಮೂಲಕ ಈ ಸಾಧನೆ ಮಾಡಿದರು.

41 ನಿಮಿಷಗಳ ಸೆಣಸಾಟದಲ್ಲಿ 21-15, 21-15 ಅಂತರದಲ್ಲಿ ಜಯ ಸಾಧಿಸುವ ಮೂಲಕ ಭಾರತೀಯ ಆಟಗಾರ್ತಿ ಮೇಲುಗೈ ಸಾಧಿಸಿದರು. ಕಳೆದ ವಾರ ಹಾಂಗ್ ಕಾಂಗ್ ಓಪನ್‌ನಲ್ಲಿ ಸಿಂಧು ಮೊದಲ ಸುತ್ತಿನಲ್ಲಿ ಡೆನ್ಮಾರ್ಕ್‌ನ ಆಟ ಗಾರ್ತಿ ಡೇನ್ ಲಿನ್ ಕ್ರಿಸ್ಟೋಫರ್ಸನ್ ಅವರಿಗೆ ಮಣಿದಿದ್ದರು. ಗೆಲುವಿನ ಬಳಿಕ ಮಾತನಾಡಿದ ಸಿಂಧು, 'ಈ ಗೆಲುವಿನಿಂದ ನನಗೆ ಸಂತೋಷವಾಗಿದೆ. ಆರಂಭದಿಂದಲೂ ಜಾಗರೂಕರಾಗಿ ರುವುದು ಮತ್ತು 100 ಪ್ರತಿಶತ ಪ್ರಯತ್ನ ಹಾಕುವುದು ನನ್ನ ಕರ್ತವ್ಯ. ಹಾಗಾಗಿ ಸುಲಭವಾದ ತಪ್ಪುಗಳನ್ನು ಮಾಡದಿರು ವುದು ನನಗೆ ಬಹಳ ಮುಖ್ಯ ಎಂದು ನಾನು ಭಾವಿಸುತ್ತೇನೆ' ಎಂದು ಸಿಂಧು ಹೇಳಿದರು.

'ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದು ಬಹಳ ಮುಖ್ಯ, ಆದರೆ ಯಾವುದೇ ಪಂದ್ಯಗಳು ಬಂದರೂ ದೀರ್ಘ ಪಂದ್ಯಗಳಿಗೆ ಸಿದ್ಧರಾಗಿರಬೇಕು ಎಂದು ನಾನು ಭಾವಿಸುತ್ತೇನೆ' ಎಂದು ಪಿ.ವಿ. ಸಿಂಧು ಹೇಳಿದರು.

ಭಾರತದಲ್ಲಿ ಕ್ಯಾನ್ಸರ್‌ಗೆ ತುತ್ತಾಗುವುದರಲ್ಲಿ ಮಹಿಳೆಯರ ಸಂಖ್ಯೆಯೇ ಅತ್ಯಧಿಕ. ಆದರೆ, ಕ್ಯಾನ್ಸರ್‌ನಿಂದ ಸಾವಿಗೀಡಾಗುವವರ ಪ್ರಮಾಣ ನೋಡಿದರೆ, ಅದರಲ್ಲಿ ಪುರುಷರ ಸಂಖ್ಯೆಯೇ ಅಧಿಕ!

ಅಂದರೆ, ಕ್ಯಾನರ್ಸ್‌ಗೆ ಒಳಗಾದವರಲ್ಲಿ ಚಿಕಿತ್ಸೆಗೆ ಸರಿಯಾಗಿ ಸ್ಪಂದಿಸಿ ಗುಣ ಕಾಣುವವರ ಸಂಖ್ಯೆಯಲ್ಲಿ ಮಹಿಳೆಯರೇ ಹೆಚ್ಚಿನವರಾಗಿದ್ದಾರೆ ಎಂಬುದು ಸ್ಪಷ್ಟ. ವಿಶ್ವ ಕ್ಯಾನ್ಸರ್ ಸಂಶೋಧನೆ ನಿಧಿಯ(ಡಬ್ಲ್ಯುಸಿಆರ್‌ಎಫ್) ಪ್ರಕಾರ ಭಾರತದಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾನರ್‌ಗೆ ಒಳಗಾದರೂ, ಕ್ಯಾನ್ಸರ್‌ನಿಂದ ಅಸುನೀಗುವವರ ಸಂಖ್ಯೆ ಪುರುಷರದ್ದೇ ಅಧಿಕ. 2022ನೇ ವರ್ಷದ ಅಂಕಿ ಅಂಶ ಪ್ರಕಾರ ಭಾರತದಲ್ಲಿನ ಪ್ರತಿ 1 ಲಕ್ಷ ಜನರಲ್ಲಿ ಸರಾಸರಿ 197 ಮಂದಿಯಲ್ಲಿ ಕ್ಯಾನ್ಸರ್ ಕಾಣಿಸಿಕೊಂಡಿದೆ. ಆದರೆ, ಕ್ಯಾನ್ಸರ್‌ನಿಂದ ಆ ವರ್ಷ ಮೃತಪಟ್ಟವರಲ್ಲಿ ಪುರುಷರ ಸಂಖ್ಯೆ 212 ಆಗಿದ್ದರೆ, ಮಹಿಳೆಯರ ಸಂಖ್ಯೆ 186ರಷ್ಟು ಇದೆ. ಅಂದರೆ, ಕ್ಯಾನ್ಸರ್‌ನಿಂದ ಸಾವಿಗೀಡಾಗುವುದರಲ್ಲಿ ಮಹಿಳೆಯರಿಗಿಂತ ಪುರುಷರೇ ಅಧಿಕ ಎಂಬುದು ದೃಢವಾಯಿತು. ಆದರೆ, ಅಮೆರಿಕ ದೇಶದಲ್ಲಿ ಕ್ಯಾನ್ಸರ್‌ನಿಂದ ಸಾವಿಗೀಡಾಗುವವರ ಪ್ರಮಾಣ ಪುರುಷ ಮತ್ತು ಮಹಿಳೆ ವಿಚಾರದಲ್ಲಿ ಬಹುತೇಕ ಸಮನಾಗಿದೆ ಎಂಬುದು ಗಮನಾರ್ಹ. ಈ ಅಂಶವನ್ನು 'ಅಮೆರಿಕ ಕ್ಯಾನ್ಸರ್ ಸೊಸೈಟಿ' ದೃಢಪಡಿಸುತ್ತದೆ.






### 2022ರಲ್ಲಿ ವಿಶ್ವಾದ್ಯಂತ ಎರಡು ಕೋಟಿ ಜನಕ್ಕೆ ಕ್ಯಾನ್ಸರ್

2022ನೇ ಇಸವಿಯಲ್ಲಿ ವಿಶ್ವದಾದ್ಯಂತದ 2 ಕೋಟಿ ಜನರಲ್ಲಿ ಕ್ಯಾನ್ಸರ್ ಕಾಣಸಿಕೊಂಡಿತು. ಅವರಲ್ಲಿ 1.03 ಕೋಟಿ ಪುರುಷರಾಗಿದ್ದರೆ, 97 ಲಕ್ಷ ಮಹಿಳೆಯರಾಗಿದ್ದರು.

ಆದರೆ, ಭಾರತದ ವಿಚಾರಕ್ಕೆ ಬಂದರೆ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಇಲ್ಲಿ ಮಹಿಳೆಯರಿಗೇ ಹೆಚ್ಚು ಕ್ಯಾನ್ಸರ್ ಬಾಧೆ. ಕ್ಯಾನ್ಸರ್ ರೋಗಕ್ಕೆ ಒಳಗಾಗುವ ಪುರುಷರ ಸಂಖ್ಯೆ ಮಹಿಳೆಯರಿಗಿಂತ ಕಡಿಮೆ. ಭಾರತದಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗುವುದೇಕೆ? ಈ ಪ್ರಶ್ನೆಗೆ ಹಲವು ಕಾರಣಗಳನ್ನು ಅಧ್ಯಯನ ವರದಿ ಉಲ್ಲೇಖಿಸುತ್ತದೆ. ಕ್ಯಾನ್ಸರ್ ರೋಗಬಾಧೆಯಲ್ಲಿಯೂ ಹಲವು ಬಗೆಗಳಿವೆ. ಭಾರತದ ಮಹಿಳೆಯರನ್ನು ಹೆಚ್ಚಾಗಿ ಕಾಡುವುದು ಸ್ತನ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ಅಂಡಾಶಯ ಕ್ಯಾನ್ಸರ್ ಎಂದು ಅಧ್ಯಯನ ವರದಿಯಲ್ಲಿ ಗುರುತಿಸಲಾಗಿದೆ. ಅದರಲ್ಲೂ ಭಾರತದ ಮಹಿಳೆಯರನು ಹೆಚ್ಚು ಕಾಡುವುದು ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್‌ಗಳೇ ಆಗಿವೆ. ಕ್ಯಾನ್ಸರ್ ರೋಗಗಳಲ್ಲಿ ಶೇ.40ರಷ್ಟು ಮಹಿಳೆಯರನ್ನು ಪೀಡಿಸುವುದು ಇವೆರೆಡೇ ಕ್ಯಾನ್ಸರ್‌ಗಳಾಗಿವೆ. ಅದಕ್ಕೆ ವಂಶವಾಹಿ ಸಮಸ್ಯೆ, ಇನ್‌ಫೆಕ್ಷನ್ ಮತ್ತಿತರ ಅಂಶಗಳೇ ಕಾರಣವಾಗಿವೆ. ಗರ್ಭಕಂಠದ ಕ್ಯಾನ್ಸರ್ ಬರುವುದಕ್ಕೆ ಇನ್‌ಫೆಕ್ಷನ್ ಕಾರಣ. ಅದರಲ್ಲೂ 'ಹ್ಯೂಮನ್ ಪ್ಯಾಪಿಲೋಮಾ ವೈರಸ್'(ಎಚ್‌ಪಿವಿ) ಎಂಬ ಸೋಂಕು ಮಹಿಳೆಯರಲ್ಲಿನ ಗರ್ಭಕಂಠ ಕ್ಯಾನ್ಸರ್‌ಗೆ ಹೆಚ್ಚು ಕಾರಣವಾಗುತ್ತಿದೆ ಎಂಬುದು ವ್ಯಾಪಕ ಅಧ್ಯಯನದಿಂದ ತಿಳಿದುಬರುತ್ತದೆ. ಸ್ತನ ಕ್ಯಾನ್ಸರ್ ಮತ್ತು ಅಂಡಾಶಯ ಕ್ಯಾನ್ಸರ್‌ಗೆ ಹಾರ್ಮೋನ್ ಸಮಸ್ಯೆ ಕಾರಣವಾಗುತ್ತದೆ. ಹೀಗೆ ಹಾರ್ಮೋನ್ ಸಮಸ್ಯೆ ಕಾಣಿಸಿಕೊಳ್ಳುವುದಕ್ಕೆ ಕಾರಣವೇನೆಂದರೆ, ಜೀವನಶೈಲಿ ಯಲ್ಲಿನ ಬದಲಾವಣೆ ಎಂದು ಅಧ್ಯಯನ ವರದಿ ಬೆಟ್ಟು ಮಾಡುತ್ತದೆ. ಅದಲ್ಲದೇ, ವಿಳಂಬ ಗರ್ಭಧಾರಣೆ, ಶಿಶುವಿಗೆ ಹಾಲೂಡಿಸದೇ ಇರುವುದು, ದಢೂತಿ ದೇಹ, ಚಟುವಟಿಕೆ ರಹಿತವಾಗಿರುವುದು ಕೂಡಾ ಮಹಿಳೆಯರಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುವುದಕ್ಕೆ ಕಾರಣವಾಗುತ್ತವೆ ಎನ್ನಲಾಗಿದೆ.

### ಪುರುಷರ ಸಮಸ್ಯೆ: ವಿಭಿನ್ನ ಕಾರಣಗಳು

ಭಾರತದ ಪುರುಷರನ್ನು ಹೆಚ್ಚಾಗಿ ಕಾಡುವ ಕ್ಯಾನ್ಸರ್ ಸಮಸ್ಯೆ ಯಾವುದೆಂದರೆ, ಬಾಯಿ ಕ್ಯಾನ್ಸರ್, ಗಂಟಲು ಕ್ಯಾನ್ಸರ್, ಶ್ವಾಸಕೋಶ ಕ್ಯಾನ್ಸರ್, ಲಿವರ್ ಕ್ಯಾನ್ಸರ್, ಕರಳು ಕ್ಯಾನ್ಸರ್, ಪ್ರೊಸ್ಟೇಟ್ ಕ್ಯಾನ್ಸರ್. ಬಾಯಿಯ ಕ್ಯಾನ್ಸರ್ ಬರುವುದಕ್ಕೆ ಮುಖ್ಯವಾಗಿ ತಂಬಾಕು ಸೇವನೆ ಕಾರಣವಾಗುತ್ತದೆ. ಪುರುಷರಲ್ಲಿ ಕಾಣಿಸಿಕೊಳ್ಳುವ ಬಾಯಿ ಮತ್ತು ಶ್ವಾಸಕೋಶ ಕ್ಯಾನ್ಸರ್ ರೋಗದಲ್ಲಿ ಶೇ.40ರಷ್ಟು ಸಮಸ್ಯೆ ತಂಬಾಕು ಸೇವನೆ ಮತ್ತು ಧೂಮಪಾನದಿಂದಲೇ ಬರುತ್ತದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಗಮನಾರ್ಹ ಸಂಗತಿ ಏನೆಂದರೆ, ತಂಬಾಕು ಜಗಿಯುವುದು ಮತ್ತು ಬೀಡಿ- ಸಿಗರೇಟ್-ಚುಟ್ಟಾ ಸೇದುವುದನ್ನು ತ್ಯಜಿಸಿದರೆ ಬಾಯಿ ಮತ್ತು ಶ್ವಾಸಕೋಶದ ಕ್ಯಾನ್ಸರ್ ಬರುವುದನ್ನು ತಪ್ಪಿಸಬಹು ದಾಗಿದೆ ಎಂಬುದು ವೈದ್ಯಲೋಕದ ಮುಖ್ಯ ಸಲಹೆಯಾ ಗಿದೆ. ಮದ್ಯ ಸೇವನೆಯೂ ಪುರುಷರಲ್ಲಿನ ಕರಳು ಮತ್ತು ಜಠರದಲ್ಲಿನ ಕ್ಯಾನ್ಸರ್‌ಗೆ ಕಾರಣವಾಗುತ್ತದೆ ಎನ್ನಲಾಗಿದೆ.



### ಪ್ರಾಸ್ಟೇಟ್ ಸಮಸ್ಯೆ

ಪ್ರಾಸ್ಟೇಟ್ ಗ್ರಂಥಿ. ಇದು ಪುರುಷರಲ್ಲಿ ಮೂತ್ರಕೋಶದ ಕೆಳಭಾಗದಲ್ಲಿರುವ ಒಂದು ಸಣ್ಣ ಅಂಗವಾಗಿದೆ. ಇದು ಮೂತ್ರನಾಳದ ಸುತ್ತ ಇದ್ದು, ವೀರ್ಯಾಣುವಿಗೆ ಅಗತ್ಯ ಪೋಷಕಾಂಶಗಳನ್ನು ಒದಗಿಸುವ ಕ್ಷಾರೀಯ ದ್ರವವನ್ನು ಉತ್ಪಾದಿಸುತ್ತದೆ. ಈ ದ್ರವವು ವೀರ್ಯಾಣುಗಳನ್ನು ಪೋಷಿಸುತ್ತದೆ ಮತ್ತು ವೀರ್ಯ ಸ್ಖಲನಗೊಳ್ಳಲು ನೆರವಾಗುತ್ತದೆ. ಪ್ರಾಸ್ಟೇಟ್ ಗ್ರಂಥಿಯು ಮೂತ್ರನಾಳದ ಸುತ್ತಲೂ ಇರುವುದರಿಂದ ವೀರ್ಯ ಉತ್ಪಾದನೆ ಸಮಯದಲ್ಲಿ ಮೂತ್ರನಾಳವನ್ನು ರಕ್ಷಿಸುತ್ತದೆ. ಪ್ರಾಸ್ಟೇಟ್ ಗ್ರಂಥಿ ಹಿಗ್ಗುವಿಕೆ ವಯಸ್ಸಾಗುತ್ತಿರುವ ಪುರುಷರಲ್ಲಿನ ಸಾಮಾನ್ಯ ಸಮಸ್ಯೆಯಾಗಿದೆ. ಹೀಗೆ ಪ್ರಾಸ್ಟೇಟ್ ಗ್ರಂಥಿ ಹಿಗ್ಗುವುದರಿಂದ ಮೂತ್ರನಾಳದ ಮೇಲೆ ಒತ್ತಡ ಉಂಟಾಗಿ ಮೂತ್ರ ವಿಸರ್ಜನೆಯಲ್ಲಿ ತೊಂದರೆಯಾಗುತ್ತದೆ. ಪ್ರಾಸ್ಟೇಟ್ ಗ್ರಂಥಿಯಲ್ಲಿ ಉಂಟಾಗುವ ಕ್ಯಾನ್ಸರ್ ಅನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದರೆ ಪೂರ್ಣ ಗುಣಪಡಿಸಬಹುದಾಗಿದೆ ಎಂದು ವೈದ್ಯಕೀಯ ಮೂಲಗಳು ಹೇಳುತ್ತವೆ.

### ಸಾವಿನಲ್ಲಿ ಪುರುಷರೇ ಅಧಿಕ

ಪುರುಷರೇ ಹೆಚ್ಚು ಕ್ಯಾನ್ಸರ್ ರೋಗದಿಂದ ಸಾವಿಗೀಡಾಗುತ್ತಿದ್ದಾರೆ. ಭಾರತದಲ್ಲಿ ಕ್ಯಾನ್ಸರ್‌ನಿಂದ ಸಾವಿಗೀಡಾಗುವವರಲ್ಲಿ ಮಹಿಳೆಯರಿಗಿಂತ ಪುರುಷರೇ ಅಧಿಕ ಏಕೆ? ಎಂಬ ಪ್ರಶ್ನೆಗೆ ಪುರುಷರನ್ನು ಕಾಡುವ ಕ್ಯಾನ್ಸರ್ ವಿಧಗಳೇ ಉತ್ತರವಾಗಿವೆ. ಪುರುಷರನ್ನು ಕಾಡುವ ಶ್ವಾಸಕೋಶ ಕ್ಯಾನ್ಸರ್ ಮತ್ತು ಬಾಯಿಯ ಕ್ಯಾನ್ಸರ್ ಬಹಳ ಆಕ್ರಮಣಕಾರಿ ವಿಧಾನದವಾಗಿವೆ. ಹಾಗಾಗಿಯೇ ಅವು ಚಿಕಿತ್ಸೆಗೆ ಅಷ್ಟು ಸುಲಭಕ್ಕೆ ಬಗ್ಗುವುದಿಲ್ಲ. ಇದರಿಂದಾಗಿಯೇ ಕ್ಯಾನ್ಸರ್‌ಗೆ ಭಾರತದಲ್ಲಿ ಬಲಿಯಾಗುವವರಲ್ಲಿ ಮಹಿಳೆಯರಿಗಿಂತ ಪುರುಷರೇ ಅಧಿಕ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

### ವೈದ್ಯರಿಂದ ತಪಾಸಣೆ: ಮಹಿಳೆಯರೇ ಅಧಿಕ

ಭಾರತದ ಪುರುಷರಲ್ಲಿ ಕ್ಯಾನ್ಸರ್‌ನಿಂದ ಸಾವಿಗೀಡಾಗುವ ಸಂಖ್ಯೆ ಮಹಿಳೆಯರಿಗಿಂತ ಅಧಿಕ ಏಕೆ ಎಂಬುದಕ್ಕೆ ಮತ್ತೊಂದು ಕಾರಣವೆಂದರೆ, ಕ್ಯಾನರ್ ರೋಗ ಲಕ್ಷಣ ಕಾಣಿಸಿಕೊಂಡರೂ ಪುರುಷರು ವೈದ್ಯರ ಬಳಿಗೆ ಬೇಗ ತಪಾಸಣೆಗೆ ಹೋಗುವುದಿಲ್ಲ ಎನ್ನುವುದೇ ಆಗಿದೆ. ಅಲ್ಲದೇ, ಸಿಗರೇಟ್ ಸೇವನೆಯಿಂದ, ಮದ್ಯಪಾನದಿಂದ ಕ್ಯಾನ್ಸರ್ ಬರುತ್ತದೆ ಎಂಬ ಜಾಗೃತಿಯನ್ನು ಸರಕಾರಗಳು ಮೂಡಿಸುತ್ತಿದ್ದರೂ, ಸಿಗರೇಟ್ ಪ್ಯಾಕ್ ಮೇಲೆ ಕ್ಯಾನ್ಸರ್ ಬಗ್ಗೆ ದೊಡ್ಡದಾಗಿ ಚಿತ್ರ ಪ್ರಕಟಿಸಿ ಎಚ್ಚರಿಸಿದರೂ ಅದರಿಂದ ಪುರುಷರು ಎಚ್ಚರಗೊಳ್ಳುವುದಿಲ್ಲ ಎಂಬುದನ್ನೂ ಅಧ್ಯಯನ ವರದಿ ಎತ್ತಿ ತೋರಿಸಿದೆ. ರೋಗ ಲಕ್ಷಣ ಕಾಣಿಸಿಕೊಳ್ಳುತ್ತಲೇ ವೈದ್ಯರ ಬಳಿಗೆ ಹೋಗಿ ತಪಾಸಣೆಗೆ ಒಳಗಾಗುವುದರಲ್ಲಿ ಮಹಿಳೆಯರ ಸಂಖ್ಯೆಯೇ ಅಧಿಕ. ಹಾಗಾಗಿಯೇ ಮಹಿಳೆಯರಲ್ಲಿ ಕ್ಯಾನ್ಸರ್ ರೋಗವಿದ್ದರೆ ಆರಂಭಿಕ ಹಂತದಲ್ಲೇ ಕಂಡುಬರುತ್ತದೆ. ಆಗ ಚಿಕಿತ್ಸೆಯೂ ಸುಲಭವಾಗುತ್ತದೆ. ಇದರಿಂದಾಗಿಯೇ ಕ್ಯಾನ್ಸರ್‌ನಿಂದ ಭಾರತದಲ್ಲಿ ಮಹಿಳೆಯರ ಸಾವಿನ ಸಂಖ್ಯೆ ಪುರುಷರಿಗಿಂಥ ಕಡಿಮೆ ಇದೆ ಎಂಬುದು ಅಧ್ಯಯನ ಕಂಡುಕೊಂಡ ಸಂಗತಿಯಾಗಿದೆ.

### ಜಾಗೃತಿ ಕಾರ್ಯಕ್ರಮ

ಭಾರತದಲ್ಲಿ ಕ್ಯಾನ್ಸರ್ ರೋಗಿಗಳಿಗೆ ಸಂಬಂಧಿಸಿ ಜಾಗೃತಿ ಕಾರ್ಯಕ್ರಮಗಳು ತುಸು ಕಡಿಮೆಯೇ ಎಂಬುದು ಉಲ್ಲೇಖಾರ್ಹ ಸಂಗತಿಯಾಗಿದೆ.

ಕೆಲವೊಮ್ಮೆ ಜಾಗೃತಿ ಕಾರ್ಯಕ್ರಮಗಳು ಇದ್ದರೂ ಅವು ಅಷ್ಟೊಂದು ಪರಿಣಾಮಕಾರಿಯಾಗಿ ಇರುವುದಿಲ್ಲ. ಅಲ್ಲದೇ, ಜನರ ಗಮನ ಸೆಳೆಯುವುದರಲ್ಲೂ ಅವು ಹಿಂದೆ ಉಳಿಯುತ್ತಿವೆ ಎಂಬ ಆರೋಪವೂ ಇದೆ.ಇದ್ದುದರಲ್ಲಿಯೇ ಜಾಗೃತಿ ಕಾರ್ಯಕ್ರಮಗಳು ಮಹಿಳೆಯರನ್ನು ಹೆಚ್ಚು ಗಮನ ಸೆಳೆಯುತ್ತಿವೆ, ಅವರನ್ನು ಹೆಚ್ಚು ಹೆಚ್ಚಾಗಿ ತಲುಪುತ್ತಿವೆ. ಅದೇ ಕಾರಣವಾಗಿ ಮಹಿಳೆಯರಲ್ಲಿನ ಕ್ಯಾನ್ಸರ್ ಸಮಸ್ಯೆ ಆರಂಭಿಕ ಹಂತದಲ್ಲಿಯೇ ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತಿದೆ. ಇದೇ ಕಾರಣವಾಗಿ ಮಹಿಳೆಯರಲ್ಲಿ ಕ್ಯಾನ್ಸರ್ ಚಿಕಿತ್ಸೆ ಪರಿಣಾಮಕಾರಿ ಯಾಗುತ್ತಿದೆ. ಹಾಗಾಗಿಯೇ ಕ್ಯಾನ್ಸರ್‌ನಿಂದ ಜೀವ ಕಳೆದುಕೊಳ್ಳುವ ಮಹಿಳೆಯರ ಸಂಖ್ಯೆ ಪುರುಷರಿಗಿಂಥ ಕಡಿಮೆ ಇದೆ ಎನ್ನಲಾಗುತ್ತಿದೆ. ಪುರುಷರಲ್ಲಿನ ನಿರ್ಲಕ್ಷ್ಯ ಮನೋಭಾವವೂ ಕ್ಯಾನ್ಸರ್ ರೋಗ ಲಕ್ಷಣವನ್ನು ಆರಂಭಿಕ ಹಂತದಲ್ಲಿ ಕಂಡುಕೊಳ್ಳುವುದಕ್ಕೆ ಅಡ್ಡಿಯಾಗುತ್ತಿದೆ. ಅಲ್ಲದೇ, ಪುರುಷರ ಜೀವನಶೈಲಿಯೂ ಕ್ಯಾನ್ಸರ್ ಬರುವುದಕ್ಕೆ ಕಾರಣವಾಗುತ್ತದೆ. ಅದರಲ್ಲೂ ಧೂಮಪಾನ, ಮದ್ಯಪಾನವು ಪುರುಷರಲ್ಲಿನ ಶ್ವಾಸಕೋಶ ಮತ್ತು ಕರುಳು ಅಥವಾ ಜಠರದಲ್ಲಿನ ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ.



### ಮಿಜೋರಾಂ ಎಂಬ ಸಾವಿನ ಗೂಡು!

ಭಾರತದ ಈಶಾನ್ಯ ಭಾಗದಲ್ಲಿನ ಪುಟ್ಟ ರಾಜ್ಯ, ಪರಿಸರ, ಪರ್ವತಗಳಿಂದ ಕೂಡಿದ ಪುಟ್ಟ ನಾಡು ಕ್ಯಾನ್ಸರ್ ರೋಗ ಮತ್ತು ಅದರಿಂದಾಗುವ ಸಾವುಗಳ ಸಂಖ್ಯೆ ಕಾರಣಕ್ಕಾಗಿಯೂ ಈಗ ಸುದ್ದಿಗೆ ಗ್ರಾಸವಾಗಿದೆ. ದೇಶದಲ್ಲಿನ ಕ್ಯಾನ್ಸರ್ ರೋಗಿಗಳ ಸಂಖ್ಯೆ, ಕ್ಯಾನ್ಸರ್‌ನಿಂದ ಸಾವಿಗೀಡಾಗುವವರ ರಾಷ್ಟ್ರೀಯ ಅಂಕಿ ಅಂಶಗಳಲ್ಲಿ ಮಿಜೋರಾಂನ ಪಾಲು ಬಹಳಷ್ಟು ದೊಡ್ಡದಾಗಿದೆ ಎಂಬುದರತ್ತ ಅಧ್ಯಯನ ವರದಿ ಬೊಟ್ಟು ಮಾಡುತ್ತಿದೆ. ಅದರಲ್ಲೂ ಮೀಜೋರಾಂ ರಾಜ್ಯದ ಐಜ್ವಾಲ್ ಜಿಲ್ಲೆಯಲ್ಲೇ ಕ್ಯಾನ್ಸರ್ ರೋಗಿಗಳ ಸಂಖ್ಯೆ ರಾಷ್ಟ್ರದ ಸರಾಸರಿಗಿಂತಲೂ ಅತ್ಯಧಿಕ. ಅದಕ್ಕೆ ಕಾರಣ ತಂಬಾಕಿನ ಮಿತಿಮೀರಿದ ಬಳಕೆ ಎಂದು ಅಂಕಿ ಅಂಶಗಳು ಎತ್ತಿ ತೋರುತ್ತಿವೆ.

@vishwavaninews
# ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 19-09-2025 ಶುಕ್ರವಾರ

## ಚಿತ್ತವಿಹಾರ

# ದಿನಕ್ಕೊಂದು ಪುಟ್ಟಕಥೆ...

● ಅರವಿಂದ ಜಿ. ಜೋಷಿ, ಮೈಸೂರು

''ಹಿರಿಯರೇ ನಮ್ಮ ನಿಜವಾದ ಆಸ್ತಿ, ಅವರನ್ನು ಗೌರವಯುತವಾಗಿ ಕಾಣುವುದು ನಮ್ಮೆಲ್ಲರ ಆದ್ಯ ಕರ್ತವ್ಯ, ಅವರ ಆಶೀರ್ವಾದವೇ ನಮಗೆ ಶ್ರೀರಕ್ಷೆ'' ಎಂದು ಕಿಕ್ಕಿರಿದ ಜನರೆದುರು ಪುಂಖಾನು ಪುಂಖವಾಗಿ ಕೊರೆಯುತ್ತಿದ್ದವನ ಬಳಿಗೆ ಮೊಬೈಲ್‌ನೊಂದಿಗೆ ಬಂದ ವ್ಯಕ್ತಿಯು, ''ಸರ್... ವೃದ್ಧಾಶ್ರಮದಿಂದ ಮ್ಯಾನೇಜರ್‌ರವರ ಫೋನ್ ಬಂದಿತ್ತು. ಈಗ ಸ್ವಲ್ಪ ಹೊತ್ತಿಗೆ ಮುಂಚೆ ನಿಮ್ಮ ತಾಯಿ...'' ಎಂದು ಹೇಳುತ್ತಿದ್ದಂತೆ, ಮುಂದಿನ ಕಾರ್ಯಕ್ರಮಗಳೆಲ್ಲ ಸ್ಥಗಿತಗೊಂಡವು.

★★★

ಅದೇಕೋ ತುಂಬಾ ಕೋಪದಲ್ಲಿ ಇದ್ದ ಆತನಿಗೆ ಅಮ್ಮನಿಂದ ಫೋನ್ ಕಾಲ್ ಬಂದಾಗ ಕಟ್ ಮಾಡಿದ್ದ. ಮರುನಿಮಿಷ ಏನನಿಸಿತೋ ಏನೋ ಮತ್ತೆ ಆತನೇ ಅಮ್ಮನಿಗೆ ಕಾಲ್ ಮಾಡಿದ. ಆಗ ಆಕೆ ನಿಧಾನವಾಗಿ ''ಮಗೂ.. ನನ್ನ ಕೈ ತಪ್ಪಿನಿಂದ ಕಾಲ್ ಕಟ್ ಆಯ್ತು, ಏನೂ ತಿಳಿದುಕೊಳ್ಳ ಬೇಡಾ..'' ಎಂದಾಗ, ಆತನಿಗೆ 'ಅಮ್ಮಾ ಅಂದ್ರೆ ಹೀಗೇ ಅಲ್ವಾ..?' ಎಂದೆನಿಸದೇ ಇರಲಿಲ್ಲ...

★★★

ಮದುವೆಯ ಸಕಲ ಸಿದ್ಧತೆ ಮಾಡುಕೊಂಡು, ಬಂಧು-ಬಳಗದವರೊಂದಿಗೆ ಕಲ್ಯಾಣ ಮಂಟಪಕ್ಕೆ ಹೊರಡಲು ಮುಂದಾದಾಗ, ವರನ ಕಡೆಯವರಿಂದ ಹೊಸ (ದುಬಾರಿ) ಡಿಮಾಂಡ್ ಬಂದಿದ್ದೇ ತಡ ವಧುವು, ''ನನಗೆ ಈ ಮದುವೆ ಬೇಡವೇ ಬೇಡ'' ಎಂದು ಹಠ ತೆಗೆದಳು. ''ಯಾಕೆ?'' ಎಂದು ಕೇಳಿದ್ದಕ್ಕೆ, ''ಮದುವೆಗೆ ಮುಂಚೆಯೇ ಹೀಗಾದರೆ, ನಂತರ ಇನ್ನೇನೋ...'' ಎಂದು ಉತ್ತರಿಸಿದಾಗ ಎಲ್ಲರೂ ಅವಳ ದಿಟ್ಟತನವನ್ನು ಕೊಂಡಾಡಿದರು.

★★★

ಮೋಸದಿಂದಲೇ ವ್ಯಾಪಾರ ಮಾಡಿಕೊಂಡು, ಅಪಾರ ಪ್ರಮಾಣದ ಧನ-ಕನಕ ಗಳಿಸಿ ಬೀಗುತ್ತಿದ್ದ ವರ್ತಕನು, ಮುಂದೊಂದು ದಿನ ತನ್ನ ಸ್ವಂತ ಮಗನಿಂದಲೇ ಮೋಸ ಹೋಗಿ ನೆಲಕಚ್ಚಿದ.

★★★

ಆರಕ್ಕೇರದ ಮೂರಕ್ಕಿಳಿಯದ ಆತನಿಗೆ ಅಚಾನಕ್ಕಾಗಿ ಭಾಗ್ಯದ ಬಾಗಿಲು ತೆರೆದು, ಒಂದಿಷ್ಟು ಸಂಪತ್ತು ಕೈಸೇರಿತ್ತು. ಅದನ್ನು ಆತ ಅವರಿವರೆಂದು ನೋಡದೆ, ನಿರ್ಗತಿಕರಿಗೆ ನಿರಂತರ ದಾನಮಾಡಿ, ಬರಿಗೈ ದಾಸನಾಗಿ ಬಡವನಾದರೂ, ಆತನಿಗೆ ಬಡತನ ಬಾಧಿಸಲೇ ಇಲ್ಲ.

★★★

ಸಾಲು ಸಾಲು ಎದುರಾದ ಸೋಲುಗಳಿಂದ ಎದೆಗುಂದದೇ, ಆತ ಆ ಸೋಲುಗಳನ್ನೇ ಮರುಯತ್ನದ ಮಜಲುಗಳನ್ನಾಗಿಸಿಕೊಂಡು ಸಾಧನೆಯ ಗುರಿ ತಲುಪಿ ಎಲ್ಲರಿಂದಲೂ ಸೈ ಎನಿಸಿಕೊಂಡಿದ್ದ.

★★★

ಬಣ್ಣದ ಬದುಕಿಗೆ ಮರುಳಾಗಿ, ತನ್ನವರನ್ನೂ ತನ್ನತನವನ್ನೂ ತೊರೆದು ಆ ಒಂದು ಚಕ್ರವ್ಯೂಹದಲ್ಲಿ ಧುಮುಕಿದ್ದಾತ, ಕೆಲವೇ ಕೆಲವು ದಿನಗಳಲ್ಲಿ ಅದು ಬರೀ ಜೊಳ್ಳು ಎಂದು ಅರಿವಾದಾಗ, ಅರೆಬರೆ ಹುಚ್ಚನಾಗಿದ್ದ.

# ಟಿಕೆಟ್ ದರ

● ಮಹಾಂತೇಶ ಮಾಗನೂರ

ಖುಷಿಯ ವಿಚಾರ-
ಸಿನೆಮಾ ಟಿಕೆಟ್ ದರ
ನಿಗದಿಪಡಿಸಿದ್ದಾರೆ
ಇನ್ನೂರು ರುಪಾಯಿಗೆ,
ಸ್ವಲ್ಪ ಗಮನ ಕೊಡಿ
ತುಟ್ಟಿ ಪಾಪ್‌ಕಾರ್ನ್ ಬೀಳಲು
ಜನಸಾಮಾನ್ಯರ ಬಾಯಿಗೆ..!!

**ನಮ್ಮ ಈ ದೇಹ ಮತ್ತು ಅದರೊಳಗೆ ತುಂಬಿರುವ ಯಥೋಚಿತ ಜ್ಞಾನ- ಇವನ್ನು ಬಳಸಿಕೊಂಡು ನಮ್ಮ ನಮ್ಮ ಯೋಗ್ಯತೆಗೆ ಮತ್ತು ದಕ್ಕಿರುವ ಅವಕಾಶಕ್ಕೆ ತಕ್ಕಂತೆ ಬದುಕನ್ನು ನೆಮ್ಮದಿಯಾಗಿ ಅನುಭವಿಸೋಣ. ಇದುವೇ ಸುಗಮಜೀವನದ ಸರಳಸೂತ್ರ.**

● ಹುಳಿಗೆರೆ ಮಲ್ಲಿಕಾರ್ಜುನ್, ಚಿಕ್ಕಮಗಳೂರು

ಸುಮ್ನೇ ಯಾಕ್ರೀ ಟೆನ್ಷನ್ನು? ಆ ಭಗವಂತನಿಗೆ ಗೊತ್ತಿದೆ-ಯಾರಿಗೆ ಯಾವಾಗ ಎಷ್ಟನ್ನು ಕೊಡಬೇಕು, ಯಾಕೆ ಕೊಡಬೇಕು ಅಂತ. ನಾವು ಈ ಭೂಮಿ ಮೇಲೆ ಹುಟ್ಟುತ್ತಿದ್ದಂತೆಯೇ, ಅದನ್ನು ಆತ ಪ್ರತಿಯೊಬ್ಬರಿಗೂ ಕೊಟ್ಟಾಗಿದೆ. ಅದುವೇ- ನಮ್ಮೀ ದೇಹ ಮತ್ತು ಅದರೊಳಗೆ ತುಂಬಿರುವ ಯಥೋಚಿತ ಜ್ಞಾನ. ಅದನ್ನು ಬಳಸಿಕೊಂಡು ನಮ್ಮ

## ಸುಗಮಜೀವನದ ಸರಳಸೂತ್ರ

ನಮ್ಮ ಯೋಗ್ಯತೆಗೆ ಮತ್ತು ದಕ್ಕಿರುವ ಅವಕಾಶಕ್ಕೆ ತಕ್ಕಂತೆ ಬದುಕನ್ನು ನೆಮ್ಮದಿಯಾಗಿ ಅನುಭವಿಸೋಣ. ಇದುವೇ ಸುಗಮಜೀವನದ ಸರಳಸೂತ್ರ.

### ಡೋಂಟ್ ವರಿ, ಲೈಫು ಇಷ್ಟೇನೇ...

# ಬದುಕು ತುಂಬಾ ಸರಳ ಕಣ್ರೀ, ಗೋಜಲು ಮಾಡಿಕೊಳ್ಳಬೇಡಿ!

ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಸಂಬಂಧಿಸಿದ ವಿಚಾರಗೋಷ್ಠಿಯೊಂದು ನಡೆಯುತ್ತಿತ್ತು. ''ಆರೋಗ್ಯವೆಂದರೆ ಆ ರೀತಿ ಇರಬೇಕು, ಈ ರೀತಿ ಬದುಕು ಸಾಗಿಸಬೇಕು. ಆ ಆಹಾರವನ್ನಷ್ಟೇ ಸೇವಿಸಬೇಕು, ಈ ಕುರುಕಲು ತಿಂಡಿಗಳನ್ನು ಬಿಟ್ಟುಬಿಡಬೇಕು. ಧೂಮಪಾನ ಮತ್ತು ಮದ್ಯಪಾನಗಳ ತಂಟೆಗೆ ಹೋಗಬಾರದು. ಅದನ್ನು ಮಾಡಬಾರದು, ಇದನ್ನು ಬಿಡಬಾರದು...'' ಹೀಗೆ ವೃತ್ತಿಪರಿಣತ ವೈದ್ಯರು ಚಿತ್ತಾಕರ್ಷಕ ರೀತಿಯಲ್ಲಿ ಮಾಹಿತಿಯನ್ನು ಆ ಗೋಷ್ಠಿಯಲ್ಲಿ ಹಂಚಿಕೊಳ್ಳುತ್ತಿದ್ದರು.

ಕೆಲ ಹೊತ್ತಿನ ನಂತರ, ''ನಿಮ್ಮಲ್ಲಿ ಯಾರಾದರೂ ಆರೋಗ್ಯದ ಕುರಿತು ಮಾತಾಡಬಹುದು ಮತ್ತು ನಿಮ್ಮ ದೇಹವನ್ನು ಸ್ವಸ್ಥ ಸ್ಥಿತಿಯಲ್ಲಿ ಕಾಪಿಟ್ಟುಕೊಂಡಿರುವ ಬಗ್ಗೆ ಅನುಭವಗಳನ್ನು ಹಂಚಿಕೊಳ್ಳಬಹುದು'' ಎಂದು ವೇದಿಕೆಯಿಂದ ಪ್ರಕಟಿಸಲಾಯಿತು. ಹೀಗಂದಿದ್ದೇ ತಡ, 50ರ ಹರೆಯದ ಆಸುಪಾಸಿನ ವ್ಯಕ್ತಿಯೊಬ್ಬರು ಕೈಯನ್ನು ಮೇಲಕ್ಕೆತ್ತಿ ಸಮ್ಮತಿಯನ್ನು ಸೂಚಿಸಿದರು. ಚುರುಕಿನಿಂದಲೇ ವೇದಿಕೆಯನ್ನು ಹತ್ತಿದರು. ನುಣ್ಣಗೆ ಶೇವ್ ಮಾಡಿರುವ ದುಂಡು ಮುಖ, ಬೇರೆಯವರನ್ನು ಆಕರ್ಷಿಸುವಷ್ಟರ ಮಟ್ಟಿಗೆ ಹೊಳಪನ್ನು ತುಂಬಿಕೊಂಡಿರುವ ಕಣ್ಣುಗಳು, ಎಂದೂ ಮಾಸದ ಮಂದಹಾಸ ಇವುಗಳ ಒಡೆಯರಾಗಿದ್ದರು ಆ ವ್ಯಕ್ತಿ.

ಔಪಚಾರಿಕವಾಗಿ ತಮ್ಮ ಪರಿಚಯವನ್ನು ಮಾಡಿಕೊಂಡ ಅವರು, ''ವೇದಿಕೆಯ ಮೇಲಿರುವ ಎಲ್ಲಾ ಪರಿಣತ ವೈದ್ಯರು 'ಆ ರೀತಿ ಇರಬೇಕು, ಈ ರೀತಿ ಇರಬಾರದು' ಎಂದು ಏನೆಲ್ಲಾ ಹೇಳಿದರು. ಆದರೆ ಯಾರು ಕೂಡ, 'ನಾನು ಈ ರೀತಿಯಲ್ಲಿ ಆರೋಗ್ಯಕರವಾಗಿ ಬಾಳುತ್ತಿರುವೆ, ನೀವು ಕೂಡ ಈ ಮೇಲ್ಪಂಕ್ತಿಯನ್ನು ಅನುಸರಿಸಿದರೆ ನಿಮ್ಮ ಬಾಳು ಬಂಗಾರವಾಗುತ್ತದೆ' ಅಂತ ಹೇಳಲೇ ಇಲ್ಲ. ಹೌದಲ್ಲವಾ? ಅವರಿವರಂತೆ ಬಾಳಿ ಎಂದು ಇನ್ನೊಬ್ಬರಿಗೆ ಸಲಹೆ ಕೊಡುವ ನಾವು, 'ನನ್ನ ರೀತಿಯಲ್ಲಿ ಬಾಳಿ' ಎಂದು ಹೇಳುವುದು ಅಪರೂಪವೇ. ಆದರೆ ನಾನು, ನನ್ನ ಬಗ್ಗೆ ಮಾತ್ರವೇ ಹೇಳುತ್ತೇನೆ. ನನಗೆ ರಕ್ತದೊತ್ತಡ, ಮಧುಮೇಹ, ಹೃದಯದ ಸಮಸ್ಯೆ, ಮಂಡಿ ನೋವು, ಸೊಂಟ ನೋವು, ಕೈಕಾಲು ನೋವು ಯಾವುದೂ ಇಲ್ಲ. ಪ್ರತಿದಿನವೂ ಲಕ್ಷಣವಾಗಿ ಆಟೋ ಓಡಿಸುತ್ತೇನೆ, ಹೊರಗಿನ ತಿಂಡಿಗಳ ತಂಟೆಗೆ ಹೋಗದೆ ಮನೆಯಲ್ಲಿ ಖುಷಿಖುಷಿಯಾಗಿ ಊಟ ಮಾಡುತ್ತೇನೆ. ಹೃದಯಪೂರ್ವಕವಾಗಿ ನಗುತ್ತೇನೆ, ಇನ್ನೊಬ್ಬರನ್ನೂ ನಗಿಸುತ್ತೇನೆ. ಬದುಕನ್ನು ತುಂಬಾ ಸರಳವಾಗಿ ತೆಗೆದುಕೊಂಡಿದ್ದೇನೆ'' ಎಂದು ಹೇಳುತ್ತಾ ಹೋದರು. ಆ ಆಟೋ ಚಾಲಕರ ಮಾತುಗಳನ್ನು ಕೇಳಿದವರಿಗೆ 'ವಾವ್! ತುಂಬಾ ಸ್ವಾರಸ್ಯಕರವಾಗಿದೆ' ಎನಿಸದೇ ಇರಲಿಲ್ಲ.

ಆ ಚಾಲಕರು ಮಾತು ಮುಂದುವರಿಸಿ, ''ನಾನು ನವೋದಯ ಶಿಕ್ಷಣ ಸಂಸ್ಥೆಯಲ್ಲಿ ಪಿಯುಸಿವರೆಗೆ ಓದಿದೆ. ನನ್ನ ಸ್ನೇಹಿತರೆಲ್ಲ ಈಗ ಒಳ್ಳೊಳ್ಳೆಯ ಉದ್ಯೋಗಗಳಲ್ಲಿದ್ದಾರೆ, ಸಾಕಷ್ಟು ಮಂದಿ ಸರಕಾರಿ ಅಧಿಕಾರಿಗಳೂ ಆಗಿದ್ದಾರೆ. ಆದರೆ ನನ್ನ ಹಣೆಬರಹ, ಆಟೋ ಡ್ರೈವರ್ ಆಗಿರುವೆ. ಹಾಗಂತ, ನನ್ನ ಸ್ಥಿತಿಗತಿಯ ಕುರಿತಾಗಿ ನಾನು ಎಂದೂ ಬೇಸರ ಮಾಡಿಕೊಂಡಿಲ್ಲ. ಸ್ನೇಹಿತರು ಅಪರೂಪಕ್ಕೆ ಸಿಕ್ಕಾಗ, 'ನಾನು ಹಾಗಿರುವೆ, ಹೀಗಿರುವೆ, ಬಂಗಲೆ ಕಟ್ಟಿರುವೆ, ಮಕ್ಕಳನ್ನು ಮೆಡಿಕಲ್/ಎಂಜಿನಿಯರಿಂಗ್ ಓದಿಸುತ್ತಿರುವೆ' ಎಂದೆಲ್ಲಾ ತಮ್ಮನ್ನೇ ಹೊಗಳಿಕೊಳ್ಳುತ್ತಾರೆ. ಅದಕ್ಕೆ ನಾನು ನಗುತ್ತಾ, 'ಹೌದಾ... ನಿಮ್ಮ ಆರೋಗ್ಯ ಹೇಗಿದೆ?' ಎಂದು ಕೇಳಿದರೆ ಇಂಥ ಸ್ನೇಹಿತರಲ್ಲಿ ಹೆಚ್ಚಿನವರು, 'ಬಿ.ಪಿ. ಸ್ವಲ್ಪ ಏರುಪೇರು ಆಗುತ್ತಿರುತ್ತದೆ. ಹೌಸಿಂಗ್ ಲೋನ್ ಟೆನ್ಷನ್ ಇದ್ದದ್ದೇ. ಕೊಂಚ ಬೆನ್ನುನೋವು ಆಗಾಗ ಕಾಡುತ್ತಿರುತ್ತದೆ. ಇವೆಲ್ಲಾ ಕಾಮನ್ ಅಲ್ವಾ?' ಎನ್ನುತ್ತಾ ಹುಸಿನಗು ನಗುತ್ತಾರೆ'' ಎಂದು ಹೇಳಿ ಅರೆಕ್ಷಣ ನಿಲ್ಲಿಸಿದರು. ಸಭಾಂಗಣದ ತುಂಬಾ ಮೌನವೇ ಮನೆಮಾಡಿತ್ತು. ವೇದಿಕೆಯ ಮೇಲೆ ಆಸೀನರಾಗಿದ್ದ ವೈದ್ಯ ಸಮೂಹದವರೂ ಈ ಆಟೋ ಚಾಲಕರ ಮಾತನ್ನು ತದೇಕಚಿತ್ತರಾಗಿ ಕೇಳುತ್ತಿದ್ದರು.

### ಲೈಫ್ ಜಿಂಗಾಲಾಲಾ..!

**ಯಾರದೋ ಸೂಟು-ಬೂಟು, ಮತ್ತಿನ್ನಾರದೋ ರೇಷ್ಮೆ ಸೀರೆ-ವಜ್ರದ ಹಾರ ನೋಡಿ, 'ಅದು ನನಗೂ ಬೇಕು' ಅಂತ ವರಾತ ಹಚ್ಚಿಕೊಂಡು, ಸಾಲ ಮಾಡಿ ಖರೀದಿಸುವುದಿದೆ ನೋಡಿ- ಅದೇ ಅತೃಪ್ತಿ. ಮಕ್ಕಳ ಭವಿಷ್ಯದ ಬಗ್ಗೆ ಅತಿರೇಕವಾಗಿ ಯೋಚಿಸಿ, ಬೇರೊಬ್ಬರ ಮಕ್ಕಳಿಗೆ ಅವರನ್ನೂ ಹೋಲಿಸಿ, ಅವರ ಸಮಕ್ಕೆ ಇಲ್ಲದಿದ್ದಾಗ ನೆಮ್ಮದಿಯನ್ನೂ ಕಳೆದುಕೊಳ್ಳುವುದಕ್ಕಿಂತ, ಬದುಕನ್ನು ಅದು ಬಂದಂತೆ ಸ್ವೀಕರಿಸಿದರೆ, 'ಲೈಫ್ ಜಿಂಗಾಲಾಲಾ..'!**

ಮಾತು ಮುಂದುವರಿಸಿದ ಚಾಲಕರು, ''ಸ್ನೇಹಿತರ ಮಾತಿಗೆ ಪ್ರತಿಯಾಗಿ ಉತ್ತರಿಸುವ ನಾನು, ನಮ್ಮದೊಂದು ಹಳೆಯದಾದ ಸಣ್ಣ ಮನೆಯಿದೆ. ಆರೋಗ್ಯದ ವಿಷಯದಲ್ಲಿ 'ಫಿಟ್ ಆ್ಯಂಡ್ ಫೈನ್' ಆಗಿರುವೆ. ಮಕ್ಕಳು ಸರಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲೇ ಖುಷಿಯಿಂದ ಓದುತ್ತಿದ್ದಾರೆ. ಬ್ಯಾಂಕುಗಳಲ್ಲಿ ಗೃಹಸಾಲವಾಗಲೀ, ವಾಹನ ಸಾಲವಾಗಲೀ, ವೈಯಕ್ತಿಕ ಸಾಲವಾಗಲೀ ಇಲ್ಲ. ನಿಮ್ಮ ಜೀವನವನ್ನು ಆ ದೇವರು ಹಾಗೆ ಬರೆದಿದ್ದರೆ, ನನ್ನದನ್ನು ಹೀಗೆ ಬರೆದಿದ್ದಾನೆ. ಅದನ್ನು ಸಂತೋಷದಿಂದಲೇ ಸ್ವೀಕರಿಸಿರುವೆ, ಮನೆ-ಮಂದಿಯೆಲ್ಲಾ ಖುಷಿಯಿಂದ ದಿನವನ್ನು ದೂಡುತ್ತಿದ್ದೇವೆ. ಸರಳ ಜೀವನವನ್ನು ಸುಗಮವಾಗಿ ನಡೆಸಿಕೊಂಡು ಹೋಗುತ್ತಿದ್ದೇವೆ. ಒಟ್ಟಾರೆಯಾಗಿ ಹೇಳುವುದಾದರೆ, ಬದುಕಿನ ಬಗ್ಗೆ ನನಗೆ ತೃಪ್ತಿಯಿದೆ ಅಂತ ಹೇಳುತ್ತೇನೆ'' ಎಂದು ಹೇಳಿ ತಮ್ಮ ಅನುಭವ ಮತ್ತು ಅಭಿಪ್ರಾಯವನ್ನು ಹಂಚಿಕೊಂಡರು. ಸಭೆಯ ತುಂಬಾ ಚಪ್ಪಾಳೆಯ ದನಿ ಅನುರಣಿಸಿತು..

ಆ ಆಟೋ ಚಾಲಕರದ್ದು ಅದೆಂಥ ಅದ್ಭುತವಾದ ಮಾತುಗಳು ಅಲ್ಲವೇ? ಪ್ರತಿಯೊಬ್ಬರ ಜೀವನ ಪಥವೂ ಮೂಲತಃ ಸರಳವೇ, ಸರಾಗವೇ, ಸುಗಮವೇ. ಆದರೆ ನಾವುಗಳೇ ಹೇಗೆ ಹೇಗೋ ಯೋಚಿಸಿ ಅದನ್ನು ಅಡ್ಡಾದಿಡ್ಡಿ ರಸ್ತೆಯನ್ನಾಗಿ ಮಾಡಿಕೊಳ್ಳುತ್ತೇವೆ! ಯಾರ್‍ಯಾರನ್ನೋ ನೋಡಿ ಅವರೊಂದಿಗೆ ನಮ್ಮನ್ನೂ ಹೋಲಿಸಿಕೊಂಡು, ಏನೇನೋ ಯೋಚಿಸಿಕೊಂಡು, ಮತ್ತೊಬ್ಬರಂತೆ ಬಾಳಲು ಹೋಗಿ ನಮ್ಮ ಬದುಕನ್ನು ಸಂಕೀರ್ಣಗೊಳಿಸಿಕೊಂಡು ಒದ್ದಾಡುತ್ತೇವೆ. ಅದರ ಹೊಡೆತಕ್ಕೆ ಸಿಲುಕಿ, ತಲೆನೋವು, ಎದೆನೋವು, ಬಿ.ಪಿ., ಮಧುಮೇಹ, ಆ ನೋವು, ಈ ನೋವು ಅಂತೆಲ್ಲಾ ಆಹ್ವಾನಿಸಿ ವಿಲಗುಟ್ಟುತ್ತೇವೆ. ಕಾರು ನನ್ನ ಕನಸು, ಸೂಪರ್ ಬಂಗಲೆ ನನ್ನ ಮಹತ್ವಾಕಾಂಕ್ಷೆ, ವಾರಾಂತ್ಯದಲ್ಲೊಂದು ಟ್ರಿಪ್ ನನ್ನ ಹೆಬ್ಬಯಕೆ ಅಂತೆಲ್ಲ 'ಚಾರ್ಟ್' ಹಾಕಿಕೊಂಡು, ಅದನ್ನು ಈಡೇರಿಸಲು ಒದ್ದಾಡಿ, ಸಾಲ ಮಾಡಿಕೊಂಡು ಅತೃಪ್ತಿಯ ಹೊಂಡಕ್ಕೆ ಬೀಳುತ್ತೇವೆ. ಇದುವೇ ಸಂಕೀರ್ಣ ಜೀವನ!

ನನ್ನಲ್ಲಿ ಕಾರಿಲ್ಲ, ಬಂಗಲೆಯಿಲ್ಲ, ಐಫೋನ್ ಇಲ್ಲ ಎಂದೆಲ್ಲಾ ಗೊಣಗಾಡಿ ಕೀಳರಿಮೆಯನ್ನು ಅನುಭವಿಸುವುದು ಬೇಡ. ನಮ್ಮಲ್ಲಿ ಇಂಥದೊಂದು ವಸ್ತು ಇಲ್ಲ ಎಂದಾದರೆ, ಅದು ನಮಗೆ ಬೇಡವೇ ಬೇಡ ಅಂದುಕೊಂಡುಬಿಡೋಣ. ಮಾತ್ರವಲ್ಲದೆ, ಯಾರಾದರೂ ಪರಿಚಿತರು ಅಥವಾ ಬಂಧುಗಳು ಸಿಕ್ಕರೆ, 'ಸೈಟ್ ಇದೆಯಾ, ಮನೆ ಇದೆಯಾ, ಕಾರು ಇದೆಯಾ?' ಎಂತ ನಾವೂ ಪ್ರಶ್ನಿಸೋದು ಬೇಡ; ಬದಲಿಗೆ ಖುಷಿಖುಷಿಯಾಗಿ ನಾಲ್ಕು ಒಳ್ಳೆಯ ಮಾತಾಡಿ ಅವರನ್ನು ಬೀಳ್ಕೊಡೋಣ. ತಲೆಬುರುಡೆಯೊಳಗೆ 'ಟೈಟ್' ಆಗಿ ಕೂತಿರುವ ಮುಷ್ಟಿಗಾತ್ರದ ಮಿದುಳನ್ನು, 'ಅತಿಯಾಗಿ ಆಲೋಚಿಸುವ' ಮೂಲಕ ನಾವಾಗೇ 'ಲೂಸ್' ಮಾಡಿ, ನಾವೂ 'ಲೂಸ್'ಗಳಾಗಬೇಕಾ? ಲೈಫು ತುಂಬಾ ಸಿಂಪಲ್ಲು ಕಣ್ರೀ, ಇರೋದ್ರಲ್ಲೇ ಎಂಜಾಯ್ ಮಾಡೋಣ. ಅಷ್ಟೇ!

# ಪ್ರೀತಿಸುವ ಹೃದಯಗಳಿಗಾಗಿ ಒಂದಿಷ್ಟು ಸಿಹಿಮಾತುಗಳು...

● ಮುತ್ತು ಯ. ವಡ್ಡರ, ಬಾಗಲಕೋಟ

'ಪ್ರೀತಿ ಏಕೆ ಭೂಮಿ ಮೇಲಿದೆ?' ಎಂಬ ಪ್ರಶ್ನೆಗೆ ಸಾಹಿತಿಗಳು, ಚಿತ್ರನಿರ್ದೇಶಕರು ತಮ್ಮದೇ ಆದ ಶೈಲಿಯಲ್ಲಿ ಉತ್ತರಿಸಿದ್ದಾರೆ. ಪ್ರೀತಿಸುವ ಹೃದಯಗಳಿಗಾಗಿ ಈ ಪ್ರೀತಿ ಭೂಮಿ ಮೇಲಿದೆ. ಒಂದು ವೇಳೆ ಪ್ರೀತಿಯೇ ಇಲ್ಲದಿದ್ದರೆ, ಈ ಬದುಕಿಗೆ ಅರ್ಥವೇ ಇಲ್ಲದಂತಾಗುತ್ತದೆ.

ಎರಡು ಹೃದಯಗಳ ಮಿಲನವಾದಾಗ ಪ್ರೀತಿಯ ಜ್ಯೋತಿ ಬೆಳಗತೊಡಗುತ್ತದೆಯಾದರೂ, ಅದು ಒಮ್ಮೊಮ್ಮೆ ಅರ್ಧದಲ್ಲಿಯೇ ನಂದಿಹೋಗಿ ದುಃಖವನ್ನು ನೀಡುವುದುಂಟು. ಪ್ರೀತಿಯ ಜ್ಯೋತಿಯ ಹಿಂದಿರುವ ಹೃದಯಗಳು ಪರಸ್ಪರ ಬದ್ಧತೆಯನ್ನು ಹೊಂದಿದ್ದೇ ಆದಲ್ಲಿ, ಅದು ಮದುವೆಯ ಹಂತಕ್ಕೆ ತಿರುಗಿ ಬದುಕೇ ಆನಂದಮಯವಾಗುವುದು.

ಪ್ರೀತಿಗಾಗಿ ಪ್ರಾಣವನ್ನೇ ಕಳೆದುಕೊಂಡವರನ್ನು ನೋಡಿದ್ದೇವೆ, ಅದರ ಬಗ್ಗೆ ಕೇಳಿದ್ದೇವೆ. ಪ್ರಾಣವನ್ನು ಕಳೆದುಕೊಳ್ಳುವ ಹಾಗಿದ್ದರೆ ಪ್ರೀತಿಸುವುದಾದರೂ ಏಕೆ? ಪ್ರೀತಿ ಎಂಬ ಬೀಜವು ಮೊಳೆತು, ಚಿಗುರೊಡೆದು, ಸಸಿಯಾಗಿ, ಗಿಡವಾಗಿ, ಮರವಾಗಿ ನೆರಳು ನೀಡುವ ಮೂಲಕ ಮಾದರಿಯಾಗಬೇಕೇ ವಿನಾ, ಅದೊಂದು ದುರಂತ ಪ್ರೇಮಕಥೆಯಾಗಬಾರದು. ಪ್ರೇಮಿಗಳು ಪರಸ್ಪರರನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾರೆ ಎಂಬುದು ಎಷ್ಟು ಮುಖ್ಯವೋ, ಆ ಪ್ರೀತಿಗೆ ಎಷ್ಟು ಗೌರವವನ್ನು ಕೊಡುತ್ತಾರೆ,

ಅವರಲ್ಲಿ ಆ ಕುರಿತಂತೆ ಅದೆಷ್ಟರ ಮಟ್ಟಿಗೆ ಪ್ರಾಮಾಣಿಕತೆ ಕೆನೆಗಟ್ಟಿದೆ ಎಂಬುದು ಕೂಡ ಅಷ್ಟೇ ಮುಖ್ಯ.

ಹೆಂಡತಿಗಾಗಿ ಬೆಟ್ಟವನ್ನು ಕೊರೆದು ಇಡೀ ಊರಿಗೆ ದಾರಿ ಮಾಡಿಕೊಟ್ಟ ದಶರಥ ಮಾಂಜಿಯ ಪ್ರೇಮಕಥೆಯು ಪ್ರೀತಿಸುವ ಹೃದಯಗಳಿಗೆ ಒಂದು ಸ್ಫೂರ್ತಿಯೇ ಸರಿ. ಅಂಥ ನಿಷ್ಕಲ್ಮಶವಾದ ಪ್ರೀತಿ ಮಾತ್ರ ದಂತಕಥೆಯಾಗಿ ಉಳಿಯಲು ಸಾಧ್ಯ. ಇಂಥವರು ಪರಿಶುದ್ಧ ಮನಸ್ಸಿನಿಂದ, ಪ್ರಾಮಾಣಿಕವಾಗಿ, ಒಬ್ಬರನ್ನೊಬ್ಬರು ಬಿಟ್ಟಿರಲಾರದಷ್ಟು ಪ್ರೀತಿಸುವಂಥವರಾಗಿರುತ್ತಾರೆ. ಪ್ರೀತಿಸುವುದಾದರೆ ಒಬ್ಬರನ್ನು ಪ್ರೀತಿಸಬೇಕು. ನೋವಿರಲಿ, ನಲಿವಿರಲಿ ಒಂದೇ ಪ್ರೀತಿ ಇರಲಿ; ಬಣ್ಣ ಬಣ್ಣದ ಮಾತಿಗೆ ಮರುಳಾಗಿ ತಿಂಗಳಿಗೊಬ್ಬರನ್ನು ಪ್ರೀತಿಸುತ್ತಾ ಹೋದರೆ ಅದು ಪ್ರೀತಿ ಎನಿಸಿಕೊಳ್ಳುವುದಿಲ್ಲ, 'ಚಿತ್ತ-ಚಂಚಲತೆ' ಎಂದು ಕರೆಸಿಕೊಳ್ಳುತ್ತದೆ. ಪ್ರೀತಿಯೆಂಬುದು ಎಲ್ಲ ನೋವನ್ನೂ ಮರೆಸಿಬಿಡುವಂಥ ದಿವ್ಯೌಷಧ. ಆದರೆ, ಹೆತ್ತವರ ಪ್ರೀತಿಯ ಮುಂದೆ ಉಳಿದೆಲ್ಲಾ ಪ್ರೀತಿಗಳು ಅಷ್ಟಕ್ಕಷ್ಟೇ ಎಂಬ ಸಾರ್ವಕಾಲಿಕ ಸತ್ಯವನ್ನು ನಾವು ಮರೆಯಬಾರದು.

ಇತ್ತೀಚಿನ ದಿನಗಳಲ್ಲಿ 'ಪ್ರೀತಿ' ಎಂಬ ಹಣೆಪಟ್ಟಿಯಡಿ ಶುರುವಾದ ಬಾಂಧವ್ಯವು ಅತ್ಯಾಚಾರ, ಕೊಲೆ ಮುಂತಾದ ವಿಲಕ್ಷಣ ರೂಪಗಳನ್ನು ಪಡೆದುಕೊಳ್ಳುತ್ತಿದೆ; ಹಾಗಾಗಿ ಇದನ್ನು ಪ್ರೀತಿ ಎನ್ನಲಾಗುವುದಿಲ್ಲ, ಇದು 'ವಿಕೃತ ವಾಂಛೆ' ಎನಿಸಿಕೊಳ್ಳುತ್ತದೆ ಅಷ್ಟೇ. ಪ್ರೀತಿ ಮಾಡುವುದು ತಪ್ಪಲ್ಲ, ಆದರೆ ಸರಿಯಿಲ್ಲದ ವ್ಯಕ್ತಿಗಳನ್ನು ಪ್ರೀತಿ ಮಾಡುವುದು ತಪ್ಪು. ವ್ಯಕ್ತಿಯೊಬ್ಬರ ಗುಣ-ಅವಗುಣಗಳನ್ನು ಅರಿತುಕೊಂಡು ಪ್ರೀತಿಸುವುದು ವಿವೇಕವೆನಿಸುತ್ತದೆ. ಓದಿ ವಿದ್ಯಾವಂತರಾಗಬೇಕಾದ ಸಮಯದಲ್ಲಿ ಪ್ರೀತಿಯ ಸುಳಿಗೆ ಬಿದ್ದು, ಹೆತ್ತವರಿಗೆ ಮೋಸ ಮಾಡಿ, ಪ್ರೀತಿಸಿದವರೊಂದಿಗೆ ಓಡಿಹೋಗುವುದು ತಪ್ಪು. ನಮ್ಮ ಸ್ವಾಭಿಮಾನ, ಘನತೆ, ಕುಟುಂಬದ ಗೌರವವನ್ನು ಬಿಟ್ಟು ಪ್ರೀತಿಸುವುದು ತಪ್ಪು, ಬದುಕಿನಲ್ಲಿ ನಾವು ಒಂದು ಹಂತಕ್ಕೆ ಬಾರದೆಯೇ ಪ್ರೀತಿಸುವುದು ಕೂಡ ತಪ್ಪೇ.

ಪ್ರೀತಿ ಮಾಡುವ ಹೃದಯದಲ್ಲಿ ಜತೆಗೆ ಧೈರ್ಯದ ತುಡಿತವೂ ಇರಬೇಕು. ಒಂದೊಮ್ಮೆ ಇನ್ನೊಬ್ಬರನ್ನು ಪ್ರೀತಿಸಿ ಅವರ ಸಮ್ಮುಖದಲ್ಲಿ ಅದನ್ನು ವ್ಯಕ್ತಪಡಿಸಿದಾಗ ಅದನ್ನು ಅವರು 'ಒಲ್ಲೆ' ಎಂದರೆ, ಆಗಲೂ ಅವರನ್ನು ದ್ವೇಷಿಸದೆ ಸ್ನೇಹವನ್ನೂ, ಆತ್ಮೀಯ ಭಾವನೆಯನ್ನೂ ಹಾಗೆಯೇ ಉಳಿಸಿಕೊಳ್ಳ ಬೇಕು. ಇಂಥ ಎದೆಗಾರಿಕೆ ಇರುವವರು ಮಾತ್ರ ಸರ್ವಮಾನ್ಯರಾಗುತ್ತಾರೆ. ಪ್ರೀತಿಸಲು ಮತ್ತು ಪ್ರೀತಿಸಲ್ಪಡಲು ಅರ್ಹರಾಗುತ್ತಾರೆ. ಆದರೆ ಈಗಿನ ಪರಿಸ್ಥಿತಿ ಕೊಂಚ ವಿಚಿತ್ರವಾಗಿದೆ. ಪ್ರೀತಿ ಮಾಡಿದವರು ಯಾವುದಾದರೂ ಕಾರಣಕ್ಕೆ ದೂರ ಸರಿಯಬೇಕಾಗಿ ಬಂದಾಗ, ಮೊದಮೊದಲಿಗೆ ಸ್ವಲ್ಪ ನೊಂದುಕೊಂಡು, ಬರುಬರುತ್ತಾ ಅವರ ಮೇಲಿನ ಅಭಿಮಾನವನ್ನೇ ಕರಗಿಸಿ ಕೊಂಡುಬಿಡುವ ವರ್ತನೆಯನ್ನು ಬಹುತೇಕರಲ್ಲಿ ಕಾಣುತ್ತೇವೆ. 'ಯಾಕೆ ಹೀಗೆ?' ಎಂಬ ಪ್ರಶ್ನೆ ಹೊಮ್ಮಿದಾಗ, 'ಇವೆಲ್ಲಾ ಮಾನವಸಹಜ, ಇವೆಲ್ಲಾ ಕಾಲನಿಯಮ' ಎನ್ನುವ ಉತ್ತರದ ಮುಸುಕಿನ ಅಡಿಯಲ್ಲಿ ಸೇರಿಹೋಗುತ್ತೇವೆಯೇ ವಿನಾ, ನೈಜಕಾರಣಗಳನ್ನು ಕಂಡುಕೊಳ್ಳುವ ಚಿತ್ತಸ್ಥಿತಿ ಸಾಕಷ್ಟು ಮಂದಿಯಲ್ಲಿ ಇರುವುದಿಲ್ಲ. ಕೆಲವೊಮ್ಮೆ ಇದು ತನ್ನ ಪಥವನ್ನು ಬದಲಿಸಿಕೊಂಡು, ಪ್ರೀತಿಸಿದ ವ್ಯಕ್ತಿಯು ದೂರವಾದಾಗ ಸೇಡಿನ ಕಿಚ್ಚು ಹೊತ್ತಿಸಿಕೊಂಡು, ಬಲಿಯನ್ನು ಬಯಸುವಂಥ ಬೆಳವಣಿಗೆ ಯಾಗುತ್ತದೆ. ಇಂಥ ಅತಿರೇಕಗಳಿಗೆ ಯಾರೂ ಒಡ್ಡಿಕೊಳ್ಳದಿರಲಿ...

## ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



**ಎಡದಿಂದ ಬಲಕ್ಕೆ**

3. ಯಜ್ಞಕ್ಕೆ ಸಲ್ಲಿಸಿದ ಹವಿಸ್ಸು (3)
5. ಮನುಷ್ಯರ ತಪ್ಪು-ಒಪ್ಪುಗಳನ್ನು ಬರೆದಿಡುವವನು (4)
7. ನಾಶ ಅಥವಾ ಪ್ರಳಯ (3)
9. ಇದು ಕಾಡು (2)
11. ಸ್ವರ್ಗಕ್ಕೆ ಮತ್ತೊಂದು ಹೆಸರು (2)
12. ಮಾನಿನಿಗೆ ಬಂದಿದೆ ಸಂಶಯ (3)
13. ಇದೊಂದು ಜಾತಿಯ ಜಿಂಕೆ (3)
14. ಆರಂಭವು ಎರಡಕ್ಷರದಲ್ಲಿಯೇ ಬಂದಿದೆ (2)
16. ಸರಕಾರಕ್ಕೆ ಕೊಡಬೇಕಾದ ತೆರಿಗೆ (2)
18. ಕೀರ್ತಿ ಅಥವಾ ಗೆಲುವು (2)
20. ಇವನೊಬ್ಬ ಯಕ್ಷಿಣಿಗಾರ (4)
22. ಪಣಕ್ಕಿಟ್ಟ ಐಶ್ವರ್ಯ (3)

**ಮೇಲಿಂದ ಕೆಳಕ್ಕೆ**

1. ಆಪ್ತನಾದವನು ಅಥವಾ ನಂಟ (3)
2. ನಾಲಗೆ ಹೇಳಿದ್ದೇನು? (2)
3. ತುಂಬಾ ಆತ್ಮೀಯ (2)
4. ಎರಡಕ್ಷರದ ಎಳ್ಳು (2)
6. ಪ್ರೀತಿಯನ್ನು ವ್ಯಕ್ತಪಡಿಸಲು ನೀಡುವ ಹೂವು (3)
8. ಅಮಾಯಕವಾಗಿ ಕಂಡಿದೆ ಜೋಡಿ (3)
10. ವಿಳಂಬ ಅಥವಾ ತಡ (4)
11. ದೇಶವೊಂದರ ಪ್ರಜೆ (4)
14. ಜೀವನ ನಡೆಸಲು ಬೇಕಾದ ವರಮಾನ (3)
15. ಸಿದ್ಧತೆ ಮಾಡಿ (3)
17. ಮತ್ತೊಂದು ಸದ್ದಿನೊಂದಿಗೆ ಬಂದಿರುವ ಆನೆ (3)
19. ಬಾಣ (2)
20. ಎಣ್ಣೆಯನ್ನು ತೆಗೆಯುವ ಯಂತ್ರ (2)
21. ಎರಡಕ್ಷರದ ಅವಸ್ಥೆ (2)

**ಸರಿಯುತ್ತರಗಳು**

# ಹುಯಿಲಿನಲ್ಲಿ ಅರಳಿದ ಹೂವು: ಜೋಕೊವಿಕ್

● ಶಿವಯೋಗಿ ಎಂ.ವಿ., ರಾಂಪುರ

ಇಲ್ಲಿ ನಾನು ಹೇಳಲು ಹೊರಟಿರುವ ವ್ಯಕ್ತಿ ಕೇವಲ ಟೆನಿಸ್ ಆಟಗಾರನಲ್ಲ, ಈತ ಬದುಕಿನ ಪ್ರತಿಯೊಂದು ಅಲೆಯನ್ನೂ ತಡೆದು, ಅಸಾಧ್ಯವೆನಿಸಿದ ಕನಸನ್ನು ಸಾಕಾರಗೊಳಿಸಿಕೊಂಡ ಹೋರಾಟಗಾರ. ಇವನ ಹೆಸರು- ನೊವಾಕ್ ಜೋಕೊವಿಕ್.

**ಯುದ್ಧದ ನೆರಳಲ್ಲಿ ಹುಟ್ಟಿದ ಕನಸು:** ಅದು 1990ರ ದಶಕದ ಕೊನೆಯ ಭಾಗ, ಸೆರ್ಬಿಯಾದಲ್ಲಿ ಯುದ್ಧದ ತೀವ್ರತೆ ಕಮ್ಮಿಯಾಗುತ್ತಿತ್ತು. ನಾಲ್ಕು ವರ್ಷ ವಯಸ್ಸಿನ ಪುಟ್ಟ ನೊವಾಕ್ ಕೈಯಲ್ಲಿ ರ್‍ಯಾಕೆಟ್ ಹಿಡಿದು ಚೆಂಡನ್ನು ಗೋಡೆಗೆ ಹೊಡೆಯುತ್ತಿದ್ದ. ಆದರೆ ಆತ 12ನೇ ವಯಸ್ಸಿಗೆ ಬಂದಾಗ ಬಾಂಬ್ ದಾಳಿಗಳಾಗಿ, ಅವನ ಊರನ್ನೇ ನಿಶ್ಶಬ್ದಗೊಳಿಸಿದ್ದವು. ಅವನ ಕುಟುಂಬವು ನೆಲಮಾಳಿಗೆಯಲ್ಲಿ ದಿನಗಳನ್ನು ಕಳೆಯಬೇಕಾದ ಪರಿಸ್ಥಿತಿ ಎದುರಾಯಿತು. ಆ ಕತ್ತಲೆಯಲ್ಲೇ ತಾಯಿ ಡಿಜಾನಾ ಮಗನ ಕಿವಿಯಲ್ಲಿ ಹೀಗೆಂದಳು: ''ಏನು ಸಂಭವಿಸಿದರೂ, ನಿನ್ನ ಕನಸನ್ನು ಬದುಕಿಸು''.

**ನೀರು, ಬೆಂಕಿ ಮತ್ತು ಮಿಂಚು:** 2000ದ ದಶಕದಲ್ಲಿ ಟೆನಿಸ್ ಕೋರ್ಟ್‌ನಲ್ಲಿ ಇಬ್ಬರು ದಿಗ್ಗಜರ ಸಾಮ್ರಾಜ್ಯವಿತ್ತು. ಈ ಪೈಕಿ ರೋಜರ್ ಫೆಡರರ್ 'ನೀರಿನಂತೆ ಚಿಮ್ಮುವ' ಆಟಗಾರನಾಗಿದ್ದರೆ, ರಾಫೆಲ್ ನಡಾಲ್ 'ಬೆಂಕಿಯಂತೆ ಪ್ರಜ್ವಲಿಸುವ' ಉತ್ಸಾಹಿಯಾಗಿದ್ದ. ಇವರಿಬ್ಬರ ಹೋರಾಟವು ಟೆನಿಸ್ ಪ್ರಪಂಚದ ಪಾಲಿಗೆ ಹಬ್ಬದಂತೆ ಇರುತ್ತಿತ್ತು. ಆದರೆ ಇವರ ನಡುವೆ, ಕ್ರೀಡಾಂಗಣದಲ್ಲಿ ಹೊಮ್ಮುವ ಟೀಕೆ, ವಿರೋಧ, ಹುಯಿಲು ಇವೆಲ್ಲವನ್ನೂ ಮೀರಿ 'ಮಿಂಚಿನಂತೆ ಹೊಳೆಯುತ್ತಾ' ಬಂದವನು ಜೋಕೊವಿಕ್.

**ಗ್ರ್ಯಾಂಡ್‌ಸ್ಲಾಮ್‌ಗಳ ದಂತಕಥೆ:** ಇಂದು ಒಮ್ಮೆ ಹಿಂದಿರುಗಿ ನೋಡಿದರೆ, ಪುರುಷರ ವಿಭಾಗದಲ್ಲಿ ಅತಿ ಹೆಚ್ಚು ಅಂದರೆ 24 ಗ್ರ್ಯಾಂಡ್ ಸ್ಲಾಮ್‌ಗಳ ಗೆಲುವು ಜೋಕೊವಿಕ್ ಹೆಸರಿನಲ್ಲಿ ಇರುವುದು ಅರಿವಾಗುತ್ತದೆ. ಪೀಟ್ ಸ್ಯಾಂಪ್ರಾಸ್, ಅಗಾಸಿ, ಫೆಡರರ್, ನಡಾಲ್ ಈ ಯಾರಿಗೂ ಸಾಧ್ಯವಾಗದಂಥ ಅದ್ಭುತ ಸಾಧನೆ ಇವನದ್ದು. ಅಭಿಮಾನಿಗಳ ನೆಚ್ಚಿನ ಐಕಾನ್‌ಗಳನ್ನು ಸೋಲಿಸಿದ ಹೆಗ್ಗಳಿಕೆ ಜೋಕೊವಿಕ್‌ನದು. ಫೆಡರರ್, ನಡಾಲ್ ಮುಂತಾದವರ ಎದುರು ಆಡುವಾಗ ಒಂದಿಡೀ ಕ್ರೀಡಾಂಗಣವೇ ಹುಯಿಲೆಬ್ಬಿಸಿ ಕೂಗುತ್ತಿದ್ದರೂ ಜೋಕೊವಿಕ್ ಧೃತಿಗೆಡಲಿಲ್ಲ. ಅಮ್ಮ ಬೋಧಿಸಿದ ಪಾಠವೇ ಅದಕ್ಕೆ ಕಾರಣ. ''ಸಮಸ್ತ ಜಗತ್ತು ನಿನ್ನ ವಿರುದ್ಧ ನಿಂತರೂ, ನಿನ್ನೊಳಗಿನ ಧೈರ್ಯವು ನಿನ್ನ ಪರ ನಿಲ್ಲುತ್ತದೆ'' ಎಂಬುದು ತಾಯಿಯಿಂದ ಅವನಿಗೆ ದಕ್ಕಿದ ಬದುಕಿನ ಪಾಠ, ಅದೇ ಅವನ ಬದುಕಿನ ದಾರಿಯಾಗಿಬಿಟ್ಟಿತು. ಸೆರ್ಬಿಯಾದ ನೆಲಮಾಳಿಗೆಯಿಂದ ಶುರುವಾದ ಜೋಕೊವಿಕ್‌ನ ಪಯಣ, ವಿಶ್ವದ ಟೆನಿಸ್ ಇತಿಹಾಸದಲ್ಲಿ ಅವನ ಹೆಸರನ್ನು ಚಿನ್ನದ ಅಕ್ಷರಗಳಲ್ಲಿ ದಾಖಲಿಸುವವರೆಗೆ ಸಾಗಿದ್ದು ಹೆಮ್ಮೆಯ ಸಂಗತಿ. 24 ಗ್ರ್ಯಾಂಡ್ ಸ್ಲ್ಯಾಮ್‌ಗಳನ್ನು ಗೆದ್ದು, ಅಸಾಧ್ಯವನ್ನು ಸಾಧ್ಯವಾಗಿಸಿದ ಈತನನ್ನು 'ಶ್ರೇಷ್ಠಾತಿಶ್ರೇಷ್ಠ' ಕ್ರೀಡಾದಿಗ್ಗಜ ಎಂದರೆ ಅತಿಶಯೋಕ್ತಿ ಆಗಲಾರದು.

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

# ಕೆಟ್ಟ ನೆನಪುಗಳನ್ನು ಮರೆತಾಗಲೇ ಸಂಬಂಧ ಶಾಶ್ವತ

ರಮೇಶ ಹಾಗೂ ಸುದರ್ಶನ ಇಬ್ಬರೂ ಆತ್ಮೀಯ ಗೆಳೆಯರಾಗಿದ್ದರು. ಒಮ್ಮೆ ಕಾರ್ಯನಿಮಿತ್ತ ಅವರು ಒಂದು ಮರಳುಗಾಡಿನ ಮೂಲಕ ಹಾದುಹೋಗಬೇಕಾಗಿತ್ತು. ದಾರಿ ಮಧ್ಯದಲ್ಲಿ ಮಾತಿಗೆ ಮಾತು ಬೆಳೆದು ಜಗಳಕ್ಕೆ ತಿರುಗಿ ಸಿಟ್ಟಾದ ರಮೇಶ ಸ್ನೇಹಿತ ಸುದರ್ಶನನ ಕೆನ್ನೆಗೆ ಹೊಡೆದನು. ಸುದರ್ಶನನಿಗೆ ಬಹಳ ನೋವಾಯಿತು, ಅವಮಾನ ಕೂಡ ಆಯಿತು. ಆದರೆ ಅವನು ಏನೂ ಹೇಳದೆ ಅಲ್ಲಿದ್ದ ಮರಳ ಮೇಲೆ 'ಈ ದಿನ ನನ್ನ ಆತ್ಮೀಯ ಗೆಳೆಯ ನನ್ನ ಕೆನ್ನೆಗೆ ಹೊಡೆದನು' ಎಂದು ಬರೆದನು. ನಂತರ ಅವರಿಬ್ಬರೂ ನಡೆಯುತ್ತಾ ಹೋದಾಗ ಅವರಿಗೆ ಮರಳುಗಾಡಿನಲ್ಲಿ 'ಓಯಸಿಸ್' ಸಿಕ್ಕಿತು. ಅವರಿಬ್ಬರೂ ಸ್ನಾನ ಮಾಡಲು ನಿರ್ಧರಿಸಿ ಆ ಸರೋವರಕ್ಕೆ ಇಳಿದರು. ಅವರು ಸ್ನಾನ ಮಾಡುತ್ತಿದ್ದಾಗ, ಮೊದಲೇ ಹೊಡೆತ ತಿಂದಿದ್ದ ಸುದರ್ಶನ ಸರೋವರದ ಕೆಸರಿನ ಹೊಂಡದಲ್ಲಿ ಸಿಕ್ಕಿಕೊಂಡು ಪೂರ್ತಿ ಮುಳುಗಿಹೋಗುವುದರಲ್ಲಿದ್ದ. ಸ್ನೇಹಿತ ರಮೇಶನು ಸುದರ್ಶನನನ್ನು ಕೆಸರಿನಿಂದ ಹೇಗೋ ಕಷ್ಟ ಪಟ್ಟು ಎಳೆದು ಮೇಲೆ ತಂದು ಬದುಕಿಸಿದ. ಅಪಾಯದಿಂದ ಪಾರಾಗಿ ಚೇತರಿಸಿಕೊಂಡ ಸುದರ್ಶನ ಅಲ್ಲಿದ್ದ ಒಂದು ಕಲ್ಲಿನ ಮೇಲೆ 'ಈ ದಿನ ನನ್ನ ಆತ್ಮೀಯ ಗೆಳೆಯ ನನ್ನ ಜೀವವನ್ನು ಉಳಿಸಿದ' ಎಂದು ಕೆತ್ತಿದ.

ಇದನ್ನು ನೋಡಿದ ರಮೇಶ ಗೆಳೆಯನಿಗೆ, ''ನಾನು ಸಿಟ್ಟಿನಿಂದ ನಿನ್ನ ಕೆನ್ನೆಗೆ ಹೊಡೆದಾಗ ಮರಳ ಮೇಲೆ ಅದನ್ನು ಬರೆದಿದ್ದೆ. ಆದರೆ ಈಗ ಕೆಸರಿನ ಹೊಂಡದಿಂದ ನಿನ್ನನ್ನು ಮೇಲೆ ಎತ್ತಿದ್ದನ್ನು ಕಲ್ಲು ಮೇಲೆ ಕೊರೆದಿರುವೆ ಏಕೆ? ಇದರ ಉದ್ದೇಶ ವೇನು? ಎಂದು ಕೇಳಿದ, ಅವನ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಎಂದು ತಿಳಿದುಕೊಳ್ಳುವ ಉದ್ದೇಶದಿಂದ. ಅದಕ್ಕೆ ಸುದರ್ಶನ ಹೇಳಿದ- ''ಯಾರಿಂದಲಾದರೂ ನಮಗೆ ನೋವಾದರೆ, ಅದನ್ನು ನಾವು ಮರಳ ಮೇಲೆ ಬರೆಯಬೇಕು. 'ಕ್ಷಮೆ' ಎಂಬ ಗಾಳಿ ಅದನ್ನು ಅಳಿಸಿಹಾಕಬಹುದು. ಆದರೆ ಯಾರಾದರೂ ನಮಗೆ ಒಳ್ಳೆಯದನ್ನು ಮಾಡಿದಾಗ ಅದನ್ನು ನಾವು ಕಲ್ಲಿನ ಮೇಲೆ ಕೆತ್ತಬೇಕು. ಇದನ್ನು ಎಂಥ ಬಿರುಗಾಳಿಯೂ ಅಳಿಸಿ ಹಾಕುವುದಿಲ್ಲ. ಬೇರೆಯವರು ಕೊಟ್ಟ ನೋವನ್ನು ಮರೆಯಬೇಕು. ಒಳ್ಳೆಯದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಇದು ನನ್ನ ಉದ್ದೇಶ''. ಸ್ನೇಹಿತನ ಒಳ್ಳೆಯ ಮನಸ್ಸನ್ನು ಅರ್ಥೈಸಿಕೊಂಡ ರಮೇಶ ಅವನನ್ನು ತಬ್ಬಿಕೊಂಡು ''ನನ್ನನ್ನು ಕ್ಷಮಿಸು ಗೆಳೆಯ'' ಎಂದನು. ಅವರಿಬ್ಬರೂ ಸಂತೋಷದಿಂದ ಸೇರಬೇಕಾದ ಸ್ಥಳಕ್ಕೆ ತಲುಪಿದರು.

ಜೀವನದಲ್ಲಿ ಕೆಲವೊಮ್ಮೆ ನಾವು ಬಹಳ ಇಷ್ಟಪಡುವ ವ್ಯಕ್ತಿಗಳು ಅರಿವಿಲ್ಲದೆ ನಮ್ಮ ನೋವಿಗೆ ಕಾರಣರೂ ಆಗುತ್ತಾರೆ. ನಮಗೆ ಅದು ಇನ್ನಿಲ್ಲದ ಬೇಸರ ತರುತ್ತದೆ. ಅವರ ಮೇಲೆ ನಂಬಿಕೆಯೇ ಹೊರಟುಹೋಗುವಂತಾಗುತ್ತದೆ. ಆದರೆ ಅಂಥ ಸಮಯದಲ್ಲಿ ಅವರು ನಮಗೆ ಮಾಡಿದ ಒಳ್ಳೆಯ ಕೆಲಸಗಳನ್ನು ನಮ್ಮ ಒಳ್ಳೆಯ ದಿನಗಳನ್ನು ನೆನಪಿಸಿಕೊಳ್ಳಬೇಕು.

ಅವರ ಒಂದು ತಪ್ಪು, ಅವರ ಎಲ್ಲ ಒಳ್ಳೆಯ ಕೆಲಸಗಳನ್ನು ಮರೆಸಬಾರದು. ಅಂಥ ಸಮಯದಲ್ಲಿ ನಾವು ತಾಳ್ಮೆಯಿಂದ ಅವರಿಗೆ ಮತ್ತೊಂದು ಅವಕಾಶವನ್ನು ನೀಡುವ, ಮತ್ತೊಮ್ಮೆ ಅವರನ್ನು ಸ್ವೀಕರಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಕೆಲವೊಮ್ಮೆ ಪರಿಸ್ಥಿತಿಗಳ ಒತ್ತಡಕ್ಕೆ, ಕೆಟ್ಟ ಸಮಯಕ್ಕೆ, ಅಥವಾ ದುಡುಕಿ ಅಂಥವರಿಂದ ತಪ್ಪುಗಳಾಗಿಬಿಡುತ್ತವೆ. ಕ್ಷಮಿಸುವುದರಲ್ಲಿರುವ ಆನಂದ ಮತ್ತೆ ಯಾವುದರಲ್ಲೂ ಇಲ್ಲ, ಮುಂದೆ ಅಕಸ್ಮಾತ್ತಾಗಿ ನಮ್ಮಿಂದ ತಪ್ಪಾದಾಗ ಕೂಡ ಅವರು ಅದೇ ರೀತಿ ನಮ್ಮನ್ನೂ ಕ್ಷಮಿಸುವ ಉದಾರತೆಯನ್ನು ತೋರುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ, ಕ್ಷಮೆ ನಮಗೆ ನೆಮ್ಮದಿಯನ್ನು ನೀಡುತ್ತದೆ. ಯಾವುದೇ ಸಂಬಂಧವು ಜೀವನಪೂರ್ತಿ ನಮ್ಮ ಜತೆ ಬೆಸೆದು ಕೊಂಡಿರಬೇಕು ಎಂದಾದಾಗ ಚಿಕ್ಕ ಪುಟ್ಟ ತಪ್ಪುಗಳನ್ನು ಅಲ್ಲಿಯೇ ಮರೆತು ಮುಂದಿನ ಬದುಕನ್ನು ಸ್ವೀಕರಿಸಬೇಕಾಗುತ್ತದೆ. ಇದು ಅವರಿಗೂ ಒಂದು ದೊಡ್ಡ ಪಾಠವಾಗುತ್ತದೆ. ನಾಳೆ ನಾವು ಅವರದೇ ಜಾಗದಲ್ಲಿ ನಿಲ್ಲಬಹುದು. ಆಗ ಕ್ಷಮೆ ಕೇಳುವ ಸರದಿ ನಮ್ಮದಾದಾಗ ಅವರಿಗೆ ನಾವೇ ಮಾದರಿಯಾಗುತ್ತೇವೆ. ಕ್ಷಮೆ ಕೇಳಿ ಯಾರು ಚಿಕ್ಕವರಾಗಿಲ್ಲ.. ಕ್ಷಮಿಸಿ ಯಾರೂ ಹಾಳೂ ಆಗಿಲ್ಲ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

# ಭಾರ್ಗವನಾಗಿ ಬಂದ ಉಪೇಂದ್ರ

ರಿಯಲ್ ಸ್ಟಾರ್ ಉಪೇಂದ್ರ, ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಉಪ್ಪಿಗೆ ಅಭಿಮಾನಿಗಳು, ಗಣ್ಯರು ಶುಭಕೋರಿ ಸಂಭ್ರಮಿಸಿದ್ದಾರೆ. ತಮಿಳು, ತೆಲುಗು ಸಿನಿಮಾಗಳಲ್ಲಿಯೂ ಬ್ಯುಸಿಯಾಗಿರುವ ಉಪೇಂದ್ರ ಕನ್ನಡದಲ್ಲಿ ಮೂಡಿಬರುತ್ತಿರುವ ಭಾರ್ಗವ ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ. ಉಪ್ಪಿ ಹುಟ್ಟುಹಬ್ಬದ ಪ್ರಯುಕ್ತ ಭಾರ್ಗವ ಚಿತ್ರದ ಟೀಸರ್ ರಿಲೀಸ್ ಆಗಿದೆ. ಈ ಚಿತ್ರದಲ್ಲಿ ಉಪೇಂದ್ರ ಭರ್ಜರಿ ಆ್ಯಕ್ಷನ್‌ನಲ್ಲಿ ಮಿಂಚಿದ್ದಾರೆ. ಟೀಸರ್ ನೋಡಿದರೆ ಇಲ್ಲಿ ಸಾಹಸ ಪ್ರಧಾನ ಕಥೆಯ ಜತೆಗೆ ಕೌಟುಂಬಿಕ ಕಥೆಯೂ ಬೆರೆತಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಹಿಂದೆ ಕುಟುಂಬ ಸಿನಿಮಾವನ್ನು ನಿರ್ದೇಶಿಸಿದ್ದ ನಾಗಣ್ಣ, ಭಾರ್ಗವ ಸಿನಿಮಾಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇದು ಅದ್ದೂರಿ ವೆಚ್ಚದ ಚಿತ್ರವಾಗಿದ್ದು ಸೂರಪ್ಪ ಬಾಬು ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಭಾರ್ಗವ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದ್ದು ಮುಂದಿನ ವರ್ಷದ ಜನವರಿಯಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ.

**ಬೈಕ್ ಏರಿದ ಉಪ್ಪಿ:** ಅರ್ಜುನ್ ಜನ್ಯ ನಿರ್ದೇಶನದಲ್ಲಿ ಸಿದ್ಧವಾಗಿರುವ 45 ಚಿತ್ರದಲ್ಲಿಯೂ ಉಪೇಂದ್ರ ಅಭಿನಯಿಸಿದ್ದಾರೆ. ಉಪ್ಪಿಯ ಹುಟ್ಟುಹಬ್ಬದ ಪ್ರಯುಕ್ತ ಚಿತ್ರತಂಡ ವಿಶೇಷವಾದ ಬೈಕ್ ಬಿಡುಗಡೆ ಮಾಡಿದೆ. ಈ ಬೈಕ್ 45 ಚಿತ್ರದಲ್ಲಿ ಉಪೇಂದ್ರ ಅವರು ಸವಾರಿ ಮಾಡುವ ಬೈಕ್ ಆಗಿದ್ದು, ವಿಭಿನ್ನವಾದ ವಿನ್ಯಾಸದ ಮೂಲಕ ಗಮನಸೆಳೆಯುತ್ತಿದೆ. ಮುಂಭಾಗದಲ್ಲಿ ಗೂಳಿಯ ಮುಖವಾಡ, ಪಕ್ಕದಲ್ಲಿ ಗುಂಡುಗಳ ಸರಮಾಲೆ ಇದ್ದು ಗಮನಸೆಳೆಯುತ್ತಿದೆ. ಈ ಸಿನಿಮಾದಲ್ಲಿ ಈ ಬೈಕ್ ಕೂಡ ಪ್ರಮುಖ ಪಾತ್ರವಹಿಸಲಿದೆಯಂತೆ. 45 ಚಿತ್ರದಲ್ಲಿ ಉಪೇಂದ್ರ ಅವರ ಜತೆಗೆ ಶಿವರಾಜ್ ಕುಮಾರ್, ರಾಜ್ ಬಿ ಶೆಟ್ಟಿ ಕೂಡ ನಟಿಸಿದ್ದಾರೆ. ಸೂರಜ್ ಪ್ರೊಡಕ್ಷನ್ಸ್‌ನಲ್ಲಿ ರಮೇಶ್ ರೆಡ್ಡಿ ನಿರ್ಮಾಣ ಮಾಡಿರುವ 45 ಚಿತ್ರ, ಡಿಸೆಂಬರ್‌ನಲ್ಲಿ ತೆರೆಗೆ ಬರಲಿದೆ.

ವಿ ಟಾಕೀಸ್

# ನಂದಿ ಬೆಟ್ಟದಲ್ಲಿ ಡ್ಯಾಡ್

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಡ್ಯಾಡ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಬಲು ವಿಶೇಷವಾದ ಸಿನಿಮಾ ಇದಾಗಿದ್ದು, ಶಿವಣ್ಣ ಈ ಸಿನಿಮಾದಲ್ಲಿ ವೈದ್ಯರ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಸೆಟ್ಟೇರಿದ್ದ ಡ್ಯಾಡ್ ಮೈಸೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಮುಗಿಸಿದ್ದು, ಈಗ ಎರಡನೇ ಹಂತದ ಚಿತ್ರೀಕರಣ ನಂದಿ ಬೆಟ್ಟದಲ್ಲಿ ನಡೆಯತ್ತಿದೆ. ಶಿವರಾಜ್ ಕುಮಾರ್, ಬೇಬಿ ನಕ್ಷತ್ರಾ ಮುಂತಾದವರು ಈ ಹಂತದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ. ಶರ್ಮಿಳಾ ಮಾಂಡ್ರೆ, ಬಾಬು, ಮಲೆಯಾಳಂ ನಟ ಸೂರಜ್ ವೆಂಜರಮೂಡು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಮೈರಾ ಕ್ರಿಯೇಷನ್ಸ್ ಲಾಂಛನದಲ್ಲಿ ಹರೀಶ್ ಪೆದ್ದಿ ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಅನಿಲ್ ಕನ್ನೆಗಂಟಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಕನ್ನಡ, ತೆಲುಗು ಮತ್ತು ಮಲೆಯಾಳಂನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜಿಸುತ್ತಿದ್ದಾರೆ. ಬಿ.ರಾಜಶೇಖರ್ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.

# ಮಹಾಂತೇಶ ಹೇಳಿದ ಅರಸಯ್ಯನ ಪ್ರೇಮ ಪ್ರಸಂಗ

ಫ್ರೆಂಚ್ ಬಿರಿಯಾನಿ ಚಿತ್ರದ ಮೂಲಕ ಹಾಸ್ಯದ ರಸದೌತಣ ಉಣಬಡಿಸಿದ ಮಹಾಂತೇಶ್, ಟಗರು ಪಲ್ಯದಲ್ಲಿ ಕಾಮಿಡಿ ಕಚಗುಳಿ ಇಟ್ಟರು. ಈಗ ನಾಯಕನಾಗಿ ತೆರೆಗೆ ಎಂಟ್ರಿಕೊಟ್ಟಿದ್ದು, ಅರಸಯ್ಯನ ಪ್ರೇಮ ಪ್ರಸಂಗ ಹೇಳುತ್ತಿದ್ದಾರೆ. ಮಹಂತೇಶ್ ತಮ್ಮ ಚಿತ್ರ ಹಾಗೂ ಪಾತ್ರದ ಕುರಿತಂತೆ ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

**ಅರಸಯ್ಯ ಕಾಮಿಡಿ ಕಥೆಯೆ?**

**ಮಹಾಂತೇಶ್:** ಅರಸಯ್ಯನ ಪ್ರೇಮ ಪ್ರಸಂಗ ಗ್ರಾಮೀಣ ಭಾಗದಲ್ಲಿ ನಡೆಯುವ ಪ್ರೇಮಕಥೆಯನ್ನು ಒಳಗೊಂಡಿದ್ದು, ಅದಕ್ಕೆ ಹಾಸ್ಯ ಬೆರೆಸಿ ಮನರಂಜನಾತ್ಮಕವಾಗಿ ಕಟ್ಟಿಕೊಡಲಾಗಿದೆ. ಮುಗ್ಧನಾದ, ಸುಂದರನೂ ಅಲ್ಲದ ಅರಸಯ್ಯನನ್ನು ಒಂದು ಹುಡುಗಿ ಇಷ್ಟಪಟ್ಟಾಗ ಆತನ ಸಂತಸ ಹೇಗಿರಬಹುದು. ಪ್ರೀತಿಗೆ ಬಿದ್ದ ಅರಸಯ್ಯ ಯಾವೆಲ್ಲಾ ಸವಾಲುಗಳನ್ನು ಎದಿರಿಸುತ್ತಾನೆ ಎಂಬುದನ್ನು ಕಾಮಿಡಿ ಮೂಲಕ ಹೇಳಲಾಗಿದೆ. ಸಿನಿಮಾ ಆರಂಭದಿಂದ ಕೊನೆಯವರೆಗೂ ಪ್ರೇಕ್ಷಕರನ್ನು ನಗಿಸುತ್ತಾ ಸಾಗುತ್ತದೆ. ಹಳ್ಳಿಗಾಡಿನ ಸಂಭಾಷಣೆ ಮನಸೆಳೆಯುತ್ತದೆ.

**ಈ ಚಿತ್ರವನ್ನು ಆಯ್ದುಕೊಂಡಿದ್ದು?**

**ಮಹಾಂತೇಶ್ :** ನಾನು ಈ ಹಿಂದೆ ಹಲವು ಸಿನಿಮಾಗಳಲ್ಲಿ ಸಹ ನಟನಾಗಿ ನಟಿಸಿದ್ದೆ, ಅದರಲ್ಲಿ ಬಹುತೇಕ ಸಿನಿಮಾಗಳಲ್ಲಿ ಕಾಮಿಡಿ ಪಾತ್ರಗಳೇ ಸಿಕ್ಕಿದ್ದವು. ಹೀಗಿರುವಾಗಲೇ ನನ್ನ ಸ್ನೇಹಿತರು ಎಲ್ಲರೂ ಸೇರಿ ಒಂದು ಸಿನಿಮಾ ಮಾಡೋಣ ಎಂದುಕೊಂಡೆವು. ನಮ್ಮ ಗೆಳೆಯರ ಬಳಗದ ದೀಪು ನೀನೆ ಯಾಕೆ ನಾಯಕನಾಗಬಾರದು ಎಂದು ಹೇಳಿದ. ನನಗೆ ಅದನ್ನು ಕೇಳಿ ಮೊದಲು ನಂಬಲಾಗಲಿಲ್ಲ. ಆ ಬಳಿಕ ಆತ ನನ್ನನ್ನೇ ಮನದಲ್ಲಿಟ್ಟುಕೊಂಡು ಕಥೆ ಹೆಣೆದ. ಅಂದುಕೊಂಡಂತೆ ಅರಸಯ್ಯನ ಪ್ರೇಮ ಪ್ರಸಂಗ ಸಿನಿಮಾವೂ ಸಿದ್ಧವಾಯಿತು. ಈ ಚಿತ್ರದಲ್ಲಿ ನನ್ನನ್ನು ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನ ಪಾತ್ರದಲ್ಲಿ ನೋಡಬಹುದು.

> ಅರಸಯ್ಯನ ಮೇಲೆ ಅಪಾರ ನಿರೀಕ್ಷೆ ಇದೆ. ಈ ಹಿಂದಿನ ಸಿನಿಮಾಗಳಲ್ಲಿಯೂ ನನ್ನನ್ನು ಪ್ರೋತ್ಸಾಹಿಸಿದ್ದೀರಿ, ಅಂತೆಯೇ ಈ ಸಿನಿಮಾವನ್ನು ಪ್ರೇಕ್ಷಕರು ಕೈ ಹಿಡಿದು ನಿಲ್ಲಿಸುತ್ತಾರೆ ಎಂಬ ನಂಬಿಕೆ ನನಗಿದೆ.

**ನಾಯಕನಾಗಿ ನಟಿಸುತ್ತೀನಿ ಎಂದು ಅನ್ನಿಸಿತ್ತೆ?**

**ಮಹಂತೇಶ್ :** ಖಂಡಿತಾ ಇಲ್ಲ, ನಾನು ಇಲ್ಲಿಯವರೆಗೆ ಸಹ ನಟನಾಗಿಯೇ ಬಣ್ಣಹಚ್ಚಿದೆ. ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡೆ. ನಾನು ಸಿನಿಮಾದಲ್ಲಿ ನಾಯಕನ ಪಾತ್ರದಲ್ಲಿ ಅಭಿನಯಿಸುತ್ತೇನೆ ಎಂದು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಅರಸಯ್ಯನ ಪ್ರೇಮ ಪ್ರಸಂಗ ನಿಜವಾಗಿಯೂ ನನಗೆ ಬಯಸದೇ ಬಂದ ಭಾಗ್ಯ. ಈ ಚಿತ್ರದಲ್ಲಿ ನಾನು ನಾಯಕನಾಗಿ ನಟಿಸುತ್ತಿದ್ದೀನ ಎಂಬುದನ್ನು ಇಂದಿಗೂ ನಂಬಲಾಗುತ್ತಿಲ್ಲ, ಅಷ್ಟೊಂದು ಖುಷಿ ನನಗಿದೆ.



# ಬಾಂಧವ್ಯ ಬೆಸೆವ ಜೊತೆಯಾಗಿ ಹಿತವಾಗಿ

ಹಲವು ಪ್ರೇಮಕಥೆಯ ಸಿನಿಮಾಗಳು ತೆರೆಗೆ ಬಂದು ಯಶಸ್ವಿಯಾಗಿವೆ. ಅಂತೆಯೇ ಈಗ ಮತ್ತೊಂದು ಹೊಸತನದ ಲವ್ ಸ್ಟೋರಿಯ ಜೊತೆಯಾಗಿ ಹಿತವಾಗಿ ತೆರೆಗೆ ಬಂದಿದೆ. ಶೀರ್ಷಿಕೆಯಲ್ಲಿಯೇ ಮನಗೆದ್ದಿರುವ ಚಿತ್ರದಲ್ಲಿ ಲವ್ ಸ್ಟೋರಿಯ ಜತೆಗೆ ಕೌಟುಂಬಿಕ ಕಥೆಯೂ ಬೆರೆತಿದೆ. ಸಿನಿಮಾದ ಕುರಿತಂತೆ ನಟ ಅಗಸ್ತ್ಯ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ನಾನು ಶಿವಣ್ಣ ಅವರ ಅಪ್ಪಟ ಅಭಿಮಾನಿ ಅವರ ಆನಂದ್ ಸಿನಿಮಾದಿಂದ ಇಲ್ಲಿಯವರೆಗೆ ಎಲ್ಲಾ ಸಿನಿಮಾಗಳನ್ನು ನೋಡಿದ್ದೇನೆ. ಶಿವಣ್ಣ ಅವರ ಆನಂದ್ ಸಿನಿಮಾದ ಜೊತೆಯಾಗಿ ಹಿತವಾಗಿ.. ಹಾಡಿನ ಸಾಲನ್ನೇ ಚಿತ್ರದ ಶೀರ್ಷಿಕೆಯಾಗಿ ಆಯ್ದುಕೊಂಡಿದ್ದೇನೆ. ಇಲ್ಲಿ ಲವ್ ಸ್ಟೋರಿ ಮಾತ್ರವಲ್ಲ, ಕೌಟುಂಬಿಕ ಕಥೆಯ ಜತೆಗೆ ಸೆಂಟಿಮೆಂಟ್ ಕುಡ ಬೆರೆತಿದೆ.

**ಮನಸೆಳೆವ ಪ್ರೇಮಕಥೆ:** ಹಿಂದಿನ ಮತ್ತು ಇಂದಿನ ಟ್ರೆಂಡ್‌ಗೆ ಹೊಂದುವ ನವಿರಾದ ಲವ್ ಸ್ಟೋರಿ ಸಿನಿಮಾದಲ್ಲಿದ್ದು ಪ್ರೇಕ್ಷಕರನ್ನು ಸೆಳೆಯಲಿದೆ. ಹಿತವಾದ ಸಂಭಾಷಣೆ ಮನಸಿಗೆ ಮುದ ನೀಡುತ್ತದೆ. ಹಾಗಂತ ಇದು ಪ್ರೇಮಕಥೆಗೆ ಸೀಮಿತವಾಗಿಲ್ಲ, ಕೌಟುಂಬಿಕ ಕಥೆಯೂ ಪ್ರಮುಖವಾಗಿದ್ದು ಅದು ಎಲ್ಲರನ್ನೂ ಸೆಳೆಯುತ್ತದೆ. ಕುಟುಂಬದಲ್ಲಿ ಮಕ್ಕಳಿಗೆ ಅಪ್ಪ ಅಮ್ಮನ ಮಾತೇ ವೇದ ವಾಕ್ಯವಾಗಿರುತ್ತದೆ. ತಾನು ಹೇಳಿದಂತೆಯೇ ಮಕ್ಕಳು ಕೇಳಬೇಕು, ತಮ್ಮಿಚ್ಛೆಯಂತೆಯೇ ನಡೆಯಬೇಕು ಎಂಬುದು ಹೆತ್ತವರ ಕನಸಾಗಿರುತ್ತದೆ. ಈ ನಡುವೆ ಯುವಕರಲ್ಲಿ ಪ್ರೀತಿ ಮೂಡಿದಾಗ ಒಂದು ಕಡೆ ಹೆತ್ತವರು, ಮತ್ತೊಂದು ಕಡೆ ಮನಸಿಗೆ ಒಪ್ಪಿದವಳು ಈ ಸಂದಿಗ್ಧ ಸ್ಥಿತಿಯಲ್ಲಿ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಗೊಂದಲ ಕಾಡುತ್ತದೆ. ಆಗ ಯುವಕರ ಮನಸ್ಥಿತಿ ಹೇಗಿರುತ್ತದೆ ಎಂಬುದನ್ನು ಸಿನಿಮಾದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ.

> ನಮ್ಮ ಸುತ್ತಮುತ್ತ ನಡೆಯುವ ಹಲವು ಘಟನೆಗಳನ್ನು ನೋಡಿದ್ದೆ, ಅದನ್ನು ಆಧರಿಸಿ ಈ ಕಥೆ ಸಿದ್ಧವಾಗಿದೆ. ಮಕ್ಕಳ ಸುಖವಾಗಿರಬೇಕು ಎಂದು ತಂದೆ ತಾಯಿ ಎಷ್ಟೊಂದು ಕಷ್ಟಪಡುತ್ತಾರೆ, ಅದನ್ನು ಮಕ್ಕಳು ಅರಿತುಕೊಳ್ಳಬೇಕು. ಎಂಬುದನ್ನು ಮನಕ್ಕೆ ತೆರೆಯಲ್ಲಿ ಮುಟ್ಟುವಂತೆ ಹೇಳಲಾಗಿದೆ. ಇದು ಕಾಲ್ಪನಿಕ ಕಥೆಯಾದರೂ ನೈಜತೆಗೆ ಹತ್ತಿರವಾಗುವಂತೆ ನಿರೂಪಿಸಲಾಗಿದೆ.

**ಮಸನುಗಳ ಬೆಸೆವ ಸ್ಟೋರಿ:** ಚಿತ್ರದಲ್ಲಿ ಹಿಂದಿನ ಮತ್ತು ಇಂದಿನ ಟ್ರೆಂಡ್‌ಗೆ ಹೋಲು ಸ್ಟೋರಿ ಇದ್ದು, ಎಲ್ಲರ ಮನಸನ್ನು ಬೆಸೆಯಲಿದೆ. ಹಿಂದೆ ಮಕ್ಕಳು ಅಪ್ಪ ಅಮ್ಮನ ಮಾತನ್ನು ಮೀರಿ ನಡೆಯುತ್ತಿರಲಿಲ್ಲ. ಆದರೆ ಇಂದು ಕಾಲ ಬದಲಾಗಿದೆ. ಬಹುತೇಕರು ಪೋಷಕರ ತದ್ವಿರುದ್ಧವಾಗಿಯೇ ಹೋಗುತ್ತಾರೆ. ಕೌಟುಂಬಿಕ ಸಂಬಂಧಗಳಿಗಿಂತ ಅವರಿಗೆ ಪ್ರೀತಿಯೇ ಮುಖ್ಯವಾಗಿರುತ್ತದೆ. ಇದರಿಂದ ಹೇಗೆ ಸಂಬಂಧಗಳನ್ನು ದೂರ ಮಾಡಿಕೊಳ್ಳುತ್ತಾರೆ ಎಂಬುದನ್ನು ಇಲ್ಲಿ ಸೂಚ್ಯವಾಗಿ ಕಟ್ಟಿಕೊಡಲಾಗಿದೆ. ಮನರಂಜನೆಯ ಮೂಲಕ ಒಳ್ಳೆಯ ಸಂದೇಶವನ್ನು ಸಾರಲಾಗಿದೆ.